ಶನಿವಾರ, ಜುಲೈ 12, 2025 | ₹ 7.00

prajavani.net | prajavani | www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ


ಸಚಿನ್ ವಿಂಬಲ್ಡನ್ ವೀಕ್ಷಣೆ

ವಿಂಬಲ್ಡನ್ ಟೆನಿಸ್ ಟೂರ್ನಿಯ ಪುರುಷರ ಸೆಮಿಫೈನಲ್‌ನಲ್ಲಿ ಕಾರ್ಲೋಸ್ ಅಲ್ಕರಾಜ್ ಮತ್ತು ಟೇಲರ್ ಫ್ರಿಟ್ಜ್ ಅವರ ಹಣಾಹಣಿಯನ್ನು ಕ್ರಿಕೆಟ್ ದಿಗ್ಗಜ ಸಚಿನ್ ತೆಂಡೂಲ್ಕರ್ ವೀಕ್ಷಿಸಿದರು



ಹೆದ್ದಾರಿಗಾಗಿ ₹3.4 ಲಕ್ಷ ಕೋಟಿ

2025–26ರ ಆರ್ಥಿಕ ವರ್ಷದಲ್ಲಿ ₹3.4 ಲಕ್ಷ ಕೋಟಿ ವೆಚ್ಚದಲ್ಲಿ 124 ಹೆದ್ದಾರಿಗಳು ಮತ್ತು ಎಕ್ಸ್‌ಪ್ರೆಸ್ ವೇ ನಿರ್ಮಾಣಕ್ಕೆ ಬಿಡ್ ನೀಡಲು ಉದ್ದೇಶಿಸಲಾಗಿದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು (ಎನ್‌ಎಚ್‌ಎಐ) ತಿಳಿಸಿದೆ. ಈ ಯೋಜನೆಗಳ ಒಟ್ಟು ರಸ್ತೆಯ ಉದ್ದ ಅಂದಾಜು 6,376 ಕಿ.ಮೀ


ಇತಿಹಾಸದಲ್ಲೇ ಎಂದೆಂದೂ ನೋಡದ ಕಡಿಮೆ ವೇಸ್ಟೇಜ್ !
ಚಿನ್ನ ಖರೀದಿಸುವಾಗ ನೀವು ದೊಡ್ಡ ಪ್ರಮಾಣದಲ್ಲಿ ಹಣವನ್ನು ಉಳಿತಾಯ ಮಾಡುವಿರಿ.
ಇಂತಹ ಸಾವಿರಾರು ಡಿಸೈನುಗಳಲ್ಲಿ ಬಹಳ ಸುಂದರವಾದ ಆಭರಣಗಳು ಇದೇ ವೇಸ್ಟೇಜ್‌ನೊಂದಿಗೆ ನಮ್ಮಲ್ಲಿ ಲಭ್ಯ.. ಇಲ್ಲಿ ಕೆಲವು ಆಭರಣಗಳು ಮಾತ್ರ ತೋರಿಸಿದ್ದೇವೆ.
KERALA BENGALI 6%
CALCUTTA 8%
CALCUTTA 8%
BOMBAY GHAT 9%
NELLORE 9.5%
NELLORE 9.5%
NELLORE 9.5%
NELLORE 9.5%
BOMBAY FLOWER STEP 10%
CB MULLAI MALAI 11%
BOMBAY NAGAS 12%
BOMBAY NAGAS 12%
PSI DYE NAGAS 12%
PRECIOUS 12%
BANGALORE HAARAM 12%
RUBY EMERALD 12%
TEMPLE BEADS 12%
TEMPLE GOLD BALL 12%
BOMBAY DYE NAGAS 12%
ANTIQUE 14%
LAPPA FANCY 6%
BOMBAY LAPPA 6%
CALCUTTA 8%
BOMBAY FANCY 9%
BOMBAY GHAT 9%
BOMBAY U SHORT 9%
BOMBAY GHAT BEADS 9%
NELLORE 9.5%
NELLORE 9.5%
NELLORE 9.5%
CB U SHAPE 11%
CB FANCY 11%
PSI DYE NAGAS 12%
BOMBAY DYE NAGAS HOLLOW 12%
RUBY & EMERALD 12%
RUBY EMERALD 12%
BANGALORE SHORT 12%
TEMPLE SHORT 12%
TEMPLE SHORT 12%
BOMBAY DYE NAGAS 12%
BLACKBEADS 10%
BLACKBEADS 10%
BLACKBEADS 10%
BANGALORE CHAIN 12%
BANGALORE CHAIN 12%
BANGALORE CHAIN 12%
ವೇಸ್ಟೇಜ್ V.A.10%
ಈ ರೀತಿಯ ನೂರಾರು BLACK BEADS ಆಭರಣಗಳು ಕೇವಲ 10% ವೇಸ್ಟೇಜ್‌ನೊಂದಿಗೆ ನಮ್ಮಲ್ಲಿ ಲಭ್ಯ.
ಇಂತಹ ವಿಧ ವಿಧವಾದ ಡಿಸೈನ್‌ಗಳಲ್ಲಿ ಸುಂದರವಾದ ಒಡ್ಯಾಣ / ಬ್ರೇಸ್‌ಲೆಟ್ ಆಭರಣಗಳು ಇದೇ ವೇಸ್ಟೇಜ್‌ನೊಂದಿಗೆ ನಮ್ಮಲ್ಲಿ ಲಭ್ಯವಾಗುತ್ತಿವೆ. ಇಲ್ಲಿ ಕೆಲವು ಆಭರಣಗಳನ್ನು ಮಾತ್ರ ತೋರಿಸಿದ್ದೇವೆ.
V.A. 11%
V.A. 11%
V.A. 11%
V.A. 11%
V.A. 11%
V.A. 11%
V.A. 12%
V.A. 12%
ಬ್ರೇಸ್‌ಲೆಟ್
MC DELHI V.A.3%
CASTING MC CHAIN STONE V.A.8%
KATTIYAR CASTING V.A.8%
LOTUS V.A.8%
LOTUS SAND V.A.8%
MC CASTING PLAIN V.A.8%
CASTING GENTS RUDRACHAM V.A.8%
BOMBAY STAMPING DELHI V.A.9%
BOMBAY NAVABEE FANCY V.A.9%
ವಿಧ ವಿಧವಾದ ಕಾಸ್ಟಿಂಗ್ ಉಂಗುರಗಳು (ಹರಳನ್ನು ಹೊಂದಿಸಲಾದ / ಹರಳಿಲ್ಲದ) ಇದೇ ವೇಸ್ಟೇಜ್‌ನೊಂದಿಗೆ ನಮ್ಮಲ್ಲಿ ಲಭ್ಯ. ಇಲ್ಲಿ ಕೆಲವು ಉಂಗುರಗಳನ್ನು ಮಾತ್ರ ತೋರಿಸಿದ್ದೇವೆ.
5.5%
8%
ಯಾವುದನ್ನೂ ಮುಚ್ಚುಮರೆಮಾಡಿಲ್ಲದೆ ಕಡಿಮೆ ಬೆಲೆಗಳು!
ಬೇರೆ ಆಭರಣ ಷೋರೂಂಗಳಲ್ಲಿ ಲಲಿತಾ ಜ್ಯುವೆಲ್ಲರಿ ಅವರ Estimate slip ಅನ್ನು ಕಸ್ಟಮರ್‌ಗಳು ತೋರಿಸಿದ ನಂತರ..ಅವರು ವೇಸ್ಟೇಜ್ ಕಡಿಮೆ ಮಾಡುವ ವಿಷಯ ನಮಗೆ ತಿಳಿದುಬಂದಿದೆ. ಆದರೆ ದೇವರಿಗೆ ಸಮಾನವಾಗಿರುವ ನಮ್ಮ ಗ್ರಾಹಕರು ನಮ್ಮಲ್ಲಿ ಅಂತಹ ಕೋರಿಕೆಗಳನ್ನು ಮಾಡುವ ಅಗತ್ಯವಿಲ್ಲ, ಯಾವುದೇ ಆಭರಣವಿರಲಿ ಮಾರುಕಟ್ಟೆಗಿಂತ ಕಡಿಮೆ ವೇಸ್ಟೇಜ್‌ನೊಂದಿಗೆ ನಮ್ಮಲ್ಲಿ ಖರೀದಿಸಬಹುದು!
ಅಡ್ವಾನ್ಸ್ ಆಭರಣಗಳ ಬುಕ್ಕಿಂಗ್ ಯೋಜನೆ
OLD GOLD EXCHANGE
5 to 11 month scheme
ಹಳೆ ಆಭರಣಗಳನ್ನೇಕೆ ಲಾಕರ್‌ನಲ್ಲಿಡಬೇಕು ?
ಹಳೆಯ ಆಭರಣಗಳ ತೂಕಕ್ಕೆ ಹೊಸ ಆಭರಣಗಳನ್ನು ಖರೀದಿಸಬಹುದು.
100% V.A. ಇಲ್ಲ!
Lalithaa
ಬೆಂಗಳೂರು: ಮಲ್ಲೇಶ್ವರಂ, ಜಯನಗರ, ಯಲಹಂಕ, ಮಾರತಹಳ್ಳಿ, ಕಮ್ಮನಹಳ್ಳಿ
ಮಂಗಳೂರು • ಮೈಸೂರು
Customer Care: 90 99 999 916
100% HUID
ಲಕ್ಷಾಂತರ ಡಿಸೈನ್‌ಗಳು!
www.lalithaajewellery.com

ಶನಿವಾರ, ಜುಲೈ 12, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 192 | ಪುಟ 24

prajavani.net prajavani www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಬಾರ್ ಬಂದ್

ತೆರಿಗೆ ಹೆಚ್ಚಳ ವಿರೋಧಿಸಿ ಮಹಾರಾಷ್ಟ್ರದ ಹೋಟೆಲ್ ಮತ್ತು ರೆಸ್ಟೋರೆಂಟ್‌ಗಳ ಸಂಘವು (ಎಎಚ್‌ಎಆರ್) ಜುಲೈ 14ರಂದು ಬಾರ್‌ಗಳ ಬಂದ್‌ಗೆ ಕರೆ ನೀಡಿದೆ



ಗೆಲುವಿನ ವಿಶ್ವಾಸದಲ್ಲಿ ವನಿತೆಯರು

ಇಂಗ್ಲೆಂಡ್ ವಿರುದ್ಧ ಇದೇ ಮೊದಲ ಬಾರಿಗೆ ಟಿ20 ಕ್ರಿಕೆಟ್ ಸರಣಿ ಜಯಿಸಿರುವ ಭಾರತದ ವನಿತೆಯರು, ಸರಣಿಯ ಕೊನೆಯ ಹಾಗೂ ಐದನೇ ಪಂದ್ಯದಲ್ಲೂ ಗೆಲುವು ಸಾಧಿಸುವ ವಿಶ್ವಾಸದಲ್ಲಿದ್ದಾರೆ



ಸೆನ್ಸೆಕ್ಸ್	ನಿಫ್ಟಿ	$/₹	ಚಿನ್ನ (Std. 10g)	ಶುದ್ಧ ಬೆಳ್ಳಿ (kg)
82,500	25,149	85.80	₹1.02 ಲಕ್ಷ (ಬೆಂಗಳೂರು)	₹1.16 ಲಕ್ಷ (ಬೆಂಗಳೂರು)

‘ಫಾಸ್ಟ್ಯಾಗ್’ ಅಂಟಿಸದಿದ್ದರೆ ಕಪ್ಪುಪಟ್ಟಿಗೆ



ನವದೆಹಲಿ (ಪಿಟಿಐ): ರಾಷ್ಟ್ರೀಯ ಹೆದ್ದಾರಿಗಳಲ್ಲಿ ಸಂಚರಿಸುವ ವಾಹನಗಳಿಗೆ ಫಾಸ್ಟ್ಯಾಗ್ ಅಂಟಿಸದಿದ್ದರೆ (ಲೂಸ್ ಫಾಸ್ಟ್ಯಾಗ್) ಕಪ್ಪುಪಟ್ಟಿಗೆ ಸೇರಿಸಲಾಗುವುದು ಎಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್‌ಎಚ್‌ಎಐ) ಶುಕ್ರವಾರ ತಿಳಿಸಿದೆ.

ಹೆದ್ದಾರಿಯ ಟೋಲ್‌ಗಳ ಬಳಿ ಸುಗಮ ಕಾರ್ಯಾಚರಣೆಯನ್ನು ಖಚಿತಪಡಿಸಿಕೊಳ್ಳಲು ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಪ್ರಾಧಿಕಾರ ಪ್ರಕಟಣೆಯಲ್ಲಿ ಹೇಳಿದೆ. ▶12

ಚಿನಕುರುಳಿ ಪ್ರಕಾಶ್ ಶೆಟ್ಟಿ



ಬಣ ರಾಜಕಾರಣ ಇನ್ನೂ ಉಲ್ಬಣ

‘ನಾಯಕತ್ವ ಬದಲಾವಣೆ ಇಲ್ಲ’: ಸಿದ್ದರಾಮಯ್ಯ ಹೇಳಿಕೆಗೆ ಪರ–ವಿರೋಧ ಪ್ರತಿಕ್ರಿಯೆ

> ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಬಗ್ಗೆ ಹೇಳಿಕೆ ನೀಡಿದ ಸಚಿವರನ್ನೇ ಕೇಳಿ. ನಾನು ಪಕ್ಷದ ವಕ್ತಾರನೇ ಹೊರತು, ಯಾವುದೇ ವ್ಯಕ್ತಿಯ ವಕ್ತಾರನಲ್ಲ
> **ಡಿ.ಕೆ. ಶಿವಕುಮಾರ್,** ಕೆಪಿಸಿಸಿ ಅಧ್ಯಕ್ಷ/ಉಪಮುಖ್ಯಮಂತ್ರಿ

> ಸದ್ಯಕ್ಕೆ ರಾಜ್ಯದಲ್ಲಿ ಮುಖ್ಯಮಂತ್ರಿ ಹುದ್ದೆಯಾಗಲಿ, ಕೆಪಿಸಿಸಿ ಅಧ್ಯಕ್ಷರ ಹುದ್ದೆಯಾಗಲಿ ಖಾಲಿ ಇಲ್ಲ. ಈ ಬಗ್ಗೆ ಯಾರೂ ಮಾತನಾಡಬೇಕಾದ ಅಗತ್ಯವಿಲ್ಲ
> **ಎಂ.ಬಿ.ಪಾಟೀಲ,** ಬೃಹತ್ ಕೈಗಾರಿಕಾ ಸಚಿವ

ಪ್ರಜಾವಾಣಿ ವಾರ್ತೆ

ಕೇಂದ್ರ ಸಚಿವರ ಭೇಟಿ ನೆಪದಲ್ಲಿ ದೆಹಲಿಗೆ ತೆರಳಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ರಾಹುಲ್ ಗಾಂಧಿ ಮತ್ತು ಸೋನಿಯಾ ಗಾಂಧಿ ಅವರ ಭೇಟಿ ಸಾಧ್ಯವಾಗದೇ ವಾಪಸಾಗಿದ್ದಾರೆ. ‘ಡಿಕೆಶಿಗೆ ಶಾಸಕರ ಬೆಂಬಲವಿಲ್ಲ, ಐದು ವರ್ಷ ನಾನೇ ಮುಖ್ಯಮಂತ್ರಿ, 2028ರ ಚುನಾವಣೆಗೂ ನನ್ನದೇ ನಾಯಕತ್ವ’ ಎಂದು ದೆಹಲಿಯಲ್ಲಿ ಸಿದ್ದರಾಮಯ್ಯ ಸ್ಪಷ್ಟ ಸಂದೇಶ ನೀಡಿದ್ದರು. ಅದಕ್ಕೆ ಶುಕ್ರವಾರ ಡಿಕೆಶಿ ಸೇರಿ ಕಾಂಗ್ರೆಸ್‌ನ ಹಲವು ನಾಯಕರು ವಿಭಿನ್ನ ಪ್ರತಿಕ್ರಿಯೆ ನೀಡಿದ್ದಾರೆ

ಮುಖ್ಯಮಂತ್ರಿ ಹೇಳಿಕೆಗೆ ಪ್ರತಿಕ್ರಿಯೆ ನೀಡಲ್ಲ: ಡಿಕೆಶಿ



ಬೆಂಗಳೂರು: ‘ಮುಖ್ಯಮಂತ್ರಿ ಸ್ಥಾನದ ವಿಚಾರ ಕುರಿತು ಯಾರು ಏನೇನು ಮಾತನಾಡಿದ್ದಾರೆ, ಅವರೇ ಪ್ರಶ್ನೆ-ಉತ್ತರ ಎಲ್ಲವನ್ನೂ ನೀಡಿದ್ದಾರೆ...’

ಇದು ‘ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಮುಖ್ಯಮಂತ್ರಿಯಾಗಲು ಹೆಚ್ಚಿನ ಸಂಖ್ಯೆಯ ಶಾಸಕರ ಬೆಂಬಲ ಇಲ್ಲ’ ಎಂಬ ಸಿದ್ದರಾಮಯ್ಯ ಹೇಳಿಕೆಗೆ ಶುಕ್ರವಾರ ಶಿವಕುಮಾರ್ ಅವರು ನೀಡಿದ ಪ್ರತಿಕ್ರಿಯೆ.

‘ಕೇಂದ್ರ ಸಚಿವರು ಹಾಗೂ ಹೈಕಮಾಂಡ್ ನಾಯಕರನ್ನು ಭೇಟಿಯಾಗಲು ದೆಹಲಿಗೆ ತೆರಳಿದ್ದ ಅವರು ಬೆಂಗಳೂರಿಗೆ ಮರಳಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿ, ಸಿದ್ದರಾಮಯ್ಯ ಅವರ ಹೇಳಿಕೆ ತಡವಾಗಿ ಗಮನಿಸಿದೆ. ಈ ವಿಚಾರವಾಗಿ ಸದ್ಯಕ್ಕೆ ಯಾವುದೇ ಪ್ರತಿಕ್ರಿಯೆ ನೀಡುವುದಿಲ್ಲ. ಅದರ ಆವಶ್ಯಕತೆಯೂ ಇಲ್ಲ. ಯಾರು ಎಷ್ಟೇ ತಿರುಗಿಸಿ ಕೇಳಿದರೂ ನಾಯಕತ್ವ ಬದಲಾವಣೆ ವಿಚಾರದಲ್ಲಿ ಉತ್ತರ ನೀಡಲ್ಲ’ ಎಂದರು.

‘ಪಕ್ಷ ನನಗೆ ಸಂಘಟನೆಯ ಜವಾಬ್ದಾರಿ ಹಾಗೂ ಉಪಮುಖ್ಯ-ಮಂತ್ರಿ ಸ್ಥಾನ ನೀಡಿದೆ. ನನ್ನ ಗಮನ ಪಕ್ಷ ಹಾಗೂ ಸರ್ಕಾರದ ಹಿತಾಸಕ್ತಿ ಕಾಪಾಡುವುದರತ್ತ ಮಾತ್ರ ಇರುತ್ತದೆ. ಪಕ್ಷ ಕೊಟ್ಟಿರುವ ಜವಾಬ್ದಾರಿ ನಿರ್ವಹಿಸುತ್ತೇನೆ. ಮಲ್ಲಿಕಾರ್ಜುನ ಖರ್ಗೆ ಅವರು ನಮಗೆ ದೀಕ್ಷೆ ನೀಡಿದ್ದು, ನಾವೆಲ್ಲರೂ ಸಂತೋಷವಾಗಿ ಸ್ವೀಕರಿಸಿದ್ದೇವೆ’ ಎಂದು ಹೇಳಿದರು. ದೆಹಲಿ ಭೇಟಿ ವೇಳೆ ಸುರ್ಜೇವಾಲಾ ಹೊರತಾಗಿ ಬೇರೆ ಯಾವ ಹೈಕಮಾಂಡ್ ನಾಯಕರನ್ನೂ ಭೇಟಿಯಾಗಿಲ್ಲ. ಪಕ್ಷದ ಕಾರ್ಯಕರ್ತರಿಗೆ ಕೆಲವು ಸ್ಥಾನಮಾನ ನೀಡುವ ಬಗ್ಗೆ ಚರ್ಚೆ ಮಾಡಲಾಗಿದೆ ಎಂದರು. ▶6

ಅಧ್ಯಕ್ಷ ಸ್ಥಾನ: ಸಿ.ಎಂ ಬಣದಿಂದ ಮತ್ತೆ ದಾಳ

ನವದೆಹಲಿ: ಐದು ವರ್ಷ ನಾನೇ ಮುಖ್ಯಮಂತ್ರಿ ಎಂದು ಸಿದ್ದರಾಮಯ್ಯ ಪುನರುಚ್ಚರಿಸಿದ ಬೆನ್ನಲ್ಲೇ, ಆಪ್ತ ಸಚಿವರು ಹಾಗೂ ಶಾಸಕರು ಕೆಪಿಸಿಸಿ ಅಧ್ಯಕ್ಷ ಸ್ಥಾನದಿಂದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಕೆಳಗಿಳಿಸಲು ಮತ್ತೊಂದು ಸುತ್ತಿನ ಪ್ರಯತ್ನ ಆರಂಭಿಸಿದ್ದಾರೆ.

ಬೆಂಗಳೂರಿನಲ್ಲಿ ಹಾಗೂ ನವದೆಹಲಿಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿರುವ ಸಚಿವರು ಹಾಗೂ ಶಾಸಕರು ಈ ಬೇಡಿಕೆ ಮುಂದಿರಿಸಿದ್ದಾರೆ. ಖರ್ಗೆ ಅವರನ್ನು ಗುರುವಾರ ರಾತ್ರಿ ಇಲ್ಲಿ ಭೇಟಿ ಮಾಡಿದ್ದ ಸಿದ್ದರಾಮಯ್ಯ, ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಮುನ್ನ ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಮಾಡುವುದು ಸೂಕ್ತ ಎಂದು ಸೂಚ್ಯವಾಗಿ ಹೇಳಿದ್ದಾರೆ.

ಶಿವಕುಮಾರ್ ಐದು ವರ್ಷಗಳಿಂದ ಕೆಪಿಸಿಸಿ ಅಧ್ಯಕ್ಷರಾಗಿದ್ದಾರೆ. 2024ರ ಲೋಕಸಭಾ ಚುನಾವಣೆಯ ವರೆಗೆ ಅವರು ಕೆಪಿಸಿಸಿ ಅಧ್ಯಕ್ಷರಾಗಿ ಮುಂದುವರಿಯಲಿದ್ದಾರೆ ಎಂದು ಹೈಕಮಾಂಡ್ ಈ ಹಿಂದೆ ಹೇಳಿತ್ತು. ಆದರೆ, ಚುನಾವಣೆ ಮುಗಿದು ಒಂದು ವರ್ಷ ಕಳೆದರೂ ಬದಲಾವಣೆ ಆಗಿಲ್ಲ. ಜತೆಗೆ, ಇದು ಒಬ್ಬ ವ್ಯಕ್ತಿಗೆ ಒಂದೇ ಹುದ್ದೆ ಎಂಬ ನೀತಿಗೆ ವಿರುದ್ಧ ಎಂದು ಸಿದ್ದರಾಮಯ್ಯ ಬಣದವರು ಖರ್ಗೆ ಗಮನಕ್ಕೆ ತಂದಿದ್ದಾರೆ. ▶6

ನಾಯಕತ್ವ ಬದಲಾವಣೆ ಚರ್ಚೆಯಾಗಿಲ್ಲ: ಸಿ.ಎಂ



ನವದೆಹಲಿ: ‘ಕರ್ನಾಟಕದಲ್ಲಿ ಅಧಿಕಾರ ಹಸ್ತಾಂತರದ ಬಗ್ಗೆ ಹೈಕಮಾಂಡ್‌ನಲ್ಲಿ ಯಾವುದೇ ಚರ್ಚೆ ಆಗಿಲ್ಲ. ಈ ಬಗ್ಗೆ ನಿಮಗೆ ಎಷ್ಟೊಂದು ಸಲ ವಿವರಣೆ ನೀಡಲಿ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸಿಡುಕಿದರು.

ಕೇಂದ್ರ ಸಚಿವರು ಹಾಗೂ ಹೈಕಮಾಂಡ್ ನಾಯಕರ ಭೇಟಿಗಾಗಿ ಬಂದಿದ್ದ ಅವರು ಬೆಂಗಳೂರಿಗೆ ಹಿಂತಿರುವ ಮುನ್ನ ಸುದ್ದಿಗಾರರ ಜತೆ ಮಾತನಾಡಿದರು. ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಇಲ್ಲ ಎಂದು ಪುನರುಚ್ಚರಿಸಿದರು.

‘ನಿಗಮ ಮಂಡಳಿಗಳಿಗೆ ನೇಮಕ ಸಂಬಂಧ ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರೊಂದಿಗೆ ಚರ್ಚೆ ನಡೆಸಲಾಗಿದೆ. ಈ ಚರ್ಚೆ ಅಪೂರ್ಣ ಆಗಿದೆ. ಇದೇ 16ರಂದು ಸುರ್ಜೇವಾಲಾ ಬೆಂಗಳೂರಿಗೆ ಬರಲಿದ್ದಾರೆ. ಅಂದು ಮತ್ತೊಂದು ಸುತ್ತಿನ ಸಭೆ ನಡೆಸಿ ಪಟ್ಟಿಗೆ ಅಂತಿಮ ರೂಪ ನೀಡಲಾಗುವುದು’ ಎಂದರು.

ಸರ್ಕಾರಿ ಪ್ರೌಢ ಶಾಲೆ: ಎಲ್ಲ ವಿಶೇಷ ಶಿಕ್ಷಕರೂ ‘ಹೆಚ್ಚುವರಿ’

• ಚಂದ್ರಹಾಸ ಹಿರೇಮಳಲಿ

ವಿಶೇಷ ಶಿಕ್ಷಕರು	ಸಂಖ್ಯೆ
ಸಂಗೀತ	512
ನಾಟಕ ಮತ್ತು ನೃತ್ಯ	65
ವೃತ್ತಿ ಶಿಕ್ಷಣ	998
ಚಿತ್ರಕಲೆ	1067
ಒಟ್ಟು	2,642

ಬೆಂಗಳೂರು: ರಾಜ್ಯದಲ್ಲಿನ ಸರ್ಕಾರಿ ಪ್ರೌಢಶಾಲೆಗಳಲ್ಲಿ ಕಾರ್ಯನಿರ್ವಹಿಸು-ತ್ತಿರುವ ವಿಶೇಷ ಶಿಕ್ಷಕರನ್ನು ‘ಹೆಚ್ಚುವರಿ’ ಎಂದು ಗುರುತಿಸಿರುವ ಶಾಲಾ ಶಿಕ್ಷಣ ಇಲಾಖೆ, ಅವರನ್ನು 240ಕ್ಕಿಂತ ಹೆಚ್ಚು ಮಕ್ಕಳಿರುವ ಶಾಲೆಗಳಿಗೆ ಸಾಮೂಹಿಕವಾಗಿ ವರ್ಗಾವಣೆ ಮಾಡಲು ಮುಂದಾಗಿದೆ.



ಶಾಲಾ ಶಿಕ್ಷಣ ಇಲಾಖೆ ಪ್ರೌಢಶಾಲೆಗಳಲ್ಲಿನ ಸಿಬ್ಬಂದಿ ಸ್ವರವಿನ್ಯಾಸವನ್ನು ಮರು ನಿಗದಿಪಡಿಸಿದ್ದು, ಪ್ರತಿ ಶಾಲೆಯಲ್ಲಿ ಮುಖ್ಯ ಶಿಕ್ಷಕರನ್ನು ಹೊರತುಪಡಿಸಿ ಏಳು ಶಿಕ್ಷಕರ ಹುದ್ದೆಗಳಿಗೆ ಮಾತ್ರ ಅವಕಾಶ ನೀಡಿದೆ. ಈ ಮಾನದಂಡದ ಪ್ರಕಾರ, 240ಕ್ಕಿಂತ ಕಡಿಮೆ ವಿದ್ಯಾರ್ಥಿಗಳಿರುವ ಶಾಲೆಗಳಲ್ಲಿರುವ ವಿಶೇಷ ಶಿಕ್ಷಕರನ್ನು ‘ಹೆಚ್ಚುವರಿ’ ಎಂದು ಪರಿಗಣಿಸಲಾಗಿದೆ. ಇಲಾಖೆಯ ಈ ನಿರ್ಧಾರದಿಂದಾಗಿ ಕಡಿಮೆ ಮಕ್ಕಳು ಇರುವ ಗ್ರಾಮೀಣ ಪ್ರದೇಶದ ಶಾಲೆಗಳಲ್ಲಿ ಇರುವ ಎಲ್ಲ ವಿಶೇಷ ಶಿಕ್ಷಕರೂ ನಗರ ಪ್ರದೇಶದ ಶಾಲೆಗಳಿಗೆ ಸ್ಥಳಾಂತರಗೊಳ್ಳಲಿದ್ದಾರೆ. ▶8

800 ಗ್ರಾಂ ಚಿನ್ನಾಭರಣ ದರೋಡೆ

ಪ್ರಜಾವಾಣಿ ವಾರ್ತೆ



ಕಲಬುರಗಿ: ನಗರದ ಸರಾಫ್ ಬಜಾರ ಪ್ರದೇಶದ ಜೈಭವಾನಿ ಕಾಂಪ್ಲೆಕ್ಸ್‌ನ ಮೊದಲ ಮಹಡಿಯಲ್ಲಿರುವ ಚಿನ್ನಾಭರಣ ತಯಾರಿಕಾ ಮಳಿಗೆ ‘ಮಲಿಕ್ ಜುವೆ-ಲರ್ಸ್’ನಲ್ಲಿ ಶುಕ್ರವಾರ ಮಧ್ಯಾಹ್ನ ದರೋಡೆ ನಡೆದಿದೆ.

ನಾಲ್ವರ ತಂಡವು ಅಂಗಡಿಯಲ್ಲಿದ್ದ ಮಾಲೀಕನ ತಲೆಗೆ ಪಿಸ್ತೂಲ್ ಹಿಡಿದು, ಚಾಕು ತೋರಿಸಿ ಅಂದಾಜು 800 ಗ್ರಾಂ ಚಿನ್ನಾಭರಣ ದರೋಡೆ ಮಾಡಿದೆ. ಮುಖಕ್ಕೆ ಮಾಸ್ಕ್, ತಲೆಗೆ ಕ್ಯಾಪ್ ಧರಿಸಿ ಖದೀಮರು ಮಳಿಗೆಗೆ ಪ್ರವೇಶಿಸುವ ದೃಶ್ಯ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ.

ಸ್ಥಳಕ್ಕೆ ನಗರ ಪೊಲೀಸ್ ಕಮಿಷನರ್ ಶರಣಪ್ಪ ಎಸ್.ಡಿ. ಸೇರಿದಂತೆ ಹಿರಿಯ ಪೊಲೀಸ್ ಅಧಿಕಾರಿಗಳು ಭೇಟಿ ನೀಡಿ, ದರೋಡೆ ಘಟನೆಯ ಮಾಹಿತಿ ಪಡೆದಿದ್ದಾರೆ. ಶ್ವಾನದಳ, ಬೆರಳಚ್ಚು ಹಾಗೂ ವಿಧಿವಿಜ್ಞಾನ ಪ್ರಯೋಗಾಲಯದ ಸಿಬ್ಬಂದಿ ಭೇಟಿ ನೀಡಿ ಮಾಹಿತಿ ಕಲೆಹಾಕಿದ್ದಾರೆ. ▶9

ಶಿಕ್ಷಕರಿಂದಲೇ ಜಾತಿವಾರು ಸಮೀಕ್ಷೆ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಸರಾ ರಜೆ ಅವಧಿಯಲ್ಲಿ ಶಾಲಾ ಶಿಕ್ಷಕರ ಮೂಲಕ ಜಾತಿವಾರು ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆ ನಡೆಸುವ ಬಗ್ಗೆ ಹಿಂದುಳಿದ ವರ್ಗಗಳ ಆಯೋಗವು ಸಿದ್ಧತೆ ನಡೆಸಿದೆ.


‘ಸರ್ಕಾರಿ ಮತ್ತು ಅನುದಾನಿತ ಶಾಲಾ ಶಿಕ್ಷಕರ ಮೂಲಕ ನಡೆಸಿದ ಇಂತಹ ಸಮೀಕ್ಷೆಗಳು ಕರಾರುವಾಕ್ಕಾಗಿ ಇದ್ದ ನಿದರ್ಶನಗಳು ಸಾಕಷ್ಟಿವೆ’ ಎಂದು ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಮಧುಸೂದನ್ ಜಿ. ನಾಯಕ್ ‘ಪ್ರಜಾವಾಣಿ’ಗೆ ಮಾಹಿತಿ ನೀಡಿದ್ದಾರೆ.

‘ಸಮೀಕ್ಷೆಯ ಪ್ರಶ್ನಾವಳಿಯು ಬಹುತೇಕ ಸಿದ್ಧವಾಗಿದೆ. ದಸರಾ ಸಂದರ್ಭದಲ್ಲಿ ಶಾಲೆಗಳಿಗೆ 15 ದಿನ ರಜೆ ಇರುತ್ತದೆ. ಅದನ್ನು ಇನ್ನೂ ಹತ್ತು ದಿನ ವಿಸ್ತರಿಸಿ, ಒಟ್ಟು 25 ದಿನಗಳಲ್ಲಿ ಸಮೀಕ್ಷೆ ನಡೆಸುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗುತ್ತದೆ’ ಎಂದಿದ್ದಾರೆ.

ಸರ್ಕಾರವು ಸಮೀಕ್ಷೆಗೆ ಶಿಕ್ಷಕರನ್ನು ಒದಗಿಸದೇ ಇದ್ದರೆ, ಆಶಾ ಕಾರ್ಯಕರ್ತರು ಮತ್ತು ಕಂದಾಯ ವಸೂಲಿಗಾರ-ರನ್ನು ಬಳಸಿಕೊಳ್ಳಬೇಕಾಗುತ್ತದೆ. ಪರಿಶಿಷ್ಟ ಜಾತಿಗಳಿಗೆ ಒಳಮೀಸಲಾತಿ ಒದಗಿಸಲು ನಡೆಸಲಾದ ಸಮೀಕ್ಷೆಯ ದತ್ತಾಂಶಗ-ಳನ್ನೂ ಬಳಸಿಕೊಳ್ಳಬಹುದು ಎಂದು ಮೂಲಗಳು ತಿಳಿಸಿವೆ.

ಲಾರ್ಡ್ಸ್‌ನಲ್ಲಿ ಬೂಮ್ರಾ ‘ಮ್ಯಾಜಿಕ್’

27	ಓವರ್
5	ಮೇಡನ್
74	ರನ್
5	ವಿಕೆಟ್
2.70	ಎಕಾನಮಿ



ಲಂಡನ್: ವಿದೇಶದ ಪಿಚ್‌ಗಳಲ್ಲಿ ಬ್ಯಾಟರ್‌ಗಳಿಗೆ ಸಿಂಹಸ್ವಪ್ನವಾಗಿರುವ ಜಸ್‌ಪ್ರೀತ್ ಬೂಮ್ರಾ ‘ಕ್ರಿಕೆಟ್ ಕಾಶಿ’ ಲಾರ್ಡ್ಸ್‌ನಲ್ಲಿಯೂ ‘ಪಂಚ ಗುಚ್ಛ’ದ ಸಾಧನೆ ಮೆರೆದರು. ಈ ಹಾದಿಯಲ್ಲಿ ಅವರು ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ಕಪಿಲ್ ದೇವ್ ಅವರ ದಾಖಲೆಯನ್ನೂ ಮುರಿದರು.

ಸ್ಕೋರು: ಮೊದಲ ಇನಿಂಗ್ಸ್
ಇಂಗ್ಲೆಂಡ್
387 (112.3 ಓವರ್‌ಗಳಲ್ಲಿ)
ಭಾರತ
3 ವಿಕೆಟ್‌ಗೆ 145
(43 ಓವರ್‌ಗಳಲ್ಲಿ)
(ಎರಡನೇ ದಿನದ ಅಂತ್ಯಕ್ಕೆ)

1 ಲಾರ್ಡ್ಸ್‌ನಲ್ಲಿ ಮೊದಲ ಬಾರಿ ಬೂಮ್ರಾ ಐದು ವಿಕೆಟ್ ಗೊಂಚಲು ಸಾಧನೆ

15 ಬೂಮ್ರಾ ಅವರು ಟೆಸ್ಟ್ ಕ್ರಿಕೆಟ್‌ನಲ್ಲಿ ಗಳಿಸಿರುವ ಒಟ್ಟು ಐದು ವಿಕೆಟ್ ಗುಚ್ಛಗಳು

13 ವಿದೇಶಿ ಪಿಚ್‌ಗಳಲ್ಲಿ ಬೂಮ್ರಾ ಗಳಿಸಿದ ಐದು ವಿಕೆಟ್ ಗೊಂಚಲುಗಳು. 35 ಪಂದ್ಯಗಳಲ್ಲಿ ಈ ಸಾಧನೆ ಆಗಿದೆ. ಕಪಿಲ್ ದೇವ್ 66 ಪಂದ್ಯಗಳಲ್ಲಿ 12 ಬಾರಿ ಈ ಸಾಧನೆ ಮಾಡಿದ್ದರು.

11 ಇಂಗ್ಲೆಂಡ್ ತಂಡದ ಅನುಭವಿ ಬ್ಯಾಟರ್ ಜೋ ರೂಟ್ ಅವರು ಬೂಮ್ರಾ ಅವರಿಗೆ ಔಟಾದ ಇನಿಂಗ್ಸ್‌ಗಳು

28 ಷರತ್ತು ವಿಧಿಸಿದ ರಾಷ್ಟ್ರೀಯ ವನ್ಯಜೀವಿ ಮಂಡಳಿ

ಶರಾವತಿ ಪಂಪ್ಡ್ ಸ್ಟೋರೇಜ್‌ಗೆ ತಾತ್ವಿಕ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಶರಾವತಿ ಕಣಿವೆಯ ಸಿಂಹದ ಬಾಲದ ಸಿಂಗಳೀಕ ಅಭಯಾರಣ್ಯದಲ್ಲಿ ಅನುಷ್ಠಾನಗೊಳ್ಳಲಿರುವ ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಗೆ ರಾಷ್ಟ್ರೀಯ ವನ್ಯಜೀವಿ ಮಂಡಳಿ ತಾತ್ವಿಕ ಅನುಮೋದನೆ ನೀಡಿದೆ. 28 ಷರತ್ತುಗಳನ್ನು ಪಾಲಿಸಿ ಯೋಜನೆ ಅನುಷ್ಠಾನಗೊಳಿಸಬೇಕು ಎಂದು ತಾಕೀತು ಮಾಡಿದೆ.

ವಿದ್ಯುತ್ ಉತ್ಪಾದನೆಗೆ ಬಳಸಿದ ನೀರನ್ನು ಮತ್ತೆ ಮತ್ತೆ ಪಂಪ್‌ಗಳ ಮೂಲಕ ಹಿಂದಕ್ಕೆ ಕೊಂಡೊಯ್ದು, ತಲಾ 250 ಮೆಗಾವಾಟ್ ಸಾಮರ್ಥ್ಯದ ಎಂಟು ಜಲ ವಿದ್ಯುತ್ ಉತ್ಪಾದನಾ ಘಟಕಗಳಲ್ಲಿ ಬಳಸುವ ₹9,000 ಸಾವಿರ ಕೋಟಿ ಮೊತ್ತದ ಯೋಜನೆ ಇದು. ಒಟ್ಟು 2,000 ಮೆಗಾವಾಟ್ ವಿದ್ಯುತ್ ಉತ್ಪಾದನೆಗೆ ಯೋಜನೆ ರೂಪಿಸಲಾಗಿದೆ. ಡಿಪಿಆರ್‌ಗೆ ಕೇಂದ್ರ ವಿದ್ಯುತ್ ಪ್ರಾಧಿಕಾರವು 2024ರ ಆಗಸ್ಟ್‌ನಲ್ಲಿ ಅನುಮೋದನೆ ನೀಡಿತ್ತು. ಈ ಯೋಜನೆಗೆ 352.77 ಎಕರೆ ಜಮೀನು ಅಗತ್ಯವಿದೆ. ಅದರಲ್ಲಿ 133.81 ಎಕರೆ ಅರಣ್ಯ ಭೂಮಿಯಾಗಿದೆ.

ಕೇಂದ್ರ ಅರಣ್ಯ ಸಚಿವ ಭೂಪೆಂದರ್ ಯಾದವ್ ಅಧ್ಯಕ್ಷತೆಯಲ್ಲಿ ನವದೆಹಲಿ-ಯಲ್ಲಿ ನಡೆದ ವನ್ಯಜೀವಿ ಮಂಡಳಿಯ ಸ್ಥಾಯಿ ಸಮಿತಿಯ 84ನೇ ಸಭೆಯಲ್ಲಿ, ಈ ಯೋಜನೆಯಿಂದಾಗಿ ಸಿಂಹದ ಬಾಲದ ಸಿಂಗಳೀಕ ಸೇರಿದಂತೆ ವಿವಿಧ ವನ್ಯಜೀವಿಗಳ ಮೇಲೆ ಪರಾಮರ್ಶೆ ನಡೆಸಲಾಯಿತು. ಈ ಅಭಯಾರಣ್ಯದಲ್ಲಿ 700ಕ್ಕೂ ಹೆಚ್ಚು ಸಿಂಹದ ಬಾಲದ ಸಿಂಗಳೀಕಗಳಿವೆ. ಇಷ್ಟೊಂದು ಸಿಂಗಳೀಕಗಳು ಬೇರೆ ಯಾವುದೇ ಸಂರಕ್ಷಿತ ಪ್ರದೇಶದಲ್ಲಿ ಇಲ್ಲ ಎಂಬ ವರದಿಗಳನ್ನು ಮಂಡಳಿ ಗಮನಿಸಿತು. ಈ ಯೋಜನೆಗೆ ಒಪ್ಪಿಗೆ ನೀಡುವುದಕ್ಕೆ ಸಮಿತಿಯ ಸದಸ್ಯರಾದ ಡಾ. ಎಚ್.ಎಸ್. ಸಿಂಗ್ ಹಾಗೂ ಡಾ. ಆರ್.ಸುಕುಮಾರ್ ತೀವ್ರ ವಿರೋಧ ವ್ಯಕ್ತಪಡಿಸಿದರು. ಯೋಜನೆಗೆ ಅರಣ್ಯ ಅನುಮೋದನೆ ಪಡೆದ ನಂತರ ಸ್ಥಾಯಿ ಸಮಿತಿಯ ಪರಿಗಣನೆಗೆ ಪ್ರಸ್ತಾವನೆಯನ್ನು ಮತ್ತೊಮ್ಮೆ ಮಂಡಿಸಬಹುದು ಎಂದು ಸಚಿವ ಯಾದವ್ ಸೂಚಿಸಿದರು.

ಮಂಡಳಿಯ ಪ್ರಮುಖ ಷರತ್ತುಗಳೇನು?

- ವನ ಸಂರಕ್ಷಣಾ ಕಾಯ್ದೆ 1980ರ ಅಡಿಯಲ್ಲಿ ಅನುಮೋದನೆ ಪಡೆಯಲು ಪ್ರಸ್ತಾವವನ್ನು ಸ್ಥಾಯಿ ಸಮಿತಿಗೆ ಸಲ್ಲಿಸಬೇಕು
- 12.3 ಕಿ.ಮೀ. ರಸ್ತೆ ನಿರ್ಮಾಣಕ್ಕಾಗಿ 13,756 ಮರಗಳನ್ನು ಕಡಿಯಲು ಪ್ರಸ್ತಾಪಿಸಲಾಗಿದೆ. ಪ್ರಸ್ತಾವಿತ ರಸ್ತೆಯನ್ನು ನೆಲದಡಿ ನಿರ್ಮಿಸಿದರೆ 12 ಸಾವಿರ ಮರಗಳನ್ನು ಉಳಿಸಬಹುದು
- ಪಂಪ್ಡ್ ಸ್ಟೋರೇಜ್ ಕಾಮಗಾರಿ ಪೂರ್ಣಗೊಳ್ಳಲು ಕನಿಷ್ಠ 5 ವರ್ಷಗಳು ಬೇಕು. ಹೀಗಾಗಿ,ಕಾಮಗಾರಿಯ ಸಂದರ್ಭದಲ್ಲಿ ಮಾಲಿನ್ಯ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಬೇಕು
- ಇದು ಜಲವಿದ್ಯುತ್ ಯೋಜನೆ ಅಲ್ಲ ಎಂದು ಕರ್ನಾಟಕ ವಿದ್ಯುತ್ ನಿಗಮ ಪ್ರಸ್ತಾವದಲ್ಲಿ ತಿಳಿಸಿದೆ. ನಿಗಮವ ವಿವರಣೆ ತೃಪ್ತಿಕರವಾಗಿಲ್ಲ. ಈ ಸಂಬಂಧ ನಿಗಮವು ಸ್ಪಷ್ಟನೆ ನೀಡಬೇಕು
- ಯೋಜನೆಯ ಅನುಷ್ಠಾನದ ಸಂದರ್ಭದಲ್ಲಿ ಅಳಿವಿನಂಚಿನಲ್ಲಿರುವ ಪ್ರಭೇದಗಳು ಸೇರಿದಂತೆ ವನ್ಯಜೀವಿಗಳಿಗೆ ತೊಂದರೆ ಆಗದಂತೆ ಕಟ್ಟೆಚ್ಚರ ವಹಿಸಬೇಕು



> ವನ್ಯಜೀವಿಗಳಿಗೆ ಮಾನವ ಚಟುವಟಿಕೆರಹಿತ ಸ್ಥಳಗಳನ್ನು ರಚಿಸಲು ಅರಣ್ಯವಾಸಿಗಳನ್ನು ಸ್ಥಳಾಂತರಿಸುವುದು ಮತ್ತು ಅದೇ ಅಭಯಾರಣ್ಯದಲ್ಲಿ ಪರಿಸರಕ್ಕೆ ಹಾನಿಕಾರಕ ಯೋಜನೆಗಳನ್ನು ಶಿಫಾರಸು ಮಾಡುವುದು ಅತ್ಯಂತ ವಿರೋಧಾಭಾಸದಿಂದ ಕೂಡಿದೆ. ರಾಜ್ಯ ವನ್ಯಜೀವಿ ಮಂಡಳಿ ಮತ್ತು ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಸ್ಥಾಯಿ ಸಮಿತಿಯ ನಿರ್ಧಾರದಿಂದ ತೀರಾ ಆಘಾತವಾಗಿದೆ. ಇದು ನಿಜವಾದ ಸಂರಕ್ಷಣಾ ಮಾದರಿಯೇ ಎಂದು ನಮ್ಮನ್ನು ನಾವು ಆತ್ಮಾವಲೋಕನ ಮಾಡಿಕೊಳ್ಳುವ ಸಮಯ ಇದು
> **ಗಿರಿಧರ ಕುಲಕರ್ಣಿ,** ವನ್ಯಜೀವಿ ಸಂರಕ್ಷಣಾವಾದಿ

ಸಿಂಧೂರ: ಭಾರತಕ್ಕೆ ಆಗಿರುವ ಹಾನಿ ಕುರಿತು ಚಿತ್ರ ತೋರಿಸಲಿ– ಡೊಭಾಲ್

‘ಉಗ್ರರ 9 ಅಡಗುದಾಣ ನಾಶ’

ಚೆನ್ನೈ (ಪಿಟಿಐ): ‘ಯಾರು ಎಲ್ಲಿ ಅಡಗಿದ್ದಾರೆ ಎಂಬುದು ನಮಗೆ ಗೊತ್ತಿತ್ತು. ಪಾಕಿಸ್ತಾನ ಗಡಿ ದಾಟಿ ಬಹಳ ನಿಖರವಾದ ದಾಳಿ ನಡೆಸಿ ಉಗ್ರರ ಒಂಬತ್ತು ಅಡಗುದಾಣಗಳನ್ನು ನಾಶಪಡಿಸಲಾಯಿತು. ಈ ಕಾರ್ಯಾಚರಣೆಯಲ್ಲಿ ಯಾವ ಗುರಿಯೂ ತಪ್ಪಿಲ್ಲ’ ಎಂದು ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೊಭಾಲ್ ಶುಕ್ರವಾರ ಹೇಳಿದರು.

‘ಇಡೀ ಕಾರ್ಯಾಚರಣೆಯು ಮೇ 7ರ ರಾತ್ರಿ 1ಕ್ಕೆ ಆರಂಭಗೊಂಡು, 23 ನಿಮಿಷಗಳ ಒಳಗಾಗಿ ಪೂರ್ಣಗೊಂಡಿತು’ ಎಂದರು.

‘ಉಗ್ರರ ಅಡಗುದಾಣಗಳನ್ನು ಗುರಿಯಾಗಿಸಿ ನಡೆಸಿದ ಕಾರ್ಯಾಚರಣೆ ಕುರಿತಂತೆ ಕೆಲವರು ತಮಗೆ ಬೇಕಾದ ರೀತಿಯಲ್ಲಿ ವರದಿ ಪ್ರಕಟಿಸಿದರು. ಪಾಕಿಸ್ತಾನದ 13 ವಾಯುನೆಲೆಗಳಿಗೆ ಹಾನಿ ಮಾಡಲಾಗಿದೆ. ಉಪಗ್ರಹಗಳು ಸೆರೆಹಿಡಿದಿರುವ ಚಿತ್ರಗಳು ಈ ಕುರಿತ ವಾಸ್ತವವನ್ನು ತಿಳಿಸುತ್ತವೆ’ ಎಂದು ಹೇಳುವ ಮೂಲಕ ಆಪರೇಷನ್ ಸಿಂಧೂರ ಯಶಸ್ಸು ಕುರಿತು ಅಂತರರಾಷ್ಟ್ರೀಯ ಮಾಧ್ಯಮಗಳು ಎತ್ತಿದ್ದ ಪ್ರಶ್ನೆಗಳಿಗೆ ಅವರು ಸೂಚ್ಯವಾಗಿ ಉತ್ತರ ನೀಡಿದರು.



> ಯುದ್ಧತಂತ್ರ ಹಾಗೂ ತಂತ್ರಜ್ಞಾನ ನಡುವಿನ ನಂಟಿಗೆ ಭಾರಿ ಮಹತ್ವ ಇದೆ. ಆಧುನಿಕ ಯುದ್ಧತಂತ್ರಗಳಿಗೆ ಅಗತ್ಯವಿರುವ ದೇಶೀಯ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸುವುದು ಅಗತ್ಯ
> **ಅಜಿತ್ ಡೊಭಾಲ್,** ರಾಷ್ಟ್ರೀಯ ಭದ್ರತಾ ಸಲಹೆಗಾರ

ಐಐಟಿ ಮದ್ರಾಸ್‌ನಲ್ಲಿ ನಡೆದ 62ನೇ ಘಟಿಕೋತ್ಸವದಲ್ಲಿ ಮಾತನಾಡಿದ ಅವರು, ‘ಆಪರೇಷನ್ ಸಿಂಧೂರ ಮುಗಿದ ನಂತರ, ಕೆಲವರು ಪಾಕಿಸ್ತಾನ ನಡೆಸಿದೆ ಎನ್ನಲಾದ ಪ್ರತಿದಾಳಿ ಕುರಿತು ಮಾತನಾಡಿದರು. ಹಾಗಿದ್ದರೆ, ಪಾಕಿಸ್ತಾನದ ದಾಳಿಯಿಂದ ಭಾರತದ ಪಡೆಗಳಿಗೆ ಆಗಿರುವ ಹಾನಿ ಕುರಿತಾದ ಒಂದೇ ಒಂದು ಚಿತ್ರವನ್ನು ಯಾರಾದರೂ ತೋರಿಸುವಿರಾ’ ಎಂದು ಡೊಭಾಲ್ ಪ್ರಶ್ನಿಸಿದರು.

‘ಆಪರೇಷನ್ ಸಿಂಧೂರ ಯಶಸ್ಸಿನಲ್ಲಿ ದೇಶೀಯವಾಗಿ ಅಭಿವೃದ್ಧಿಪಡಿಸಿರುವ ಶಸ್ತ್ರಾಸ್ತ್ರಗಳ ಕೊಡುಗೆ ಅನನ್ಯ. ಬ್ರಹ್ಮೋಸ್ ಕ್ಷಿಪಣಿಗಳಿರಬಹುದು, ಸಮಗ್ರ ವಾಯು ಪ್ರದೇಶ ನಿಯಂತ್ರಣ ವ್ಯವಸ್ಥೆ ಇರಬಹುದು, ಈ ಎಲ್ಲವುಗಳ ಬಗ್ಗೆ ನನಗೆ ಹೆಮ್ಮೆ ಇದೆ’ ಎಂದರು.

ಇದಕ್ಕೂ ಮುನ್ನ ಮಾತನಾಡಿದ, ಖ್ಯಾತ ಭರತನಾಟ್ಯ ಕಲಾವಿದೆ ಪದ್ಮಾ ಸುಬ್ರಹ್ಮಣ್ಯಂ,‘ಆಪರೇಷನ್ ಸಿಂಧೂರಕ್ಕೆ ಸಿಕ್ಕ ಜಯ ಐತಿಹಾಸಿಕ. ಈ ಕಾರ್ಯಾಚರಣೆಯು ಶೌರ್ಯ–ಸಾಹಸಗಳ ಕುರಿತು ಭಗವದ್ಗೀತೆಯಲ್ಲಿ ಹೇಳಿರುವುದರ ಅಭಿವ್ಯಕ್ತಿಯಂತಿತ್ತು’ ಎಂದರು.

ಐಐಟಿ ಮದ್ರಾಸ್ ಕೊಡುಗೆ ಶ್ಲಾಘನೆ

ದೇಶದ ಭದ್ರತಾ ಪಡೆಗಳಿಗೆ ಅಗತ್ಯವಿರುವ ತಂತ್ರಜ್ಞಾನ ಅಭಿವೃದ್ಧಿಪಡಿಸುವಲ್ಲಿ ಐಐಟಿ ಮದ್ರಾಸ್ ಹಾಗೂ ಖಾಸಗಿ ವಲಯದ ಕಂಪನಿಗಳ ಕೊಡುಗೆಯನ್ನು ಅಜಿತ್ ಡೊಭಾಲ್ ಶ್ಲಾಘಿಸಿದರು.

‘5ಜಿ ತಂತ್ರಜ್ಞಾನವನ್ನು ಎರಡೂವರೆ ವರ್ಷಗಳಲ್ಲಿ ಐಐಟಿ ಮದ್ರಾಸ್ ಅಭಿವೃದ್ಧಿಪಡಿಸಿದೆ. ಇದೇ ತಂತ್ರಜ್ಞಾನದ ಅಭಿವೃದ್ಧಿಗೆ ಚೀನಾ 12 ವರ್ಷ ತೆಗೆದುಕೊಂಡಿದೆ. ಇದಕ್ಕಾಗಿ 300 ಶತಕೋಟಿ ಡಾಲರ್ (ಅಂದಾಜು ₹25 ಲಕ್ಷ ಕೋಟಿ) ವೆಚ್ಚ ಮಾಡಿದೆ’ ಎಂದರು.

‘ದೇಶದ ಭದ್ರತೆ ಅಥವಾ ದತ್ತಾಂಶದ ಸುರಕ್ಷತೆಗೆ ಬಳಸುವ ಸಣ್ಣ ಸ್ಕ್ರೂ ಆದರೂ ಸರಿ ಅದು ನಂಬಲರ್ಹ ಮೂಲದಿಂದ ಬರಬೇಕು. ಇಂತಹ ಸಾಧನಗಳನ್ನು ಭಾರತದಲ್ಲಿ ತಯಾರಿಸಿರಬೇಕು ಇಲ್ಲವೇ ವಿಶ್ವಾಸಾರ್ಹ ದೇಶವು ಉತ್ಪಾದನೆ ಮಾಡಿರಬೇಕು’ ಎಂದು ಪ್ರತಿಪಾದಿಸಿದರು.

ಯುಪಿಐ ವಹಿವಾಟು ₹40 ಲಕ್ಷ ದಾಟಿದ್ದರೆ ಜಿಎಸ್‌ಟಿ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೇಕರಿ, ಹೋಟೆಲು, ಕಿರಾಣಿ ಅಂಗಡಿ, ಟೀ-ಅಂಗಡಿಗಳನ್ನು ನಡೆಸುತ್ತಿರುವವರ ವಾರ್ಷಿಕ ವಹಿವಾಟು ಮೊತ್ತ ₹40 ಲಕ್ಷ ದಾಟಿದ್ದರೆ, ಶೀಘ್ರವೇ ಅಂತಹವರಿಗೆ ಜಿಎಸ್‌ಟಿ ನೋಟಿಸ್ ಬರಲಿದೆ.

ಯುಪಿಐ ಮೂಲಕ ವಹಿವಾಟು ನಡೆಸುವ ರಾಜ್ಯದ ಎಲ್ಲ ಸಣ್ಣಪುಟ್ಟ ವರ್ತಕರ ಮಾಹಿತಿ ಕಲೆಹಾಕಿರುವ ವಾಣಿಜ್ಯ ತೆರಿಗೆ ಇಲಾಖೆಯು, ವಹಿವಾಟಿನ ಮೇಲೆ ಜಿಎಸ್‌ಟಿ ವಿಧಿಸಲು ಕ್ರಮ ತೆಗೆದುಕೊಂಡಿದೆ. ನಗರದ ಕೆಲವು ಬೇಕರಿ ಮತ್ತು ಟೀ ಅಂಗಡಿ ಮಾಲೀಕರಿಗೆ ಜಿಎಸ್‌ಟಿ ಪಾವತಿಸುವಂಥೆ ನೋಟಿಸ್ ನೀಡಿರುವ ಬಗ್ಗೆ ಮಾಧ್ಯಮಗಳಲ್ಲಿ ಪ್ರಕಟವಾದ ವರದಿಗಳ ವಿಚಾರದಲ್ಲಿ ವಾಣಿಜ್ಯ ತೆರಿಗೆ ಇಲಾಖೆಯು ಶುಕ್ರವಾರ ಸ್ಪಷ್ಟೀಕರಣ ನೀಡಿದೆ.

‘2017ರ ಸರಕು ಮತ್ತು ಸೇವಾ ತೆರಿಗೆ ಕಾಯ್ದೆಯ ಅನ್ವಯ, ಸರಕುಗಳ ಮಾರಾಟದ ಮೌಲ್ಯ ವಾರ್ಷಿಕ ₹40 ಲಕ್ಷ ದಾಟಿದರೆ ಮತ್ತು ಸೇವೆಗಳ ಪೂರೈಕೆಯ ಮೌಲ್ಯ ವಾರ್ಷಿಕ ₹20 ಲಕ್ಷ ದಾಟಿದರೆ ವರ್ತಕರು ಜಿಎಸ್‌ಟಿ ನೋಂದಣಿ ಮಾಡಿಸಬೇಕು. ಆದರೆ, ಬಹುತೇಕ ಸಣ್ಣ–ಪುಟ್ಟ ವ್ಯಾಪಾರಿಗಳು ಜಿಎಸ್‌ಟಿ ನೋಂದಣಿ ಮಾಡಿಸಿಲ್ಲ’ ಎಂದು ಇಲಾಖೆಯ ಪ್ರಕಟಣೆ ತಿಳಿಸಿದೆ.

‘ಅಂತಹ ವ್ಯಾಪಾರಿಗಳನ್ನು ಪತ್ತೆ ಮಾಡಲು ಯುಪಿಐ ಪ್ಲಾಟ್‌ಫಾರಂಗಳಿಂದ ಮಾಹಿತಿ ಕಲೆಹಾಕಲಾಗಿದೆ. ಸದರಿ ಮಾಹಿತಿಯನ್ನು ಪರಿಶೀಲಿಸಲಾಗಿದೆ. 40 ಲಕ್ಷ ರೂಪಾಯಿಗಳಿಗಿಂತ ಹೆಚ್ಚಿನ ಹಣವನ್ನು ಪಡೆದು ಸರಕು ಮತ್ತು ಸೇವಾ ತೆರಿಗೆ ಕಾಯ್ದೆ 2017ರ ಅಡಿಯಲ್ಲಿ ನೋಂದಣಿ ಪಡೆಯದೆ, ತೆರಿಗೆ ಪಾವತಿಸದೆ ಇರುವ ವರ್ತಕರಿಗೆ ಮಾತ್ರ ನೋಟಿಸ್ ಜಾರಿ ಮಾಡಲಾಗಿದೆ’ ಎಂದು ತಿಳಿಸಿದೆ.

ನೋಟಿಸ್ ಬಂದರೆ...

- ಸರಕುಗಳ ಮಾರಾಟದ ವಾರ್ಷಿಕ ವಹಿವಾಟು ₹40 ಲಕ್ಷ, ಸೇವೆಗಳ ಪೂರೈಕೆಯ ವಾರ್ಷಿಕ ವಹಿವಾಟು ₹20 ಲಕ್ಷ ದಾಟಿದ್ದರೆ ಜಿಎಸ್‌ಟಿ ನೋಂದಣಿ ಮಾಡಿಸಬೇಕು
- 2021–22ನೇ ಸಾಲಿನಿಂದ, 2024–25ನೇ ಸಾಲಿನ ಆರ್ಥಿಕ ವರ್ಷದವರೆಗೆ ನಡೆಸಿರುವ ವಹಿವಾಟುಗಳ ವಿವರವನ್ನು ಜಿಎಸ್‌ಟಿ ಕಚೇರಿಗೆ ಸಲ್ಲಿಸಬೇಕು
- ವಾರ್ಷಿಕ ವಹಿವಾಟು ₹1.5 ಕೋಟಿಗಿಂತ ಕಡಿಮೆ ಇರುವ ವರ್ತಕರು ರಾಜಿ ತೆರಿಗೆಯನ್ನು ಆಯ್ಕೆ ಮಾಡಿಕೊಳ್ಳಬೇಕು. ಇನ್ನು ಮುಂದೆ 1 % ತೆರಿಗೆ ಪಾವತಿಸಬೇಕಾಗುತ್ತದೆ
- ಬೇಕರಿ, ಹೋಟೆಲು, ಟೀ–ಅಂಗಡಿಗಳಲ್ಲಿ ಎಲ್ಲ ಸರಕುಗಳಿಗೆ ಜಿಎಸ್‌ಟಿ ಅನ್ವಯವಾಗುವುದಿಲ್ಲ. ಜಿಎಸ್‌ಟಿ ಅನ್ವಯವಾಗುವ ಸರಕುಗಳಿಗಷ್ಟೇ ತೆರಿಗೆ ಪಾವತಿಸಬೇಕಾಗುತ್ತದೆ

ಎರಡು ಸಂಪುಟಗಳ ವರದಿ ಸಲ್ಲಿಕೆ

ಬೆಂಗಳೂರು: ಆರ್‌ಸಿಬಿ ಗೆಲುವಿನ ವಿಜಯೋತ್ಸವದ ವೇಳೆ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ನಡೆದ ಕಾಲ್ತುಳಿತ ಘಟನೆಯ ತನಿಖೆಗೆ ರಚಿಸಿದ್ದ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಜಾನ್ ಮೈಕೆಲ್ ಕುನ್ಹ ಆಯೋಗ ಎರಡು ಸಂಪುಟಗಳನ್ನು ಒಳಗೊಂಡ ವರದಿಯನ್ನು ಶುಕ್ರವಾರ ಮುಖ್ಯಮಂತ್ರಿಗೆ ಸಲ್ಲಿಸಿತು.

ವರದಿ ಸ್ವೀಕರಿಸಿದ ನಂತರ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಆಯೋಗ ನೀಡಿದ ವರದಿಯನ್ನು ಜುಲೈ 17ರಂದು ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಮಂಡಿಸಲಾಗುವುದು ಚರ್ಚಿಸಿದ ನಂತರ ಸೂಕ್ತ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದರು.

ವರದಿಯನ್ನು ವಿವರವಾಗಿ ಓದಿಲ್ಲ. ನ್ಯಾಯಮೂರ್ತಿಗಳು ಮಾಡಿರುವ ಶಿಫಾರಸುಗಳ ಬಗ್ಗೆ ಚರ್ಚಿಸಿದ ನಂತರ ಸಂಪುಟವೇ ಅಂತಿಮ ನಿರ್ಧಾರ ಮಾಡಲಿದೆ ಎಂದರು.

ಕಾಲ್ತುಳಿತದಿಂದ 11 ಜನರು ಮೃತಪಟ್ಟ ಘಟನೆ ಬಗ್ಗೆ ತನಿಖೆಗೆ ನ್ಯಾಯಮೂರ್ತಿ ಜಾನ್ ಮೈಕೆಲ್ ಕುನ್ಹ ಆಯೋಗ ರಚಿಸಲಾಗಿತ್ತು.

‘ಚಿತ್ತಾರ’ ಪ್ರದರ್ಶನ ಇಂದು–ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೊಮ್ಮಲೂರಿನಲ್ಲಿರುವ ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರವು (ಬಿಐಸಿ) ಇದೇ ಶನಿವಾರ ಮತ್ತು ಭಾನುವಾರದಂದು ‘ಚಿತ್ತಾರ’ ಕಲಾಕೃತಿ ಮತ್ತು ಛಾಯಾಚಿತ್ರ ಪ್ರದರ್ಶನ ಹಮ್ಮಿಕೊಂಡಿದೆ.

‘ಸೆಂಟರ್ ಫಾರ್ ರಿವೈವಲ್ ಆಫ್ ಇಂಡಿಜೀನಸ್ ಆರ್ಟ್’ (ಸಿಎಫ್‌ಆರ್‌ಐಎ) ಸಹಯೋಗದಲ್ಲಿ ಈ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ. ಶನಿವಾರ ಬೆಳಿಗ್ಗೆ 11ರಿಂದ ಸಂಜೆ 5, ಭಾನುವಾರ ಮಧ್ಯಾಹ್ನ 2ರಿಂದ ಸಂಜೆ 5ರವರೆಗೆ ಪ್ರದರ್ಶನ ನಡೆಯಲಿದ್ದು, ಸಾರ್ವಜನಿಕರಿಗೆ ಉಚಿತ ಪ್ರವೇಶವಿದೆ.

‘ಚಿತ್ತಾರ’ ಅಳಿವಿನಂಚಿನಲ್ಲಿರುವ ಜಾನಪದ ಕಲಾ ಪ್ರಕಾರವಾಗಿದ್ದು, ಪ್ರದರ್ಶನದಲ್ಲಿ ವಿವಿಧ ಕಲಾಕೃತಿಗಳು, ಛಾಯಾಚಿತ್ರಗಳನ್ನು ಕಣ್ತುಂಬಿಕೊಳ್ಳಬಹುದು ಎಂದು ಪ್ರಕಟಣೆ ತಿಳಿಸಿದೆ.

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಅಲ್ಲಲ್ಲಿ ತುಂತುರು ಮಳೆ ಸಾಧ್ಯತೆ

ಎಎಸ್‌ಐ ಪಾಷಾ ವಿರುದ್ಧ ತನಿಖೆ

ಉಗ್ರ ಟಿ.ನಾಸೀರ್‌ಗೆ ನೆರವು ನೀಡಿದ ಆರೋಪ: ಇಲಾಖಾ ತನಿಖೆಗೆ ಆದೇಶ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಪರಪ್ಪನ ಅಗ್ರಹಾರ ಜೈಲಿನಲ್ಲಿರುವ ಉಗ್ರ ಟಿ.ನಾಸೀರ್‌ಗೆ ನೆರವು ನೀಡಿದ ಆರೋಪದಡಿ ಎನ್‌ಐಎದಿಂದ ಬಂಧಿತರಾಗಿರುವ ನಗರ ಸಶಸ್ತ್ರ ಪಡೆಯ ಎಎಸ್‌ಐ ಚಾಂದ್ ಪಾಷಾ ವಿರುದ್ಧ ಇಲಾಖಾ ತನಿಖೆಗೆ ಆದೇಶಿಸಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್ ಸಿಂಗ್ ತಿಳಿಸಿದ್ದಾರೆ.

ನಗರದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಸಾಮಾನ್ಯವಾಗಿ ಈ ರೀತಿಯ ಆರೋಪ ಬಂದಾಗ ಅಧಿಕಾರಿಯನ್ನು ಅಮಾನತು ಮಾಡಲಾಗುತ್ತದೆ. ಆಂತರಿಕ ತನಿಖೆಯ ವರದಿ ಅನ್ವಯ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಾಗುವುದು. ಈಗಾಗಲೇ ಎನ್‌ಐಎ ತನಿಖೆ ನಡೆಸುತ್ತಿದೆ' ಎಂದರು.

ರಾಜ್ಯ ಸೇರಿದಂತೆ ದೇಶದ ಹಲವೆಡೆ ವಿಧ್ವಂಸಕ ಕೃತ್ಯಕ್ಕೆ ಸಂಚು ರೂಪಿಸಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಬೆಂಗಳೂರು ಮತ್ತು ಕೋಲಾರದಲ್ಲಿ ಶೋಧ ನಡೆಸಿದ್ದ ಎನ್‌ಐಎ ಅಧಿಕಾರಿಗಳು, ಪರಪ್ಪನ ಅಗ್ರಹಾರ ಜೈಲಿನ ಮನೋವೈದ್ಯ ನಾಗರಾಜ್, ಸಶಸ್ತ್ರ ಮೀಸಲು ಪಡೆಯ ಎಎಸ್‌ಐ ಚಾಂದ್ ಪಾಷಾ, ಹಾಗೂ ವಿದೇಶದಲ್ಲಿ ತಲೆಮರೆಸಿಕೊಂಡಿರುವ ಆರೋಪಿ ಜುನೈದ್ ಅಹಮದ್‌ನ ತಾಯಿ ಅನೀಸ್ ಫಾತೀಮಾಳನ್ನು ಬಂಧಿಸಿ, ವಿಚಾರಣೆ ತೀವ್ರಗೊಳಿಸಿದ್ದಾರೆ.


ಚಾಂದ್ ಪಾಷಾ

2008ರಲ್ಲಿ ಬೆಂಗಳೂರಿನಲ್ಲಿ ಸರಣಿ ಸ್ಫೋಟ ಪ್ರಕರಣಗಳು ನಡೆದಿದ್ದವು. ಘಟನೆಯಲ್ಲಿ ಇಬ್ಬರು ಮೃತಪಟ್ಟು, 20 ಮಂದಿ ಗಾಯಗೊಂಡಿದ್ದರು. ಆ ಪ್ರಕರಣದಲ್ಲಿ ಟಿ.ನಾಸೀರ್‌ನನ್ನು ಎನ್‌ಐಎ ಬಂಧಿಸಿತ್ತು. ಜೈಲಿನಲ್ಲಿದ್ದ ಶಂಕಿತ ಉಗ್ರರ ತಂಡವು ಕಾರಾಗೃಹದ ಅಧಿಕಾರಿಗಳ ಜತೆಗೆ ಸೇರಿಕೊಂಡು ಟಿ.ನಾಸೀರ್ ಜೈಲಿನಿಂದ ಪರಾರಿಯಾಗುವಂತೆ ಮಾಡಲು ಸಂಚು ರೂಪಿಸಿತ್ತು. ಚಾಂದ್ ಪಾಷಾಗೆ ನಾಸೀರ್‌ನನ್ನು ಕೋರ್ಟ್‌ಗೆ ಕರೆದೊಯ್ಯುವ ಜವಾಬ್ದಾರಿ ವಹಿಸಲಾಗಿತ್ತು ಎಂಬುದು ತನಿಖೆ ವೇಳೆ ಪತ್ತೆಯಾಗಿತ್ತು.

ಚಾಂದ್ ಪಾಷಾಗೆ ಎಲ್‌ಇಟಿ ಉಗ್ರ ಟಿ.ನಾಸೀರ್ ಸಹಚರರಿಂದ ಲಕ್ಷಾಂತರ ರೂಪಾಯಿ ಸಂದಾಯ ಆಗಿರುವುದು ಬ್ಯಾಂಕ್ ಖಾತೆಗಳ ಪರಿಶೀಲನೆ ವೇಳೆ ಪತ್ತೆಯಾಗಿದೆ. ಹಣವನ್ನು ತನ್ನ ಬ್ಯಾಂಕ್ ಖಾತೆ ಬದಲು ವ್ಯಾಸಂಗ ಮಾಡುತ್ತಿರುವ ಪುತ್ರ ಹಾಗೂ ಸಂಬಂಧಿಯೊಬ್ಬರ ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡಿಸಿಕೊಂಡಿರುವುದು ಪತ್ತೆಯಾಗಿದೆ ಎಂದು ಮೂಲಗಳು ತಿಳಿಸಿವೆ.

ಮುಖ್ಯಾಂಶಗಳು
- ಆಂತರಿಕ ತನಿಖೆ ವರದಿ ಅನ್ವಯ ಕ್ರಮ
- ಉಗ್ರ ಟಿ.ನಾಸೀರ್ ಜೈಲಿನಿಂದ ಪರಾರಿ ಆಗಲು ಸಂಚು
- ಬ್ಯಾಂಕ್ ಖಾತೆಗಳ ಪರಿಶೀಲನೆ

ಮನೆ ಜಪ್ತಿ ವೇಳೆ ಕುಸಿದು ಬಿದ್ದು ವ್ಯಕ್ತಿ ಸಾವು

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಸಾಲ ವಾಪಸ್ ನೀಡದ ಕಾರಣ ಬ್ಯಾಂಕ್ ಸಿಬ್ಬಂದಿ ಮನೆ ಜಪ್ತಿ ಮಾಡುವ ವೇಳೆ, ಒತ್ತಡಕ್ಕೆ ಒಳಗಾದ ವ್ಯಕ್ತಿಯೊಬ್ಬರು ಕುಸಿದು ಬಿದ್ದು ಮೃತಪಟ್ಟಿರುವ ಘಟನೆ ಮಹದೇವಪುರ ಠಾಣೆ ವ್ಯಾಪ್ತಿಯ ಮಹೇಶ್ವರಿನಗರದಲ್ಲಿ ನಡೆದಿದೆ.

ಮಹೇಶ್ವರಿನಗರದ ನಿವಾಸಿ ಆನಂದ್ ವೇಲನ್ (63) ಮೃತ ವ್ಯಕ್ತಿ. ಸಣ್ಣ ಉದ್ಯಮ ನಡೆಸುವ ಸಲುವಾಗಿ ರಾಜಾಜಿನಗರದ ಡೆವಲಪ್‌ಮೆಂಟ್ ಕ್ರೆಡಿಟ್ ಬ್ಯಾಂಕ್‌ನಲ್ಲಿ 2017ರಲ್ಲಿ ₹30 ಲಕ್ಷ ಸಾಲ ಪಡೆದಿದ್ದರು. ₹27 ಲಕ್ಷ ಸಾಲ ಪಾವತಿ ಮಾಡಿದ್ದರು. ಬಾಕಿ ಹಣ ಪಾವತಿ ಮಾಡಿರಲಿಲ್ಲ.

'ಬ್ಯಾಂಕ್ ಸಿಬ್ಬಂದಿ ನೋಟಿಸ್ ನೀಡದೆ ಮನೆ ಜಪ್ತಿಗೆ ಬಂದಿದ್ದರು. ತಂದೆ ಸಾವಿಗೆ ಬ್ಯಾಂಕ್ ಸಿಬ್ಬಂದಿಯೇ ಕಾರಣ' ಎಂದು ಆನಂದ್ ವೇಲನ್ ಕುಟುಂಬದವರು ಆರೋಪಿಸಿದರು.

ಮೋರಿಯಲ್ಲಿ ಶವ ಪತ್ತೆ

ಬೆಂಗಳೂರು: ನಗರದ ಆರ್.ವಿ. ಕಾಲೇಜು ಹಿಂಭಾಗದ ಮೋರಿಯಲ್ಲಿ ಪತ್ತೆಯಾಗಿರುವ ಅಪರಿಚಿತ ವ್ಯಕ್ತಿಯ ಶವದ ಗುರುತು ಇನ್ನೂ ಪತ್ತೆಯಾಗಿಲ್ಲ.

ಸುಮಾರು 40 ರಿಂದ 45 ವರ್ಷದ ಪುರುಷನ ಎದೆಯ ಎಡಭಾಗದಲ್ಲಿ ತಮಿಳಿನಲ್ಲಿ 'ಎಸ್. ಜಯ' ಹೆಸರಿನ ಹಚ್ಚೆ ಇದೆ. ಕಾಲೇಜಿನ ಭದ್ರತಾ ವಿಭಾಗದ ಮೇಲ್ವಿಚಾರಕ ಲೋಕೇಶ್ ಅವರು ಶವವನ್ನು ಗಮನಿಸಿ, ಪೊಲೀಸರಿಗೆ ದೂರು ನೀಡಿದ್ದರು. ಸ್ಥಳಕ್ಕೆ ಕೆಂಗೇರಿ ಠಾಣೆ ಪೊಲೀಸರು ಭೇಟಿ ನೀಡಿ, ಪರಿಶೀಲನೆ ನಡೆಸಿದರು. ಶವವನ್ನು ಹೊರತೆಗೆದು ಆಸ್ಪತ್ರೆಗೆ ರವಾನಿಸಿ, ಮರಣೋತ್ತರ ಪರೀಕ್ಷೆ ನಡೆಸಲಾಯಿತು.

ಮುಖದ ಭಾಗ ಕೊಳೆತ್ತಿದ್ದು, ದೇಹದ ಭಾಗ ಊದಿಕೊಂಡಿತ್ತು. ಯಾವುದೇ ಗಾಯಗಳು ಕಂಡು ಬಂದಿಲ್ಲ. ಮೃತ ವ್ಯಕ್ತಿ ಹಾಗೂ ವಾರಸುದಾರರ ಬಗ್ಗೆ ಮಾಹಿತಿಗಳನ್ನು ಕಲೆ ಹಾಕಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಡಿಸಿಪಿಗೆ ವಂಚನೆ: ಬ್ಯಾಂಕ್ ಸಿಬ್ಬಂದಿ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಹಕಾರ ಬ್ಯಾಂಕ್‌ನಲ್ಲಿ ಸಾಲವಿದ್ದ ವಿಚಾರವನ್ನು ಮರೆಮಾಚಿ ನಗರ ಸಶಸ್ತ್ರ ಮೀಸಲು ಪಡೆ (ಸಿಎಆರ್) ಪಶ್ಚಿಮ ವಿಭಾಗದ ಡಿಸಿಪಿಗೆ ಅಪಾರ್ಟ್‌ಮೆಂಟ್‌ನ ಫ್ಲ್ಯಾಟ್ ಅನ್ನು ₹28 ಲಕ್ಷಕ್ಕೆ ಮಾರಾಟ ಮಾಡಿ ವಂಚಿಸಿದ ಆರೋಪ ಸಂಬಂಧ ಸಿಸಿಬಿ ಪೊಲೀಸರು ಜನಸ್ಮಾಲ್ ಬ್ಯಾಂಕ್ ಸಿಬ್ಬಂದಿ ಹಾಗೂ ಸ್ವರ್ಣ ಭಾರತಿ ಸಹಕಾರ ಬ್ಯಾಂಕ್ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಡಿಸಿಪಿ ವಿ.ಸಿ.ಗೋಪಾಲ ರೆಡ್ಡಿ ಅವರ ದೂರು ಆಧರಿಸಿ, ಜನಸ್ಮಾಲ್ ಬ್ಯಾಂಕ್ ಸಿಬ್ಬಂದಿ ರಾಜೇಶ್, ಬಾಬು ಸರ್ಜಿತ್, ಉಮೇಶ್ ಹಾಗೂ ಸ್ವರ್ಣ ಭಾರತಿ ಸಹಕಾರ ಬ್ಯಾಂಕ್ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಉತ್ತರಹಳ್ಳಿ ಹೋಬಳಿ ಕಗ್ಗಲಿಪುರದಲ್ಲಿರುವ ಶಂಕರ ಮೆಡೋಸ್ ಅಪಾರ್ಟ್‌ಮೆಂಟ್‌ನ ನಾಲ್ಕನೇ ಮಹಡಿಯ ಫ್ಲ್ಯಾಟ್ ಒಂದನ್ನು 2023ರ ಜುಲೈನಲ್ಲಿ ಜನಸ್ಮಾಲ್ ಬ್ಯಾಂಕ್ ಹರಾಜಿಗಿಟ್ಟಿತ್ತು. ಹರಾಜಿನಲ್ಲಿ ಪಾಲ್ಗೊಂಡಿದ್ದ ಡಿಸಿಪಿ ಗೋಪಾಲ ರೆಡ್ಡಿ, ಬ್ಯಾಂಕ್ ಆಫ್ ಬರೋಡಾದಲ್ಲಿ ಸಾಲ ಪಡೆದು, ₹28 ಲಕ್ಷ ಪಾವತಿಸಿ ತಮ್ಮ ಹೆಸರಿಗೆ ಫ್ಲ್ಯಾಟ್ ನೋಂದಣಿ ಮಾಡಿಸಿಕೊಂಡು ಕುಟುಂಬದ ಜತೆ ವಾಸಿಸುತ್ತಿದ್ದರು.

ಈ ನಡುವೆ, ಮೇ 8ರಂದು ಫ್ಲ್ಯಾಟ್ ಬಳಿ ಬಂದಿದ್ದ ಸ್ವರ್ಣ ಭಾರತಿ ಸಹಕಾರ ಬ್ಯಾಂಕ್ ಸಿಬ್ಬಂದಿ, 'ಈ ಫ್ಲ್ಯಾಟ್‌ನ ಮೇಲೆ ಸಾಲ ನೀಡಿದ್ದು, ಮರುಪಾವತಿಯಾಗಿಲ್ಲ' ಎಂದು ಹೇಳಿ ನ್ಯಾಯಾಲಯದ ಆದೇಶದ ಮುಖೇನ ಫ್ಲ್ಯಾಟ್ ಮುಟ್ಟುಗೋಲು ಹಾಕಿಕೊಂಡಿದ್ದರು.

ಗೋಪಾಲ ರೆಡ್ಡಿ ಅವರು ಜನಸ್ಮಾಲ್ ಬ್ಯಾಂಕ್‌ನ ರಾಜೇಶ್ ಮತ್ತು ಇತರರನ್ನು ಪ್ರಶ್ನಿಸಿದಾಗ ಸರಿಯಾದ ಮಾಹಿತಿ ನೀಡದೆ ನುಣುಚಿಕೊಂಡಿದ್ದರು. ಜತೆಗೆ, ಫ್ಲ್ಯಾಟ್ ಖರೀದಿಗೆ ನೀಡಿದ್ದ ಹಣವನ್ನು ನೀಡುವಂತೆ ಪತ್ರ ಬರೆದರೂ ಸ್ಪಂದಿಸಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

'ಬ್ಯಾಂಕ್‌ನಲ್ಲಿ ಸಾಲ ಮಾಡಿ ಹರಾಜಿನಲ್ಲಿ ಫ್ಲ್ಯಾಟ್ ಖರೀದಿ ಮಾಡಿದ್ದೆ. ಆದರೆ, ಫ್ಲ್ಯಾಟ್ ಮೇಲೆ ಸ್ವರ್ಣ ಭಾರತಿ ಸಹಕಾರ ಬ್ಯಾಂಕ್‌ನಲ್ಲೂ ಸಾಲವಿದೆ ಎಂಬ ವಿಚಾರವನ್ನು ಮರೆಮಾಚಿದ್ದ ಜನಸ್ಮಾಲ್ ಬ್ಯಾಂಕ್ ಸಿಬ್ಬಂದಿ ಫ್ಲ್ಯಾಟ್ ಮಾರಾಟ ಮಾಡಿ ನಂಬಿಕೆ ದ್ರೋಹ ಹಾಗೂ ವಂಚನೆ ಮಾಡಿದ್ದು, ಅವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕೆಂದು ಕೋರಿ ಗೋಪಾಲ ರೆಡ್ಡಿ ದೂರಿನಲ್ಲಿ ಉಲ್ಲೇಖಿಸಿದ್ದಾರೆ' ಎಂದು ಪೊಲೀಸರು ಹೇಳಿದ್ದಾರೆ.

ಪತ್ನಿಗೆ ಚಾಕು ಇರಿತ: ಪತಿ ಬಂಧನ

ಕೌಟುಂಬಿಕ ಕಲಹ: ಕಿರುತೆರೆ ನಟಿ ಮಂಜುಳಾ ಕೊಲೆಗೆ ಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೌಟುಂಬಿಕ ಕಲಹ ಹಾಗೂ ಆಸ್ತಿ ವಿಚಾರಕ್ಕೆ ಸಂಬಂಧಿಸಿದಂತೆ ಕಿರುತೆರೆ ನಟಿ, ನಿರೂಪಕಿ ಸಿ. ಮಂಜುಳಾ ಅಲಿಯಾಸ್ ಶ್ರುತಿ ಅವರಿಗೆ ಪತಿ ಚಾಕುವಿನಿಂದ ಇರಿದು ಕೊಲೆಗೆ ಯತ್ನಿಸಿರುವ ಘಟನೆ ಹನುಮಂತನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಜುಲೈ 4ರಂದು ಮುನೇಶ್ವರ ಲೇಔಟ್‌ನಲ್ಲಿ ಈ ಘಟನೆ ನಡೆದಿದ್ದು, ಗಾಯಗೊಂಡು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಮಂಜುಳಾ ನೀಡಿದ ದೂರು ಆಧರಿಸಿ ಆರೋಪಿ ಪತಿ ಅಮರೇಶ್ ಅವರನ್ನು ಪೊಲೀಸರು ಬಂಧಿಸಿದ್ದಾರೆ.

'ಅಮೃತಧಾರೆ' ಸೇರಿದಂತೆ ಹಲವು ಧಾರಾವಾಹಿಗಳಲ್ಲಿ ನಟಿಸಿರುವ ಮಂಜುಳಾ ಅವರು 20 ವರ್ಷಗಳ ಹಿಂದೆ ಅಮರೇಶ್ ಅವರನ್ನು ಪ್ರೀತಿಸಿ ಮದುವೆಯಾಗಿದ್ದರು. ದಂಪತಿಗೆ ಇಬ್ಬರು ಹೆಣ್ಣು ಮಕ್ಕಳಿದ್ದಾರೆ.


ಮಂಜುಳಾ


ಅಮರೇಶ್

ಮಂಜುಳಾ ಕುಟುಂಬ ಹನುಮಂತನಗರದಲ್ಲಿ ಮನೆ ಭೋಗ್ಯಕ್ಕೆ ಪಡೆದು ವಾಸವಿತ್ತು. ಆದರೆ, ಪತ್ನಿಯ ನಡವಳಿಕೆ ಪತಿಗೆ ಇಷ್ಟವಾಗುತ್ತಿರಲಿಲ್ಲ. ದಂಪತಿ ಆಗಾಗ್ಗೆ ಜಗಳವಾಡುತ್ತಿದ್ದರು. ಹೀಗಾಗಿ, ಪತಿಯಿಂದ ದೂರವಾಗಿ ಅಣ್ಣನ ಮನೆಯಲ್ಲಿ ಮಂಜುಳಾ ವಾಸವಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಭೋಗ್ಯದ ಹಣಕ್ಕಾಗಿ ಇಬ್ಬರ ಮಧ್ಯೆ ಜಗಳ ನಡೆಯುತ್ತಿತ್ತು. ಈ ಸಂಬಂಧ ಹನುಮಂತ ನಗರ ಪೊಲೀಸ್ ಠಾಣೆಗೆ ಏಪ್ರಿಲ್ 4ರಂದು ಮಂಜುಳಾ ದೂರು ಕೊಟ್ಟಿದ್ದರು. ಪೊಲೀಸರು ರಾಜಿ - ಸಂಧಾನ ಮಾಡಿಸಿದ್ದರು. ಆದರೆ, ಮತ್ತೆ ಇಬ್ಬರ ಮಧ್ಯೆ ಜಗಳ ನಡೆದಿದೆ.

ಜುಲೈ 4ರಂದು ಮಕ್ಕಳು ಕಾಲೇಜಿಗೆ ತೆರಳಿದ್ದಾರೆ. ಹೊರಗೆ ಹೋಗಿದ್ದ ಪತಿ ಮನೆಗೆ ವಾಪಸ್ ಬಂದಿದ್ದಾರೆ. ಬಾಗಿಲು ತೆರೆದ ಪತ್ನಿಯ ಮುಖದ ಮೇಲೆ ಪೆಪ್ಪರ್ ಸ್ಪ್ರೇ ಮಾಡಿ, ಹಲ್ಲೆ ನಡೆಸಿದ್ದಾರೆ. ಬಳಿಕ ಚಾಕುವಿನಿಂದ ಪಕ್ಕೆಲುಬು, ತೊಡೆ, ಕುತ್ತಿಗೆ ಭಾಗಕ್ಕೆ ಇರಿದು ಕೊಲೆಗೆ ಯತ್ನಿಸಿದ್ದಾರೆ. ಅಲ್ಲದೇ ಜುಟ್ಟು ಹಿಡಿದು ಗೋಡೆಗೆ ತಲೆ ಗುದ್ದಿಸಿದ್ದಾರೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ನಂತರ ಅಕ್ಕಪಕ್ಕದವರು ಬಂದು ಜಗಳ ಬಿಡಿಸಿ, ಆಸ್ಪತ್ರೆಗೆ ದಾಖಲಿಸಿದ್ದಾರೆ. ಆಟೊ ಚಾಲಕನಾಗಿರುವ ಅಮರೇಶ್‌ನನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದರು.

ರೈಲಿನಲ್ಲಿ 49 ಮೊಬೈಲ್ ಕದ್ದವನ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೈಲು ನಿಲ್ದಾಣದಲ್ಲಿ ಪ್ರಯಾಣಿಕರ ಗಮನ ಬೇರೆಡೆ ಸೆಳೆದು ದುಬಾರಿ ಬೆಲೆಯ ಮೊಬೈಲ್ ಕಳ್ಳತನ ಮಾಡಿದ್ದ ಆರೋಪಿಯನ್ನು ರೈಲ್ವೆ ಪೊಲೀಸರು ಬಂಧಿಸಿ, ವಿವಿಧ ಕಂಪನಿಗಳ 49 ಮೊಬೈಲ್ ವಶಪಡಿಸಿಕೊಂಡಿದ್ದಾರೆ.

ಪಶ್ಚಿಮ ಬಂಗಾಳದ ಸೂರಜ್ ಪಾಸ್ವಾನ್ ಬಂಧಿತ ಆರೋಪಿ. ಈತನಿಂದ ₹28 ಲಕ್ಷ ಮೌಲ್ಯದ 13 ಐ-ಫೋನ್ ಸೇರಿದಂತೆ ವಿವಿಧ ಕಂಪನಿಗಳ 49 ಮೊಬೈಲ್‌ಗನ್ನು ವಶಕ್ಕೆ ಪಡೆಯಲಾಗಿದೆ. ಕೃತ್ಯದಲ್ಲಿ ಮೂವರು ಪ್ರಮುಖ ಆರೋಪಿಗಳು ಭಾಗಿಯಾಗಿ ತಲೆಮರೆಸಿಕೊಂಡಿದ್ದು, ಅವರ ಬಂಧನಕ್ಕಾಗಿ ಹುಡುಕಾಟ ನಡೆಸಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.


ಸೂರಜ್

'ಏಳು ತಿಂಗಳ ಹಿಂದೆ ನಗರಕ್ಕೆ ಬಂದಿದ್ದ ಆರೋಪಿಯು ಮಾರತ್ ಹಳ್ಳಿಯಲ್ಲಿ ವಾಸವಾಗಿದ್ದ. ವಂದೇ ಭಾರತ್ ಹಾಗೂ ವಿಶೇಷ ಎಕ್ಸ್ ಪ್ರೆಸ್ ರೈಲುಗಳಲ್ಲಿ ಸಂಚರಿಸುವ ಪ್ರಯಾಣಿಕರನ್ನು ಗುರಿಯಾಗಿಸಿಕೊಂಡು ಕಳವು ಮಾಡುತ್ತಿದ್ದ.

ಚಿತ್ರನಟಿ ಭಾವನಾ ಅವರು ಐವಿಎಫ್ ಮೂಲಕ ಮಗು ಪಡೆಯುವ ಪ್ರಕ್ರಿಯೆಯಲ್ಲಿ ನೆರವಾಗುತ್ತಿರುವವರು ಡಾ. ಸುಷ್ಮಾ ಬಿ.ಆರ್. ಈ ತಂತ್ರಜ್ಞಾನದ ಆಗುಹೋಗುಗಳನ್ನು ಅವರು ಇಲ್ಲಿ ವಿವರಿಸಿದ್ದಾರೆ

ತಾಯ್ತನದ ಹಂಬಲ ಗೌರವಿಸೋಣ

• ಐವಿಎಫ್ ತಂತ್ರಜ್ಞಾನದ ಬಗ್ಗೆ ಹೇಳುವುದಾದರೆ?

ಐವಿಎಫ್ (ಇನ್ ವಿಟ್ರೊ ಫರ್ಟಿಲೈಸೇಷನ್) ಎನ್ನುವುದು ಕೃತಕ ಗರ್ಭಧಾರಣೆ. ಈ ಚಿಕಿತ್ಸೆಗೆ ಬರುವ ದಂಪತಿಯಲ್ಲಿ ಪತ್ನಿಯ ಅಂಡಾಣುಗಳನ್ನು ಇಂಜೆಕ್ಷನ್ ಮೂಲಕ ಹೊರತೆಗೆದು, ಪ್ರತಿ ಅಂಡಾಣುವಿಗೂ ಪತಿಯ ವೀರ್ಯಾಣುವನ್ನು ಸಮ್ಮಿಲನ ಮಾಡಿಸಿ, ಐದು ದಿನ ಭ್ರೂಣವನ್ನು (ಎಂಬ್ರಿಯೊ) ಪ್ರಯೋಗಾಲಯದಲ್ಲಿ ಬೆಳೆಸಲಾಗುತ್ತದೆ. ಒಂದೂವರೆ ತಿಂಗಳ ನಂತರ ಫ್ರೋಜನ್ ಎಂಬ್ರಿಯೊವನ್ನು ಗರ್ಭಚೀಲದಲ್ಲಿ ಇರಿಸಲಾಗುತ್ತದೆ. ಇದು ಪ್ರಕೃತಿಯಲ್ಲಿ ನಡೆಯುವ ಸಹಜ ಗರ್ಭಧಾರಣೆಯಂತೆಯೇ. ಆದರೆ, ವಿವಿಧ ಕಾರಣಗಳಿಂದಾಗಿ ಪ್ರಯೋಗಾಲಯದಲ್ಲಿ ಮಾಡಲಾಗುತ್ತದೆ ಅಷ್ಟೆ.



• ಐವಿಎಫ್ ತಂತ್ರಜ್ಞಾನದಲ್ಲಿ ಫಲಿತಾಂಶದ ಪ್ರಮಾಣ ಎಷ್ಟು?

ಯಾವ ಕಾರಣಕ್ಕೆ ಈ ತಂತ್ರಜ್ಞಾನದ ಮೊರೆ ಹೋಗುತ್ತಾರೆ ಎಂಬ ಆಧಾರದ ಮೇಲೆ ಫಲಿತಾಂಶ ನಿರ್ಧಾರವಾಗುತ್ತದೆ. ಕೆಲವೊಮ್ಮೆ ಗರ್ಭದಲ್ಲಿ ಟ್ಯೂಬಲ್ ಬ್ಲಾಕ್ ಸಮಸ್ಯೆ ಇರಬಹುದು. ಗುಣಮಟ್ಟದ ಅಂಡಾಣುಗಳು ಇಲ್ಲದೇ ಇರಬಹುದು. ಟ್ಯೂಬಲ್ ಬ್ಲಾಕ್ ಸಮಸ್ಯೆ ಇದ್ದಾಗ, ಅಂಡಾಣು ಮತ್ತು ವೀರ್ಯಾಣು ಒಟ್ಟಾಗುವ ಪ್ರಕ್ರಿಯೆಯಲ್ಲಿ ಸಮಸ್ಯೆ ಆಗುತ್ತಿರುತ್ತದೆ. ಅವನ್ನು ಪ್ರಯೋಗಾಲಯದಲ್ಲಿ ಒಂದುಗೂಡಿಸಿ, ಮತ್ತೆ ಗರ್ಭಚೀಲದಲ್ಲಿ ಇಟ್ಟಾಗ ಉತ್ತಮ ಫಲಿತಾಂಶ ಸಿಗುತ್ತದೆ. ಹಾಗೆಯೇ ಪ್ರಯೋಗಾಲಯ ಮತ್ತು ನುರಿತ ತಜ್ಞರ ಅನುಭವದ ಮೇಲೆಯೂ ಫಲಿತಾಂಶ ಅವಲಂಬಿಸಿರುತ್ತದೆ.

• ಐವಿಎಫ್ ಯಾರಿಗೆ ಸೂಕ್ತ?

ಸಂತಾನನಿರೋಧವನ್ನು ಬಳಸದೇ ಒಂದು ವರ್ಷ ಸಹಜವಾಗಿ ಮಿಲನ ಪ್ರಕ್ರಿಯೆ ನಡೆಸಿಯೂ ಗರ್ಭಧಾರಣೆ ಆಗದೇ ಇರುವವರು ಐವಿಎಫ್ ತಂತ್ರಜ್ಞಾನದ ಸಹಾಯ ಪಡೆಯಬಹುದು. ಸಣ್ಣಪುಟ್ಟ ಸಮಸ್ಯೆಗಳಿದ್ದಾಗ ಇದರ ಅಗತ್ಯ ಇರುವುದಿಲ್ಲ. ಅಂಡಾಣು ಅಥವಾ ವೀರ್ಯಾಣುವಿನ ಸಂಖ್ಯೆ ಕಡಿಮೆ ಇದ್ದಾಗ ಇದರ ಅಗತ್ಯವಿರುತ್ತದೆ. ಮಹಿಳೆಯ ಅಂಡಾಶಯದಲ್ಲಿ ಗರಿಷ್ಠವೆಂದರೆ 400 ಅಂಡಾಣುಗಳು ಇರುತ್ತವೆ. 50 ವರ್ಷಕ್ಕೆ ಆಗಬೇಕಾದ ಋತುಬಂಧ ಈಗ ಕೆಲವರಿಗೆ 30 ವರ್ಷಕ್ಕೇ ಆಗುತ್ತಿದೆ. ಇಂಥವರಿಗೆ ಐವಿಎಫ್ ತುಂಬಾ ಸೂಕ್ತ. ದಂಪತಿಗಳಲ್ಲಿ ಪತಿಗೆ 55 ವರ್ಷ, ಪತ್ನಿಗೆ 50 ವರ್ಷದವರೆಗೆ ಈ ಚಿಕಿತ್ಸೆ ನೀಡಬಹುದು.

• ಭಾವನಾ ಅವರು ನಿಮ್ಮನ್ನು ಸಂಪರ್ಕಿಸಿದ್ದು ಹೇಗೆ?

ಹೆಚ್ಚುಕಮ್ಮಿ ಒಂದು ವರ್ಷದ ಮೊದಲು ಭಾವನಾ ನನ್ನನ್ನು ಸಂಪರ್ಕಿಸಿದರು. ಕನ್ನಡದವರೇ ಬೇಕು ಎಂದು ಹುಡುಕಿಕೊಂಡು ಬಂದಿದ್ದರು. ನಾನು ರಾಯಚೂರಿನವಳು. ತಾಯ್ತನವನ್ನು ಅಪ್ಪಿಕೊಳ್ಳುವ ವಿಚಾರದಲ್ಲಿ ಮೊದಲ ದಿನದಿಂದಲೇ ಅವರಿಗೆ ಬಹಳಷ್ಟು ಸ್ಪಷ್ಟತೆ ಇತ್ತು, ಅವರ ಆಲೋಚನೆಯಲ್ಲಿ ದೃಢತೆ ಇತ್ತು. ಯಾವುದೇ ರೀತಿಯ ಗೊಂದಲಗಳಿರಲಿಲ್ಲ. ವೈದ್ಯಕೀಯ ಕಾರಣಗಳಿಗಾಗಿ ಮತ್ತು ಸವಾಲುಗಳನ್ನು ಕಡಿಮೆ ಮಾಡುವ ಸಲುವಾಗಿ ಎರಡು ಭ್ರೂಣಗಳನ್ನು ಗರ್ಭಚೀಲದಲ್ಲಿ ಇಡಲಾಗಿದೆಯೇ ವಿನಾ ಅವಳಿ ಮಕ್ಕಳೇ ಬೇಕೆಂಬುದು ಭಾವನಾ ಅವರ ಇಚ್ಛೆಯೇನಾಗಿರಲಿಲ್ಲ.

• ಭಾವನಾ ಅವರಿಗೆ ಹೆಚ್ಚಿನ ಆರೈಕೆ ಬೇಕಾಗುತ್ತದೆಯೇ?

ಐವಿಎಫ್ ತಂತ್ರಜ್ಞಾನದಲ್ಲಿಯೂ ತುಸು ಜಾಗ್ರತೆ ವಹಿಸುವುದು ಮುಖ್ಯ. ಮೊದಲ ಮೂರು ತಿಂಗಳು ನಿರ್ಣಾಯಕ ಹಂತವಾಗಿರುತ್ತದೆ. ಆದಾದ ಮೇಲೆ ಇತರ ಗರ್ಭಧಾರಣೆಯಂತೆ ಸಹಜವಾಗಿ ಇರುತ್ತದೆ.

• ಗಂಡು–ಹೆಣ್ಣಿನ ಸಾಂಗತ್ಯಕ್ಕೆ, ನೈಸರ್ಗಿಕ ಗರ್ಭಧಾರಣೆಗೆ ಐವಿಎಫ್ ಸಡ್ಡು ಹೊಡೆಯಬಹುದು ಎಂಬ ಆತಂಕ ವ್ಯಕ್ತವಾಗುತ್ತಿದೆಯಲ್ಲ. ಇದಕ್ಕೇನು ಹೇಳುವಿರಿ?

ತಾಯ್ತನ ಎನ್ನುವುದು ಪ್ರಕೃತಿಯು ಹೆಣ್ಣಿಗೆ ಕೊಟ್ಟಿರುವ ಬಹುದೊಡ್ಡ ವರದಾನ. ಅದೊಂದು ಮುಖ್ಯವಾದ ಘಟ್ಟವಷ್ಟೇ ಅಲ್ಲ ಒಂದು ಖುಷಿಯ ಪಯಣ. ಮಕ್ಕಳಿಗಾಗಿಯೇ ಸಂಗಾತಿಯನ್ನು ಹೊಂದುವ ಪರಿಕಲ್ಪನೆಯಿಂದಾಚೆಗೆ ಇದನ್ನು ನೋಡಬೇಕಿದೆ. ಮದುವೆ ಮಾಡಿಕೊಳ್ಳುವುದು ಅವರವರ ವೈಯಕ್ತಿಕ ಆಯ್ಕೆ. ಈ ಆಯ್ಕೆಯ ಹೊರತಾಗಿಯೂ ತಾಯ್ತನ ಅನುಭವಿಸಬೇಕು ಎಂದು ಹೆಣ್ಣು ಇಚ್ಛಿಸಿದರೆ ಅದಕ್ಕೆ ಕಾನೂನಿನಲ್ಲಿ ಅವಕಾಶವಿದೆ. ಒಂದು ಹೆಣ್ಣು ಮದುವೆಯ ಆಯ್ಕೆಯನ್ನು ಪಕ್ಕಕ್ಕಿಟ್ಟು, ಇಂಥ ತಂತ್ರಜ್ಞಾನದ ಮೂಲಕ ತಾಯ್ತನ ಅನುಭವಿಸಬೇಕು ಎಂದುಕೊಳ್ಳುವ ಹಂಬಲವನ್ನು ಮೊದಲಿಗೆ ಗೌರವಿಸೋಣ. ತಾಯ್ತನವನ್ನು ಅಪ್ಪಿಕೊಳ್ಳುವ ಸಲುವಾಗಿ ಎಲ್ಲ ಸವಾಲುಗಳನ್ನೂ ತೆಗೆದುಕೊಳ್ಳಲು ಸಿದ್ಧಳಿದ್ದಾಳೆ ಎಂದಾದರೆ, ಅವಳ ಮನಃಸ್ಥಿತಿಯನ್ನು ಪ್ರೋತ್ಸಾಹಿಸೋಣ. ಈ ಸಮಾಜದಲ್ಲಿ ಮದುವೆಗೆ ಸಿಕ್ಕಿರುವ ಪ್ರಾಮುಖ್ಯ ತಾಯ್ತನಕ್ಕೂ ಸಿಗಬೇಕು.

• ಐವಿಎಫ್ ಪ್ರಕ್ರಿಯೆಯಿಂದ ಹುಟ್ಟಿದ ಮಕ್ಕಳ ಆರೋಗ್ಯದಲ್ಲಿ ವ್ಯತ್ಯಯ ಉಂಟಾದ ಉದಾಹರಣೆಗಳು ಇವೆಯೇ?

ಸಾಮಾನ್ಯವಾಗಿ ನೈಸರ್ಗಿಕ, ಐಯುಐ (ಇಂಟ್ರಾಯೂಟರಿನ್ ಇನ್‌ಸೆಮಿನೇಷನ್), ಐವಿಎಫ್ ಹೀಗೆ ಯಾವುದೇ ಬಗೆಯ ಗರ್ಭಧಾರಣೆಯೇ ಆಗಿರಲಿ, ಒಂದಷ್ಟು ಪ್ರಮಾಣದಲ್ಲಿ ಮಗುವಿನ ಆರೋಗ್ಯದಲ್ಲಿ ವ್ಯತ್ಯಯ ಉಂಟಾಗುವ ಸಾಧ್ಯತೆ ಇದ್ದೇ ಇರುತ್ತದೆ. ಐವಿಎಫ್ ತಂತ್ರಜ್ಞಾನದ ಕಾರಣಕ್ಕಾಗಿ ಮಗುವಿನ ಆರೋಗ್ಯದಲ್ಲಿ ತೊಂದರೆ ಆಗುವುದಿಲ್ಲ. ಹಾಗೆ ನೋಡಿದರೆ, ಆರಂಭದಲ್ಲಿ ಭ್ರೂಣವನ್ನು ಗರ್ಭಚೀಲದಲ್ಲಿ ಇರಿಸುವ ಮೊದಲೇ ಹಲವು ಹಂತಗಳಲ್ಲಿ ಭ್ರೂಣವನ್ನು ಪರೀಕ್ಷೆ ಮಾಡಲಾಗುತ್ತದೆ. ಈ ಹಂತದಲ್ಲಿಯೇ ಕೆಲವೊಮ್ಮೆ ಕ್ರೋಮೊಸೋಮ್ ಸಂಬಂಧಿತ ಸಮಸ್ಯೆಗಳು ಪತ್ತೆಯಾಗುತ್ತವೆ. ಇದು ಈ ತಂತ್ರಜ್ಞಾನದಿಂದ ಆಗುವ ಲಾಭ.

• ದಾನಿಗಳ ವೀರ್ಯಾಣುವಿನಿಂದ ಸಂತಾನ ಪಡೆಯುವ ಪ್ರಕರಣಗಳಲ್ಲಿ ಪತಿಯ ಪ್ರತಿಕ್ರಿಯೆ ಹೇಗಿರುತ್ತದೆ?

ಮದುವೆಯಾಗಿದ್ದರೆ, ಪತಿ ಮತ್ತು ಪತ್ನಿಯದ್ದೇ ವೀರ್ಯಾಣು ಹಾಗೂ ಅಂಡಾಣುವನ್ನು ಬಳಸಲಾಗುತ್ತದೆ. ವೈದ್ಯಕೀಯ ಕಾರಣಗಳು ಮತ್ತು ಸವಾಲುಗಳಿದ್ದಾಗ ಮಾತ್ರ ದಾನಿಗಳಿಂದ ವೀರ್ಯಾಣು ಪಡೆಯಲಾಗುತ್ತದೆ. ಪತಿಯ ವೀರ್ಯಾಣು ಸಂಖ್ಯೆಯಲ್ಲಿ ತೀವ್ರ ಪ್ರಮಾಣದ ಕುಸಿತ ಇದ್ದಾಗ ದಾನಿಗಳ ನೆರವು ಪಡೆಯಲಾಗುತ್ತದೆ. ಇಂಥ ಸಂದರ್ಭದಲ್ಲಿ ಪತಿಯನ್ನು ಮಾನಸಿಕವಾಗಿ ಸಜ್ಜುಗೊಳಿಸುವುದು ಕಷ್ಟದ ಕೆಲಸವಾದರೂ ನಿರಂತರ ಆಪ್ತಸಮಾಲೋಚನೆಯಿಂದ ಅವರ ಮನಃಸ್ಥಿತಿಯನ್ನು ಬದಲಾಯಿಸಲಾಗುತ್ತದೆ.

• ಐವಿಎಫ್ ಗರ್ಭಧಾರಣೆಯಲ್ಲಿ ತಂದೆ ಯಾರು ಎಂದು ತಿಳಿದುಕೊಳ್ಳಲು ತಾಯಿಗಾಗಲಿ ಅಥವಾ ಹುಟ್ಟುವ ಮಕ್ಕಳಿಗಾಗಲಿ ಅವಕಾಶವಿದೆಯೇ?

ಆರಂಭದಲ್ಲಿಯೇ ಮಗುವಿಗೆ ತಾಯಿಯೇ ಎಲ್ಲವೂ ಆಗಿರುವುದರಿಂದ ಇಂಥದ್ದೊಂದು ಅವಶ್ಯಕತೆ ಬರುವುದಿಲ್ಲ. ವೀರ್ಯಾಣುಗಳನ್ನು ವೀರ್ಯ ಬ್ಯಾಂಕುಗಳಲ್ಲಿರುವ ಅನಾಮಧೇಯ ದಾನಿಗಳಿಂದ ಪಡೆಯಲಾಗುತ್ತದೆ. ದಾನಿಯ ರಕ್ತದ ಗುಂಪು ಸೇರಿದಂತೆ ವೈದ್ಯಕೀಯ ಮಾಹಿತಿ ಸಿಗಬಹುದು. ಆದರೆ, ಇಂಥದ್ದೇ ವ್ಯಕ್ತಿ ಎನ್ನುವ ನಿರ್ದಿಷ್ಟ ಮಾಹಿತಿ ಸಿಗಲಾರದು.

ಇನ್‌ಫರ್ಟಿಲಿಟಿ ಕನ್ಸಲ್ಟೆಂಟ್, ರೇನ್‌ಬೋ ಹಾಸ್ಪಿಟಲ್

ಹೊಸಗಾಲದ ಹಸುಮಕ್ಕಳ ಹರಸಿ...



ಚಿತ್ರಗಳು: ಎಂ.ಎಸ್. ಮಂಜುನಾಥ್

> “ನನ್ನ ನಿರ್ಧಾರದ ಬಗ್ಗೆ ನನಗೆ ಸಂತೋಷ ಇದೆ, ಆತ್ಮವಿಶ್ವಾಸ ಇದೆ, ಆತ್ಮಗೌರವ ಇದೆ

ಅನಾಮಿಕ ವ್ಯಕ್ತಿಯ ವೀರ್ಯದಾನದಿಂದ ‘ಕೃತಕ ಗರ್ಭಧಾರಣೆ’ ಮೂಲಕ ಅವಳಿ ಮಕ್ಕಳನ್ನು ಪಡೆಯಲಿರುವ ಚಿತ್ರನಟಿ ಭಾವನಾ ರಾಮಣ್ಣ, ತಮ್ಮ ಈ ನಡೆಯು ಭಾವನಾತ್ಮಕವಾಗಿ ಮತ್ತು ಸಾಮಾಜಿಕವಾಗಿ ಉಂಟು ಮಾಡಬಹುದಾದ ತಲ್ಲಣಗಳಿಗೆ ಮುಖಾಮುಖಿಯಾಗಲು ಹೊರಟಿದ್ದಾರೆ. ‘ಹೊಸಗಾಲದ ಹಸುಮಕ್ಕಳ ಹರಸಿ’ ಎಂಬ ಬೇಂದ್ರೆಯವರ ಕವನದ ಸಾಲಿಗೆ ಅನ್ವರ್ಥವಾಗುವಂತೆ ತಮ್ಮ ಮನದಾಳದ ಭಾವನೆಗಳನ್ನು ಸಂದರ್ಶನದಲ್ಲಿ ಅವರು ಹಂಚಿಕೊಂಡಿದ್ದಾರೆ.

• ನೀಳಾ ಎಂ.ಎಚ್., ರೂಪಾ ಕೆ.ಎಂ.

• ಇಂತಹ ನಿರ್ಧಾರಕ್ಕೆ ಬರಲು ಪ್ರೇರಣೆ ನೀಡಿದ ಸಂದರ್ಭ ಯಾವುದು?

ನನ್ನ ಜೀವನದ ಆಗುಹೋಗುಗಳ ಬಗ್ಗೆ ನಾನು ಯೋಚಿಸಲು ಶುರು ಮಾಡಿದ್ದೇ ನನಗೆ 35 ವರ್ಷವಾದ ನಂತರ. ಆಗ ನಾನು ಮದುವೆಯಾಗುವ ಸಾಧ್ಯತೆ ಇರಲಿಲ್ಲ. ಆದರೆ ಅಷ್ಟರಲ್ಲಿ ತಾಯ್ತನದ ಹಂಬಲ ನನ್ನಲ್ಲಿ ಕುಡಿಯೊಡೆದಿತ್ತು. 40 ವರ್ಷ ಸಮೀಪಿಸುವ ಹೊತ್ತಿಗಂತೂ ಮನಸ್ಸಿನಲ್ಲಿ ಅತೀವ ಗೊಂದಲ, ಒತ್ತಡ ಪ್ರಾರಂಭವಾಯಿತು. ಹಾಗಿದ್ದರೆ ನನ್ನ ಜೀವನದ ಉದ್ದೇಶ ಏನು, ವಿಫಲಳಾಗಿ ಹೋದೆನೇ ಅನ್ನುವಂತಹ ಪ್ರಶ್ನೆಗಳು ಕಾಡತೊಡಗಿದವು. ನನ್ನ ತಂದೆ ಮತ್ತು ನಾನು ಇಬ್ಬರೇ ಇದ್ದ ಮನೆಯಲ್ಲಿ ಏಕತಾನತೆ ಮೇಲುಗೈ ಸಾಧಿಸಿತ್ತು. ಏನಾದರೂ ಹೊಸತನ ಬೇಕು, ಅದಕ್ಕಾಗಿ ಬದಲಾಗಲೇಬೇಕು ಅನ್ನುವ ಆಕಾಂಕ್ಷೆ ಹುಟ್ಟಿಕೊಂಡಿತು. ಕೊನೆಗೆ, ಅದೇ ರಾಗ ಅದೇ ಹಾಡು ಅನ್ನುವಂತಹ ವಾತಾವರಣವನ್ನು ಬದಲಿಸಲೇಬೇಕೆಂದು ನಿಶ್ಚಯಿಸಿದೆ.

• ಹಾಗಿದ್ದರೆ, ನಿಮಗೆ ಒಪ್ಪಿಗೆಯಾಗುವ ಸಂಗಾತಿ ಸಿಗುವುದೇ ಇಲ್ಲ ಅನ್ನುವಂತಹ ಹತಾಶ ಸ್ಥಿತಿಯಲ್ಲಿ ಕೈಗೊಂಡ ನಿರ್ಧಾರವೇ ಇದು?

ಹಾಗೇನಿಲ್ಲ. ನಮ್ಮಲ್ಲಿ ಇರುವ ಅಪೇಕ್ಷೆಗಳು ಈಡೇರಬೇಕೆಂದರೆ ನಮ್ಮ ಸಂಗಾತಿಯೂ ಅದಕ್ಕೆ ಸಿದ್ಧರಾಗಿರಬೇಕಾಗುತ್ತದೆ. ಸ್ನೇಹಿತರಾಗಿ ಇದ್ದಾಗ ಮುಕ್ತವಾಗಿ, ವಿಶಾಲ ಮನಸ್ಸಿನವರಾಗಿ ಇರುತ್ತೇವೆ. ಇಬ್ಬರೂ ಸೇರಿ ವೈಯಕ್ತಿಕ ಬದುಕಿಗೆ ಅಡಿಯಿಡಲು ಮುಂದಾದಾಗ ಅಲ್ಲಿ ಎಲ್ಲ ಬಗೆಯ ನಿರೀಕ್ಷೆಗಳೂ ಹುಟ್ಟಿಕೊಂಡುಬಿಡುತ್ತವೆ. ನನಗೆ ಹತ್ತಿರವಾಗಿದ್ದ ವ್ಯಕ್ತಿಯಲ್ಲಿ, ಮದುವೆ ಅನ್ನುವ ವ್ಯವಸ್ಥಿತ ಚೌಕಟ್ಟಿಗೆ ಒಳಪಡಲು ಬೇಕಾದ ಶಿಸ್ತು, ಬದ್ಧತೆ ಇರಲಿಲ್ಲ. ಆಗ, ಮದುವೆಯಾಗುವ ನಿರ್ಧಾರ ಕೈಬಿಟ್ಟೆ. ಆನಂತರ ನನ್ನೊಳಗೆ ಗೊಂದಲ ಶುರುವಾಯಿತು. ಖಿನ್ನತೆಗೆ ಜಾರುತ್ತಿದ್ದೇನೆ, ಅಸಹಾಯಕಳಾಗುತ್ತಿದ್ದೇನೆ ಅನ್ನಿಸತೊಡಗಿತು. ಹೊರನೋಟಕ್ಕೆ ಎಲ್ಲವೂ ಚೆನ್ನಾಗಿಯೇ ಕಾಣುತ್ತಿದ್ದರೂ ಆಂತರಿಕವಾಗಿ ದುರ್ಬಲಳಾಗುತ್ತಾ ಹೋದೆ. ಅಂದರೆ, ನನ್ನನ್ನೇ ನಾನು ಕಳೆದುಕೊಳ್ಳುತ್ತಿದ್ದೇನೆ ಅನ್ನಿಸತೊಡಗಿದಾಗ ನನಗೆ ಚಿಂತೆ ಶುರುವಾಯಿತು. ಅದುಬಿಟ್ಟರೆ, ನನ್ನ ಕನಸಿನ ರಾಜ ಸಿಗಲಿಲ್ಲ ಅನ್ನುವಂತಹ ಯಾವ ಹತಾಶೆಯೂ ಆಗಲಿಲ್ಲ. ಅಂಥ ಅಳುಕು ಕಾಡುವುದು 20ರ ಆಜುಬಾಜಿನಲ್ಲಿ. ಆ ವಯಸ್ಸನ್ನು ನಾನು ದಾಟಿಯಾಗಿತ್ತು.

• ದತ್ತು ಪಡೆಯಲು ಮನಸ್ಸಾಗಲಿಲ್ಲವೇ?

ನಮ್ಮಲ್ಲಿ ದತ್ತು ಪ್ರಕ್ರಿಯೆ ಅಷ್ಟೊಂದು ಸರಳವಾಗಿಲ್ಲ. ಸಿಂಗಲ್ ಪೇರೆಂಟ್ ವಿಷಯದಲ್ಲಂತೂ ನಿಯಮಗಳು ಇನ್ನಷ್ಟು ಕಠಿಣವಾಗಿಯೇ ಇವೆ. ಮಹೀಂದ್ರ ಆ್ಯಂಡ್ ಮಹೀಂದ್ರ ಕಂಪನಿಯ ಮಹೀಂದ್ರ ದಂಪತಿಯೇ ಈ ವಿಷಯದಲ್ಲಿ ಕಹಿ ಅನುಭವಿಸಿದ್ದಾರೆ. ತಮ್ಮ ಮನೆಯ ಗೇಟಿನ ಬಳಿ ಯಾರೋ ತಂದು ಮಲಗಿಸಿ ಹೋಗಿದ್ದ ಮಗುವನ್ನು, ಅದಾಗಲೇ ಇಬ್ಬರು ಮಕ್ಕಳಿದ್ದರೂ ಸಾಕಲು ಅವರು ಮುಂದಾದರು. ಆದರೆ, ಪಕ್ಕದ ಕೊಳೆಗೇರಿ ನಿವಾಸಿಯಾಗಿದ್ದ ಆ ಮಗುವಿನ ತಾಯಿ ಕೆಲವೇ ದಿನಗಳಲ್ಲಿ ಮನಸ್ಸು ಬದಲಿಸಿ ಮಗುವನ್ನು ವಾಪಸ್ ಪಡೆಯಲು ಮುಂದಾದಳು. ಕೊಡಲು ಒಪ್ಪದಿದ್ದಾಗ ಆಕೆ ಕೋರ್ಟ್ ಮೆಟ್ಟಿಲೇರಿದಳು. ಕಡೆಗೆ ಜಡ್ಜ್ ಹೇಳಿದ್ದೇನು ಗೊತ್ತೇ? ಹೆತ್ತ ತಾಯಿ ಯಾವತ್ತು ಬಂದು ಕೇಳಿದರೂ ಅವಳಿಗೆ ಮಗುವನ್ನು ವಾಪಸ್ ಕೊಡಬೇಕು ಎಂದು. 7 ವರ್ಷ ಅಷ್ಟು ಕಕ್ಕುಲಾತಿಯಿಂದ ಸಾಕಿದ್ದ ಅವರಿಗೆ ಹೇಗಾಗಿರಬೇಡ?



• ಬೇರೆ ವ್ಯಕ್ತಿಯನ್ನು ಆಯ್ಕೆ ಮಾಡಿಕೊಳ್ಳಲು ಮನಸ್ಸಾಗಲಿಲ್ಲವೇ?

ಒಂದು ವಯಸ್ಸು ದಾಟಿದ ಮೇಲೆ ಎಲ್ಲರ ಜೊತೆಯೂ ಬೇಗ ಬೆರೆಯುವುದು ನಮಗೆ ಸಾಧ್ಯವಾಗದು. ಸ್ನೇಹಿತರು, ಸಹೋದ್ಯೋಗಿಗಳ ವಿಷಯದಲ್ಲೇ ಎಷ್ಟೊಂದು ಚ್ಯೂಸಿ ಆಗಿರುತ್ತೇವೆ. ಅಂತಲ್ಲಿ, ಯಾರೊಂದಿಗೋ ಬದುಕು ನಡೆಸುವಂತಹ ಸಂದರ್ಭವನ್ನು ನೆನೆಸಿಕೊಂಡರೆ ಆಘಾತವಾಗುತ್ತದೆ, ಆತ್ಮವಿಶ್ವಾಸ ಕುಸಿಯತೊಡಗುತ್ತದೆ. ಆಗ ನಾವು ಹೊರಗೊಂದು, ಒಳಗೊಂದು ಮುಖ ಇಟ್ಟುಕೊಂಡು ನಾಟಕೀಯವಾಗಿ ಬದುಕತೊಡಗುತ್ತೇವೆ. ತುಂಬಾ ಜನ ಮಾಡುವುದೇ ಹಾಗೆ. ಫೇಸ್‌ಬುಕ್‌ನಲ್ಲಿ ‘ಪರ್ಫೆಕ್ಟ್ ಫ್ಯಾಮಿಲಿ’ ಎಂಬಂತೆ ಕಾಣುವ ಚಿತ್ರಗಳನ್ನು ಹಾಕಿಕೊಳ್ಳುತ್ತಾರೆ. ವಾಸ್ತವ ಬೇರೆಯೇ ಇರುತ್ತದೆ. ನನ್ನೊಳಗೆ ಸಮಾಧಾನವೇ ಇಲ್ಲ ಅಂದಮೇಲೆ ಅಂಥ ತೋರ್ಪಡಿಕೆಯೆಲ್ಲ ಯಾಕಾಗಿ? ಯಾರನ್ನು ಮೆಚ್ಚಿಸುವ ಸಲುವಾಗಿ? ನಮ್ಮ ವ್ಯಕ್ತಿತ್ವವನ್ನು ನಾವು ಉಳಿಸಿಕೊಂಡು, ಅದರಿಂದ ಏನು ಪಡೆದುಕೊಂಡಿದ್ದೇವೆ ಅನ್ನುವುದು ಮುಖ್ಯವಾಗುತ್ತದೆ. ಅದು ಇತರರಿಗೆ ಒಂದು ಸಾಧನೆಯಂತೆ ಕಾಣದಿರಬಹುದು. ಆದರೆ ನನ್ನ ನಿರ್ಧಾರದ ಬಗ್ಗೆ ನನಗೆ ಸಂತೋಷ ಇದೆ, ಆತ್ಮವಿಶ್ವಾಸ ಇದೆ, ಆತ್ಮಗೌರವ ಇದೆ.

• ಇಂತಹದ್ದೊಂದು ಗಟ್ಟಿ ನಿರ್ಧಾರಕ್ಕೆ ಬೇಕಾದ ಮಾನಸಿಕ ಸಿದ್ಧತೆ ಹೇಗಿತ್ತು?

ಕೆಲವು ವರ್ಷಗಳ ಹಿಂದೆ ಒಂದಷ್ಟು ವೈದ್ಯರನ್ನು ಸಂಪರ್ಕಿಸಿದ್ದೆ. ಆಗ ಇನ್ನೂ ಈ ವಿಷಯ ಅಷ್ಟೊಂದು ಮುಕ್ತವಾಗಿ ಇರಲಿಲ್ಲ. ವಿವಾಹಿತರೇ, ವಯಸ್ಸೆಷ್ಟು ಎಂಬ ಪ್ರಶ್ನೆಗಳು ಎಲ್ಲರಿಂದಲೂ ಎದುರಾದವು. ಅವಿವಾಹಿತೆ ಎಂದ ಕೂಡಲೇ ಫೋನ್ ಕೆಳಗಿಟ್ಟವರೂ ಇದ್ದಾರೆ. ಸರಿಯಾದ ರೀತಿಯಲ್ಲಿ ಸಲಹೆ ಸಿಗಲಿಲ್ಲ. ಒಂದಿಬ್ಬರು ಸ್ನೇಹಿತರಲ್ಲಿ ಹಂಚಿಕೊಂಡಾಗ, ಸೈಡ್ ಎಫೆಕ್ಟ್‌ನಿಂದ ದೇಹಸ್ಥಿತಿ ಹದಗೆಡಬಹುದು ಎಂದು ಕಳಕಳಿ ತೋರಿದರು. ದೇಹ ಸಜ್ಜಾಗಿಸಲು ಕೊಡುವ ಇಂಜೆಕ್ಷನ್‌ನಿಂದ ಬೊಜ್ಜು, ಥೈರಾಯ್ಡ್‌ನಂತಹ ಸಮಸ್ಯೆಗಳು ಕಾಡಬಹುದು ಎಂಬ ಎಚ್ಚರಿಕೆಯ ಮಾತುಗಳೂ ಕೇಳಿಬಂದವು. ಅಂತಹದ್ದೊಂದು ಆತಂಕದ ಸ್ಥಿತಿಯಲ್ಲೇ ಇನ್ನೊಂದಷ್ಟು ವರ್ಷಗಳು ಕಳೆದುಹೋದವು. ಆದರೆ ತಾಯ್ತನದ ಹಂಬಲ ಇದೆಲ್ಲವನ್ನೂ ಮೀರಿಸಿತ್ತು. ಇತ್ತ ಸಾಂಗತ್ಯವೂ ಇಲ್ಲ, ಅತ್ತ ವಯಸ್ಸು ಮೀರಿದರೆ ಮಕ್ಕಳನ್ನು ಪಡೆಯುವ ಅವಕಾಶವೂ ಕೈಮೀರುತ್ತದೆ ಎನಿಸತೊಡಗಿದಾಗ ಈ ನಿರ್ಧಾರ ನನ್ನೊಳಗೆ ಗಟ್ಟಿಯಾಗುತ್ತಾ ಹೋಯಿತು.

• ಮಕ್ಕಳನ್ನು ಬೆಳೆಸುವಲ್ಲಿ ಎದುರಾಗಬಹುದಾದ ಭಾವನಾತ್ಮಕ ಮತ್ತು ಸಾಮಾಜಿಕ ಸಮಸ್ಯೆಗಳನ್ನು ಎದುರಿಸಲು ಯಾವ ರೀತಿ ಸಿದ್ಧರಾಗಿದ್ದೀರಿ?

ಸಮಾಜ ಅನ್ನುವುದು ಮೊದಲಿಗೆ ಶುರುವಾಗುವುದು ನಮ್ಮ ಮನೆಯಿಂದಲೇ. ಇಂಥ ಪ್ರಶ್ನೆಗಳು ಮಕ್ಕಳಿಗೆ ಉದ್ಭವವಾಗುವುದು ಅವರಿಗೆ ಏಳೆಂಟು ವರ್ಷಗಳಾದ ನಂತರ. ಯಾವುದೇ ಸಂದರ್ಭದಲ್ಲೂ ಸುಳ್ಳು ಹೇಳಿ, ಬಣ್ಣ ಕಟ್ಟಿ ಏನನ್ನೂ ಹೇಳಬಾರದು ಎಂದು ತೀರ್ಮಾನಿಸಿದ್ದೇನೆ. ನಿಜವನ್ನೇ ಹೇಳುತ್ತಾ ಹೋದರೆ ಕಾಲಕ್ರಮೇಣ ಅವರು ಅರ್ಥ ಮಾಡಿಕೊಳ್ಳುತ್ತಾ ಹೋಗುತ್ತಾರೆ. ಅಂತಹದ್ದೊಂದು ಸಾಮರ್ಥ್ಯ ಅವರಿಗೆ ಬರಲು ಅಗತ್ಯವಾಗಿ ಬೇಕಾದ ಆತ್ಮಶಕ್ತಿ, ಆತ್ಮವಿಶ್ವಾಸ ತುಂಬುವುದಕ್ಕೆ ಏನು ಬೇಕೋ ಅದೆಲ್ಲವನ್ನೂ ಮಾಡುತ್ತೇನೆ. ಆ ವಿಷಯದಲ್ಲಿ ಯಾವುದೇ ಕುಂದುಕೊರತೆ ಆಗದಿರುವ ಹಾಗೆ ಭಾವನಾತ್ಮಕವಾಗಿ ಅವರ ಜೊತೆ ಇರಲು ಪ್ರಯತ್ನಿಸುತ್ತೇನೆ.

ಲತಾ ಮಂಗೇಶ್ಕರ್ ಅಂತಹವರನ್ನೂ ಇಂತಹ ಪ್ರಶ್ನೆಗಳು ಕಾಡದೇ ಬಿಡಲಿಲ್ಲ. ಆಶಾ ಪಾರೇಖ್ 80 ವರ್ಷ ಪ್ರಾಯದಲ್ಲೂ ಇದನ್ನೆಲ್ಲ ಎದುರಿಸಿದ್ದಾರೆ. ಅವರೆಲ್ಲ ಒಂಟಿಯಾಗಿ ಇದ್ದರೂ ತಾಯಿಯಾಗಬೇಕೆಂಬ ಹಂಬಲ ಅವರಿಗೂ ಇದ್ದಿರಬಹುದು. ಹೇಳಿಕೊಳ್ಳಲು ಅವಕಾಶ ಸಿಕ್ಕಿದ್ದರೆ, ಈಗಿನಂತೆ ತಂತ್ರಜ್ಞಾನದ ನೆರವೂ ಇದ್ದಿದ್ದರೆ ಖಂಡಿತ ಅವರೂ ಹೀಗೆಯೇ ಮಕ್ಕಳನ್ನು ಪಡೆಯಲು ಮುಂದಾಗುತ್ತಿದ್ದರೇನೊ.

• ನಮ್ಮ ಬದುಕು ನಮ್ಮ ಹಕ್ಕು. ಆದರೆ ನಮ್ಮ ಮಕ್ಕಳಿಗೆ ಅಪ್ಪನೇ ಬೇಡ ಎಂದು ನಾವು ನಿರ್ಧರಿಸುವುದು ಹೇಗೆ?

ಹೌದು, ಮಕ್ಕಳ ಬದುಕಿನಲ್ಲಿ ನಾವು ಮೂಗು ತೂರಿಸಬಾರದು ಎನ್ನುವುದನ್ನು ಒಪ್ಪುತ್ತೇನೆ. ತಬಲಾ ಮಾಂತ್ರಿಕ ಜಾಕಿರ್ ಹುಸೇನ್ ಅವರು ಅಂತಿಮ ದಿನಗಳಲ್ಲಿ ಒಂದು ವಿಲ್ ಮಾಡಿದ್ದರು. ಅದರಲ್ಲಿ ‘ನನ್ನ ಹೆಂಡತಿಯ ಅಂತ್ಯಕ್ರಿಯೆ ನಡೆಸುವ ಜಾಗದ ಪಕ್ಕದಲ್ಲೇ ನನ್ನ ಅಂತ್ಯಕ್ರಿಯೆಯನ್ನೂ ನಡೆಸಬೇಕು’ ಎಂಬ ಅಭಿಲಾಷೆ ವ್ಯಕ್ತಪಡಿಸಿದ್ದರು. ಅವರು ತೀರಿಕೊಂಡಾಗ ಅವರ ಹೆಂಡತಿ ಜೀವಂತವಾಗಿಯೇ ಇದ್ದರು. ಅಂದರೆ, ನನ್ನ ಅಂತ್ಯಕ್ರಿಯೆ ಎಲ್ಲಿ ಆಗುತ್ತದೋ ನಿನ್ನದೂ ಅಲ್ಲಿಯೇ ಆಗಬೇಕು ಎಂದು ಪರೋಕ್ಷವಾಗಿ ಅವರು ಒತ್ತಡ ಹಾಕಿದ್ದರು ಎಂದರ್ಥವಲ್ಲವೇ? ಇಲ್ಲಿ ನಿಮ್ಮ ಪ್ರಶ್ನೆಯೂ ಅದೇ ರೀತಿ ಇದೆ.

ಆದರೆ ಇದು ನನ್ನ ಜೀವನದಲ್ಲಿ ನನ್ನ ಬಗ್ಗೆ ನಾನು ತೆಗೆದುಕೊಂಡಿರುವ ನಿರ್ಧಾರ. ಮಕ್ಕಳು ಹೊರಗೆ ಬಂದ ಮೇಲೆ ಅದು ಅವರ ಜೀವನವೇ ಆಗುತ್ತದೆ. ಅವರ ವ್ಯಕ್ತಿತ್ವಕ್ಕೆ ಕುಂದು ಬರುವ ರೀತಿಯಲ್ಲಿ ನಡೆದುಕೊಳ್ಳಬಾರದು ಎನ್ನುವ ಪ್ರಜ್ಞೆ ನನ್ನಲ್ಲಿ ಇದೆ. ಏಕೆಂದರೆ ಆ ಮಕ್ಕಳಿಗೆ ನಾನು ಉತ್ತರದಾಯಿ ಆಗಿರುತ್ತೇನೆ. ಅಷ್ಟರನಡುವೆಯೂ ನಾನು ತಾಯಿ ಅನ್ನುವ ಒಂದು ಬಾಂಧವ್ಯ ನಮ್ಮ ನಡುವೆ ಇದ್ದೇ ಇರುತ್ತದೆ ಅಲ್ಲವೇ? ಇಂದಿನ ಕಾಲಘಟ್ಟದಲ್ಲಿ ಎಷ್ಟೊಂದು ವಿವಾಹ ವಿಚ್ಛೇದನಗಳು ನಡೆಯುತ್ತವೆ. ಆ ಸಂಬಂಧಗಳಲ್ಲಿ ತಂದೆ– ತಾಯಿ ನಡುವಿನ ವೈಮನಸ್ಸು, ವಾದ ವಿವಾದ, ಕಹಿಘಟನೆಗಳನ್ನು ಮಕ್ಕಳು ನೋಡುತ್ತಿರುತ್ತಾರೆ.

• ಕವಿತಾ ಲಂಕೇಶ್, ನೀನಾ ಗುಪ್ತಾ ಅಂತಹವರ ಪ್ರಕರಣಗಳಲ್ಲಿ, ಜೊತೆಯಲ್ಲಿ ಇರದಿದ್ದರೂ ಆ ಮಕ್ಕಳಿಗೆ ತಂದೆ ಎಂದು ಹೇಳಿಕೊಳ್ಳುವುದಕ್ಕೆ ಒಬ್ಬ ವ್ಯಕ್ತಿಯಂತೂ ಇರುತ್ತಾರೆ. ಆದರೆ ಇಲ್ಲಿ ಹಾಗಿಲ್ಲವಾದ್ದರಿಂದ, ಮುಂದೆ ಮಕ್ಕಳ ಸಲುವಾಗಿ ನಿಮ್ಮ ವೀರ್ಯದಾನಿಯ ಬಗ್ಗೆ ತಿಳಿದುಕೊಳ್ಳುವ ಸಂದರ್ಭ ಬರಬಹುದೇ?

ಅಂತಹ ಸಾಧ್ಯತೆ ಇಲ್ಲ. ಮಕ್ಕಳು ಅಪ್ಪನಾಗಿ ಆ ವ್ಯಕ್ತಿಯನ್ನು ನೋಡಿರುವುದೇ ಇಲ್ಲವಲ್ಲ. ದತ್ತು ಪಡೆದ ಮಕ್ಕಳಲ್ಲಿ ಅಂತಹದ್ದೊಂದು ಕುತೂಹಲ ಇರುತ್ತದೆ. ಅಂತಹವರು ತಮ್ಮ ಮೂಲವನ್ನು ಹುಡುಕಿಕೊಂಡು ಹೋಗುವ ಸಾಧ್ಯತೆ ಹೆಚ್ಚು. ನೀನಾ ಗುಪ್ತಾ ವಿಷಯದಲ್ಲಿ ಅವರ ಮಗಳು ಹದಿವಯಸ್ಸಿಗೆ ಬಂದಾಗ ಆಕೆಗೆ ತಂದೆಯನ್ನು ಭೇಟಿಯಾಗಬೇಕೆಂಬ ಹಂಬಲ ಮೂಡಿತು. ಅಲ್ಲದೆ ಆಕೆಯ ತಂದೆ ವಿವಿಯನ್ ರಿಚರ್ಡ್ಸ್ ಖ್ಯಾತನಾಮರೂ ಆಗಿದ್ದು, ಮಾಧ್ಯಮಗಳ ಮೂಲಕ ಅವರ ಬಗ್ಗೆ ತಿಳಿಯುವ ಅವಕಾಶ ಬಹಳಷ್ಟಿತ್ತು. ಇದರಿಂದಲೂ ಆಕೆಯಲ್ಲಿ ಅಂತಹದ್ದೊಂದು ಬಯಕೆ ಮೂಡಿರಬಹುದು. ಇಲ್ಲಿ ನನಗೇ ಆತ ಯಾರೆಂದು ಗೊತ್ತಿಲ್ಲದಿರುವಾಗ ಇನ್ನು ಮಕ್ಕಳಿಗೆ ತಿಳಿಸುವುದೇನು? ವೀರ್ಯಾಣು ದಾನ ಮಾಡಿದ ಅನ್ನುವ ಒಂದೇ ಕಾರಣಕ್ಕೆ ಆತ ಯಾರೆಂದು ತಿಳಿದುಕೊಂಡು, ಮಕ್ಕಳ ಜವಾಬ್ದಾರಿಯನ್ನು ಅವನ ಮೇಲೆ ಹೊರಿಸಲಾದೀತೇ? ಅಲ್ಲದೆ ಅಂತಹದ್ದೊಂದು ನಿಬಂಧನೆಗೆ ವೈದ್ಯರು ನಮ್ಮಿಂದ ಸಹಿಯನ್ನೂ ಪಡೆದಿರುತ್ತಾರೆ.

ಹೊಸ ವಿಚಾರವಾದ್ದರಿಂದ ಸಮಾಜದಲ್ಲಿ ಸಂಚಲನ ಮೂಡಿಸಿದೆ. ಬರಬರುತ್ತಾ ಬಹಳಷ್ಟು ಬದಲಾವಣೆ ಸಾಧ್ಯವಾಗಬಹುದು. ಹೆಂಗಸರು ಕ್ಯಾಸಿನೊಗಳಿಗೆ ಹೋಗಿ ಜೂಜಾಡುವುದನ್ನು ಬೇಕಾದರೂ ಜನ ಸಹಿಸಿಕೊಳ್ಳುತ್ತಾರೆ, ಕಾನೂನಾತ್ಮಕವಾಗಿಯೂ ತಪ್ಪಿಲ್ಲದ ನನ್ನ ನಿರ್ಧಾರವನ್ನು ಸಹಿಸಿಕೊಳ್ಳಲು ಕೆಲವರಿಗೆ ಕಷ್ಟವಾಗುತ್ತಿದೆ. ಕೊರೊನಾ ಬಗ್ಗೆ ಆರಂಭದಲ್ಲಿ ತೀವ್ರ ಆತಂಕ ಇದ್ದರೂ ಕ್ರಮೇಣ ಶೀತ, ಕೆಮ್ಮಿನಂತೆಯೇ ಅದೂ ಸಹಜ ಎನ್ನುವಂತೆ ಆಯಿತಲ್ಲಾ ಹಾಗೇ ಇಲ್ಲೂ ಆಗಬಹುದು.

ನನ್ನ ಸುತ್ತಲಿನ ವಾತಾವರಣದಲ್ಲಿ ಮಕ್ಕಳಿಗೆ ಸಲ್ಲದ ಪ್ರಶ್ನೆಗಳು ಎದುರಾಗುವ ಸಾಧ್ಯತೆ ಕಡಿಮೆ. ಆದರೆ ಹೆಚ್ಚಿನ ಮಕ್ಕಳಿಗೆ ಈ ವಿಷಯದಲ್ಲಿ ಕಹಿ ಅನುಭವ ಆಗುವುದೇ ಶಾಲೆಗಳಲ್ಲಿ. ನನ್ನ ಸಂಬಂಧಿಯೊಬ್ಬರ 7 ವರ್ಷದ ಮಗುವಿಗೆ ಶಾಲೆಯಲ್ಲಿ ‘ವಾಟ್ ಈಸ್ ಎ ಫ್ಯಾಮಿಲಿ’ ಎಂದು ಪ್ರಶ್ನೆ ಕೇಳಿದಾಗ ‘ಐ ಲಿವ್ ಇನ್ ಎ ಜಾಯಿಂಟ್ ಫ್ಯಾಮಿಲಿ’ ಎಂದು ಉತ್ತರಿಸಿತ್ತು. ‘ಹೌ ಕ್ಯಾನ್ ಯು ಬಿ ಇನ್ ಎ ಜಾಯಿಂಟ್ ಫ್ಯಾಮಿಲಿ? ನಿನ್ನ ತಂದೆ–ತಾಯಿ ಡೈವೋರ್ಸ್ ಆಗಿದ್ದಾರಲ್ಲ’ ಎಂದು ಶಿಕ್ಷಕಿ ಕೇಳಿದ್ದರು!

ಪಠ್ಯಪುಸ್ತಕದಲ್ಲಿ ‘ಹ್ಯಾಪಿ ಫ್ಯಾಮಿಲಿ’ ಎಂದು ತೋರಿಸುತ್ತೇವೆ. ಆದರೆ ವಿಚ್ಛೇದಿತರು, ಸಿಂಗಲ್ ಪೇರೆಂಟ್‌ಗಳ ವಿಷಯ ಯಾವ ಪಠ್ಯದಲ್ಲೂ ಇರುವುದಿಲ್ಲ. ಪಠ್ಯವನ್ನು ಕಾಲಕ್ಕೆ ತಕ್ಕಂತೆ ಯಾವ ರೀತಿ ಪರಿಷ್ಕರಿಸಬೇಕು ಎನ್ನುವುದು ನಮಗೆ ಗೊತ್ತಿರಬೇಕು. ಎಲ್ಲಕ್ಕಿಂತ ಹೆಚ್ಚಾಗಿ ಶಿಕ್ಷಕರಿಗೆ ಈ ವಿಷಯದಲ್ಲಿ ಅರಿವು ಮೂಡಿಸಬೇಕು. ವಿಶೇಷವಾಗಿ ಸಿಂಗಲ್ ಪೇರೆಂಟ್‌ಗೆ ಸಂಬಂಧಿಸಿದ ಮಗುವನ್ನು ಹೇಗೆ ನಿರ್ವಹಿಸಬೇಕು ಎಂಬ ಸೂಕ್ಷ್ಮವಾದ ಪ್ರಜ್ಞೆಯನ್ನು ಅವರಲ್ಲಿ ಬೆಳೆಸಬೇಕು.

ಅವೆಲ್ಲ ಅವರ ಮನಸ್ಸಿನ ಮೇಲೆ ಅಗಾಧ ಪರಿಣಾಮ ಬೀರುತ್ತವೆ. ಕನಿಷ್ಠ ಅಂತಹ ಸ್ಥಿತಿಯಂತೂ ಇಲ್ಲಿ ಉದ್ಭವಿಸದು. ಇದನ್ನೆಲ್ಲ ನಾನು ಎಷ್ಟರಮಟ್ಟಿಗೆ ಸರಿದೂಗಿಸಬಲ್ಲೆ ಎನ್ನುವುದು ಖಂಡಿತವಾಗಿಯೂ ನನ್ನ ಮಕ್ಕಳು ನನಗೆ ಎಷ್ಟು ಶಕ್ತಿ ಕೊಡುತ್ತಾ ಹೋಗುತ್ತಾರೆ ಅನ್ನುವುದನ್ನು ಅವಲಂಬಿಸಿರುತ್ತದೆ. ಬಾಂಧವ್ಯ, ಪ್ರೀತಿ ಪರಸ್ಪರ ಬರುವಂತಹದ್ದು. ಅದು ಬರೀ ನಾನು ಕೊಟ್ಟೆ, ನನ್ನಿಂದಲೇ ಶುರುವಾಯಿತು ಅನ್ನುವಂತಹದ್ದಲ್ಲ.

• ನಿಮ್ಮ ಪುಟ್ಟ ಕಂದಮ್ಮಗಳ ಪರವಾಗಿ ನೀವು ಸಮಾಜವನ್ನು ಕೇಳಿಕೊಳ್ಳುವುದೇನು?

ಯಾರೇ ಆಗಲಿ, ಯಾರ ಮಕ್ಕಳೇ ಆಗಿರಲಿ ಮಕ್ಕಳನ್ನು ಮಕ್ಕಳಂತೆಯೇ ನೋಡಿ, ಮಕ್ಕಳಂತೆಯೇ ಇರಲು ಬಿಡಿ.

ಕೆಲವು ಪೋಷಕರಂತೂ ಅತಿಯಾಗಿ ಪ್ರೊಟೆಕ್ಟಿವ್ ಆಗಿರುತ್ತಾರೆ. ಮೂರ್ನಾಲ್ಕು ವರ್ಷದ ಮಕ್ಕಳಿಗೆ, ಕೆಳಗೆ ಬಿದ್ದರೆ ನೋವಾಗದಿರಲಿ ಎಂದು ನೀ ಪ್ಯಾಡ್ ಹಾಕಿರುತ್ತಾರೆ. ಮಕ್ಕಳಿಗೆ ಸಣ್ಣಪುಟ್ಟ ನೋವೂ ಆಗದಂತೆ ಬೆಳೆಸಿದರೆ ಮುಂದೆ ಜೀವನದಲ್ಲಿ ಆಗಬಹುದಾದ ಇತರ ನೋವುಗಳನ್ನು ಅವರು ಸಹಿಸಿಕೊಳ್ಳುವುದು ಹೇಗೆ? ಬದುಕು ಹೂವಿನ ಹಾಸಿಗೆಯಲ್ಲ. ಎಷ್ಟೇ ಹೆದ್ದಾರಿಗಳು ಇದ್ದರೂ ಕಲ್ಲು, ಮಣ್ಣಿನ ರಸ್ತೆಗಳೂ ಇದ್ದೇ ಇರುತ್ತವೆ, ಅವು ಇರಲೇಬೇಕು ಸಹ.

ಬದ್ಧತೆಯಿಲ್ಲದ ಸಂಬಂಧ ಬೇಕೇ?

• ನಾನು ವಿಧವೆ. ಸರ್ಕಾರಿ ನೌಕರಿಯಲ್ಲಿ ಇದ್ದೇನೆ. ಸಹೋದ್ಯೋಗಿಯೊಬ್ಬರು ನನ್ನನ್ನು ಪ್ರೀತಿಸಿ, ನಂಬಿಸಿ ಮೋಸ ಮಾಡಿದರು. ನನ್ನ ಫೋನ್ ನಂಬರ್ ಬ್ಲಾಕ್ ಮಾಡಿದ್ದಾರೆ. ಎದುರಿಗೆ ಸಿಕ್ಕರೂ ಮಾತನಾಡುವುದಿಲ್ಲ. ಎರಡು ವರ್ಷದ ನಂತರ ಮತ್ತೆ ಸಂಪರ್ಕಕ್ಕೆ ಬರುತ್ತೇನೆ ಎಂದಿದ್ದಾರೆ. ಮೊದಲೇ ಜತೆಗಾರನ ಸುಖದಿಂದ ವಂಚಿತಳಾಗಿದ್ದೆ. ಈಗ ನೋಡಿದರೆ ಹೀಗಾಗಿದೆ. ಜೀವನ ಸಾಕೆನಿಸಿದೆ. ಅವರು ವಾಪಸ್ ಬರುತ್ತೇನೆ ಎಂದಿರುವುದನ್ನು ನಂಬಲೋ ಅಥವಾ ಎಲ್ಲವನ್ನೂ ಮರೆತು ಇರಲೋ ಎಂಬ ಗೊಂದಲ ಕಾಡುತ್ತಿದೆ. ಮರೆಯಲು ಸಾಧ್ಯವಾಗುತ್ತಿಲ್ಲ. ಇದರಿಂದ ಹೊರಬರುವುದು ಹೇಗೆ?

ಸರಳಾ, ಬೆಂಗಳೂರು



ಅಂತರಂಗ

ಅಕ್ಷರ ದಾಮ್ಲೆ , ಮನಃಶಾಸ್ತ್ರಜ್ಞ

ದುರದೃಷ್ಟವಶಾತ್ ನಿಮಗೆ ವೈಧವ್ಯ ಒದಗಿದ್ದರಿಂದ, ಈ ವಯಸ್ಸಿನಲ್ಲಿ ಸಹಜವಾಗಿ ಬೇಕಾಗುವಂತಹ ಸಾಂಗತ್ಯ, ಬಾಂಧವ್ಯ ಅಥವಾ ಅನುಬಂಧದ ಕೊರತೆಗಳು ಕಾಣಿಸಿಕೊಂಡಿವೆ. ಆದರೆ, ಇಂಥ ಪರಿಸ್ಥಿತಿಯಲ್ಲಿ ನೀವು ಭಾವನಾತ್ಮಕವಾಗಿ ಬಹಳ ಜಾಗರೂಕತೆಯಿಂದ ಬದುಕನ್ನು ನಿರ್ವಹಿಸಬೇಕಾಗುತ್ತದೆ. ಹೆಂಗಸೊಬ್ಬಳು ಒಂಟಿಯಾಗಿದ್ದಾಳೆ ಎಂದು ತಿಳಿದ ತಕ್ಷಣ, ಅನೇಕ ಗಂಡಸರು ತಮ್ಮ ತೀಟೆಯನ್ನು ತೀರಿಸಿಕೊಳ್ಳುವುದಕ್ಕೆ ಅದೊಂದು ಅವಕಾಶ ಎಂದು ತಿಳಿಯುತ್ತಾರೆ. ಸಾಧಾರಣವಾಗಿ ಒಬ್ಬಂಟಿಯಾಗಿ ಇರುವಂತಹವರಿಗೆ ಭಾವನಾತ್ಮಕವಾಗಿ ಏನೆಲ್ಲ ಬೇಕೋ ಅದನ್ನೆಲ್ಲ ಆರಂಭದಲ್ಲಿ ಒದಗಿಸಲು ಮುಂದಾಗುತ್ತಾರೆ. ಉದಾಹರಣೆಗೆ, ಹೆಚ್ಚಿನ ಸಮಯವನ್ನು ಕೊಡುವುದಕ್ಕೆ ಆರಂಭಿಸುತ್ತಾರೆ, ಕಾಳಜಿ ತೋರುತ್ತಾರೆ, ನನ್ನೊಂದಿಗೆ ಗಟ್ಟಿಯಾಗಿ ಜೊತೆಯಲ್ಲಿ ನಿಲ್ಲುವವರು ಒಬ್ಬರಿದ್ದಾರೆ ಅನ್ನುವಂತಹ ಭಾವನೆ ಮೂಡಿಸುತ್ತಾರೆ. ತನ್ಮೂಲಕ ಹೆಣ್ಣಿನ ದೌರ್ಬಲ್ಯಗಳನ್ನು ಅರ್ಥ ಮಾಡಿಕೊಂಡು, ತಮಗೆ ಬೇಕಾದ ಹಾಗೆ ಬಳಸಿಕೊಳ್ಳುವುದಕ್ಕೆ ಮುಂದಾಗುತ್ತಾರೆ.

ಮಧ್ಯ ವಯಸ್ಸಿನ ಒಂಟಿ ಹೆಣ್ಣಿಗೆ ಬಾಂಧವ್ಯದಲ್ಲಿ ಆಕರ್ಷಣೆಯಷ್ಟೇ ಇರುವುದಿಲ್ಲ. ಬದಲಾಗಿ, ಗೌರವ, ಜವಾಬ್ದಾರಿ, ಜೀವನದ ಗುರಿಗಳು ಮತ್ತು ಸ್ಥಿರತೆ ಮುಖ್ಯವಾಗಿರುತ್ತವೆ. ತನ್ನ ಜೊತೆ ಸಂಬಂಧ ಬೆಳೆಸುವಂತಹ ವ್ಯಕ್ತಿ ತನ್ನನ್ನು ಮದುವೆಯಾಗುವರೇ ಎನ್ನುವ ಪ್ರಶ್ನೆ ಆಕೆಯನ್ನು ಕಾಡುತ್ತಿರುತ್ತದೆ. ಅದನ್ನೇ ಅಸ್ತ್ರವನ್ನಾಗಿಸಿ ಅನೇಕ ಗಂಡಸರು ಆರಂಭದಲ್ಲಿ ‘ಮದುವೆಯಾಗುತ್ತೇನೆ’ ಎಂದು ಭರವಸೆ ನೀಡಿ, ಆಮೇಲೆ ನುಣುಚಿಕೊಳ್ಳಲು ಪ್ರಯತ್ನಿಸುತ್ತಾರೆ. ತಾನೆಲ್ಲೂ ಆ ರೀತಿಯ ಪ್ರಮಾಣವನ್ನು ಮಾಡಿಯೇ ಇಲ್ಲ ಎಂದು ವಾದಿಸುತ್ತಾರೆ. ಆಗ ಆಕೆಗೆ ಅದೊಂದು ದೊಡ್ಡ ಆಘಾತವಾಗುತ್ತದೆ.

ಮೊದಲಿಗೆ ಈ ಅಂಶಗಳನ್ನು ಅರ್ಥ ಮಾಡಿಕೊಳ್ಳಿ: ನೀವು ಇದ್ದಂಥ ಸಂಬಂಧದಲ್ಲಿ ನಿಜವಾಗಿಯೂ ಬದ್ಧತೆ ಎರಡು ಕಡೆಯಿಂದಲೂ ಇತ್ತೇ? ಇಲ್ಲ ಎಂದಾದರೆ, ಆ ಸಂಬಂಧಕ್ಕೆ ಜೀವನವನ್ನು ಬಲಿ ಕೊಡುವುದರಲ್ಲಿ ಅರ್ಥವಿದೆಯೇ?. ಇಲ್ಲಿ ಕೊಟ್ಟಿರುವ ಉದಾಹರಣೆಯ ಆಳವನ್ನು ಅರಿಯಲು ಪ್ರಯತ್ನಿಸಿ. ಒಂದು ಹಣ್ಣಿನ ಅಂಗಡಿಗೆ ಹೋಗಿ, ನಿಮಗೆ ಇಷ್ಟವಾದ ಹಣ್ಣನ್ನು ಬಹಳ ಆಸೆಯಿಂದ ಕೊಂಡುಕೊಳ್ಳುತ್ತೀರಿ. ಮನೆಗೆ ಬಂದು ನೋಡಿದಾಗ, ಅದು ಹಾಳಾಗಿರುವುದು ತಿಳಿಯುತ್ತದೆ. ಆಗ ನೀವು ಅದನ್ನು ಬಿಸಾಡಿ ಒಳ್ಳೆಯ ಹಣ್ಣನ್ನು ಆಯ್ದುಕೊಳ್ಳಲು ಮುಂದಾಗುವಿರೋ ನಾನು ಆಯ್ಕೆ ಮಾಡಿದ ಹಣ್ಣು ಚೆನ್ನಾಗಿರಲಿಲ್ಲ, ಹಾಗಾಗಿ ನಾನಿನ್ನು ಹಣ್ಣನ್ನೇ ತಿನ್ನುವುದಿಲ್ಲ ಅಂದುಕೊಳ್ಳುವಿರೋ ನನಗೆ ಆಯ್ಕೆ ಮಾಡುವುದಕ್ಕೇ ಬರುವುದಿಲ್ಲ ಎಂದುಕೊಂಡು ನಿಮ್ಮನ್ನೇ ನಿಂದಿಸಿಕೊಳ್ಳುವಿರೋ? ಬದುಕಿನಲ್ಲಿ ಸರಿಯಾದ, ಸಂದರ್ಭೋಚಿತವಾದ ಆಯ್ಕೆಯನ್ನು ಮಾಡುವ ಕೆಲಸ ನಮ್ಮದು. ಕೆಲವೊಮ್ಮೆ ಅವು ತಪ್ಪಾಗಿರಬಹುದು. ಆದರೆ ಅವುಗಳನ್ನು ಸರಿಪಡಿಸುವ ಹೊಣೆ ನಮ್ಮದೇ ಆಗಿರುತ್ತದೆ. ಹಾಗೆಂದು ಪದೇಪದೇ ತಪ್ಪು ಆಯ್ಕೆಗಳನ್ನೇ ಮಾಡುತ್ತಿದ್ದರೆ, ತಜ್ಞರ ಸಲಹೆ ಪಡೆಯುವುದು ಉತ್ತಮ.

ಜೀವನ ಅನ್ನುವಂತಹದ್ದು ಈ ಸಂಬಂಧಕ್ಕಷ್ಟೇ ಸೀಮಿತವಾಗಿ ಇರಬೇಕೇ ಅಥವಾ ಅದನ್ನು ನಮಗೆ ಬೇಕಾದಂತೆ ಹೊಸದಾಗಿ ಕಟ್ಟಿಕೊಳ್ಳುವ ಸಾಧ್ಯತೆ ಇದೆಯೇ? ಹೀಗೆ ಯೋಚಿಸುತ್ತಾ ಹೋದಾಗ, ಬಹುಶಃ ನಿಮಗೆ ನಿಮ್ಮ ಜೀವನದಲ್ಲಿ ತೆಗೆದುಕೊಳ್ಳಬೇಕಾದಂತಹ ನಿರ್ಧಾರಗಳು ಮತ್ತು ಆಯ್ಕೆಗಳ ಕುರಿತು ಸ್ಪಷ್ಟತೆ ಸಿಗಬಹುದು. ಭವಿಷ್ಯದಲ್ಲಿ ಅವರು ಮತ್ತೆ ಬರಬಹುದು ಎಂಬ ಕಾತರದಲ್ಲಿ ಚಾತಕಪಕ್ಷಿಯಂತೆ ಕಾಯುವ ಬದಲು, ಬದುಕಿನ ನೈಜತೆ ಅರ್ಥೈಸಿಕೊಂಡು, ನಿಮ್ಮನ್ನು ನೀವು ಪ್ರೀತಿಸಿ, ಗಡಿಬಿಡಿ ಇಲ್ಲದೆ, ಸೂಕ್ತ ವ್ಯಕ್ತಿಯನ್ನು ಕಂಡುಕೊಂಡು ಜೀವನ ಕಟ್ಟಿಕೊಳ್ಳಿ.

ಸಿಬ್ಬಂದಿಗಿಲ್ಲ ಉದ್ಯೋಗ 'ಗ್ಯಾರಂಟಿ'

ಎನ್‌ಎಚ್‌ಎಂ: 4 ತಿಂಗಳು ಕಳೆದರೂ ಮುಗಿಯದ ಕಾರ್ಯಕ್ಷಮತೆ ಮೌಲ್ಯಮಾಪನ

• ವರುಣ ಹೆಗಡೆ

ಬೆಂಗಳೂರು: ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ (ಎನ್‌ಎಚ್‌ಎಂ) ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯ 'ಕಾರ್ಯಕ್ಷಮತೆ ಮೌಲ್ಯಮಾಪನ' ನಾಲ್ಕು ತಿಂಗಳು ಕಳೆದರೂ ಮುಗಿದಿಲ್ಲ. ಇದರಿಂದಾಗಿ ನೌಕರರು ಉದ್ಯೋಗ ಕಳೆದುಕೊಳ್ಳುವ ಆತಂಕ ಎದುರಿಸುತ್ತಿದ್ದಾರೆ.

> **ಅನಗತ್ಯವಾಗಿ ಯಾರನ್ನೂ ಕೆಲಸದಿಂದ ತೆಗೆಯುವುದಿಲ್ಲ. ಕಾರ್ಯಕ್ಷಮತೆ ಮೌಲ್ಯಮಾಪನವನ್ನು ಮೊದಲಿನಿಂದಲೂ ನಡೆಸಿಕೊಂಡು ಬರಲಾಗುತ್ತಿದೆ**
> **ಅವಿನಾಶ್ ಮೆನನ್,** ಎನ್‌ಎಚ್‌ಎಂ ನಿರ್ದೇಶಕ

ಈ ಮೌಲ್ಯಮಾಪನವು ಪ್ರತಿವರ್ಷ ಮಾರ್ಚ್ ಅಂತ್ಯಕ್ಕೆ ಕೊನೆಗೊಂಡು, ಅವರ ಕಾರ್ಯಾವಧಿಯನ್ನು ಏಪ್ರಿಲ್ 1ರಿಂದಲೇ ವಿಸ್ತರಿಸಲಾಗುತ್ತಿತ್ತು. ಆದರೆ, ಈ ವರ್ಷ ಈ ಮೌಲ್ಯಮಾಪನದ ಅವಧಿಯನ್ನು ನಿಯಮಿತವಾಗಿ ವಿಸ್ತರಿಸಲಾಗುತ್ತಿದೆ. ಈಗಾಗಲೇ ಮೂರು ಬಾರಿ ಮೌಲ್ಯಮಾಪನದ ಕಾರಣ ನೀಡಿ, ಸಿಬ್ಬಂದಿಯ ಗುತ್ತಿಗೆ ಅವಧಿಯನ್ನು ಅಲ್ಪಾವಧಿಗೆ ವಿಸ್ತರಿಸಲಾಗಿದೆ. ಎನ್‌ಎಚ್‌ಎಂ ಅಡಿ ಸುಮಾರು 30 ಸಾವಿರ ನೌಕರರು ಕಾರ್ಯನಿರ್ವಹಿಸುತ್ತಿದ್ದಾರೆ. ಅವರಿಗೆ ಈಗ ಕಾರ್ಯಾವಧಿ ಮುಂದುವರಿಸುವ ಬಗ್ಗೆ ಖಚಿತತೆ ಇಲ್ಲವಾಗಿದ್ದು, ಉದ್ಯೋಗ ಕಳೆದುಕೊಳ್ಳುವ ಭೀತಿ ಎದುರಿಸುತ್ತಿದ್ದಾರೆ.

ನವಜಾತ ಶಿಶುಗಳ ಆರೈಕೆ, ರಾಷ್ಟ್ರೀಯ ಆಂಬುಲೆನ್ಸ್ ಸೇವೆ ಸೇರಿದಂತೆ ವಿವಿಧ ಕಾರ್ಯಕ್ರಮಗಳಡಿ ಎನ್‌ಎಚ್‌ಎಂ ನೌಕರರು ಕಾರ್ಯನಿರ್ವಹಿಸುತ್ತಿದ್ದಾರೆ. ಈ ನೌಕರರ ಸೇವೆ ತೃಪ್ತಿಕರ ವಾಗಿದ್ದಲ್ಲಿ ಪ್ರತಿ ವರ್ಷ ಏಪ್ರಿಲ್ ಒಂದರಂದು ಕಡ್ಡಾಯ ರಜೆ ನೀಡಿ, ಮುಂದಿನ ಒಂದು ವರ್ಷದ ಅವಧಿಗೆ ಕಾರ್ಯಾವಧಿಯನ್ನು ವಿಸ್ತರಿಸಲಾಗುತ್ತಿತ್ತು. ಆದರೆ, ಈ ಬಾರಿ ಕಾರ್ಯಕ್ಷಮತೆ ಮೌಲ್ಯಮಾಪನ ಗಡುವು ಮುಗಿದರೂ ಪೂರ್ಣಗೊಳ್ಳದೆ, ಕಾರ್ಯಾವಧಿಯನ್ನು ಮತ್ತೆ ಮತ್ತೆ ವಿಸ್ತರಿಸಲಾಗುತ್ತಿದೆ.

38 ಸಾವಿರ ಹುದ್ದೆ ಖಾಲಿ: ನೌಕರರ ಕಾರ್ಯಕ್ಷಮತೆ ಮೌಲ್ಯಮಾಪನ ಸಂಬಂಧ ಎನ್‌ಎಚ್‌ಎಂ ಮುಖ್ಯ ಆಡಳಿತಾಧಿಕಾರಿ ಮಾರ್ಚ್ 29 ರಂದು ಸುತ್ತೋಲೆ ಹೊರಡಿಸಿ, ಗುತ್ತಿಗೆ ಸಿಬ್ಬಂದಿ ಅವಧಿಯನ್ನು 15 ದಿನ ವಿಸ್ತರಿಸಿದ್ದರು. ಬಳಿಕ, ಏ.16 ರಿಂದ ಜೂನ್ 30ರವರೆಗೆ ಎರಡನೇ ಬಾರಿ ಅವಧಿ ವಿಸ್ತರಿಸಲಾಗಿತ್ತು. ಜೂನ್.30ರಂದು ಮೂರನೇ ಬಾರಿ ಗುತ್ತಿಗೆ ಅವಧಿ ವಿಸ್ತರಿಸಿ, ಜುಲೈ 31ರವರೆಗೆ ಕಾರ್ಯಾವಧಿ ನಿಗದಿಪಡಿಸಲಾಗಿದೆ. ಈಗಾಗಲೇ ರಾಜ್ಯದಲ್ಲಿ ಎನ್‌ಎಚ್‌ಎಂ ಅಡಿ 38 ಸಾವಿರ ಹುದ್ದೆಗಳು ಖಾಲಿ ಉಳಿದಿದ್ದು, ಅಲ್ಪಾವಧಿಗೆ ಗುತ್ತಿಗೆ ಅವಧಿ ವಿಸ್ತರಿಸುತ್ತಿರುವುದು ನೌಕರರ ಕಾರ್ಯಚಟುವಟಿಕೆಗಳ ಮೇಲೂ ನಕಾರಾತ್ಮಕ ಪರಿಣಾಮ ಬೀರುತ್ತಿದೆ.

'ಮೌಲ್ಯಮಾಪನದ ಹೆಸರಿನಲ್ಲಿ ಕಡಿಮೆ ಅಂಕ ನೀಡಿ, ಸಿಬ್ಬಂದಿಯನ್ನು ಕೈಬಿಡಲಾಗುತ್ತಿದೆ. ಎನ್‌ಎಚ್‌ಎಂನ ಈ ಕ್ರಮದಿಂದ 15–18 ವರ್ಷಗಳಿಂದ ಗುತ್ತಿಗೆ ಹಾಗೂ ಹೊರಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗೆ ಅನ್ಯಾಯವಾಗಲಿದೆ. ವಿವಿಧ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಅನುಷ್ಠಾನಕ್ಕೂ ತೊಡಕಾಗಲಿದೆ. ಈಗಾಗಲೇ ವೇತನ ವಿಳಂಬದಂತಹ ಸಮಸ್ಯೆಯಿಂದ ಆರ್ಥಿಕ ಸಂಕಷ್ಟ ಎದುರಿಸುತ್ತಿದ್ದೇವೆ' ಎಂದು ಎನ್‌ಎಚ್‌ಎಂ ಸಿಬ್ಬಂದಿ 'ಪ್ರಜಾವಾಣಿ'ಗೆ ತಿಳಿಸಿದರು.

ನೌಕರರ ಸಂಖ್ಯೆ ಕಡಿತ?

ಕಾರ್ಯಕ್ಷಮತೆ ಮೌಲ್ಯಮಾಪನದ ಆಧಾರದಲ್ಲಿ ಎನ್‌ಎಚ್‌ಎಂ ಸಿಬ್ಬಂದಿಯನ್ನು ಕೆಲಸದಿಂದ ತೆಗೆಯುವ ಪ್ರಕ್ರಿಯೆ ನಡೆಯುತ್ತಿದೆ ಎಂಬ ಆರೋಪಗಳೂ ಸಿಬ್ಬಂದಿ ವಲಯದಲ್ಲಿ ಕೇಳಿ ಬಂದಿವೆ. ಇದಕ್ಕೆ ಪೂರಕ ಎಂಬಂತೆ ಇತ್ತೀಚೆಗೆ ಎನ್‌ಎಚ್‌ಎಂ ಅಡಿ ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿದ್ದ 195 ಆಶಾ ಮಾರ್ಗದರ್ಶಕರನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಲಾಗಿದೆ. ಫಾರ್ಮಾಸಿಸ್ಟ್‌ಗಳು, ಡಾಟಾ ಎಂಟ್ರಿ ಆಪರೇಟರ್ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಕೆಲವರನ್ನು ಬಿಡುಗಡೆಗೊಳಿಸಿ, ಆದೇಶ ಹೊರಡಿಸಲಾಗಿದೆ. ಇದು ಕೂಡ ಎನ್‌ಎಚ್‌ಎಂ ಸಿಬ್ಬಂದಿಯ ಆತಂಕಕ್ಕೆ ಕಾರಣವಾಗಿದೆ.

'ಮೌಲ್ಯಮಾಪನದ ಹೆಸರಿನಲ್ಲಿ ಕೆಲಸದಿಂದ ತೆಗೆಯುವ ಪ್ರಕ್ರಿಯೆ ನಡೆಯುತ್ತಿದೆ. ಈ ಕ್ರಮದಿಂದ ಸಾವಿರಾರು ಕುಟುಂಬಗಳು ಬೀದಿಗೆ ಬೀಳಲಿವೆ. ಎನ್‌ಎಚ್‌ಎಂ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲ ಸಿಬ್ಬಂದಿಯನ್ನು ಪ್ರಸಕ್ತ ಸಾಲಿಗೆ ಕೆಲಸದಲ್ಲಿ ಮುಂದುವರಿಸುವ ಬಗ್ಗೆ ಕೂಡಲೇ ಆದೇಶ ಹೊರಡಿಸಬೇಕು. ಮೌಲ್ಯಮಾಪನದ ಪ್ರಕ್ರಿಯೆ ರದ್ದುಪಡಿಸಬೇಕು' ಎಂದು ಕರ್ನಾಟಕ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆ ಗುತ್ತಿಗೆ ಹಾಗೂ ಹೊರಗುತ್ತಿಗೆ ನೌಕರರ ಸಂಘದ ಅಧ್ಯಕ್ಷ ಶ್ರೀಕಾಂತ್ ಸ್ವಾಮಿ ಆಗ್ರಹಿಸಿದರು.

'ಪತ್ನಿ ಮೂಗು ಕಚ್ಚಿ ತುಂಡರಿಸಿದ'

ಚನ್ನಗಿರಿ (ದಾವಣಗೆರೆ): ಧರ್ಮಸ್ಥಳ ಸಂಘದಲ್ಲಿ ಪಡೆದ ಸಾಲ ಮರು ಪಾವತಿಸದ ಹೆಂಡತಿಯ ಮೇಲೆ ಕೋಪಗೊಂಡ ಪತಿ ಆಕೆಯ ಮೂಗಿನ ತುದಿ ಕಚ್ಚಿ ತುಂಡರಿಸಿದ್ದಾನೆ.

ತಾಲ್ಲೂಕಿನ ಮಂಟರಘಟ್ಟ ಗ್ರಾಮದ ವಿದ್ಯಾ (30) ಗಾಯಗೊಂಡಿದ್ದು, ಚನ್ನಗಿರಿಯ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಪಡೆದು ಹೆಚ್ಚಿನ ಚಿಕಿತ್ಸೆಗೆ ಶಿವಮೊಗ್ಗದ ಆಸ್ಪತ್ರೆಯೊಂದಕ್ಕೆ ದಾಖಲಾಗಿದ್ದಾರೆ. ಪತಿ ವಿಜಯ್ (35) ವಿರುದ್ಧ ಚನ್ನಗಿರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿದ್ಯಾ ಅವರು ಸಂಘದಲ್ಲಿ ₹2 ಲಕ್ಷ ಸಾಲ ಪಡೆದಿದ್ದರು. ಇದಕ್ಕೆ ಪತಿ ಜಾಮೀನು ನೀಡಿದ್ದ. ಆರಂಭದಿಂದ ಸಾಲದ ಕಂತು ಪಾವತಿಸುತ್ತಾ ಬಂದಿದ್ದ ವಿದ್ಯಾ, ಕೊನೆಯ ಮೂರು ಕಂತುಗಳನ್ನು ಬಾಕಿ ಉಳಿಸಿಕೊಂಡಿದ್ದರು.

'ಸಂಘದವರು ವಿಜಯ್‌ಗೆ ಕರೆ ಮಾಡಿ ಕಂತು ಪಾವತಿಸದೇ ಇರುವ ಬಗ್ಗೆ ಪ್ರಶ್ನಿಸಿದ್ದರು. ಬಳಿಕ ನೋಟಿಸ್ ಕೂಡ ನೀಡಿದ್ದರು. ಇದರಿಂದ ಕೋಪಗೊಂಡ ಆರೋಪಿ, ಮಂಗಳವಾರ ರಾತ್ರಿ ಕುಡಿದು ಹೋಗಿ ಪತ್ನಿ ಮೇಲೆ ಹಲ್ಲೆ ನಡೆಸಿದ್ದಾನೆ. ಮೂಗಿನ ತುದಿಯನ್ನು ಕಚ್ಚಿ ತುಂಡರಿಸಿದ್ದಾನೆ' ಎಂದು ಪೊಲೀಸರು ತಿಳಿಸಿದ್ದಾರೆ. ಆರೋಪಿ ತಲೆಮರೆಸಿಕೊಂಡಿದ್ದಾನೆ.

ಪಂಚಮಸಾಲಿ: ತನಿಖೆ ಗಡುವು ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಂಚಮಸಾಲಿ ಸಮುದಾಯಕ್ಕೆ 'ಪ್ರವರ್ಗ 2ಎ' ಮತ್ತು ಲಿಂಗಾಯತ ಉಪ ಪಂಗಡಗಳಿಗೆ 'ಒಬಿಸಿ' ಮೀಸಲಾತಿ ಅನುಷ್ಠಾನ ಕೋರಿ ಪ್ರತಿಭಟನೆ ನಡೆಸುತ್ತಿದ್ದವರ ಮೇಲೆ ಪೊಲೀಸರು ಲಾಠಿ ಪ್ರಹಾರ ಮಾಡಿದ್ದ ಘಟನೆ ಕುರಿತು ನಿವೃತ್ತ ನ್ಯಾಯಮೂರ್ತಿ ನೇತೃತ್ವದ ನ್ಯಾಯಾಂಗ ತನಿಖೆ ಹೊರತುಪಡಿಸಿ ಬೇರೆ ಯಾವುದಾದರೂ ತನಿಖೆಗೆ ಆದೇಶಿಸುವಂತೆ ಕೋರಲಾದ ಸರ್ಕಾರದ ಮನವಿಯನ್ನು ಹೈಕೋರ್ಟ್ ಭಾಗಶಃ ಮಾನ್ಯ ಮಾಡಿದೆ.

'ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ನೇತೃತ್ವದ ವಿಚಾರಣಾ ಆಯೋಗವು ಮೂರು ತಿಂಗಳಲ್ಲಿ ವರದಿ ಸಲ್ಲಿಸಬೇಕು' ಎಂಬ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರ ಏಕಸದಸ್ಯ ನ್ಯಾಯಪೀಠದ ಆದೇಶ ಪ್ರಶ್ನಿಸಿ ರಾಜ್ಯ ಸರ್ಕಾರ ಸಲ್ಲಿಸಿದ್ದ ಮೇಲ್ಮನವಿಯನ್ನು ನ್ಯಾಯಮೂರ್ತಿ ಆರ್. ದೇವದಾಸ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಶುಕ್ರವಾರ ವಿಲೇವಾರಿ ಮಾಡಿದೆ.

'ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಬದಲಿಗೆ ಜಿಲ್ಲಾ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರ ನೇತೃತ್ವದಲ್ಲಿ ವಿಚಾರಣಾ ಆಯೋಗ ರಚಿಸಬೇಕು. ವರದಿ ನೀಡುವ ಗಡುವನ್ನು ಮೂರು ತಿಂಗಳ ಬದಲಿಗೆ ಆರು ತಿಂಗಳು ನಿಗದಿ ಮಾಡಬೇಕು' ಎಂದು ನಿರ್ದೇಶಿಸಿದೆ.

'ಬೆಳಗಾವಿಯ ಸುವರ್ಣಸೌಧದ ಮುಂದೆ 2024ರ ಡಿಸೆಂಬರ್ 10ರಂದು ನಡೆದಿರುವ ಲಾಠಿ ಪ್ರಹಾರ ಘಟನೆಯನ್ನು ತನಿಖಾ ಆಯೋಗಕ್ಕೆ ವಹಿಸಲು ಆದೇಶಿಸಬೇಕು' ಎಂದು ಕೋರಿ ಕೂಡಲಸಂಗಮದ ಪಂಚಮಸಾಲಿ ಪೀಠಾಧ್ಯಕ್ಷ ಬಸವ ಜಯಮೃತ್ಯುಂಜಯ ಸ್ವಾಮೀಜಿ ಹೈಕೋರ್ಟ್ ಮೆಟ್ಟಿಲೇರಿದ್ದರು. ಸ್ವಾಮೀಜಿ ಪರ ಪದಾಂಕಿತ ಹಿರಿಯ ವಕೀಲ ಪ್ರಭುಲಿಂಗ ಕೆ.ನಾವದಗಿ ಮತ್ತು ಪ್ರಾಸಿಕ್ಯೂಷನ್ ಪರ ವಿಶೇಷ ಪ್ರಾಸಿಕ್ಯೂಟರ್ ಪದಾಂಕಿತ ಹಿರಿಯ ವಕೀಲ ಸಿ.ಎಚ್.ಜಾಧವ್ ವಾದ ಮಂಡಿಸಿದ್ದರು.

ಮಾಜಿ ಸಭಾಪತಿ ಎನ್. ತಿಪ್ಪಣ್ಣ ನಿಧನ



ಬಳ್ಳಾರಿ: ವಿಧಾನ ಪರಿಷತ್ತಿನ ಮಾಜಿ ಸಭಾಪತಿ, ಅಖಿಲ ಭಾರತ ವೀರಶೈವ ಮಹಾಸಭಾ ರಾಜ್ಯ ಘಟಕದ ಮಾಜಿ ಅಧ್ಯಕ್ಷ ಎನ್.ತಿಪ್ಪಣ್ಣ (97) ಶುಕ್ರವಾರ ಇಲ್ಲಿ ನಿಧನರಾದರು. ಅವರಿಗೆ ಒಬ್ಬ ಪುತ್ರ ಇದ್ದಾರೆ.

ಅಂತ್ಯಕ್ರಿಯೆ ಹುಟ್ಟೂರು, ಚಿತ್ರದುರ್ಗ ಜಿಲ್ಲೆಯ ತುರವನೂರಿನಲ್ಲಿ ಶನಿವಾರ ನಡೆಯಲಿದೆ. ಇಲ್ಲಿನ ಗಾಂಧಿನಗರದ ಅವರ ನಿವಾಸದಲ್ಲಿ ಪಾರ್ಥಿವ ಶರೀರದ ಅಂತಿಮ ದರ್ಶನದ ವ್ಯವಸ್ಥೆ ಮಾಡಲಾಗಿತ್ತು.

ವಕೀಲರಾಗಿದ್ದ ತಿಪ್ಪಣ್ಣ ಅವರು ರಾಜಕೀಯ ಕ್ಷೇತ್ರ ಪ್ರವೇಶಿಸಿ, ಮೂರು ಬಾರಿ ವಿಧಾನಪರಿಷತ್ತಿನ ಸದಸ್ಯರಾಗಿದ್ದರು. ವಿರೋಧ ಪಕ್ಷದ ಉಪ ನಾಯಕರಾಗಿ, ಅಲ್ಪ ಅವಧಿಗೆ ಸಭಾಪತಿಯಾಗಿಯೂ ಇದ್ದರು.

ರಾಮಕೃಷ್ಣ ಹೆಗಡೆ ಅವರೊಂದಿಗೆ ಗುರುತಿಸಿಕೊಂಡಿದ್ದ ತಿಪ್ಪಣ್ಣ ಜನತಾದಳದಿಂದ ಬಳ್ಳಾರಿ ಕ್ಷೇತ್ರದಿಂದ ಲೋಕಸಭೆಗೆ ಸ್ಪರ್ಧಿಸಿ, ಕೇಂದ್ರದ ಮಾಜಿ ಸಚಿವೆ ಬಸವರಾಜೇಶ್ವರಿ ಅವರ ವಿರುದ್ಧ ಪರಾಭವಗೊಂಡಿದ್ದರು. ಜೆಡಿಯು ಪಕ್ಷ ಜೆಡಿಎಸ್‌ನಲ್ಲಿ ವಿಲೀನವದ ಬಳಿಕ, ಜೆಡಿಎಸ್‌ನ ರಾಜ್ಯ ಘಟಕದ ಅಧ್ಯಕ್ಷರಾಗಿದ್ದರು.

2012ರಲ್ಲಿ ಅಖಿಲ ಭಾರತ ವೀರಶೈವ ಮಹಾಸಭಾದ ರಾಜ್ಯ ಘಟಕದ ಅಧ್ಯಕ್ಷರಾಗಿದ್ದರು. ಬಳ್ಳಾರಿಯ ಪ್ರತಿಷ್ಠಿತ ವೀರಶೈವ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದರು.

'ಆರೋಪ ಸಾಬೀತಾದರೆ ಆಸ್ತಿ ಬರೆದು ಕೊಡುವೆ'

ಪ್ರಜಾವಾಣಿ ವಾರ್ತೆ



ಸುಬ್ಬಾರೆಡ್ಡಿ

ಬಾಗೇಪಲ್ಲಿ: 'ವಿದೇಶಗಳಲ್ಲಿ ನನ್ನ ಹೆಸರಿನಲ್ಲಿ ಬ್ಯಾಂಕ್ ಖಾತೆ, ವ್ಯವಹಾರ ಇರುವುದು ಸಾಬೀತುಪಡಿಸಿದರೆ ನನ್ನ ಆಸ್ತಿಯನ್ನು ಸರ್ಕಾರಕ್ಕೆ ಬರೆದು ಕೊಡುತ್ತೇನೆ' ಎಂದು ಶಾಸಕ ಎಸ್.ಎನ್.ಸುಬ್ಬಾರೆಡ್ಡಿ ಹೇಳಿದರು.

ಬೆಂಗಳೂರಿನಲ್ಲಿ ಇರುವ ಅವರ ಮನೆ ಮತ್ತು ಕಚೇರಿ ಮೇಲೆ ಜಾರಿ ನಿರ್ದೇಶನಾಲಯ (ಇ.ಡಿ) ದಾಳಿ ಕುರಿತು ಶುಕ್ರವಾರ ಪಟ್ಟಣದಲ್ಲಿ ಪ್ರತಿಕ್ರಿಯಿಸಿದರು.

'ಕಳೆದ ಚುನಾವಣೆಯಲ್ಲಿ ಚುನಾವಣಾ ಆಯೋಗಕ್ಕೆ ವಿದೇಶಗಳಲ್ಲಿ ಇರುವ ಖಾತೆ ಹಾಗೂ ವ್ಯವಹಾರದ ಬಗ್ಗೆ ಮಾಹಿತಿ ನೀಡಿಲ್ಲ ಎಂದು ಪ್ರತಿಸ್ಪರ್ಧಿಯೊಬ್ಬರು ಕೋರ್ಟ್‌ಗೆ ಹೋಗಿದ್ದಾರೆ. ಇದು ವಿಚಾರಣೆ ಹಂತದಲ್ಲಿ ಇದೆ' ಎಂದರು.

'ಜುಲೈ 14ರಂದು ಹೆಚ್ಚಿನ ವಿಚಾರಣೆಗೆ ಇ.ಡಿ ಕಚೇರಿಗೆ ಬರಲು ಸೂಚನೆ ನೀಡಿದ್ದಾರೆ. ದಾಖಲೆ ಸಮೇತ ಹೋಗುತ್ತೇನೆ' ಎಂದರು.

ಮಹಿಳೆಯರಿಂದ ಬ್ಯಾಂಕ್‌ನಲ್ಲೇ ₹1 ಲಕ್ಷ ಕಳವು

ಪ್ರಜಾವಾಣಿ ವಾರ್ತೆ

ಸಂತೇಬೆನ್ನೂರು (ದಾವಣಗೆರೆ): ಇಲ್ಲಿನ ಕೆನರಾ ಬ್ಯಾಂಕ್ ಶಾಖೆಯ ಕೌಂಟರ್ ಎದುರು ಸರದಿ ಸಾಲಿನಲ್ಲಿ ನಿಂತಿದ್ದ ಮಹಿಳೆಯೊಬ್ಬರ ಬ್ಯಾಗ್‌ನಿಂದ ಕಳ್ಳಿಯರು ₹1 ಲಕ್ಷ ಎಗರಿಸಿದ್ದಾರೆ.

ತಣಿಗೆರೆ ಗ್ರಾಮದ ಲತಾ, ಚಿನ್ನದ ಸಾಲ ನವೀಕರಿಸಲು ₹3.5 ಲಕ್ಷ ಮೊತ್ತ ತಂದಿದ್ದರು. ಇದನ್ನು ಗಮನಿಸಿದ ಕಳ್ಳಿಯರು ಗ್ರಾಹಕರ ಸೋಗಿನಲ್ಲಿ ಸರದಿಯಲ್ಲಿ ನಿಂತು ಬ್ಲೇಡ್‌ನಿಂದ ಬ್ಯಾಗ್ ಕೊಯ್ದಿದ್ದಾರೆ. ಬಳಿಕ ಎರಡು ಕಂತೆ (₹ 1 ಲಕ್ಷ) ಹಣವನ್ನು ಎಗರಿಸಿದ್ದಾರೆ. ಕಳ್ಳಿಯರ ಪೈಕಿ ಒಬ್ಬಾಕೆ ಈ ಹಣದೊಂದಿಗೆ ಬ್ಯಾಂಕ್‌ನಿಂದ ಹೊರ ಹೋಗಿದ್ದಾಳೆ.

ಕಳವು ಆಗಿರುವುದು ಗೊತ್ತಾಗುತ್ತಿದ್ದಂತೆ ಮಹಿಳೆ ಕೂಗಿಕೊಂಡಿದ್ದು, ತಕ್ಷಣವೇ ಅಲ್ಲಿದ್ದ ಗ್ರಾಹಕರು ಇಬ್ಬರೂ ಮಹಿಳೆಯರನ್ನು ಹಿಡಿದಿದ್ದಾರೆ. ಸಿ.ಸಿ.ಟಿ.ವಿ ಕ್ಯಾಮೆರಾದಲ್ಲೂ ಇವರ ಕೃತ್ಯ ದಾಖಲಾಗಿದೆ. ಹೀಗಾಗಿ ಪೊಲೀಸರಿಗೆ ಒಪ್ಪಿಸಿದ್ದಾರೆ. ಇವರು ಮಧ್ಯ ಪ್ರದೇಶದವರು ಎಂಬುದು ಗೊತ್ತಾಗಿದೆ.

ಹಿರಿಯರೊಂದಿಗೆ ಸಂಧಾನದ ಕಸರತ್ತು

ವರಿಷ್ಠರ ಭೇಟಿಗೆ ಮುಂದಾದ ವಿಜಯೇಂದ್ರ ಅಧ್ಯಕ್ಷರಾಗಿ ಪುನರಾಯ್ಕೆಯಾಗುವ ವಿಶ್ವಾಸ

ಪ್ರಜಾವಾಣಿ ವಾರ್ತೆ



ಬಿ.ವೈ. ವಿಜಯೇಂದ್ರ

ನವದೆಹಲಿ: ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸ್ಥಾನಕ್ಕೆ ಮುಂದಿನ ವಾರ ಚುನಾವಣೆ ನಡೆಯಬಹುದು ಎಂದು ಸುಳಿವು ಪಡೆದಿರುವ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ನವದೆಹಲಿಗೆ ದೌಡಾಯಿಸಿ ನಾಯಕರ ಭೇಟಿಗೆ ತೆರೆಮರೆಯ ಕಸರತ್ತು ನಡೆಸಿದ್ದಾರೆ.

ಸಂಸತ್ ಅಧಿವೇಶನದ ಸಂದರ್ಭದಲ್ಲಿ ಮತ್ತೆ ಬರುವೆ ಎಂದು ಈ ಹಿಂದೆ ಹೇಳಿ ಹೋಗಿದ್ದ ವಿಜಯೇಂದ್ರ ಅವರ ದಿಢೀರ್ ಪ್ರವಾಸಕ್ಕೆ ಅಪ್ಪ ಬಿ.ಎಸ್. ಯಡಿಯೂರಪ್ಪ ಅವರ ಸಲಹೆ ಹಾಗೂ ಸೂಚನೆಗಳೇ ಕಾರಣ. ಮುಂದಿನ ಮೂರು ವರ್ಷದ ಅವಧಿಗೆ ರಾಜ್ಯ ಘಟಕದ ಅಧ್ಯಕ್ಷನಾಗಿ ಪುನರಾಯ್ಕೆಯಾಗುತ್ತೇನೆಂಬ ಅಮಿತ ವಿಶ್ವಾಸದಲ್ಲಿರುವ ಅವರಿಗೆ ಭಿನ್ನ ಹಾಗೂ ತಟಸ್ಥ ಗುಂಪಿನ ನಾಯಕರ ರಣತಂತ್ರಗಳ ಬಗ್ಗೆ ಸಣ್ಣ ಆತಂಕವಿದ್ದೇ ಇದೆ. ಈ ಆತಂಕವನ್ನು ದೂರ ಮಾಡಿಕೊಂಡು ಸ್ಪಷ್ಟ ಸಂದೇಶ ಪಡೆದುಕೊಂಡು ಹೋಗುವುದು ಅವರ ಪ್ರವಾಸದ ಹಿಂದಿನ ಉದ್ದೇಶ ಎಂದು ಹೇಳಲಾಗಿದೆ.

ಸಂಸತ್ ಅಧಿವೇಶನಕ್ಕೆ ಮುನ್ನ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರ ನೇಮಕವಾಗಲಿದೆ ಎಂಬ ಸುದ್ದಿ ಬಿಜೆಪಿ ಪಾಳಯದಲ್ಲಿ ಹರಿದಾಡುತ್ತಿದೆ. ಅದಕ್ಕೂ ಮುನ್ನ ಕರ್ನಾಟಕ, ಉತ್ತರ ಪ್ರದೇಶ, ಗುಜರಾತ್ ಹಾಗೂ ಮಧ್ಯ ಪ್ರದೇಶದಲ್ಲಿನ ನಾಯಕತ್ವದ ಕಗ್ಗಂಟನ್ನು ವರಿಷ್ಠರು ಬಗೆಹರಿಸಲಿದ್ದಾರೆ ಎಂಬುದು ಬಿಜೆಪಿ ನಾಯಕರ ಅಂಬೋಣ. ರಾಜ್ಯ ಘಟಕದ ಅಧ್ಯಕ್ಷರ ಚುನಾವಣೆಯ ಸಂದೇಶ ಸೋಮವಾರ ಅಥವಾ ಮಂಗಳವಾರದ ಹೊತ್ತಿಗೆ ಬರಬಹುದು ಎಂದು ರಾಜ್ಯ ನಾಯಕರು ಕಾದಿದ್ದಾರೆ.

ಯಡಿಯೂರಪ್ಪ ಹಾಗೂ ವಿಜಯೇಂದ್ರ ವಿರುದ್ಧ ಭಿನ್ನ ಬಣದವರು ಒಂದೂವರೆ ವರ್ಷದಿಂದ ಸಮರ ಸಾರಿದ್ದಾರೆ. ಅಧ್ಯಕ್ಷ ಸ್ಥಾನದಿಂದ ವಿಜಯೇಂದ್ರ ಅವರನ್ನು ಪದಚ್ಯುತಗೊಳಿಸುವುದೇ ತಮ್ಮ ಪರಮ ಗುರಿ ಎಂದು ಸಾರಿದ್ದ ಈ ನಾಯಕರು ಶಾಸಕ ಬಸನಗೌಡ ಪಾಟೀಲ ಯತ್ನಾಳ ಉಚ್ಚಾಟನೆಯ ಬಳಿಕ ತಣ್ಣಗಾಗಿದ್ದರು. ಕಳೆದೊಂದು ವಾರದಿಂದ ಮತ್ತೊಂದು ಸುತ್ತಿನ ಸಂಗ್ರಾಮ ಆರಂಭಿಸಿದ್ದಾರೆ. ವಿಜಯೇಂದ್ರ ಅವರಿಗೆ ಹೆಚ್ಚಿನ ಆತಂಕ ಇರುವುದು ಭಿನ್ನರಿಗಿಂತ ತಟಸ್ಥ ಗುಂಪಿನ ನಾಯಕರ ಮೇಲೆ. ಈ ಗುಂಪಿನಲ್ಲಿ ಪಕ್ಷದ ಹಿರಿಯ ನಾಯಕರ ಗುಂಪು ದೊಡ್ಡದಿದೆ. ಪಕ್ಷಕ್ಕಾಗಿ ದಶಕಗಳಿಂದ ದುಡಿದ ನಾಯಕರಿಗೆ ವಿಜಯೇಂದ್ರ ಗೌರವ ಕೊಡುತ್ತಿಲ್ಲ ಎಂಬುದು ಈ ನಾಯಕರ ಪ್ರಮುಖ ಆಪಾದನೆ. ಅದಕ್ಕಾಗಿಯೇ ಅವರು ತೆರೆಮರೆಯಲ್ಲಿ ನಿಂತು ವಿಜಯೇಂದ್ರ ವಿರುದ್ಧ ಗೆರಿಲ್ಲಾ ಯುದ್ಧದಲ್ಲಿ ತೊಡಗಿದ್ದಾರೆ ಎಂದು ವಿಶ್ಲೇಷಿಸಲಾಗುತ್ತದೆ.

'ಪಕ್ಷದ ರಾಜ್ಯ ಘಟಕದ ಅಧ್ಯಕ್ಷನಾಗಿ ಪುನರಾಯ್ಕೆಯಾದ ಬಳಿಕ ಪಕ್ಷ ಸಂಘಟನೆಯ ಜತೆಗೆ ಹಿರಿಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸಲಹೆ ಪಡೆದೇ ತೀರ್ಮಾನಗಳನ್ನು ಕೈಗೊಳ್ಳುತ್ತೇನೆ' ಎಂದು ವರಿಷ್ಠರಿಗೆ ಮನವರಿಕೆ ಮಾಡಿಕೊಡುವುದು ಅವರ ದೆಹಲಿಯ ಭೇಟಿಯ ಪ್ರಮುಖ ಅಜೆಂಡಾ ಎನ್ನಲಾಗಿದೆ.

'ಸಂಸದ ಬಸವರಾಜ ಬೊಮ್ಮಾಯಿ ಸೂಚನೆಯ ಮೇರೆಗೆ ಹಾವೇರಿ ಜಿಲ್ಲಾ ಘಟಕದ ಅಧ್ಯಕ್ಷರಾಗಿ ಅರುಣ್ ಕುಮಾರ್ ಪೂಜಾರ್ ಅವರನ್ನು ನೇಮಿಸಲಾಗಿತ್ತು. ಅವರ ಕಾರ್ಯವೈಖರಿ ವಿರುದ್ಧ ಜಿಲ್ಲೆಯ ಪ್ರಮುಖ ನಾಯಕರೆಲ್ಲ ಸಿಡಿದೆದ್ದಿದ್ದರು. ಬಳಿಕ, ಬೊಮ್ಮಾಯಿ ಸೂಚಿಸಿದವರನ್ನೇ ಜಿಲ್ಲಾ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ. ಚಿಕ್ಕಬಳ್ಳಾಪುರದಲ್ಲಿ ಸಂದೀಪ್ ರೆಡ್ಡಿ ಅವರನ್ನು ಜಿಲ್ಲಾಧ್ಯಕ್ಷರನ್ನಾಗಿ ನೇಮಿಸಲಾಗಿತ್ತು. ಇದಕ್ಕೆ ಸಂಸದ ಡಾ.ಕೆ.ಸುಧಾಕರ್ ಆಕ್ಷೇಪ ವ್ಯಕ್ತಪಡಿಸಿದ್ದರು. ರೆಡ್ಡಿ ನೇಮಕಕ್ಕೆ ರಾಷ್ಟ್ರೀಯ ನಾಯಕರು ತಡೆ ಒಡ್ಡಿದರು. ಯಲಹಂಕ ಶಾಸಕ ಎಸ್.ಆರ್. ವಿಶ್ವನಾಥ್ ಸಲಹೆಯ ಮೇರೆಗೆ ಈ ನೇಮಕ ಮಾಡಲಾಗಿತ್ತು. 2028ರ ಚುನಾವಣೆಯ ಸಂದರ್ಭದಲ್ಲಾಗುವ ಸಂಭಾವ್ಯ ರಾಜಕೀಯ ಪಲ್ಲಟಗಳನ್ನು ಗಮನದಲ್ಲಿಟ್ಟುಕೊಂಡು ಈ ತೀರ್ಮಾನಕ್ಕೆ ಬರಲಾಗಿತ್ತು. ಇದೀಗ, ರಾಮಚಂದ್ರ ಗೌಡ ಸೀಕಲ್ ಅವರನ್ನು ಜಿಲ್ಲಾಧ್ಯಕ್ಷರನ್ನಾಗಿ ಮಾಡಲಾಗಿದೆ. ಸುಧಾಕರ್ ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡೇ ಈ ಪ್ರಕ್ರಿಯೆ ನಡೆಸಲಾಗಿದೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಹಿರಿಯ ನಾಯಕರ ಸಲಹೆಗಳನ್ನು ಪಡೆದು ಪಕ್ಷ ಸಂಘಟನೆಗೆ ಚುರುಕು ಮುಟ್ಟಿಸುತ್ತೇನೆ' ಎಂದು ವಿಜಯೇಂದ್ರ ಅವರು ಆಪ್ತರಲ್ಲಿ ಹೇಳಿಕೊಂಡಿದ್ದಾರೆ. ಅವಕಾಶ ಸಿಕ್ಕರೆ ರಾಷ್ಟ್ರೀಯ ನಾಯಕರಲ್ಲಿ ಈ ವಿಷಯಗಳನ್ನೆಲ್ಲ ಅರುಹಲು ಸಿದ್ಧತೆ ಮಾಡಿಕೊಂಡಿದ್ದಾರೆ.

'ಯಡಿಯೂರಪ್ಪ ಜತೆಗಿನ ಆತ್ಮೀಯ ಒಡನಾಟ ಹಾಗೂ ಹಿರಿತನದ ಆಧಾರದಲ್ಲಿ ಅಧ್ಯಕ್ಷರಾದ ಹೊಸದರಲ್ಲೇ ವಿಜಯೇಂದ್ರ ಅವರಿಗೆ ಕೆಲವೊಂದು ಸಲಹೆಗಳನ್ನು ನೀಡಿದ್ದೆ. ಸಣ್ಣ ವಯಸ್ಸಿನಲ್ಲೇ ಅಪೂರ್ವ ಅವಕಾಶ ಸಿಕ್ಕಿದ್ದು, ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಮುನ್ನಡೆಯುವಂತೆ ಕಿವಿಮಾತು ಹೇಳಿದ್ದೆ. ಆದರೆ, ವಿಜಯೇಂದ್ರ ಆ ರೀತಿ ನಡೆದುಕೊಳ್ಳಲಿಲ್ಲ' ಎಂದು ಪಕ್ಷದ ಹಿರಿಯ ನಾಯಕರೊಬ್ಬರು ಬೇಸರ ವ್ಯಕ್ತಪಡಿಸಿದರು.

ಚಿಟಿಕೆ ಸುದ್ದಿ

'ಗ್ಯಾರಂಟಿಗಳು ರದ್ದಾಗಬಹುದು'




ಛಲವಾದಿ ನಾರಾಯಣ ಸ್ವಾಮಿ

ಬೆಂಗಳೂರು: 'ರಾಜ್ಯದ ಕಾಂಗ್ರೆಸ್ ಸರ್ಕಾರ ನೀಡುತ್ತಿರುವ ಗ್ಯಾರಂಟಿ ಯೋಜನೆಗಳು ಮುಂದೊಂದು ದಿನ ಸಂಪೂರ್ಣವಾಗಿ ರದ್ದಾಗಬಹುದು. ಈ ಸರ್ಕಾರವನ್ನು ನಂಬಲು ಸಾಧ್ಯವಿಲ್ಲ' ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಹೇಳಿದ್ದಾರೆ.

'ಗೃಹಲಕ್ಷ್ಮಿ' ಯೋಜನೆ ಅಡಿಯಲ್ಲಿ ಗೃಹಿಣಿಯರಿಗೆ ಪ್ರತಿ ತಿಂಗಳೂ ₹2,000 ನೀಡಲು ಸಾಧ್ಯವಿಲ್ಲ ಎಂದು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಎಚ್.ಎಂ.ರೇವಣ್ಣ ನೀಡಿರುವ ಹೇಳಿಕೆಗೆ ಛಲವಾದಿ 'ಎಕ್ಸ್' ನಲ್ಲಿ ಪ್ರತಿಕ್ರಿಯಿಸಿದ್ದಾರೆ.

'ಗ್ಯಾರಂಟಿ ಅನುಷ್ಠಾನ ಸಮಿತಿಯನ್ನು ರಚಿಸಿದ ಸರ್ಕಾರವು ಅದರಲ್ಲಿ ಕಾಂಗ್ರೆಸ್ ಕಾರ್ಯಕರ್ತರಿಗೆ ಅಧಿಕಾರ ಕೊಟ್ಟಿದೆ. ಅವರಿಗಾಗಿ ನೂರಾರು ಕೋಟಿ ರೂಪಾಯಿ ವೆಚ್ಚ ಮಾಡಿದೆ. ಈಗ ಪ್ರತಿ ತಿಂಗಳು ಹಣ ನೀಡಲು ಸಾಧ್ಯವಿಲ್ಲ ಎಂದು ಹೇಳುತ್ತಿರುವುದು ನಿರಾಸೆ ಹುಟ್ಟಿಸಿದೆ' ಎಂದಿದ್ದಾರೆ.

'ಡಿಕೆಶಿ ಸಿ.ಎಂ ಆಗುವುದು ನಿಶ್ಚಿತ'



ನಿಶ್ಚಲಾನಂದ ನಾಥ ಸ್ವಾಮೀಜಿ

ಮಂಡ್ಯ: 'ಡಿ.ಕೆ.ಶಿವಕುಮಾರ್ ಅವರು ಸಿ.ಎಂ ಆಗುವುದು ನಿಶ್ಚಿತ' ಎಂದು ಕೆಂಗೇರಿಯ ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ನಿಶ್ಚಲಾನಂದನಾಥ ಸ್ವಾಮೀಜಿ ಹೇಳಿದರು.

ಇಲ್ಲಿ ಶುಕ್ರವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 'ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಬಹುಮತ ಗಳಿಸಲು ಶಿವಕುಮಾರ್ ಸಾಕಷ್ಟು ಶ್ರಮಿಸಿದ್ದಾರೆ. ಅವರು ಮುಖ್ಯಮಂತ್ರಿ ಆಗಬೇಕೆಂದು ಅಭಿಮಾನಿಗಳು ಬಯಸುತ್ತಿದ್ದಾರೆ' ಎಂದರು.

'ಪಕ್ಷಕ್ಕಾಗಿ ದುಡಿದ ಹಿರಿಯರಿಗೆ ಸಿಎಂ ಆಗುವ ಹಂಬಲ ಇದ್ದೇ ಇರುತ್ತದೆ. ಅವರು ಸಿಎಂ ಆಗಲೆಂದು ನಾವೂ ಬಯಸುತ್ತೇವೆ. ಅವರು ಪಕ್ಷದ ಶಿಸ್ತಿನ ಸಿಪಾಯಿ' ಎಂದರು.

'ಅವರು ಸಿಎಂ ಆಗಲೆಂದೇ ಹೋದ ಚುನಾವಣೆಯಲ್ಲಿ ಒಕ್ಕಲಿಗ ಸಮುದಾಯ ಕಾಂಗ್ರೆಸ್‌ಗೆ ಬೆಂಬಲ ನೀಡಿದೆ. ಮೈಸೂರು ಭಾಗದಲ್ಲಿ ಸಮಾಜವು ಹೆಚ್ಚು ಒಲವು ತೋರಿದ್ದಕ್ಕಾಗಿ ಕಾಂಗ್ರೆಸ್‌ಗೆ ಹೆಚ್ಚು ಸೀಟುಗಳು ಬಂದವು. ಹೈಕಮಾಂಡ್ ಯಾವ ನಿರ್ಧಾರ ಮಾಡುತ್ತದೆ ನೋಡೋಣ. ದೇವರ ಅನುಗ್ರಹ ಅವರ ಮೇಲಿರಲಿ ಎಂದು ಹಾರೈಸುತ್ತೇನೆ' ಎಂದರು.

ಸುದ್ದಿ 2 ನಿಮಿಷ

ರಕ್ಷಣಾ ಕಾರಿಡಾರ್‌ಗಾಗಿ ಶೀಘ್ರ ಪ್ರಧಾನಿ ಭೇಟಿ: ಎಂ.ಬಿ.ಪಾಟೀಲ

ಬೆಂಗಳೂರು: ಉತ್ತರ ಕರ್ನಾಟಕದ ಹುಬ್ಬಳ್ಳಿ ಧಾರವಾಡ-ಬೆಳಗಾವಿ-ವಿಜಯಪುರ ಮತ್ತು ದಕ್ಷಿಣ ಕರ್ನಾಟಕದ ಬೆಂಗಳೂರು ಗ್ರಾಮಾಂತರ-ಕೋಲಾರ-ಚಿಕ್ಕಬಳ್ಳಾಪುರಕ್ಕೆ ರಕ್ಷಣಾ ಕಾರಿಡಾರ್ ಮಂಜೂರು ಮಾಡುವ ವಿಚಾರವಾಗಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಶೀಘ್ರವೇ ಭೇಟಿ ಮಾಡುತ್ತೇವೆ' ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಹೇಳಿದರು.

ಶುಕ್ರವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ರಾಜ್ಯಕ್ಕೆ ಎರಡು ರಕ್ಷಣಾ ಕಾರಿಡಾರ್‌ಗಳನ್ನು ಮಂಜೂರು ಮಾಡುವಂತೆ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರಿಗೆ ಮನವಿ ಸಲ್ಲಿಸಲಾಗಿತ್ತು. ಅವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಈ ವಿಚಾರದಲ್ಲಿ ತೀರ್ಮಾನ ತೆಗೆದುಕೊಳ್ಳುವುದಕ್ಕೂ ಮುನ್ನ, ಕೇಂದ್ರ ಸಚಿವ ಸಂಪುಟದ ಎದುರು ಪ್ರಸ್ತಾವವನ್ನು ಇಡಬೇಕಾಗಿದೆ. ಹೀಗಾಗಿ ಪ್ರಧಾನಿ ಮೋದಿ ಅವರನ್ನು ಭೇಟಿ ಮಾಡಿ, ಮನವಿ ಸಲ್ಲಿಸಲಾಗುತ್ತದೆ' ಎಂದರು.

'ಇಸ್ರೇಲ್–ಇರಾನ್, ರಷ್ಯಾ–ಉಕ್ರೇನ್ ಸಂಘರ್ಷ ಮತ್ತು ಜಾಗತಿಕ ರಾಜಕೀಯ ಅಸ್ಥಿರತೆಯಿಂದ ಮುಂದಿನ 20 ವರ್ಷಗಳ ಕಾಲ ರಕ್ಷಣಾ ಉದ್ಯಮ, ವೈಮಾಂತರಿಕ್ಷ, ಸೆಮಿಕಂಡಕ್ಟರ್, ಕೃತಕ ಬುದ್ಧಿಮತ್ತೆಯಂತಹ ಡೀಪ್- ಟೆಕ್ ಆಧಾರಿತ ಉದ್ಯಮಗಳಿಗೆ ಬೇಡಿಕೆ ಇರಲಿದೆ. ಇದನ್ನು ನಾವು ಸದಾವಕಾಶವಾಗಿ ಬಳಸಿಕೊಳ್ಳಲು ಕರ್ನಾಟಕವನ್ನು ಸಜ್ಜುಗೊಳಿಸಬೇಕಾದ ಜರೂರತ್ತು ಇದೆ' ಎಂದರು.



'ಬೆಂಗಳೂರಿನಲ್ಲಿ 2ನೇ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ಮಾಣ ವಿಚಾರ ದಲ್ಲಿ ಕೇಂದ್ರ ನಾಗರಿಕ ವಿಮಾನಯಾನ ಸಚಿವರನ್ನು ಮುಂದಿನ ವಾರ ಭೇಟಿಯಾಗಿ, ಮಾತುಕತೆ ನಡೆಸಲಾಗುವುದು' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಭೂ ಒಡೆತನ ಯೋಜನೆ ಕಡತ ಸಲ್ಲಿಸಲು ತಾಕೀತು

ಬೆಂಗಳೂರು: ಅಂಬೇಡ್ಕರ್ ಅಭಿವೃದ್ಧಿ ನಿಗಮದ ಮೂಲಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಮಹಿಳೆಯರಿಗೆ 'ಭೂ ಒಡೆತನ ಯೋಜನೆ' ಅಡಿ ಜಮೀನು ಹಂಚಿಕೆಗೆ ಸಂಬಂಧಿಸಿದ ಎಲ್ಲ ಕಡತಗಳನ್ನು ಸಲ್ಲಿಸಬೇಕು ಎಂದು ನಿಗಮದ ತುಮಕೂರು ಜಿಲ್ಲಾ ವ್ಯವಸ್ಥಾಪಕರಿಗೆ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ ಸೂಚಿಸಿದ್ದಾರೆ.

ನಿಗಮದ ತುಮಕೂರು ಜಿಲ್ಲಾ ಕಚೇರಿ ಮೂಲಕ ಜಮೀನು ಹಂಚಿಕೆಯಲ್ಲಿ ಭಾರಿ ಅಕ್ರಮ ನಡೆದಿದೆ ಎಂಬ ಬಗ್ಗೆ ಬಂದಿದ್ದ ದೂರಿನ ಅನ್ವಯ ಪ್ರಕರಣ ದಾಖಲಿಸಿಕೊಂಡು, ಲೋಕಾಯುಕ್ತರು ವಿಚಾರಣೆ ನಡೆಸುತ್ತಿದ್ದಾರೆ. ಶುಕ್ರವಾರ ನಡೆದ ವಿಚಾರಣೆ ವೇಳೆ ನಿಗಮದ ತುಮಕೂರು ಜಿಲ್ಲಾ ವ್ಯವಸ್ಥಾಪಕರನ್ನು ಲೋಕಾಯುಕ್ತರು ತರಾಟೆಗೆ ತೆಗೆದುಕೊಂಡರು ಎಂದು ಮೂಲಗಳು ತಿಳಿಸಿವೆ.

2011ರಿಂದ 2024ರ ಅಂತ್ಯದವರೆಗೆ ತುಮಕೂರು ಕಚೇರಿ ಮೂಲಕ ಒಟ್ಟು 119 ಎಕರೆ 19 ಗುಂಟೆ ಜಮೀನನ್ನು ಖರೀದಿಸಲಾಗಿದೆ. ಇದನ್ನು 63 ಫಲಾನುಭವಿಗಳಿಗೆ ವಿತರಿಸಲಾಗಿದೆ. ಇದಕ್ಕಾಗಿ ₹2.51 ಕೋಟಿ ವೆಚ್ಚ ಮಾಡಲಾಗಿದೆ. ಈ ಸಂಬಂಧ ಒಟ್ಟು 23 ಕಡತಗಳು ಇರಬೇಕಿತ್ತು. ಆದರೆ ಅವುಗಳ ಪೈಕಿ ಏಳು ಕಡತಗಳು ಇಲ್ಲವೇ ಇಲ್ಲ ಎಂಬುದು ತನಿಖೆ ವೇಳೆ ಪತ್ತೆಯಾಗಿದೆ.

ಫಲಾನುಭವಿಗಳಿಗೆ ಭೂಮಿ ನೀಡಿದ್ದರೂ, ಆರ್‌ಟಿಸಿಯಲ್ಲಿ ಋಣಭಾರ ಮತ್ತಿತರ ವಿವರಗಳನ್ನು ಹತ್ತಾರು ವರ್ಷ ಕಳೆದರೂ ನಮೂದಿಸಿಲ್ಲ ಎಂಬುದು ಲಭ್ಯವಿರುವ ಕಡತಗಳ ಪರಿಶೀಲನೆಯಲ್ಲಿ ಗೊತ್ತಾಗಿದೆ. ಈ ಕಾರ್ಯಗಳನ್ನು ಪೂರ್ಣಗೊಳಿಸಿ, ಲಭ್ಯವಿಲ್ಲದೇ ಇರುವ ಕಡತಗಳನ್ನು ಪತ್ತೆ ಹಚ್ಚಿ ಸಲ್ಲಿಸಿ ಎಂದು ಸೂಚಿಸಲಾಗಿದೆ ಎಂದು ಲೋಕಾಯುಕ್ತ ಪ್ರಕಟಣೆ ತಿಳಿಸಿದೆ.

ಸಿದ್ದರಾಮಯ್ಯ ಬಳಿಕ ಡಿ.ಕೆ.ಶಿವಕುಮಾರ್‌ಗೇ ಅವಕಾಶ ಕೊಡಲಿ: ಬಾಲಕೃಷ್ಣ

ಹೈಕಮಾಂಡ್ ತೀರ್ಮಾನ ಅಂತಿಮ

ಪ್ರಜಾವಾಣಿ ವಾರ್ತೆ



ಎಚ್.ಸಿ.ಬಾಲಕೃಷ್ಣ

ಬಿಡದಿ (ರಾಮನಗರ): 'ಸಿದ್ದರಾಮಯ್ಯ ಅವರು ಸಿ.ಎಂ ಆಗಿ 5 ವರ್ಷ ಇರುತ್ತಾರೋ ಅಥವಾ ಹತ್ತು ವರ್ಷ ಇರುತ್ತಾರೊ ಗೊತ್ತಿಲ್ಲ. ಅವರ ನಂತರ ಡಿ.ಕೆ. ಶಿವಕುಮಾರ್ ಅವರಿಗೆ ಅವಕಾಶ ಕೊಡಬೇಕಷ್ಟೆ' ಎಂದು ಮಾಗಡಿ ಶಾಸಕ ಎಚ್.ಸಿ.ಬಾಲಕೃಷ್ಣ ಹೇಳಿದರು.

'ಎಲ್ಲರಿಗೂ ಎಲ್ಲ ರೀತಿಯ ಬಲವಿರುವುದಿಲ್ಲ. ಇಲ್ಲಿ ಬಲಾಬಲದ ಪ್ರಶ್ನೆಯೇ ಬರಲ್ಲ. ಬದಲಿಗೆ ಪಕ್ಷದ ಹೈಕಮಾಂಡ್ ತೀರ್ಮಾನವೇ ಅಂತಿಮ' ಎಂದು ಅವರು ಸ್ಪಷ್ಟಪಡಿಸಿದರು..

'ಐದು ವರ್ಷ ನಾನೇ ಸಿ.ಎಂ ಹಾಗೂ ಡಿಕೆಶಿಗೆ ಶಾಸಕರ ಬಲ ಕಡಿಮೆ ಇದೆ' ಎಂಬ ಸಿದ್ದರಾಮಯ್ಯ ಹೇಳಿಕೆ ಕುರಿತು ಶುಕ್ರವಾರ ಸುದ್ದಿಗಾರರ ಪ್ರಶ್ನೆಗೆ ಅವರು ಪ್ರತಿಕ್ರಿಯಿಸಿದರು.

ಅವರು, 'ಶಿವಕುಮಾರ್ ಅವರಿಗೆ ಶಾಸಕರ ಬಲ ಇದೆಯೋ ಇಲ್ಲವೋ ಅಂತ ನಾನು ಹೇಳಲ್ಲ. ಎಲ್ಲರಿಗೂ ಎಲ್ಲ ರೀತಿಯ ಬಲ ಇರುವುದಿಲ್ಲ. ಸಿದ್ದರಾಮಯ್ಯ ಅವರಿಗೆ ಈಗ ಹೆಚ್ಚು ಶಾಸಕರ ಬಲವಿರಬಹುದು. ನಂತರದ ಸ್ಥಾನದಲ್ಲಿ ನಾವಿದ್ದೇವೆ' ಎಂದರು.

'ಸ್ವಾಮೀಜಿಗಳು, ಮುಖಂಡರು ಹಾಗೂ ಕಾರ್ಯಕರ್ತರಿಗೆ ಶಿವಕುಮಾರ್ ಸಿ.ಎಂ ಆಗಬೇಕೆಂಬ ಅಭಿಲಾಷೆ ಇದೆ. ಪಕ್ಷಕ್ಕಾಗಿ ಶ್ರಮಪಟ್ಟಿರುವುದರಿಂದ ಅವಕಾಶ ಸಿಗಬೇಕು ಎನ್ನುವುದು ಜನಜನಿತ. ಸಿದ್ದರಾಮಯ್ಯ ಅವರನ್ನು ಇಳಿಸಿ ನಾಳೆಯೇ ಶಿವಕುಮಾರ್ ಅವರನ್ನು ಸಿ.ಎಂ ಮಾಡಿ ಅಂತ ಕೇಳಲ್ಲ. ಏನಿದ್ದರೂ ಹೈಕಮಾಂಡ್ ತೀರ್ಮಾನಿಸಬೇಕು' ಎಂದು ತಿಳಿಸಿದರು.

'ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರ ಜತೆ ರಾಜಕೀಯ ಕುರಿತು ಚರ್ಚಿಸಿಲ್ಲ. ಕ್ಷೇತ್ರದ ಅಭಿವೃದ್ಧಿ ಬಗ್ಗೆ ಮಾತನಾಡಿದ್ದೇನೆ. ಸಚಿವ ಸಂಪುಟ ವಿಸ್ತರಣೆ ವಿಷಯವನ್ನು ನಾಯಕರು ಮತ್ತು ಹೈಕಮಾಂಡ್ ನೋಡಿಕೊಳ್ಳುತ್ತಾರೆ. ನನಗೂ ಸಚಿವನಾಗುವ ಆಸೆ ಇದೆ. ಆದರೆ, ಎಲ್ಲವನ್ನೂ ನಿರ್ಧರಿಸುವುದು ಹೈಕಮಾಂಡ್' ಎಂದರು.

ಸಿ.ಎಂ ಬೇಗುದಿ ಬಯಲು: ಸೋಮಣ್ಣ



ಸೋಮಣ್ಣ

ಬಳ್ಳಾರಿ: 'ಉಪ ಮುಖ್ಯಮಂತ್ರಿಗೆ ಶಾಸಕರ ಬೆಂಬಲ ಇಲ್ಲ ಎಂದು ಸಿ.ಎಂ ಆದವರು ಮಾತನಾಡುವುದು ಅಪಹಾಸ್ಯ, ಅವರ ಅಂತರಾಳದ ಬೇಗುದಿಯನ್ನು ಇದು ಬಯಲು ಮಾಡಿದೆ' ಎಂದು ಕೇಂದ್ರ ಸಚಿವ ವಿ. ಸೋಮಣ್ಣ ಹೇಳಿದರು.


'ಐದು ವರ್ಷ ನಾನೇ ಸಿಎಂ ಎಂದು ಸಿದ್ದರಾಮಯ್ಯ ಅವರೇ ಬರೆದುಕೊಟ್ಟಿದ್ದಾರೆ. ಅದನ್ನು ಅವರ ಪಕ್ಷದ ಹೈಕಮಾಂಡ್ ನಿರ್ಧರಿಸುತ್ತದೆ. ಆದರೆ, ರಾಜ್ಯ ಸರ್ಕಾರ ಸತ್ತಿದೆ. ಜನರನ್ನು ಕತ್ತಲೆ ಕೋಣೆಯಲ್ಲಿ ಕೂರಿಸಲಾಗಿದೆ' ಎಂದು ಅವರು ಶುಕ್ರವಾರ ಸುದ್ದಿಗಾರರಿಗೆ ತಿಳಿಸಿದರು.

'ರಾಜ್ಯದಲ್ಲಿ ಒಂದೆಡೆ ಶಿವಕುಮಾರ್, ಇನ್ನೊಂದು ಕಡೆ ಸಿದ್ದರಾಮಯ್ಯ ಎಂಬಂತೆ ಆಗಿದೆ. ಅದು ಬಿಟ್ಟು ಜನತೆಗೆ ಏನಾದರೂ ಒಳಿತು ಮಾಡಿ' ಎಂದರು.

ಅಧ್ಯಕ್ಷನಾಗುವ ಆಸೆ ಇಲ್ಲ: 'ಪ್ರಧಾನಿ ಮೋದಿ ನನಗೊಂದು ಕೆಲಸ ಕೊಟ್ಟಿದ್ದಾರೆ. ಹೀಗಾಗಿ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸ್ಥಾನದ ಆಕಾಂಕ್ಷಿ ನಾನಲ್ಲ' ಎಂದರು.

ಇಬ್ಬರದೂ ನಾಟಕ: ಚಿಕ್ಕಮಗಳೂರು ವರದಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ರಾಜ್ಯದ ಜನರ ದಿಕ್ಕು ತಪ್ಪಿಸಲು ನಾಟಕವಾಡುತ್ತಿದ್ದಾರೆ ಎಂದು ವಿ.ಸೋಮಣ್ಣ ಲೇವಡಿ ಮಾಡಿದರು.

'ಈ ಇಬ್ಬರ ನಾಟಕಕ್ಕೆ ಕಾಂಗ್ರೆಸ್ ಹೈಕಮಾಂಡ್ ಕೃಪಾಪೋಷಿತ ಮಂಡಳಿಯಾಗಿದೆ. ನಾನೇ ಇರುತ್ತೇನೆ ಎಂದು ಸಿದ್ದರಾಮಯ್ಯ ಹೇಳುತ್ತಿದ್ದಾರೆ. ನಿಮ್ಮ ಪಂಚೆ ಯಾರು ಎಳೆದಿದ್ದಾರೊ ಗೊತ್ತಿಲ್ಲ' ಎಂದು ಅವರು ವ್ಯಂಗ್ಯವಾಡಿದರು.



'ನಾನೇ ಐದು ವರ್ಷ ಸಿ.ಎಂ' ಎಂದು ಸಿದ್ದರಾಮಯ್ಯ ಅವರು ಎರಡು ವರ್ಷಗಳಿಂದ ಪದೇ ಪದೇ ಹೇಳುವುದು ನೋಡಿದರೆ, ಜನರಿಗೆ ಸಂಶಯ ಹೆಚ್ಚಾಗುತ್ತದೆ. ಕಾಂಗ್ರೆಸ್ ಆಂತರಿಕ ಸಮಸ್ಯೆಯೂ ಬಗೆಹರಿಯುವುದಿಲ್ಲ

ಬಸವರಾಜ ಬೊಮ್ಮಾಯಿ, ಸಂಸದ

'ಸಿ.ಎಂ ಬದಲಾವಣೆ ಮುಗಿದ ಕಥೆ'

ಪ್ರಜಾವಾಣಿ ವಾರ್ತೆ



ಲಕ್ಷ್ಮೀ ಹೆಬ್ಬಾಳಕರ

ಮೈಸೂರು: 'ಮುಖ್ಯಮಂತ್ರಿ ಬದಲಾವಣೆ ವಿಚಾರ ಮುಗಿದ ಕಥೆ. ಆ ಬಗ್ಗೆ ನಾವ್ಯಾರೂ ಮಾತನಾಡಬಾರದು' ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳಕರ ಹೇಳಿದರು.

ಶುಕ್ರವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, 'ಐದು ವರ್ಷ ನಾನೇ ಮುಖ್ಯಮಂತ್ರಿ ಆಗಿರುತ್ತೇನೆ ಎಂದು ಸಿದ್ದರಾಮಯ್ಯ ಹೇಳಿದ್ದಾರೆ. ಅಲ್ಲಿಗೆ ಚರ್ಚೆಗಳೆಲ್ಲವೂ ಮುಗಿಯಿತೆಂದೇ ಅರ್ಥ. ಮುಗಿದ ಕಥೆಯ ಬಗ್ಗೆ ನಮ್ಮ ಪ್ರತಿಕ್ರಿಯೆ ನೀಡಿದರೆ ಅದು ತಪ್ಪಾಗುತ್ತದೆ' ಎಂದರು.

'ಸೆಪ್ಟೆಂಬರ್‌ನಲ್ಲಿ ಯಾವ ಕ್ರಾಂತಿಯೂ ಆಗುವುದಿಲ್ಲ. ಎಲ್ಲವೂ ಶಾಂತಿಯಷ್ಟೆ. ಎಲ್ಲಾ ಪ್ರಶ್ನೆಗಳಿಗೂ ಮುಖ್ಯಮಂತ್ರಿಯೇ ಉತ್ತರ ಕೊಟ್ಟಿದ್ದಾರೆ' ಎಂದು ಹೇಳಿದರು.

'ಮೂರು ತಿಂಗಳಿಗೊಮ್ಮೆ ಗೃಹಲಕ್ಷ್ಮಿ ಹಣ ಕೊಡುತ್ತಿದ್ದೇವೆ' ಎಂಬ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಎಚ್.ಎಂ. ರೇವಣ್ಣ ಹೇಳಿಕೆಯನ್ನು ತಳ್ಳಿಹಾಕಿದ ಅವರು, 'ನಾವು ಪ್ರತಿ ತಿಂಗಳೂ ಹಣ ಹಾಕುತ್ತಿದ್ದೇವೆ. ಮೇವರೆಗೂ ಸಂಪೂರ್ಣ ನೀಡಿದ್ದೇವೆ' ಎಂದರು.

ಭತ್ತದ ಪೈರು ನಾಟಿ

ಪ್ರಜಾವಾಣಿ ಚಿತ್ರ: ಗೋವಿಂದರಾಜ ಜವಳಿ



ಧಾರವಾಡದ ಹೊರವಲಯದ ಮುಮ್ಮಿಗಟ್ಟಿಯ ಹೊಲದಲ್ಲಿ ಶುಕ್ರವಾರ ರೈತ ಮಹಿಳೆಯರು ಭತ್ತದ ಪೈರು ನಾಟಿ ಕಾರ್ಯದಲ್ಲಿ ತೊಡಗಿದ್ದರು

ಬಣ ರಾಜಕಾರಣ ಇನ್ನೂ ಉಲ್ಬಣ

ಮುಖ್ಯಮಂತ್ರಿ ಹೇಳಿಕೆಗೆ ಪ್ರತಿಕ್ರಿಯೆ ನೀಡಲ್ಲ: ಡಿಕೆಶಿ

ಒಂದನೇ ಪುಟದಿಂದ...

ತಾಲ್ಲೂಕು ಹಾಗೂ ಜಿಲ್ಲಾಮಟ್ಟದಲ್ಲಿ ಪಕ್ಷ ಸಂಘಟನೆಗೆ ಶ್ರಮಿಸಿರುವವರಿಗೆ, ಮಾತು ಕೊಟ್ಟವರಿಗೆ ಸ್ಥಾನಮಾನ ನೀಡಬೇಕಿದೆ. ಪ್ರಕ್ರಿಯೆ ಸಾಕಷ್ಟು ತಡವಾಗಿದೆ. ಪಕ್ಷದ ಸಂಘಟನೆಗೆ ಶ್ರಮಿಸಿದವರ ಹೆಸರನ್ನು ಸೇರಿಸಿ, ಮತ್ತೊಮ್ಮೆ ದೆಹಲಿಗೆ ಕಳುಹಿಸಿ ಅನುಮತಿ ಪಡೆಯಲಾಗುವುದು. ಎಲ್ಲಾ ಶಾಸಕರು ತಮ್ಮ ಅಭಿಪ್ರಾಯ ಸಲ್ಲಿಸಿದ್ದಾರೆ. ಸಚಿವರ ಅಭಿಪ್ರಾಯ ಸಂಗ್ರಹಿಸಬೇಕಿದೆ. 10 ದಿನಗಳ ಒಳಗೆ ಎಲ್ಲ ಪ್ರಕ್ರಿಯೆ ಪೂರ್ಣಗೊಳಿಸಲಾಗುವುದು ಎಂದರು.

2028ರ ಚುನಾವಣೆಗೂ ಸಿದ್ದರಾಮಯ್ಯ ಸಾರಥ್ಯ: ಸತೀಶ

'ಮುಖ್ಯಮಂತ್ರಿ ಬದಲಾವಣೆ ವಿಚಾರ ಮುಗಿದ ಅಧ್ಯಾಯ. ಸುಪ್ರೀಂನಿಂದಲೇ (ಹೈಕಮಾಂಡ್) ತೀರ್ಪು ಬಂದಿದೆ. 2028ರ ನಂತರ ಸಿದ್ದರಾಮಯ್ಯ ಮುಖ್ಯಮಂತ್ರಿ ಆಗದಿದ್ದರೂ ಅವರದೇ ನಾಯಕತ್ವ ಇರುತ್ತದೆ. 2028ಕ್ಕೆ ನಾನೂ ಸಿ.ಎಂ ಸ್ಥಾನದ ಆಕಾಂಕ್ಷಿ ಎಂದು ಹೇಳಿದ್ದೇನೆ. ಅದರಲ್ಲಿ ತಪ್ಪೇನಿದೆ' ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಮಾಧ್ಯಮ ಪ್ರಶ್ನೆಗಳಿಗೆ ಡಿಕೆಶಿ ಉತ್ತರ

ಪ್ರಶ್ನೆ: ಡಿ.ಕೆ. ಶಿವಕುಮಾರ್ ಅವರಿಗೆ ಕೆಲವು ಶಾಸಕರ ಬೆಂಬಲ ಮಾತ್ರವಿದೆ ಎಂದು ಸಿದ್ದರಾಮಯ್ಯ ಹೇಳಿದ್ದರಲ್ಲ?

ಉತ್ತರ: ನಿಮ್ಮ ಪ್ರಶ್ನೆಗಳಿಗೆ ಅವರೇ ಉತ್ತರ ನೀಡಿದ್ದಾರೆ. ಅವರು ಉತ್ತರ ನೀಡಿದ ಮೇಲೆ ಮತ್ತೆ ಆ ವಿಚಾರ ಚರ್ಚೆ ಮಾಡುವುದು ಸೂಕ್ತವಲ್ಲ

ಪ್ರಶ್ನೆ: ನಾಯಕತ್ವ ಬದಲಾವಣೆ ವಿಚಾರವಾಗಿ ಹೈಕಮಾಂಡ್ ಹೇಳುವ ಮುನ್ನ ಸಿದ್ದರಾಮಯ್ಯ ಅವರು ಹೇಳಿಕೆ ಕೊಟ್ಟಿರುವುದು ಎಷ್ಟು ಸರಿ?

ಉತ್ತರ: ನಿಮ್ಮ ಪ್ರಶ್ನೆಗಳಲ್ಲೇ ಉತ್ತರವಿದೆ. ತಿರುಗಿಸಿ ಕೇಳಿದರೂ ನಾನಂತೂ ಪ್ರತಿಕ್ರಿಯೆ ನೀಡುವುದಿಲ್ಲ. ನಿಮಗೆ ಬಲಿಯಾಗುವುದಿಲ್ಲ

ಪ್ರಶ್ನೆ: ಈ ಹಿಂದೆ ನನ್ನ ಬಳಿ ಆಯ್ಕೆ ಇಲ್ಲ ಎಂದು ಹೇಳಿದ್ದಿರಿ, ಈಗಲೂ ನೀವು ಅದೇ ಸ್ಥಿತಿಯಲ್ಲಿದ್ದೀರಾ?

ಉತ್ತರ: ನಿಮಗೆ ನನ್ನ ವಿಚಾರದಲ್ಲಿ ಯಾಕೆ ಗಾಬರಿ? ಈ ವಿಚಾರದಲ್ಲಿ ನನಗಂತೂ ಗಾಬರಿಯಿಲ್ಲ

ಪ್ರಶ್ನೆ: 2028ರ ಚುನಾವಣೆಗೂ ನನ್ನದೇ ನಾಯಕತ್ವ ಎಂಬ ಸಿದ್ದರಾಮಯ್ಯ ಹೇಳಿದ್ದಾರಲ್ಲ?

ಉತ್ತರ: ಅದು ಅವರ ವೈಯಕ್ತಿಕ ಹೇಳಿಕೆ. ಹೇಳುವ ಸಂಪೂರ್ಣ ಅಧಿಕಾರ ಅವರಿಗಿದೆ. ಪಕ್ಷದ ಅಧ್ಯಕ್ಷನಾಗಿ ಪಕ್ಷ ಸಂಘಟನೆ ನನ್ನ ಜವಾಬ್ದಾರಿ. ಪಕ್ಷ ಹಾಗೂ ಸರ್ಕಾರದ ಹಿತಾಸಕ್ತಿ ಕಾಯುವುದು ನನ್ನ ಗುರಿ

ಪ್ರಶ್ನೆ: ಕೆಪಿಸಿಸಿ ಅಧ್ಯಕ್ಷರ ಬದಲಾವಣೆಯಾಗುತ್ತದೆಯೇ?

ನಾನು ಪಕ್ಷದ ಅಧ್ಯಕ್ಷನಾಗಿ ಈಗಷ್ಟೇ ಪಕ್ಷದ ಬಾವುಟ ನೀಡಿ ಮಾಜಿ ಸಚಿವೆ ಬಿ.ಟಿ. ಲಲಿತಾ ನಾಯಕ್ ಅವರನ್ನು ಪಕ್ಷಕ್ಕೆ ಸೇರ್ಪಡೆ ಮಾಡಿಕೊಂಡಿದ್ದೇನೆ

ಪ್ರಶ್ನೆ: ನಿಮ್ಮ ಆಸೆ ಈಡೇರುವವರೆಗೂ ನೀವು ಇದೇ ಸಹನೆ, ನಿಷ್ಠೆ ಉಳಿಸಿಕೊಳ್ಳುತ್ತೀರಾ?

ಉತ್ತರ: ಪಕ್ಷ ಇದ್ದರೆ ನಾನು. ಪಕ್ಷ ಇಲ್ಲವೆಂದರೆ ನಾನಿಲ್ಲ

'ಪರೋಪಕಾರಕ್ಕಾಗಿಯೇ ಈ ಶರೀರ'

ಬೆಂಗಳೂರು: 'ದೇವರು ವರ ಅಥವಾ ಶಾಪ ಕೊಡೋದಿಲ್ಲ, ಅವಕಾಶ ಕೊಡ್ತಾನೆ ಅದನ್ನು ಸರಿಯಾಗಿ ಉಪಯೋಗಿಸಿಕೊಳ್ಳಬೇಕು. ಒಳ್ಳೆ ಹಣ್ಣು ಇರುವ ಮರಕ್ಕೇ ಜನ ಕಲ್ಲು ಹೊಡೆಯೋದು ಜಾಸ್ತಿ. ನನಗೆ ಶತ್ರುಗಳು ಬೇಡ. ಅಸೂಯೆಗೆ ಮದ್ದಿಲ್ಲ. ಈ ಶರೀರ ಇರುವುದೇ ಪರೋಪಕಾರಕ್ಕಾಗಿ. ನನಗೆ ಹಾರಗಳ ಭಾರ ಜಾಸ್ತಿ ಆಗಿದೆ. 29ನೇ ವಯಸ್ಸಿಗೇ ಸಾರ್ವಜನಿಕ ಜೀವನಕ್ಕೆ ಕಾಲಿಟ್ಟವನು ನಾನು. ಜೀವನದುದ್ದಕ್ಕೂ ಅನುಭವ ಸಾಕಷ್ಟು ಕಲಿಸಿದೆ...'

'ಬೆಂಗಳೂರು ವಕೀಲರ ಸಂಘ'ದ ಶುಕ್ರವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಡಿ.ಕೆ.ಶಿವಕುಮಾರ್ ಮಾರ್ಮಿಕವಾಗಿ ಹೀಗೆ ನುಡಿದರು.

'ಹುದ್ದೆ ಪಡೆದುಕೊಳ್ಳುವ ತಂತ್ರ ಡಿಕೆಶಿಗೆ ಇದೆ'

'ಮುಖ್ಯಮಂತ್ರಿ ಕುರ್ಚಿಯನ್ನು ಹೇಗೆ ಪಡೆದುಕೊಳ್ಳಬೇಕು ಎಂಬ ವಿದ್ಯೆ ಮತ್ತು ತಂತ್ರಗಾರಿಕೆ ಡಿ.ಕೆ.ಶಿವಕುಮಾರ್‌ಗೆ ಚೆನ್ನಾಗಿ ಗೊತ್ತಿದೆ. ಅವರು ಸೂಕ್ತ ಸಮಯ ನೋಡಿಕೊಂಡು, ಅವನ್ನು ಪ್ರಯೋಗಿಸುತ್ತಾರೆ. ಅಗ ಸಿದ್ದರಾಮಯ್ಯ ಅವರು ಅನಿವಾರ್ಯವಾಗಿ ಮುಖ್ಯಮಂತ್ರಿ ಕುರ್ಚಿ ಬಿಟ್ಟುಕೊಡಬೇಕಾಗುತ್ತದೆ' ಎಂದು ಬಿಜೆಪಿ ಶಾಸಕ ಸುರೇಶ್ ಗೌಡ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಎಸ್.ಎಂ.ಕೃಷ್ಣ, ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಆಗುವಲ್ಲಿ ಡಿ.ಕೆ.ಶಿವಕುಮಾರ್ ಅವರ ಪಾತ್ರ ದೊಡ್ಡದಿದೆ. ಇತರರು ಮುಖ್ಯಮಂತ್ರಿ ಆಗಲು ನೆರವು ನೀಡಿದವರಿಗೆ, ತಾವೇ ಆ ಹುದ್ದೆ ಪಡೆದುಕೊಳ್ಳುವುದು ಹೇಗೆ ಎಂಬುದು ಗೊತ್ತಿರುವುದಿಲ್ಲವೇ' ಎಂದು ತಿಳಿಸಿದರು.

ಅಧ್ಯಕ್ಷ ಸ್ಥಾನ: ಸಿ.ಎಂ ಬಣದಿಂದ ಮತ್ತೆ ದಾಳ

ಒಂದನೇ ಪುಟದಿಂದ...

ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅಥವಾ ಅರಣ್ಯ ಸಚಿವ ಈಶ್ವರ ಖಂಡ್ರೆ ಅವರನ್ನು ನೇಮಿಸಬೇಕು ಎಂಬುದು ಸಿದ್ದರಾಮಯ್ಯ ಅವರ ಇರಾದೆ. ಸಚಿವ ಸ್ಥಾನ ಬಿಟ್ಟು ಅಧ್ಯಕ್ಷರಾಗಲು ಜಾರಕಿಹೊಳಿ ಸಿದ್ಧರಿದ್ದಾರೆ. ಅಧ್ಯಕ್ಷ ಸ್ಥಾನದ ಜತೆಗೆ ಕನಿಷ್ಠ ಒಂದು ವರ್ಷ ಸಚಿವ ಸ್ಥಾನದಲ್ಲಿ ಮುಂದುವರಿಸಬೇಕು ಎಂದು ಖಂಡ್ರೆ ಷರತ್ತು ಒಡ್ಡಿದ್ದಾರೆ. ಪರಮಾಪ್ತರನ್ನು ಕೆಪಿಸಿಸಿ ಅಧ್ಯಕ್ಷ ಸ್ಥಾನದಲ್ಲಿ ಕೂರಿಸುವ ಮೂಲಕ ಶಿವಕುಮಾರ್ ಅವರನ್ನು ಮತ್ತಷ್ಟು ದುರ್ಬಲಗೊಳಿಸುವುದು ಮುಖ್ಯಮಂತ್ರಿ ಲೆಕ್ಕಾಚಾರ.

'ಕಳೆದ ಕೆಲವು ಸಮಯದಿಂದ ಶಾಸಕರ ಅಹವಾಲುಗಳನ್ನು ಕೇಳುವುದಕ್ಕೆ ಶಿವಕುಮಾರ್ ಹೆಚ್ಚಿನ ಸಮಯ ಮೀಸಲಿಟ್ಟಿದ್ದಾರೆ. ಸಮಸ್ಯೆಗಳನ್ನು ಕೇಳುವ ನೆಪದಲ್ಲಿ ಸಿದ್ದರಾಮಯ್ಯ ಆಪ್ತ ಶಾಸಕರನ್ನು ತಮ್ಮ ಗುಂಪಿಗೆ ಸೆಳೆಯಲು ಪ್ರಯತ್ನಿಸುತ್ತಿದ್ದಾರೆ. ಇದನ್ನು ಕೆಲವು ಶಾಸಕರು ಮುಖ್ಯಮಂತ್ರಿ ಗಮನಕ್ಕೆ ತಂದಿದ್ದಾರೆ. ಶಿವಕುಮಾರ್ ಈ ನಡೆಗೆ ತಕ್ಕ ತಿರುಗೇಟು ನೀಡಲು ಕೆಪಿಸಿಸಿ ಅಧ್ಯಕ್ಷ ಸ್ಥಾನದಿಂದ ಪದಚ್ಯುತಗೊಳಿಸಲು ಸಿದ್ದರಾಮಯ್ಯ ಬಣ ಪ್ರಯತ್ನ ತೀವ್ರಗೊಳಿಸಿದೆ' ಎಂದು ಮೂಲಗಳು ಹೇಳಿವೆ.

'ಶಾಲೆಗಳಲ್ಲಿ ಆರ್‌ಟಿಐ ಬೋಧಿಸಿ'

ಬೆಂಗಳೂರು: ಶಾಲಾ- ಕಾಲೇಜು ಪಠ್ಯಕ್ರಮಗಳಲ್ಲಿ ಮಾಹಿತಿ ಹಕ್ಕು ಕಾಯ್ದೆ ಕುರಿತು ಪಠ್ಯವನ್ನು ಸೇರಿಸಬೇಕು ಎಂದು ರಾಜ್ಯ ಮಾಹಿತಿ ಹಕ್ಕು ಆಯೋಗವು, ರಾಜ್ಯ ಸರ್ಕಾರಕ್ಕೆ ಶಿಫಾರಸು ಮಾಡಿದೆ.

ಮಾಹಿತಿ ಹಕ್ಕು ಕಾಯ್ದೆ ಕುರಿತು ಮುಂದಿನ ಸೋಮವಾರ (ಜುಲೈ 14) ರಾಜ್ಯ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತಾ ನೇತೃತ್ವದಲ್ಲಿ ಸಭೆ ನಡೆಯಲಿದೆ. ಸಭೆಯಲ್ಲಿ ಈ ಶಿಫಾರಸುಗಳನ್ನು ಇರಿಸಿ, ಚರ್ಚಿಸಬೇಕು ಎಂದು ರಾಜ್ಯ ಮಾಹಿತಿ ಆಯುಕ್ತರು ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಪ್ರಸ್ತಾವ ಸಲ್ಲಿಸಿದ್ದಾರೆ.

ಸರ್ಕಾರದ ಅಧಿಕಾರಿ ಮತ್ತು ನೌಕರರಿಗೆ ಇತರ ವಿಚಾರಗಳ ಬಗ್ಗೆ ತರಬೇತಿ ನೀಡುತ್ತಿರುವಂತೆ, ಮಾಹಿತಿ ಹಕ್ಕು ಕಾಯ್ದೆಯ ಬಗ್ಗೆಯೂ ತರಬೇತಿ ಒದಗಿಸಬೇಕು. ಮಾಹಿತಿ ನೀಡದ ಅಧಿಕಾರಿಗಳಿಗೆ ಮಾತ್ರವೇ ಈಗ ದಂಡ ವಿಧಿಸಲಾಗುತ್ತಿದೆ. ಪ್ರಥಮ ಮೇಲ್ಮನವಿಗಳನ್ನು ವಿಲೇವಾರಿ ಮಾಡದ, ಮೇಲ್ಮನವಿ ಪ್ರಾಧಿಕಾರಗಳಿಗೂ ದಂಡ ವಿಧಿಸುವ ಸಂಬಂಧ ಸುತ್ತೋಲೆ ಹೊರಡಿಸಬೇಕು ಎಂದು ಆಯೋಗ ಶಿಫಾರಸು ಮಾಡಿದೆ.

ಸುರ್ಜೇವಾಲಾ ವಿರುದ್ಧ ರಾಜಣ್ಣ ಮತ್ತೆ ಕಿಡಿ

ಪ್ರಜಾವಾಣಿ ವಾರ್ತೆ



ಕೆ.ಎನ್.ರಾಜಣ್ಣ

ತುಮಕೂರು: ಕಾಂಗ್ರೆಸ್‌ನ ರಾಜ್ಯ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೇವಾಲಾ 'ನನಗೇನು ತಾಕೀತು ಮಾಡುತ್ತಾರೆ' ಎಂದು ಅಸಮಾಧಾನ ವ್ಯಕ್ತಪಡಿಸಿದ್ದ ಸಹಕಾರ ಸಚಿವ ಕೆ.ಎನ್. ರಾಜಣ್ಣ ಈಗ ಮತ್ತೊಮ್ಮೆ ಆಕ್ರೋಶ ಹೊರ ಹಾಕಿದ್ದಾರೆ.

'ಸುರ್ಜೇವಾಲಾ ರಾಜ್ಯಕ್ಕೆ ಭೇಟಿ ನೀಡಿ ಅಭಿಪ್ರಾಯ ಸಂಗ್ರಹಿಸಿರುವುದು ತರವಲ್ಲ. ಅವರು ಬಂದು ನಡೆಸಿದ ಪ್ರಕ್ರಿಯೆ ಬಗ್ಗೆ ನನಗೆ ಸಮಾಧಾನವಿಲ್ಲ' ಎಂದು ಶುಕ್ರವಾರ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಮುಖ್ಯಮಂತ್ರಿ ಅವರನ್ನು ಪಕ್ಷದ ಹೈಕಮಾಂಡ್, ಇಲ್ಲವೆ ಶಾಸಕರು ಬದಲಿಸಬೇಕು. ಶಾಸಕರು ಬದಲಾಯಿಸಲು ತಯಾರಿಲ್ಲ. ಹೈಕಮಾಂಡ್ ಬದಲಿಸುವುದಿಲ್ಲ ಅಂದುಕೊಂಡಿದ್ದೇನೆ' ಎಂದರು.

ದೆಹಲಿಗೆ ಹೋಗಲ್ಲ: 'ಎಐಸಿಸಿ ರಚಿಸಿರುವ ಒಬಿಸಿ ಸಲಹಾ ಮಂಡಳಿ ನಾಯಕತ್ವವನ್ನು ಸಿದ್ದರಾಮಯ್ಯ ಒಪ್ಪುವುದು ಅನುಮಾನ. ಅವರಿಗೆ ಹಿಂದಿ ಬರುವುದಿಲ್ಲ. ರಾಷ್ಟ್ರ ಮಟ್ಟಕ್ಕೆ ಹೋಗಿ ಏನು ಮಾಡುತ್ತಾರೆ' ಎಂದು ಪ್ರಶ್ನಿಸಿದರು.

'ರಾಜ್ಯ ಪಠ್ಯಕ್ರಮ: ತೃತೀಯ ಭಾಷೆ ಹೊರೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೇಂದ್ರ ಮತ್ತು ರಾಜ್ಯ ಪಠ್ಯಕ್ರಮದಲ್ಲಿನ ತಾರತಮ್ಯ ಹೋಗಲಾಡಿಸಲು ತುರ್ತಾಗಿ ರಾಜ್ಯ ಪಠ್ಯಕ್ರಮದಿಂದ ತೃತೀಯ ಭಾಷೆ ತೆಗೆದು, ಎರಡು ಭಾಷಾ ಪರೀಕ್ಷೆಗಳನ್ನು ಮಾತ್ರ ಕಡ್ಡಾಯಗೊಳಿಸಬೇಕು' ಎಂದು ಕನ್ನಡ ಮೊದಲು ಬಳಗ ರಾಜ್ಯ ಸರ್ಕಾರವನ್ನು ಒತ್ತಾಯಿಸಿದೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ 'ಜ್ಞಾನೇಶ್ವರ ಕರ್ನಾಟಕ ಶಿಕ್ಷಣ ಭಾಷಾ ನೀತಿ' ವರದಿಯ ರೂವಾರಿ ಹಾಗೂ ಬಳಗದ ಸಂಸ್ಥಾಪಕ ಜ್ಞಾನೇಶ್ವರ್ ಎಂ., ವರದಿಯಲ್ಲಿನ ಶಿಫಾರಸುಗಳನ್ನು ಅನುಷ್ಠಾನ ಮಾಡಬೇಕು ಎಂದು ಒತ್ತಾಯಿಸಿದರು.

'ಸಿಬಿಎಸ್‌ಇ ಮತ್ತು ಐಸಿಎಸ್‌ಇ ಪಠ್ಯಕ್ರಮದಲ್ಲಿ ಒಂಬತ್ತು ಮತ್ತು ಹತ್ತನೇ ತರಗತಿಯಲ್ಲಿ ಎರಡೇ ಭಾಷೆಗಳನ್ನು ಕಲಿಸಲಾಗುತ್ತಿದೆ. ರಾಜ್ಯ ಪಠ್ಯಕ್ರಮದಲ್ಲಿ ಮೂರು ಭಾಷೆಗಳಿದ್ದು, ಕಡ್ಡಾಯವಾಗಿ ಮೂರು ಭಾಷಾ ವಿಷಯಗಳಲ್ಲಿ ಉತ್ತೀರ್ಣರಾಗಬೇಕಿದೆ. ತೃತೀಯ ಭಾಷೆಯ ಕಡ್ಡಾಯ ಪರೀಕ್ಷೆ ಮತ್ತು ತೇರ್ಗಡೆಯ ನಿಯಮವನ್ನು ರಾಜ್ಯ ಪಠ್ಯಕ್ರಮದಲ್ಲಿ ಸಡಿಲಿಸಬೇಕು. ಮೂರನೇ ಭಾಷೆಯನ್ನು ಆಯ್ಕೆಯಾಗಿ ನೀಡಬೇಕು' ಎಂದರು.

ನಟ ಚೇತನ್ ಅಹಿಂಸಾ, ಕರ್ನಾಟಕ ರಾಜ್ಯ ರೈತ ಸಂಘದ ಪ್ರಧಾನ ಕಾರ್ಯದರ್ಶಿ ವೀರಸಂಗಯ್ಯ, ಬಳಗದ ಸದಸ್ಯರಾದ ವಸಂತ ಪೂಜಾರಿ, ರಮೇಶ್, ಸಾರಿಕಾ, ಶ್ರೀನಾಥ ಉಪಸ್ಥಿತರಿದ್ದರು.

ಸಿಬಿಎಸ್‌ಇ ಶಾಲೆಗಳಲ್ಲಿ ಕನ್ನಡ: ಆಕ್ಷೇಪಣೆ ಸಲ್ಲಿಸಲು ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಿಬಿಎಸ್‌ಇ (ಕೇಂದ್ರೀಯ ಶಾಲಾ ಪರೀಕ್ಷಾ ಮಂಡಳಿ) ಸಿಐಎಸ್‌ಸಿಇ (ಕೌನ್ಸಿಲ್ ಫಾರ್ ದಿ ಇಂಡಿಯನ್ ಸ್ಕೂಲ್ ಸರ್ಟಿಫಿಕೇಟ್ ಎಕ್ಸಾಮಿನೇಷನ್ಸ್) ಮಾನ್ಯತೆ ಪಡೆದ ಶಾಲೆಗಳಲ್ಲಿ ಕನ್ನಡವನ್ನು ಒಂದು ವಿಷಯವನ್ನಾಗಿ ಕಲಿಸಬೇಕು ಎಂಬ ಕಡ್ಡಾಯ ನಿಯಮವನ್ನು ಪ್ರಶ್ನಿಸಲಾದ ಅರ್ಜಿಗೆ ಸಂಬಂಧಿಸಿದಂತೆ ಮೂರು ವಾರಗಳಲ್ಲಿ ಆಕ್ಷೇಪಣೆ ಸಲ್ಲಿಸಿ' ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

ಈ ಸಂಬಂಧ ಸಿಬಿಎಸ್‌ಇ ಮತ್ತು ಸಿಐಎಸ್‌ಸಿಇ ಮಾನ್ಯತೆ ಪಡೆದ ಶಾಲೆಗಳಲ್ಲಿ ಕಲಿಯುತ್ತಿರುವ ಮಕ್ಕಳ ಪೋಷಕ ಸಿ.ಸೋಮಶೇಖರ್ ಹಾಗೂ ಶಿಕ್ಷಕರು ಸೇರಿದಂತೆ ಒಟ್ಟು 20 ಜನರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ವಿ.ಕಾಮೇಶ್ವರ ರಾವ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ಆದಿತ್ಯ ಸೋಂಧಿ ಅವರು, 'ಕಳೆದ ಎರಡು ವರ್ಷಗಳಿಂದ ರಾಜ್ಯ ಸರ್ಕಾರ ಅರ್ಜಿಗೆ ಆಕ್ಷೇಪಣೆ ಸಲ್ಲಿಸಿಲ್ಲ' ಎಂದು ನ್ಯಾಯಪೀಠದ ಗಮನ ಸೆಳೆದರು. ಇದಕ್ಕೆ ನ್ಯಾಯಪೀಠ, 'ಸರ್ಕಾರ ಬೇಗ ಎಚ್ಚೆತ್ತುಕೊಳ್ಳಬೇಕು. ಇಲ್ಲವಾದಲ್ಲಿ ಮಧ್ಯಂತರ ಪರಿಹಾರ ಕೋರಿಕೆ ಅರ್ಜಿ ಪರಿಗಣಿಸಲಾಗುವುದು' ಎಂದು ಮೌಖಿಕವಾಗಿ ತಿಳಿಸಿತು. 'ಮೂರು ವಾರಗಳಲ್ಲಿ ಆಕ್ಷೇಪಣೆ ಸಲ್ಲಿಸಿ' ಎಂದು ಸರ್ಕಾರದ ಪರ ವಕೀಲರಿಗೆ ನಿರ್ದೇಶಿಸಿ ವಿಚಾರಣೆ ಮುಂದೂಡಿತು.

ಮಧ್ಯಂತರ ಕೋರಿಕೆ: 'ಕರ್ನಾಟಕ ಭಾಷಾ ಕಲಿಕಾ ಕಾಯ್ದೆ, ನಿಯಮಗಳು ಮತ್ತು ನಿರಾಕ್ಷೇಪಣ ಪತ್ರ (ಎನ್‌ಒಸಿ) ನಿಯಮ 6(1) ಅಸಾಂವಿಧಾನಿಕವಾಗಿದೆ. ಈ ನಿಯಮವು ಸಿಬಿಎಸ್‌ಇ ಮತ್ತು ಸಿಐಎಸ್‌ಸಿಇ ಶಾಲೆಗಳಿಗೆ ಅನ್ವಯವಾಗುವುದಿಲ್ಲ. ಆದ್ದರಿಂದ, ಇವುಗಳ ಅನುಷ್ಠಾನಕ್ಕೆ ಮಧ್ಯಂತರ ತಡೆ ನೀಡಬೇಕು' ಎಂಬುದು ಅರ್ಜಿದಾರರ ಮಧ್ಯಂತರ ಕೋರಿಕೆ.

ಅರ್ಜಿಯಲ್ಲಿ ಏನಿದೆ?

'ಕರ್ನಾಟಕ ಭಾಷಾ ಕಲಿಕಾ ಕಾಯ್ದೆ, ನಿಯಮಗಳು ಮತ್ತು ನಿರಾಕ್ಷೇಪಣ ಪತ್ರ ನಿಯಮಗಳ ಪ್ರಕಾರ ರಾಜ್ಯದಲ್ಲಿನ ಸಿಬಿಎಸ್‌ಇ ಮತ್ತು ಸಿಐಎಸ್‌ಸಿಇ ಮಾನ್ಯತೆ ಪಡೆದ ಶಾಲೆಗಳು ಕನ್ನಡವನ್ನು ಪ್ರಥಮ ಅಥವಾ ದ್ವಿತೀಯ ಭಾಷೆಯನ್ನಾಗಿ ಬೋಧಿಸಬೇಕು ಎಂದು ಸರ್ಕಾರ ಹೇಳಿದೆ. ನಿರಾಕ್ಷೇಪಣ ಪತ್ರ ನಿಯಮಗಳ ಪ್ರಕಾರ ಕನ್ನಡವನ್ನು ದ್ವಿತೀಯ ಅಥವಾ ತೃತೀಯ ಭಾಷೆಯನ್ನಾಗಿ ಬೋಧಿಸಬೇಕು' ಎಂದು ಅರ್ಜಿಯಲ್ಲಿ ವಿವರಿಸಲಾಗಿದೆ.

'ಕರ್ನಾಟಕ ಭಾಷಾ ಕಲಿಕಾ ಕಾಯ್ದೆ–2015ರ ಕಲಂ 3, ಕರ್ನಾಟಕ ಭಾಷಾ ಕಲಿಕಾ ನಿಯಮಗಳು–2017ರ ನಿಯಮ 3 ಮತ್ತು ಕರ್ನಾಟಕ ಶೈಕ್ಷಣಿಕ ಸಂಸ್ಥೆಗಳ (ನಿರಾಕ್ಷೇಪಣ ಪತ್ರ ನೀಡಿಕೆ ಮತ್ತು ನಿಯಂತ್ರಣ) ನಿಯಮ 6(2)ರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆ. ನಿಯಮಗಳನ್ನು ಪಾಲಿಸದೇ ಇದ್ದರೆ 6(5)ರ ಅನ್ವಯ ಶೈಕ್ಷಣಿಕ ಸಂಸ್ಥೆಗೆ ನೀಡಲಾಗಿರುವ ನಿರಾಕ್ಷೇಪಣ ಪತ್ರವನ್ನು ಹಿಂಪಡೆಯಲಾಗುತ್ತದೆ' ಎಂದು ದೂರಲಾಗಿದೆ.

ಮಾತು ತಪ್ಪಿದ ಸಿ.ಎಂ: ವಾಗ್ದಾಳಿ

ದೇವನಹಳ್ಳಿ ಪ್ರಕರಣ: 15ರಂದು ರೈತ ಪರ ನಿರ್ಧಾರ ಪ್ರಕಟಿಸದಿದ್ದರೆ ಹೋರಾಟ

ಪ್ರಜಾವಾಣಿ ವಾರ್ತೆ

ಮೈಸೂರು: 'ಬೆಂಗಳೂರಿನ ದೇವನಹಳ್ಳಿ ಭೂಸ್ವಾಧೀನ ವಿರುದ್ಧದ ಹೋರಾಟ ಕುರಿತು ಜುಲೈ 15ರಂದೇ ಕಾಲಾವಕಾಶ ಕೇಳಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ರಕ್ಷಣಾ ಸಚಿವ ರಾಜನಾಥ ಸಿಂಗ್ ಅವರನ್ನು ಭೇಟಿ ಮಾಡಿ ಮಾತು ತಪ್ಪಿದ್ದಾರೆ' ಎಂದು ಚಲನಚಿತ್ರ ನಟ ಪ್ರಕಾಶ್ ರಾಜ್ ವಾಗ್ದಾಳಿ ನಡೆಸಿದರು.

'ದೇವನಹಳ್ಳಿಯಲ್ಲಿ ರೈತರ ಜಮೀನು ಕಿತ್ತುಕೊಂಡು, 1,700 ಎಕರೆಯಲ್ಲಿ ಡಿಫೆನ್ಸ್ ಕಾರಿಡಾರ್ ಸ್ಥಾಪಿಸಲು ರಾಜ್ಯ ಸರ್ಕಾರ ಕೇಂದ್ರದ ಅನುಮತಿ ಕೇಳಿದೆ. ಕಾರಿಡಾರ್‌ಗೆ ಏಕೆ ಇಷ್ಟು ಭೂಮಿ ಬೇಕು ಎಂಬುದನ್ನು ಅವರು ನಕ್ಷೆ ಸಮೇತ ವಿವರಿಸಲಿ' ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಸವಾಲು ಹಾಕಿದರು.



ಡಿಫೆನ್ಸ್ ಕಾರಿಡಾರ್‌ಗೆ ಕೇವಲ 100 ಎಕರೆಯಷ್ಟು ಭೂಮಿಯನ್ನು ಬಳಸಿ ಉಳಿದ ಜಮೀನಿನಲ್ಲಿ ಐಷಾರಾಮಿ ಹೋಟೆಲ್ ಕಟ್ಟುತ್ತಾರೆ. ಅಲ್ಲಿ ನಮ್ಮ ರೈತರು ಕೂಲಿ ಆಳುಗಳಾಗಬೇಕಾಗುತ್ತದೆ
ಪ್ರಕಾಶ್ ರಾಜ್, ಚಲನಚಿತ್ರ ನಟ

'ರಾಜ್ಯ ಸರ್ಕಾರ ಇದೇ 15ರಂದು ರೈತ ಪರ ನಿರ್ಧಾರ ಪ್ರಕಟಿಸದೆ ಇದ್ದರೆ ಹೋರಾಟ ತೀವ್ರಗೊಳಿಸುತ್ತೇವೆ' ಎಂದು ಎಚ್ಚರಿಸಿದರು. ಎಚ್.ಡಿ. ದೇವೇಗೌಡರಂತಹ ನಾಯಕರು ಇಲ್ಲಿ ರೈತರ ಹೋರಾಟ ಬೆಂಬಲಿಸಿರುವುದು ಬೇಸರದ ಸಂಗತಿ ಎಂದು ಹೇಳಿದರು.

'ಇಲ್ಲಿ ಭೂಸ್ವಾಧೀನ ಮಾಡೇ ಮಾಡುತ್ತೇವೆ ಎಂದು ಸಚಿವ ಎಂ.ಬಿ. ಪಾಟೀಲ ಹೇಳಿದ್ದಾರೆ. ಅವರು ಮುಖ್ಯಮಂತ್ರಿಯೇ ಇಲ್ಲ ಸಿದ್ದರಾಮಯ್ಯ ಅವರೋ ಗೊತ್ತಾಗುತ್ತಿಲ್ಲ' ಎಂದು ಟೀಕಿಸಿದರು.

ಮುಖಂಡ ಬಡಗಲಪುರ ನಾಗೇಂದ್ರ ಅವರು, 'ಸಿದ್ದರಾಮಯ್ಯ ಹಿಂದೆ ಭೂಸ್ವಾಧೀನ ವಿರೋಧಿಸಿದ್ದರು. ಈಗ ಜನವಿರೋಧಿ ನಿಲುವು ತಳೆದರೆ ಅಧಿಕಾರ ಕಳೆದುಕೊಳ್ಳಬೇಕಾಗುತ್ತದೆ' ಎಂದು ಎಚ್ಚರಿಸಿದರು.

ರೈತ ನಾಯಕಿ ಚುಕ್ಕಿ ನಂಜುಂಡಸ್ವಾಮಿ, 'ನಾವು ಸಿದ್ದರಾಮಯ್ಯ ಅವರನ್ನು ಪ್ರಶ್ನಿಸುವ ಜನ. ದೇವನಹಳ್ಳಿ ಹೋರಾಟ ಇಡೀ ರಾಜ್ಯದ ಭೂಸ್ವಾಧೀನ ವಿರೋಧಿ ಹೋರಾಟಗಳಿಗೆ ದಿಕ್ಕು ತೋರಿಸುವ ಹೋರಾಟ. ಇದನ್ನು ಗೆಲ್ಲಿಸುವ ಹೊಣೆ ಸಿದ್ದರಾಮಯ್ಯ ಅವರದು' ಎಂದರು.

ಹೋರಾಟಗಾರ ಗುರುಪ್ರಸಾದ್ ಕೆರಗೋಡು, 'ಕೃಷಿಯೇತರ ಜಮೀನು ಬೇಕಿದ್ದರೆ ಉತ್ತರ ಕರ್ನಾಟಕ ಭಾಗದ ಬಂಜರು ಭೂಮಿ ಬಳಸಲಿ. ಬೆಂಗಳೂರು ಸುತ್ತಲಿನ ಫಲವತ್ತಾದ ಜಮೀನಿನ ಮೇಲೆಯೇ ಏಕೆ ಕಣ್ಣು' ಎಂದು ಪ್ರಶ್ನಿಸಿದರು.

ಸಾಲ ತೀರಿಸಲು ಶಿಶು ಮಾರಾಟ

ದಾಂಡೇಲಿ (ಉತ್ತರ ಕನ್ನಡ): ಸಾಲ ತೀರಿಸಲು 20 ದಿನದ ಶಿಶು ಮಾರಿದ್ದ ಪ್ರಕರಣದಲ್ಲಿ ದಾಂಡೇಲಿ ಪೊಲೀಸರು, ಇಬ್ಬರನ್ನು ಶುಕ್ರವಾರ ಬಂಧಿಸಿದ್ದಾರೆ.

'ಬೆಳಗಾವಿ ಜಿಲ್ಲೆ ಆನಗೋಲದ ನೂರ ಅಹ್ಮದ್ ಮಜಿದ್ ನಾಯಕ ಮತ್ತು ಕಿಶನ್ ಐರೇಕರ ಬಂಧಿತರು. ಅವರಿಗೆ ಹಳೇದಾಂಡೇಲಿಯ ದೇಶಪಾಂಡೆನಗರ ನಿವಾಸಿ ಮಾಹಿನ್, ಆಕೆ ಪತಿ ವಾಸೀಮ್ ಚಂದು ಪಟೇಲ ₹3 ಲಕ್ಷಕ್ಕೆ ಶಿಶು ಮಾರಿದ್ದರು' ಎಂದು ಪೊಲೀಸರು ತಿಳಿಸಿದ್ದಾರೆ.

'ಖಾಸಗಿ ಫೈನಾನ್ಸ್‌ನಲ್ಲಿ ಮಾಡಿದ್ದ ಸಾಲ ತೀರಿಸಲು ದಂಪತಿಗೆ ಹಣದ ಅಗತ್ಯವಿತ್ತು. ಹೀಗಾಗಿ ಮಾಹಿನ್ ಜನ್ಮ ನೀಡಿದ್ದ ಶಿಶುವನ್ನು ಜುಲೈ 8 ರಂದು ಧಾರವಾಡದಲ್ಲಿ ಮಾರಿದ್ದರು. ದಂಪತಿ ಪತ್ತೆಗೆ ಪ್ರಯತ್ನ ನಡೆದಿದೆ' ಎಂದಿದ್ದಾರೆ.

ಮಗುವನ್ನು ಶಿರಸಿಯ ಮಕ್ಕಳ ಕಲ್ಯಾಣ ಸಮಿತಿಗೆ ಒಪ್ಪಿಸಲಾಗಿದೆ.

ಭಟ್ಕಳ: ಠಾಣೆಗೆ ಬೆದರಿಕೆ ಸಂದೇಶ

ಭಟ್ಕಳ (ಉತ್ತರ ಕನ್ನಡ ಜಿಲ್ಲೆ): '24 ಗಂಟೆಯೊಳಗೆ ಭಟ್ಕಳ ಪಟ್ಟಣ ಸ್ಫೋಟಿಸುತ್ತೇವೆ' ಎಂಬ ಬೆದರಿಕೆ ಇ–ಮೇಲ್ ಸಂದೇಶ ಇಲ್ಲಿನ ಶಹರ ಪೊಲೀಸ್ ಠಾಣೆಗೆ ಬಂದ ಕಾರಣ ಶುಕ್ರವಾರ ಪೊಲೀಸರು ಭಟ್ಕಳ, ಮುರುಡೇಶ್ವರದಲ್ಲಿ ತಪಾಸಣೆ ನಡೆಸಿದರು. 'ಕಣ್ಣನ್ ಗುರುಸ್ವಾಮಿ ಎಂಬ ಹೆಸರಿನ ಇ–ಮೇಲ್ ಖಾತೆಯಿಂದ ಸಂದೇಶ ಬಂದಿದೆ. ಆರೋಪಿ ಪತ್ತೆಗೆ ಎರಡು ತಂಡ ರಚಿಸಲಾಗಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಚಿಕ್ಕಮಗಳೂರು–ತಿರುಪತಿ ರೈಲಿಗೆ ಚಾಲನೆ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ತಿರುಪತಿ–ಚಿಕ್ಕಮಗಳೂರು ಎಕ್ಸ್‌ಪ್ರೆಸ್ ರೈಲಿಗೆ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಶುಕ್ರವಾರ ಚಾಲನೆ ನೀಡಿದರು.

ಚಿಕ್ಕಮಗಳೂರಿನಿಂದ ಹೊರಟ ರೈಲಿಗೆ ಹಿರೇಮಗಳೂರಿನ ಲಕ್ಷ್ಮಿನಾರಾಯಿ ಎಂಬ ವೃದ್ಧ ಮಹಿಳೆ ಕಂದೀಲ ಮೇಲೆ ಇಂದು ಅಡ್ಡಬಿದ್ದು ನಮಸ್ಕಾರ ಮಾಡಿದ್ದು ವಿಶೇಷವಾಗಿತ್ತು.'ವರ್ಷದಲ್ಲಿ ಮೂರು–ನಾಲ್ಕು ಬಾರಿ ತಿರುಪತಿಗೆ ಹೋಗುತ್ತಿದ್ದೆ. ಈಗ ಚಿಕ್ಕಮಗಳೂರಿನಿಂದ ನೇರ ರೈಲು ಸಂಚಾರ ಆರಂಭವಾಗಿರುವುದು ಸಂತಸ ತಂದಿದೆ' ಎಂದು ಅವರು ಹೇಳಿದರು.

ಈ ರೈಲು ವಾರದಲ್ಲಿ ಒಂದು ದಿನ ಸಂಚರಿಸಲಿದೆ. ತಿರುಪತಿಯಿಂದ ಗುರುವಾರ ರಾತ್ರಿ 9ಕ್ಕೆ ಹೊರಟು ಪಳಕ (9.28), ಚಿತ್ತೂರು (9.58), ಕಟ್ಪಾಡಿ (11.10), ಜೋಲಾರಪೇಟೆ (12.28 ಶುಕ್ರವಾರ), ಕುಪ್ಪಂ (1.10), ಬಂಗಾರಪೇಟೆ (1.39), ವೈಟ್‌ಫೀಲ್ಡ್ (2.10), ಕೆ.ಆರ್.ಪುರ (2.23), ಬೈಯಪ್ಪನಹಳ್ಳಿ ಸರ್ ಎಂ. ವಿಶ್ವೇಶ್ವರಯ್ಯ ರೈಲು ನಿಲ್ದಾಣ (3.05), ಚಿಕ್ಕಬಾಣಾವರ (3.50), ತುಮಕೂರು (4.43), ಸಂಪಿಗೆ ರಸ್ತೆ (6.15), ತಿಪಟೂರು (5.58), ಅರಸೀಕೆರೆ (7.30), ದೇವನೂರು (8.10), ಕಡೂರು (8.26), ಬೀರೂರು (8.50), ಬಿಸ್ಸೇಹಳ್ಳಿ (9.26), ಸಖರಾಯಪಟ್ಟಣ (9.39), ಚಿಕ್ಕಮಗಳೂರು (10.30) ತಲುಪಲಿದೆ.

ಚಿಕ್ಕಮಗಳೂರಿನಿಂದ ಅದೇ ದಿನ (ಶುಕ್ರವಾರ) ಸಂಜೆ 5.30ಕ್ಕೆ ಹೊರಟು ರೈಲು ಸಖರಾಯಪಟ್ಟಣ (6.04), ಬಿಸ್ಸೇಹಳ್ಳಿ (6.17), ಕಡೂರು (6.28), ಬೀರೂರು (6.45), ದೇವನೂರು (7.25), ಅರಸೀಕೆರೆ (7.50), ತಿಪಟೂರು (8.20), ತುಮಕೂರು (9.18), ಚಿಕ್ಕಬಾಣಾವರ (10.00), ಬೈಯಪ್ಪನಹಳ್ಳಿ ಸರ್ ಎಂ. ವಿಶ್ವೇಶ್ವರಯ್ಯ ರೈಲು ನಿಲ್ದಾಣ (12.05 ಶನಿವಾರ), ಕೆ.ಆರ್. ಪುರ (12.40), ವೈಟ್‌ಫೀಲ್ಡ್ (12.51), ಬಂಗಾರಪೇಟೆ (1.23), ಕುಪ್ಪಂ (1.55), ಜೋಲಾರಪೇಟೆ (3.25), ಕಟ್ಪಾಡಿ (5.00), ಚಿತ್ತೂರು (5.43), ಪಳಕ (6.13) ಮತ್ತು ತಿರುಪತಿ (7.40) ತಲುಪಲಿದೆ.



ಅಲ್ಪಸಂಖ್ಯಾತರ ನಿರ್ದೇಶನಾಲಯ

ನಂ.16ಸಿ, ಮೌಲಾನಾ ಅಜಾದ್ ಭವನ, ಮಿಲ್ಲರ್‌ಟ್ಯಾಂಕ್ ಬೆಡ್ ರಸ್ತೆ, ವಸಂತನಗರ, ಬೆಂಗಳೂರು–560052.

ಸಂಖ್ಯೆ: ಅಸಂನಿ/ಅ/ಮೂಲಸೌಕರ್ಯಗಳು/ಸಿಆರ್–111/2024–25 ದಿನಾಂಕ: 10.07.2025

ಅಲ್ಪಾವಧಿ ಮರು–ಟೆಂಡರ್ ಪ್ರಕಟಣೆ

2025–26ನೇ ಸಾಲಿನಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧೀನದ ವಿವಿಧ ವಸತಿ ಶಾಲೆ/ಕಾಲೇಜು ಹಾಗೂ ಮೌಲಾನಾ ಆಜಾದ್ ಮಾದರಿ ಶಾಲೆಗಳಿಗೆ ಕಂಪ್ಯೂಟರ್‌ಗಳನ್ನು ಅರ್ಹ ಸರಬರಾಜುದಾರರಿಂದ ಪೂರೈಸಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಆನ್‌ಲೈನ್‌ನಲ್ಲಿ ಅಲ್ಪಾವಧಿ ಮರು–ಟೆಂಡರ್ ಆಹ್ವಾನಿಸಲಾಗಿದೆ.

ಕ್ರ.ಸಂ.	ವಿವರಗಳು	ದಿನಾಂಕ/ಸಮಯ
1.	ಟೆಂಡರ್ ಪ್ರಕಟಣೆಯ ದಿನಾಂಕ:	11.07.2025
2.	ಟೆಂಡರ್ ಮೊತ್ತ:	ರೂ.495.00 ಲಕ್ಷಗಳು.
3.	ಇಎಂಡಿ ಮೊತ್ತ	ರೂ. 7,42,500/–
4.	ಟೆಂಡರ್ ಕುರಿತು ಪೂರ್ವಭಾವಿ ಸಭೆ:	16.07.2025 ಬೆಳಿಗ್ಗೆ 11:30 ಗಂಟೆಗೆ.
5.	ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ ಮತ್ತು ಸಮಯ:	25.07.2025 ಸಂಜೆ 5:30 ಗಂಟೆಯೊಳಗೆ.
6.	ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ:	28.07.2025 ಬೆಳಿಗ್ಗೆ 11:30 ಗಂಟೆಗೆ.
7.	ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ:	31.07.2025 ಬೆಳಿಗ್ಗೆ 11:30 ಗಂಟೆಗೆ.
8.	ಟೆಂಡರ್ ತೆರೆಯುವ ಸ್ಥಳ ಮತ್ತು ಸಂಪರ್ಕಿಸುವ ವಿಳಾಸ:	ಮೌಲಾನಾ ಅಜಾದ್ ಭವನ, ನಂ.16ಸಿ, ಮಿಲ್ಲರ್‌ಟ್ಯಾಂಕ್ ಬೆಡ್ ರಸ್ತೆ, ವಸಂತನಗರ, ಬೆಂಗಳೂರು–560052.
9.	ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ	080–22535902/ 080–22535918.

ಇತರೆ ವಿವರಗಳನ್ನು ಅಲ್ಪಸಂಖ್ಯಾತರ ನಿರ್ದೇಶನಾಲಯದ ವೆಬ್‌ಸೈಟ್ https://dom.karnataka.gov.in ಹಾಗೂ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: https://kppp.karnataka.gov.in ನಲ್ಲಿ ಪಡೆಯಬಹುದಾಗಿದೆ.

ಸಹಿ/–
ನಿರ್ದೇಶಕರು
ಅಲ್ಪಸಂಖ್ಯಾತರ ನಿರ್ದೇಶನಾಲಯ, ಬೆಂಗಳೂರು

ವಾಸಾಸಂಇ/ವಾಪ್ರ/1780/2025–26

ಕರ್ನಾಟಕ ಸರ್ಕಾರ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿತ್ರದುರ್ಗ.

ಸಂ:ಕಾ.ಸಾ.ಚಿ/ಪಿ.ಬಿ–1/ಅಲ್ಪಾವಧಿ ಟೆಂಡರ್ ಪ್ರಕಟಣೆ–ಐ.ಎಫ್.ಟಿ–03/2025–26/ ದಿನಾಂಕ: 11–07–2025

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರ ಮಾನ್ಯ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿತ್ರದುರ್ಗ ಇವರು ಕೆಟಿಪಿಪಿ ಆಕ್ಟ್–2000 ನಿಯಮದಂತೆ, ಕೆಟಿಪಿಪಿ ಆಕ್ಟ್–2000 ಕಾಯ್ದೆಯ ಸೆಕ್ಷನ್ 6 ಅನುಸಾರ ಕೆ.ಟಿ.ಪಿ.ಪಿ ನಿಯಮಗಳು 2000 ರ ನಿಯಮ 27ಎ ರಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸಮುದಾಯಕ್ಕೆ, ಕೆಟಗೆರಿ–I & II(A) ಸಂಭಂದಿಸಿದ ತಿದ್ದುಪಡಿ ನಿಯಮದಂತೆ ಹಾಗೂ ಸ್ಟ್ಯಾಂಡರ್ಡ್ ಬಿಡ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ.1, 2 ಹಾಗೂ 3 (ಟೆಂಡರ್‌ಗಿಟ್ಟ ಮೊತ್ತ ಕನಿಷ್ಠ ರೂ.10.00 ಲಕ್ಷ ರೂಗಳೂ ಹಾಗೂ ಗರಿಷ್ಠ ರೂ.100.00 ಲಕ್ಷ ರೂಗಳು) ನಿಬಂಧನೆಗಳಿಗೊಳಪಟ್ಟಂತೆ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಕೆ.ಪಿ.ಪಿ.ಪಿ– ಫೋರ್ಟಲ್ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಐಟಂವಾರು ಟೆಂಡರ್‌ಗಳನ್ನು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ 3/2/1 ನೇ ದರ್ಜೆ ಮತ್ತು ಬೆಸ್ಕಾಂ/ಕೆಪಿಟಿಸಿಎಲ್ ಇಲಾಖೆಯಲ್ಲಿ ನೊಂದಾಯಿತ 1ನೇ ದರ್ಜೆ ಅರ್ಹ ಗುತ್ತಿಗೆದಾರರಿಂದ ಒಟ್ಟು 05 ಕಾಮಗಾರಿಗಳ ಟೆಂಡರಗಳನ್ನು ಆಹ್ವಾನಿಸಲಾಗಿದೆ.

ಸದರಿ ಟೆಂಡರ್ ಪ್ರಕ್ರಿಯೆಗಳನ್ನು ಈ ಕೆಳಗಿನಂತೆ ನಿಗದಿಪಡಿಸಿದೆ. ದಿನಾಂಕ: 14–07–2025 ರಿಂದ ಕೆಪಿಪಿ–ಫೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್ ಬಗ್ಗೆ ವಿಚಾರಿಸಲು/ಮಾಹಿತಿ ಪಡೆಯಲು ಕೊನೆಯ ದಿನಾಂಕ: 19–07–2025 ಸಾಯಂಕಾಲ 5.30 ರವರೆಗೆ ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 21–07–2025 ರ ಸಾಯಂಕಾಲ 4.00 ಗಂಟೆಯವರೆಗೆ ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ ದಿನಾಂಕ: 22–07–2025 ಸಾಯಂಕಾಲ 04–30 ಗಂಟೆಯ ನಂತರ (ಸಾಧ್ಯವಾದಲ್ಲಿ), ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ ದಿನಾಂಕ: 23–07–2025 ಸಾಯಂಕಾಲ 04–30 ಗಂಟೆಯ ನಂತರ(ಸಾಧ್ಯವಾದಲ್ಲಿ). ಸದರಿ ಕಾಮಗಾರಿಯಲ್ಲಿ ಟೆಂಡರ್ ಮೊತ್ತ ಅಥವಾ ಇ.ಎಂ.ಡಿ.ಯಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಕೆ.ಪಿ.ಪಿ–ಪ್ರೊಕ್ಯೂರ್‌ಮೆಂಟ್‌ನ ಬಿಡ್ ಡಾಕ್ಯೂಮೆಂಟ್‌ನಲ್ಲಿ ನಮೂದಿಸಿರುವ ಮೊತ್ತ ಅಂತಿಮವಾಗಿರುತ್ತವೆ. ಹೆಚ್ಚಿನ ಮಾಹಿತಿಯನ್ನು ಈ ಕಛೇರಿಯಿಂದ (08194–231811) ಹಾಗೂ ಕರ್ನಾಟಕ ಸರ್ಕಾರ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಸಹಾಯಕ ದೂರವಾಣಿ ಸಂಖ್ಯೆ:+91–8046010000, +91–8068948777 ರಿಂದ ಮಾಹಿತಿ ಪಡೆಯಬಹುದು.

DIPR/CTA/KSMCA/206/2025-26 ಸಹಿ/–ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ & ಅಂತರ್ಜಲ ಅಭಿವೃದ್ಧಿ ವಿಭಾಗ, ಚಿತ್ರದುರ್ಗ.

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರರವರ ಕಛೇರಿ

ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಮೈಸೂರು–570023.

ಸಂ./ಕಾಅ/ಪಂ.ರಾ.ಇಂ.ವಿ/ಮೈ/ಇ–ಪ್ರಕ್ಯೂರ್‌ಮೆಂಟ್/ಸ.ಇಂ/ಕಿ.ಇಂ.

ಅಲ್ಪಾವಧಿ ಇ–ಪ್ರಕ್ಯೂರ್‌ಮೆಂಟ್–ಟೆಂಡರ್ ಪ್ರಕಟಣೆ

ಈ ಕಛೇರಿಯಿಂದ ಉಲ್ಲೇಖ ರೀತ್ಯಾ ಅಧಿಸೂಚನೆಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆಯಲ್ಲಿ ತಿ.ನರಸೀಪುರ ತಾಲ್ಲೂಕಿನ 2023–24ನೇ ಸಾಲಿನ ಕಾಲೋನಿ ಅಭಿವೃದ್ಧಿ/ಪ್ರಗತಿ ಕಾಲೋನಿ ಯೋಜನೆಯ ಲೆಕ್ಕಶೀರ್ಷಿಕೆಯಡಿ ಅನುಮೋದನೆಯಾದ ಕಾಮಗಾರಿಗಳಿಗೆ KW-4 ರೀತ್ಯಾ ಟೆಂಡರ್ ಆಹ್ವಾನಿಸಲಾಗಿದ್ದು, ಸದರಿ ಟೆಂಡರ್ ಪ್ರಕಟಣೆಯಲ್ಲಿರುವ ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸಲು ಮತ್ತು ಭರ್ತಿ ಮಾಡಿದ ಫಾರಂಗಳನ್ನು ಆನ್ ಲೈನ್‌ನಲ್ಲಿ ಸಲ್ಲಿಸಲು ದಿ: 07.07.2025 ರಿಂದ ದಿ: 01.08.2025 ರವರೆಗೆ ಸಂಜೆ 16.00 ಘಂಟೆಯವರೆಗೆ ಹಾಗೂ ಟೆಂಡರ್ ಬಗ್ಗೆ ಸ್ಪಷ್ಟೀಕರಣ/ವಿಚಾರಿಸಿ, ಮಾಹಿತಿ ಪಡೆಯಲು ಅಂತಿಮ ದಿ: 30.07.2025ರ ಸಂಜೆ 16.00 ಘಂಟೆಯಾಗಿದ್ದು, ಟೆಂಡರ್ ತೆರೆಯುವ ದಿ: 02.08.2025ರ ಸಂಜೆ 17.00 ಘಂಟೆಯ ನಂತರ ಟೆಂಡರ್ ಫಾರಂ ಬೆಲೆ ಇ–ಪ್ರಕ್ಯೂರ್‌ಮೆಂಟ್‌ನಂತೆ ಸಲ್ಲಿಸಬೇಕು. ಸದರಿ ಕಾಮಗಾರಿಗಳ ವಿವರಗಳು ಈ ಕೆಳಕಂಡಂತೆ ಇರುತ್ತದೆ.

ಕ್ರ. ಸಂ.	ಕಾಮಗಾರಿ ಹೆಸರು/ಪ್ಯಾಕೇಜ್ ಸಂಖ್ಯೆ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಟೆಂಡರ್‌ಗಿಟ್ಟ ಇ–ಪ್ರೊಕ್ಯೂರ್‌ಮೆಂಟ್ ಮೊಬಲಗು (ರೂ.ಗಳಲ್ಲಿ)	ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ)
01.	ತಿ.ನರಸೀಪುರ ತಾಲ್ಲೂಕು ಸೋಸಲೆ, ಸೋಮನಾಥಪುರ ಮತ್ತು ತುರಗನೂರು ಜಿಲ್ಲಾ ಪಂಚಾಯಿತಿ ವ್ಯಾಪ್ತಿಯ ಆಯ್ದ ಗ್ರಾಮಗಳ ಪರಿಶಿಷ್ಟ ಜಾತಿ ಬೀದಿಯಲ್ಲಿ ಸಿಸಿ ಚರಂಡಿ ಮತ್ತು ರಸ್ತೆ ನಿರ್ಮಾಣ ಕಾಮಗಾರಿ (ಸೋಸಲೆ, ಸಿದ್ದನಹುಂಡಿ, ವ್ಯಾಸರಾಜಪುರ, ಚಿಕ್ಕಬೂಹಳ್ಳಿ, ಕೋಳಿಮಲ್ಲನಹುಂಡಿ, ಬೆನಕನಹಳ್ಳಿ, ಇಕ್ಕಲಗೆರೆ, ಸೋಮನಾಥಪುರ, ಮಲಿಯೂರು, ತುರುಗನೂರು ಯಾಚೇನಹಳ್ಳಿ ಮತ್ತು ಯಡಹಳ್ಳಿ) (Indent No.RDPR/2025-26/RD/WORK INDENT16290)	240.00	201.79	3,03,000.00
02.	ತಿ.ನರಸೀಪುರ ತಾಲ್ಲೂಕು ಮೂಗೂರು ಜಿಲ್ಲಾ ಪಂಚಾಯಿತಿ ವ್ಯಾಪ್ತಿಯ ಆಯ್ದ ಗ್ರಾಮಗಳ ಪರಿಶಿಷ್ಟ ಜಾತಿ ಬೀದಿಯಲ್ಲಿ ಸಿಸಿ ಚರಂಡಿ ಮತ್ತು ರಸ್ತೆ ನಿರ್ಮಾಣ ಕಾಮಗಾರಿ (ಮೂಗೂರು, ವಾಟಾಳು, ಹಾಕನೂರು, ಸುಜ್ಜಲೂರು, ಕೊತ್ತೇಗಾಲ, ಕುರುಬೂರು, ಕನ್ನಹಳ್ಳಿ, ಮಾಡ್ರಹಳ್ಳಿ, ಚೌಹಳ್ಳಿ, ನಿಲಸೋಗೆ, ಅಕ್ಕೂರು, ಮಾಡರನಪುರ, ಸಿ.ಬಿ.ಹುಂಡಿ ಮತ್ತು ಮರಡಿಪುರ) (Indent No.RDPR/2025-26/RD/WORK INDENT16289)	250.00	210.17	3,15,500.00
03.	ತಿ.ನರಸೀಪುರ ತಾಲ್ಲೂಕು, ತಲಕಾಡು ಮತ್ತು ಸೋಸಲೆ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯ ಆಯ್ದ ಗ್ರಾಮಗಳ ಪರಿಶಿಷ್ಟ ಜಾತಿ ಬೀದಿಯಲ್ಲಿ ಸಿಸಿ ಚರಂಡಿ ಮತ್ತು ರಸ್ತೆ ನಿರ್ಮಾಣ ಕಾಮಗಾರಿ (ಬಿ.ಶೆಟ್ಟಹಳ್ಳಿ, ಹೊಸಕುಕ್ಕೂರು, ವಿಜಾಪುರ, ಬಣವೆ, ಕಾಳಿಹುಂಡಿ, ಪರಿನಾಮಿಪುರ, ಮೇದಿನಿ, ಕಲಿಯೂರು, ಜಯಪುರ, ಟಿ.ದೊಡ್ಡಪುರ, ಚಿದರಹಳ್ಳಿ, ಬೊಮ್ಮನಹಳ್ಳಿ, ಕಿಂಪನಪುರ, ಎಸ್. ದೊಡ್ಡಪುರ ಮತ್ತು ರಾಮೇಗೌಡನಪುರ). (Indent No.RDPR/2025-26/RD/WORK INDENT16185)	240.00	201.80	3,03,000.00
04.	ತಿ.ನರಸೀಪುರ ತಾಲ್ಲೂಕು, ಗರ್ಗೇಶ್ವರಿ ಮತ್ತು ಸೋಸಲೆ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯ ಆಯ್ದ ಗ್ರಾಮಗಳ ಪರಿಶಿಷ್ಟ ಜಾತಿ ಬೀದಿಯಲ್ಲಿ ಸಿಸಿ ಚರಂಡಿ ಮತ್ತು ರಸ್ತೆ ನಿರ್ಮಾಣ ಕಾಮಗಾರಿ (ಎಸ್.ಮೇಗಡಹಳ್ಳಿ, ಮುಸುವಿನಕೊಪ್ಪಲು, ಕಯ್ಯಂಬಳ್ಳಿ, ಎಂ. ಕೆಬ್ಬೆಹುಂಡಿ, ದೊಡ್ಡಬಾಗಿಲು, ಕಾರುಗಹಳ್ಳಿ, ಹೊಸನರೀಪುರ, ಹೊರಳಹಳ್ಳಿ ಮತ್ತು ಕರುಹಟ್ಟಿ) (Indent No.RDPR/2025-26/RD/WORK INDENT16537)	215.00	180.74	2,71,500.00

ಗುತ್ತಿಗೆದಾರರ ಅರ್ಹತೆ: 2ನೇ ದರ್ಜೆ ಮತ್ತು ಮೇಲ್ಪಟ್ಟು

ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (e-procurement portal) ವೆಬ್ ಸೈಟ್‌ನಲ್ಲಿ ಪಡೆಯಬಹುದು https://kppp.karnataka.gov.in ಈ ಬಗ್ಗೆ ಇನ್ನೂ ಹೆಚ್ಚಿನ ವಿವರಗಳಿಗಾಗಿ ಕಾರ್ಯಪಾಲಕ ಅಭಿಯಂತರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಕುವೆಂಪುನಗರ, ಮೈಸೂರು (ಫೋನ್ ನಂ.0821–2560853) ರವರ ಕಛೇರಿಯ ವೇಳೆಯಲ್ಲಿ ಪಡೆಯಬಹುದು. ಮೊಬೈಲ್ ಸಂಖ್ಯೆ: 8971599285

ಸಹಿ/– ಕಾರ್ಯಪಾಲಕ ಅಭಿಯಂತರರು ಪಂ.ರಾ.ಇಂ. ವಿಭಾಗ, ಮೈಸೂರು

DIPR/DDMYS/614/KSMCA/357/2025-26

ಕರ್ನಾಟಕ ಸರ್ಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್‌ಷನ್ ಸೊಸೈಟಿ

ಆರೋಗ್ಯ ಸೌಧ, 4ನೇ ಮಹಡಿ, 1ನೇ ಅಡ್ಡರಸ್ತೆ, ಮಾಗಡಿ ರಸ್ತೆ, ಬೆಂಗಳೂರು–560 023
ದೂ ಸಂ: 080–29557021, e-mail : pdksaps@gmail.com

ಸಂಖ್ಯೆ: ಕೆಎಸ್‌ಎಪಿಎಸ್/ಟಿಐ/01/2019–20 (ಪಾರ್ಟ್ ಫೈಲ್) ದಿನಾಂಕ: 10.07.2025

ತಿದ್ದುಪಡಿ ಇಓಐ ಆಹ್ವಾನ ಪ್ರಕಟಣೆ

ರಾಷ್ಟ್ರೀಯ ಏಡ್ಸ್ ನಿಯಂತ್ರಣ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಎನ್‌ಜಿಒ/ಸಿಬಿಒಗಳಿಂದ ಎಕ್ಸ್‌ಪ್ರೆಷನ್ ಆಫ್ ಇಂಟೆರೆಸ್ಟ್ ಕರೆಯಲಾಗಿದ್ದು, ಈ ಸಂಬಂಧ ದಿನಾಂಕ 22/06/2025 ರಲ್ಲಿ ಪ್ರಕಟವಾಗಿರುವ ಪ್ರಕಟಣೆಯಲ್ಲಿ ಅವಶ್ಯಕ ಮಾಹಿತಿಗಾಗಿ Website: ksaps.karnataka.gov.in ಬದಲಾಗಿ kppp.karnataka.gov.in ಎಂದು ತಪ್ಪಾಗಿ ಮುದ್ರಿತವಾಗಿರುತ್ತದೆ. ಆದ್ದರಿಂದ ಎಕ್ಸ್‌ಪ್ರೆಷನ್ ಆಫ್ ಇಂಟೆರೆಸ್ಟ್ ಸಲ್ಲಿಸಲು ಅವಶ್ಯಕ ಪರಿಷ್ಕೃತ ಮಾಹಿತಿಗಾಗಿ Website: ksaps.karnataka.gov.in ಅನ್ನು ಸಂಪರ್ಕಿಸಲು ಕೋರಲಾಗಿದೆ. ಹಾಗೂ ಎಕ್ಸ್‌ಪ್ರೆಷನ್ ಆಫ್ ಇಂಟೆರೆಸ್ಟ್‌ನ್ನು ಸಲ್ಲಿಸಲು ದಿನಾಂಕ 31/07/2025, ಸಂಜೆ 5.00 ಗಂಟೆ ವರೆಗೆ ವಿಸ್ತರಿಸಲಾಗಿದೆ.

ಸಹಿ/– ಯೋಜನಾ ನಿರ್ದೇಶಕರು,
ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್‌ಷನ್ ಸೊಸೈಟಿ, ಬೆಂಗಳೂರು

DIPR/CP/1754/Zen/2025-26

ಕರ್ನಾಟಕ ಸರಕಾರ

ಕಾರ್ಯನಿರ್ವಾಹಕ ಇಂಜಿನಿಯರರ ಕಛೇರಿ, ಲೋಕೋಪಯೋಗಿ ಇಲಾಖೆ ಮಂಗಳೂರು ವಿಭಾಗ, ಮಂಗಳೂರು

ಸಂಖ್ಯೆ:ಲೋ.ಇ:ಮಂ.ವಿ:ಟಿ.ಎನ್.ಡಿ:(17ಇ):2025–26:ಜೆಇ–2 ದಿನಾಂಕ: 09.07.2025

ಟೆಂಡರ್ ಪ್ರಕಟಣೆ / ಅಲ್ಪಾವಧಿ ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)

ಲೆಕ್ಕಶೀರ್ಷಿಕೆ: 5054–03–101–0–02–132 ಪ್ರಮುಖ ಜಿಲ್ಲಾ ರಸ್ತೆ ಸೇತುವೆಗಳು ರಡಿ ಇಂಡೆಂಟ್ ನಂ: 22133 ಈ ಕಾಮಗಾರಿಗೆ ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರನ್ನು ಸಲ್ಲಿಸುವ ಕೊನೆಯ **ದಿನಾಂಕ: 11.08.2025 (ಅಪರಾಹ್ನ 4.00 ಗಂಟೆಯವರೆಗೆ ಮಾತ್ರ)** ನಿಗದಿಪಡಿಸಲಾಗಿರುತ್ತದೆ.

ಲೆಕ್ಕಶೀರ್ಷಿಕೆ: 5054–04–337–0–01–154 ಜಿಲ್ಲಾ ಮುಖ್ಯ ರಸ್ತೆ ಸುಧಾರಣೆಯಡಿ ಇಂಡೆಂಟ್ ನಂ: 21917 ಈ ಕಾಮಗಾರಿಗೆ ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರನ್ನು ಸಲ್ಲಿಸುವ ಕೊನೆಯ **ದಿನಾಂಕ: 31.07.2025 (ಅಪರಾಹ್ನ 4.00 ಗಂಟೆಯವರೆಗೆ ಮಾತ್ರ)** ನಿಗದಿಪಡಿಸಲಾಗಿರುತ್ತದೆ ಮತ್ತು **ಲೆಕ್ಕಶೀರ್ಷಿಕೆ: ವಿಪತ್ತು ಉಪಶಮನ ನಿಧಿಯಡಿ** ಇಂಡೆಂಟ್ ನಂ: 22420 ಈ ಕಾಮಗಾರಿಗೆ ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರನ್ನು ಸಲ್ಲಿಸುವ ಕೊನೆಯ **ದಿನಾಂಕ: 21.07.2025 (ಅಪರಾಹ್ನ 4.00 ಗಂಟೆಯವರೆಗೆ ಮಾತ್ರ)** ನಿಗದಿಪಡಿಸಲಾಗಿರುತ್ತದೆ. ಕೆ,ಡಬ್ಲ್ಯೂ–4 ಬಿಡ್ ಡಾಕ್ಯೂಮೆಂಟ್ ಪ್ರಕಾರ ಟೆಂಡರ್ ಕರೆಯಲಾಗಿದ್ದು, ಈ ಕಾಮಗಾರಿಗಳ ಕನಿಷ್ಟ ಅಂದಾಜು ಮೊತ್ತ ರೂ. 175.00 ಲಕ್ಷ ಮತ್ತು ಗರಿಷ್ಠ ಮೊತ್ತ ರೂ.495.00 ಲಕ್ಷ ಆಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಇಲಾಖೆಯ ವೆಬ್‌ಸೈಟ್ https://kppp.karnataka.gov.in ನ್ನು ಸಂಪರ್ಕಿಸಲು ಕೋರಲಾಗಿದೆ.

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್

DIPR/MNG/KSMCA/467/25-26 dt.11.07.2025

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರವರ ಕಚೇರಿ, ಎಸ್‌ಡಬ್ಲ್ಯುಡಿ, ಪಶ್ಚಿಮ ವಲಯ, ಬಿಬಿಎಂಪಿ, 9ನೇ ಮಹಡಿ, ಜಯನಗರ ಶಾಪಿಂಗ್ ಕಾಂಪ್ಲೆಕ್ಸ್, 4ನೇ ಬ್ಲಾಕ್ ಜಯನಗರ, ಬೆಂಗಳೂರು–560011.

ಸಂಖ್ಯೆ: ಕಾಪಾಅ/ಎಸ್‌ಡಬ್ಲ್ಯುಡಿ/ಪವ/ಟೆಂಡರ್/01/2025–26 ದಿನಾಂಕ: 11.07.2025

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ–2ನೇ ಕರೆ

ದ್ವಿ ಲಕೋಟೆ ಪದ್ಧತಿ (ಜಿಓಕೆ ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಎಸ್‌ಡಬ್ಲ್ಯುಡಿ–ಪಶ್ಚಿಮ ವಲಯ, ಬಿಬಿಎಂಪಿ, ಬೆಂಗಳೂರು ಇವರು ಆಯುಕ್ತರು, ಬಿಬಿಎಂಪಿ ಇವರ ಪರವಾಗಿ ಈ ಕೆಳಕಂಡ ಕಾಮಗಾರಿಗಾಗಿ ಬಿಬಿಎಂಪಿ ಅಥವಾ ಸಿಪಿಡಬ್ಲ್ಯುಡಿ/ಕೆಪಿಡಬ್ಲ್ಯುಡಿ/ರೈಲ್ವೇಸ್/ಎಂಇಎಸ್/ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೊಂದಾಯಿತಗೊಂಡ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರ್‌ಗಿಟ್ಟ ಅಂದಾಜು ಮೊತ್ತ (ಲಕ್ಷ ರೂ.ಗಳಲ್ಲಿ)	ಇಎಂಡಿ ಮೊತ್ತ (ಲಕ್ಷ ರೂ.ಗಳಲ್ಲಿ)
1	ಪೂರ್ವ, ಪಶ್ಚಿಮ, ದಕ್ಷಿಣ, ಯಲಹಂಕ, ಮಹದೇವಪುರ, ಬೊಮ್ಮನಹಳ್ಳಿ, ಆರ್.ಆರ್.ನಗರ ಮತ್ತು ದಾಸರಹಳ್ಳಿ ವಲಯದಲ್ಲಿರುವ ಎಸ್‌ಡಬ್ಲ್ಯುಡಿಗಳಿಗೆ ಘನ ತ್ಯಾಜ್ಯವನ್ನು ಎಸೆಯುವುದನ್ನು ತಡೆಗಟ್ಟಲು ಗುರುತಿಸಲ್ಪಟ್ಟ ಗಂಭೀರವಾದ ಸ್ಥಳಗಳಲ್ಲಿನ ಎಸ್‌ಡಬ್ಲ್ಯುಡಿ ಸುತ್ತಲೂ ಫೆನ್ಸಿಂಗ್ ಒದಗಿಸುವ ಕಾಮಗಾರಿ – 2ನೇ ಕರೆ.	385.00 (+18% GST)	5.80

ಕಾಮಗಾರಿ ಪೂರ್ಣಗೊಳಿಸುವ ಕಾಲಾವಧಿ : **9 ತಿಂಗಳು (ಮಳೆಗಾಲ ಸೇರಿದಂತೆ).**

ಟೆಂಡರ್ ದಿನಾಂಕಗಳು : (1) ಟೆಂಡರ್ ದಾಖಲೆಗಳನ್ನು ಕೆಪಿಪಿ ಪೋರ್ಟಲ್ https://kppp.karnataka.gov.in ನಿಂದ ದಿನಾಂಕ: **14.07.2025** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಪೂರ್ವ–ಬಿಡ್ ಸಭೆಯ ದಿನಾಂಕ: **18.07.2025ರಂದು ಸಂಜೆ 4.30 ಗಂಟೆಗೆ – ಮುಖ್ಯ ಅಭಿಯಂತರರು, ಎಸ್‌ಡಬ್ಲ್ಯುಡಿ, ಬಿಬಿಎಂಪಿ, 9ನೇ ಮಹಡಿ, ಶಾಪಿಂಗ್ ಕಾಂಪ್ಲೆಕ್ಸ್, ಜಯನಗರ 4ನೇ ಬ್ಲಾಕ್, ಬೆಂಗಳೂರು–11 ಇವರ ಕಚೇರಿಯಲ್ಲಿ.** (3) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: **29.07.2025ರ ಸಂಜೆ 4.00 ಗಂಟೆಯವರೆಗೆ.** (4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **30.07.2025ರಂದು ಸಂಜೆ 4.30 ಗಂಟೆಗೆ.** (5) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **ತಾಂತ್ರಿಕವಾಗಿ ಅರ್ಹಗೊಂಡ ಬಿಡ್‌ದಾರರಿಗೆ ದಿನಾಂಕ: 31.07.2025ರ ನಂತರ ತಿಳಿಸಲಾಗುವುದು.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ಕೆಪಿಪಿ ಪೋರ್ಟಲ್ https://kppp.karnataka.gov.in ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು
ಎಸ್‌ಡಬ್ಲ್ಯುಡಿ–ಪಶ್ಚಿಮ ವಲಯ, ಬಿಬಿಎಂಪಿ

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್, ವಿಜನಿನಿ ರವರ ಕಛೇರಿ, ಭದ್ರಾ ಮೇಲ್ದಂಡೆ ಯೋಜನೆ ವಿಭಾಗ–9, ಶಿರಾ ದೂರವಾಣಿ & ಫ್ಯಾಕ್ಸ್ ಸಂಖ್ಯೆ: 08135-200763 ಇ–ಮೇಲ್: ubpee.9@gmail.com

ಸಂಖ್ಯೆ:ವಿಜನಿನಿ/ಭಮೇಯೋ/ಕಾಇಂ/ವಿ–9/ಶಿರಾ/ಟೆಂಡರ್ ಪ್ರಕಟಣೆ–03/2025–26/391 ದಿನಾಂಕ: 09.07.2025

ಅಲ್ಪಾವಧಿ ಟೆಂಡರ್ ಪ್ರಕಟಣೆ

ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ನೋಂದಾಯಿತ ಕಛೇರಿ, ನಂ.148, ಎಂಬೆಸಿ ಸ್ಕ್ವೇರ್, ಇನ್‌ಫೆಂಟ್ರಿ ರೋಡ್, ಬೆಂಗಳೂರು–560001 ಇವರ ಪರವಾಗಿ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಇ–ಪ್ರಕ್ಯೂರಮೆಂಟ್ ಪೋರ್ಟಲ್‌ನಲ್ಲಿ, ಭದ್ರಾ ಮೇಲ್ದಂಡೆ ಯೋಜನಾ ವಿಭಾಗ ನಂ.9, ಶಿರಾ ಕಛೇರಿ ವ್ಯಾಪ್ತಿಯ 2024–25ನೇ ಸಾಲಿನ ಲೆಕ್ಕಶೀರ್ಷಿಕೆ–4701 ರಡಿಯಲ್ಲಿ ರೂ.211.60 ರಿಂದ 419.27ಲಕ್ಷಗಳ 13 ಕಾಮಗಾರಿಗಳನ್ನು (ಇಂಡೆಂಟ್ ನಂ. 251, 252, 253, 254, 255, 256, 257, 258, 259, 260, 261, 262, 263) KW-4 ನಲ್ಲಿ ದ್ವಿ ಲಕೋಟೆ ಪದ್ಧತಿ ಮೂಲಕ ಅರ್ಹ ಗುತ್ತಿಗೆದಾರರಿಂದ ಶೇಕಡಾವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಇ–ಪ್ರೊಕ್ಯೂರ್‌ಮೆಂಟ್‌ನ www.eproc.Karnataka.gov.in/eportal/index.seam ವೆಬ್‌ಸೈಟ್‌ನಿಂದ ಖಾಲಿ ಟೆಂಡರ್ ದಾಖಲೆಗಳನ್ನು ದಿನಾಂಕ:10–07–2025 ರಿಂದ 24–07–2025ರ ಸಂಜೆ 5.00 ಗಂಟೆಯ ವರೆಗೆ ಡೌನ್‌ಲೋಡ್ ಮಾಡಿಕೊಂಡು ಟೆಂಡರ್‌ನ್ನು ಸಲ್ಲಿಸಬಹುದು. ನಿಗಧಿ ಪಡಿಸಿದ ಇ.ಎಂ.ಡಿ ಮೊತ್ತ / ಟೆಂಡರ್ ನಿಯಮ/ ಟೆಂಡರ್ ಪ್ರೊಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳಿಗೆ www.eproc.Karnataka.gov.in/eportal/index.seam ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿರುವವರನ್ನು ಕಛೇರಿ ಸಮಯದಲ್ಲಿ ದಿನಾಂಕ: 10– 07–2025 ರಿಂದ 24–07–2025ರ ಕಛೇರಿಯ ಅವಧಿಯಲ್ಲಿ ಸಂಪರ್ಕಿಸ ಬಹುದು. ಸ್ವೀಕೃತ ಟೆಂಡರ್ ಬಿಡ್‌ಗಳನ್ನು ದಿನಾಂಕ: 25–07–2025ರ ಸಂಜೆ 5.30 ಗಂಟೆಯ ನಂತರ ಕಾರ್ಯಪಾಲಕ ಇಂಜಿನಿಯರ್, ವಿಜನಿನಿ, ಭದ್ರಾ ಮೇಲ್ದಂಡೆ ಯೋಜನಾ ವಿಭಾಗ ನಂ.9, ಶಿರಾರವರ ಕಛೇರಿಯಲ್ಲಿ ತೆರೆಯಲಾಗುವುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೇ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಅರ್ಹ ಗುತ್ತಿಗೆದಾರರು (www.eproc.Karnataka.gov.in/eportal/index.seam) ಅಂತರ್‌ಜಾಲದಿಂದ ಎಲ್ಲಾ ವಿವರಗಳನ್ನು ಪಡೆದು ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ವಿಜನಿನಿ, ಭ.ಮೇ.ಯೋ. ವಿಭಾಗ ನಂ.09, ಶಿರಾ. ತುಮಕೂರು ಜಿಲ್ಲೆ

DIPR/TUM/199/KSMCA/2025-26

ಪೊಲೀಸ್ ಅಧೀಕ್ಷಕರು, ವೈರಲೆಸ್‌ರವರ ಕಛೇರಿ

ನಂ.1, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.
ದೂರವಾಣಿ : 080–22942324, ಇ–ಮೇಲ್: spwireless@ksp.gov.in

ಟೆಂಡರ್ ಸಂಖ್ಯೆ: KSP/2025-26/IND0317 ದಿನಾಂಕ: 11.07.2025

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಪೊಲೀಸ್ ಅಧೀಕ್ಷಕರು, ವೈರ್‌ಲೆಸ್, ಬೆಂಗಳೂರು ರವರಿಂದ ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಗೆ ಅವಶ್ಯವಿರುವ **Water Mist Compressed Air Foam Fire Extinguisher (High Pressure/Backpack Type)** ಸರಬರಾಜಿಗೆ ಆನ್‌ಲೈನ್ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಅಂದಾಜು ಮೌಲ್ಯ **ರೂ. 70.20 ಲಕ್ಷಗಳು,** ಟೆಂಡರ್ ಪೂರ್ವಭಾವಿ ಸಭೆಯ **ದಿನಾಂಕ: 23.07.2025 ಸಮಯ ಸಂಜೆ 11.30 ಗಂಟೆ** ಹಾಗೂ ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 11.08.2025 ಸಮಯ ಸಂಜೆ 17.00** ಗಂಟೆಗಳು, ಇತರೆ ಮಾಹಿತಿಯನ್ನು **https://kppp.karnataka.gov.in** ರಲ್ಲಿ ಪಡೆಯಬಹುದು ಹಾಗೂ ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

ಸಹಿ/– ಪೊಲೀಸ್ ಅಧೀಕ್ಷಕರು,
ವೈರ್‌ಲೆಸ್, ಬೆಂಗಳೂರು

ವಾಸಾಸಂಇ/ವಾ.ಪ್ರ./1762/2025–26

ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ

ದೊಡ್ಡಕೆರೆ ಮೈದಾನ, ಇಂದಿರಾನಗರ, ಮೈಸೂರು–570010.
ದೂ: 0821–2523626, ಇ–ಮೇಲ್: exhibitionauthority@gmail.com

ಸಂಖ್ಯೆ: ಕವಪ್ರಾ/ಮುಕಾನಿ/2025–26 ದಿನಾಂಕ: 11.07.2025

ಪ್ರಕಟಣೆ

ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣವನ್ನು ಅಭಿವೃದ್ಧಿಗೊಳಿಸುವ ಕಾಮಗಾರಿಗೆ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ಸದರಿ ಟೆಂಡರ್‌ನ ವಿವರಗಳು ಈ ಕೆಳಕಂಡಂತ್ತಿದೆ.

ಕ್ರ. ಸಂ.	ಕಾಮಗಾರಿ ಹೆಸರು	ಟೆಂಡರ್‌ನ ಮೊತ್ತ	ಟೆಂಡರ್ ಸಲ್ಲಿಸುವ ಕೊನೆ ದಿನಾಂಕ
1	Project Management Consultancy services for development of A-Block Area, Fountain areas and drain areas inside Karnataka Exhibition Authority Premises, Mysuru.	ರೂ. 38,50,000.00	18.07.2025ರ ಸಂಜೆ 4.00ಕ್ಕೆ

ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳು ಬೇಕಾಗಿದ್ದಲ್ಲಿ ಕಚೇರಿ ವೇಳೆಯಲ್ಲಿ ಕಚೇರಿಯ ಸಹಾಯಕ ಕಾರ್ಯಪಾಲಕ ಅಭಿಯಂತರರು (ಸಿವಿಲ್) ರವರನ್ನು ಸಂಪರ್ಕಿಸಿ ಹಾಗೂ ವೆಬ್‌ಸೈಟ್ https://kppp.karnataka.gov.in ನಲ್ಲಿ ಮಾಹಿತಿ ಪಡೆಯಬಹುದು ಎಂದು ಈ ಮೂಲಕ ಕೋರಿದೆ. **ಮೊಬೈಲ್ ಸಂಖ್ಯೆ** : 9900568915. 7892920878. **ಇ–ಮೇಲ್ ಸಂಖ್ಯೆ:** exhibitionauthority@gmail.com

ಸಹಿ/–
ಸಹಾಯಕ ಕಾರ್ಯಪಾಲಕ ಅಭಿಯಂತರರು
ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರ

DIPR/MYS/627/SA/2025-26

ಕಾವೇರಿ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಹೇಮಾವತಿ ನಾಲಾ ವಿಭಾಗ, ಎಡಿಯೂರು–572 142
ಫೋನ್ ನಂ: 7338590199
ಇ–ಮೇಲ್: eeyediyur1@gmail.com

ಅಲ್ಪಾವಧಿ ಪ್ರಕಟಣೆ ಸಂಖ್ಯೆ: 03/2025–26
ದಿನಾಂಕ : 08.07.2025

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಮೈಸೂರು/ಬೆಂಗಳೂರು ಇವರ ಪರವಾಗಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಒಟ್ಟು 01 ಕಾಮಗಾರಿಗಾಗಿ ಐಟಂವಾರು ದರದ ಟೆಂಡರ್‌ಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಆಹ್ವಾನಿಸಲಾಗಿದೆ.

ಟೆಂಡರ್‌ಗಿಟ್ಟ ಮೊತ್ತ ರೂ. 253.46 ಲಕ್ಷ ರೂಪಾಯಿಗಳು

ಕೆಲಸ ಪೂರ್ಣಗೊಳಿಸಲು ನಿಗಧಿಪಡಿಸಿರುವ ಅವಧಿ 05 ತಿಂಗಳು ಇ.ಎಂ.ಡಿ ಹಣ ಹಾಗೂ ಪ್ರೊಸಸಿಂಗ್ ಶುಲ್ಕವನ್ನು ಇ–ಪೇಮೆಂಟ್ ಮೂಲಕ ಸಂದಾಯ ಮಾಡುವುದು, ಟೆಂಡರ್ ಕ್ವಾರಿಸ್/ಕ್ಲ್ಯಾರಿಫಿಕೇಷನ್ ಕೊನೆಯ ದಿನಾಂಕ: 14.07.2025 ಮಧ್ಯಾಹ್ನ 5.00 ಗಂಟೆಯವರೆಗೆ ಆನ್‌ಲೈನ್ ಮೂಲಕ ಭರ್ತಿ ಮಾಡಿದ ಟೆಂಡರ್‌ಗಳನ್ನು ಇ.ಎಂ.ಡಿಯೊಂದಿಗೆ ಸಲ್ಲಿಸುವ ಕೊನೆಯ ದಿನಾಂಕ: 21.07.2025 ಸಂಜೆ 5:00 ಗಂಟೆಯವರೆಗೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 22.07.2025 ಸಂಜೆ 5:00 ಗಂಟೆಗೆ ಹೆಚ್ಚಿನ ವಿವರಗಳನ್ನು ಈ ಕಛೇರಿಯಲ್ಲಿ ಹಾಗೂ ಅಂತರ್ಜಾಲದ ಮೂಲಕ ವೆಬ್‌ಸೈಟ್ ವಿಳಾಸ www.kppp.karnataka.gov.in ರಲ್ಲಿ ಪಡೆಯಬಹುದು.

ಸಹಿ/–ಕಾರ್ಯಪಾಲಕ ಇಂಜಿನಿಯರ್,
ಹೇಮಾವತಿ ನಾಲಾ ವಿಭಾಗ, ಕಾವೇರಿ ನೀರಾವರಿ ನಿಗಮ ನಿಯಮಿತ,
ಎಡೆಯೂರು

ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/284/2025–26

GOVERNMENT OF INDIA

PRINCIPAL CHIEF COMMISSIONER OF INCOME TAX KARNATAKA & GOA REGION, BENGALURU

Central Revenue Building, No.1, Queen's Road, Bengaluru-560 001

F.No.63A/PCIT(J)/BLR/2025-26 Date: 12-07-2025

NOTICE FOR EMPANELMENT OF ADVOCATES

1. The Pr. Chief Commissioner of Income Tax, Karnataka & Goa, **proposes to engage the services of Senior and Junior Standing Counsels to represent the Department before the Hon'ble High Court of Karnataka.**
2. The terms of engagement are governed by the Instruction No.7/2016 dated 07/09/2016 of the Central Board of Direct Taxes (CBDT). The Advocates willing to be empanelled should send their application in the Prescribed Proforma A-1/A-2. The above instruction, proforma and a checklist for submitting the application can be downloaded from www.incometaxkarnatakagoa.gov.in or can be collected from the address given below. The eligibility conditions for engagement as Standing Counsel is as per para 2 of Annexure-I to the said instruction. The applicants are requested to follow the checklist before submission of their application. If any of the documents required to be filed is not enclosed with the application, such application will be treated as defective and liable to be rejected.
3. The present requirement of Standing Counsels at Hon'ble High Court of Karnataka is as follows: (i) 1 Senior Standing Counsel (ii) 4 Junior Standing Counsels (iii) 1 Senior and 2 Junior Standing Counsels for extended panel.
4. The number of Standing Counsels proposed to be engaged can be increased depending upon further requirement.
5. The applicants should furnish their email-ID, Phone/Mobile numbers for contact and further communication.
6. **The applicants may contact the following Officers for any clarification in this matter.**

Smt. Bandana Deori Joint Commissioner of Income Tax(Judicial), Room No. 112, 1st Floor, C. R. Building Bengaluru. Phone No. 080-22860788	**Sri. S.R.Arun Kumar** Income Tax Officer (HQ) (Judicial), Room No.120, 1st Floor, C. R. Building Bengaluru. Phone No. 080-22868904

The application in duplicate in a sealed envelope should reach the following address on or before 06-08-2025 by 6.00 p.m. The application should be in hard copy only. The application filed through any other mode like email, fax, etc., will not be considered as valid application.

The Pr. Commissioner of Income Tax(Judicial),
Central Revenue Building, 1st Floor,
Queen's Road, Bengaluru - 560001, Karnataka
Email: bangalore.pcit.judicial@incometax.gov.in

ವರ್ಗಾವಣೆ ಬೇಡಿಕೆ ತರಬೇಡಿ: ಕಮಿಷನರ್

ಇಲಾಖೆ ಕುರಿತು ನಕಾರಾತ್ಮಕ ಮಾತು ಸಲ್ಲ: ಸೀಮಂತ್ ಕುಮಾರ್ ಸಿಂಗ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೊಲೀಸ್ ಇಲಾಖೆಗೆ ಕೆಟ್ಟ ಹೆಸರು ತರುವಂತಹ ಕೆಲಸ ಮಾಡಬಾರದು ಹಾಗೂ ಇಲಾಖೆ ಕುರಿತು ನಕಾರಾತ್ಮಕವಾಗಿ ಮಾತನಾಡಬಾರದು ಎಂದು ನಗರ ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್ ಸಿಂಗ್ ಹೇಳಿದ್ದಾರೆ.

ನಗರದ ಆಡುಗೋಡಿಯ ಸಿಎಆರ್ ಕವಾಯತು ಮೈದಾನದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಮಾಸಿಕ ಕವಾಯತಿನಲ್ಲಿ ವಂದನೆ ಸ್ವೀಕರಿಸಿ ಮಾತನಾಡಿದ ಅವರು, 'ಅಶಿಸ್ತು ತೋರಿದವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು. ಇಲಾಖೆಯಲ್ಲಿ ಕೆಲಸ ಮಾಡುವಾಗ ಇಲಾಖೆ ಬಗ್ಗೆಯೇ ಚಿಂತೆ ಮಾಡಬೇಕು. ಬೇರೆ ಇಲಾಖೆಗೆ ಸಂಬಂಧಿಸಿದ ಕೆಲಸಗಳಲ್ಲಿ ಹಸ್ತಕ್ಷೇಪ ಮಾಡಿದರೆ, ಅಂತಹ ಪೊಲೀಸ್ ಸಿಬ್ಬಂದಿಗೆ ಕುತ್ತು ಎದುರಾಗಲಿದೆ' ಎಂದು ಎಚ್ಚರಿಕೆ ನೀಡಿದರು.

'ಸಮಸ್ಯೆಗಳಿದ್ದರೆ ಹಿರಿಯ ಅಧಿಕಾರಿಗಳು ಹಾಗೂ ನನ್ನ ಗಮನಕ್ಕೆ ತರಬೇಕು. ವರ್ಗಾವಣೆ ಬೇಡಿಕೆಯನ್ನು ಅಧಿಕಾರಿಗಳ ಮುಂದೆ ತರಬೇಡಿ. ಬೆಂಗಳೂರಿನಲ್ಲಿ ಅತ್ಯುತ್ತಮ ಮೂಲ-ಸೌಕರ್ಯಗಳಿವೆ. ಒಂದು ಠಾಣೆಯಿಂದ ಮತ್ತೊಂದು ಠಾಣೆಗೆ ವರ್ಗಾವಣೆಯಾದರೆ ಅಲ್ಲಿ ದಕ್ಷತೆಯಿಂದ ಕೆಲಸ ಮಾಡಿ ವೃತ್ತಿ ಅನುಭವವನ್ನು ಮತ್ತಷ್ಟು ಶ್ರೀಮಂತಗೊಳಿಸಿಕೊಳ್ಳಬೇಕು. ಉತ್ತರ ಕರ್ನಾಟಕದಂತಹ ಊರುಗಳಿಂದ ಬಂದಿರುವ ಹಲವಾರು ಪೊಲೀಸರು ನಗರದಲ್ಲಿ ಕೆಲಸ ಮಾಡುತ್ತಿದ್ದಾರೆ. ಪೊಲೀಸ್ ಇಲಾಖೆಗೆ ಸೇರಿದ ನಂತರ ತರಬೇತಿ ಸಮಯದಲ್ಲಿ ನೀಡಲಾಗಿರುವ ಸಲಹೆಗಳನ್ನು ಪಾಲಿಸಿ' ಎಂದು ತಿಳಿಸಿದರು.

ಪೊಲೀಸರಿಗೆ ದಕ್ಷತೆ, ಪ್ರಾಮಾಣಿಕತೆ, ನಿಷ್ಠೆಯ ಗುಣಗಳೇ ಶೋಭೆ. ಸಮಗ್ರತೆ, ರಕ್ಷಣೆ, ಧೈರ್ಯ, ಸಂವೇದನೆ, ನ್ಯಾಯ- ನೀತಿಯ ಪ್ರತೀಕದಂತೆ ಅವರ ವ್ಯಕ್ತಿತ್ವವಿರಬೇಕು. ಖಾಕಿ ಧರಿಸಿದಾಗ ರೂಢಿಸಿಕೊಳ್ಳುವ ಶಿಸ್ತನ್ನು ನಿವೃತ್ತಿಯಾಗುವವರೆಗೂ ಕಾಪಾಡಿಕೊಳ್ಳಬೇಕು. ಜೊತೆಗೆ ಆರೋಗ್ಯದ ಕಡೆಗೂ ಗಮನಹರಿಸಬೇಕು ಮತ್ತು ಕುಟುಂಬಕ್ಕೂ ಸಮಯ ನೀಡಬೇಕು ಎಂದು ಸಲಹೆ ನೀಡಿದರು.

ಪೊಲೀಸ್ ಇಲಾಖೆಗೆ ಸರ್ಕಾರ ಹಲವು ಸೌಲಭ್ಯಗಳನ್ನು ನೀಡಿದೆ, ಮುಂದೆಯೂ ನೀಡಲಿದೆ. ಆಡುಗೋಡಿಯ ಮೈದಾನವನ್ನು ಕೆಎಸ್‌ಆರ್‌ಪಿ ಮೈದಾನದಂತೆ ಉತ್ತಮವಾಗಿ ಇಟ್ಟುಕೊಳ್ಳಬೇಕು ಎಂದು ಸೂಚಿಸಿದರು.



ನಗರದ ಸಿಎಆರ್ ಮೈದಾನದಲ್ಲಿ ನಡೆದ ಮಾಸಿಕ ಕವಾಯತಿನಲ್ಲಿ ನಗರ ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್ ಸಿಂಗ್ ಅವರು ಗೌರವ ವಂದನೆ ಸ್ವೀಕರಿಸಿದರು

ಸಿದ್ದಿಕಿ ವಶಕ್ಕೆ ಪಡೆದು ವಿಚಾರಣೆ

2013ರಲ್ಲಿ ಬಿಜೆಪಿ ರಾಜ್ಯ ಕಚೇರಿ ಬಳಿ ಬಾಂಬ್ ಸ್ಫೋಟಿಸಿದ ಪ್ರಕರಣದ ಪ್ರಮುಖ ಆರೋಪಿ ಅಬೂಬಕ್ಕರ್ ಸಿದ್ದಿಕಿ ಅನ್ನು ಬಂಧಿಸಿರುವ ತಮಿಳುನಾಡು ಪೊಲೀಸರನ್ನು ರಾಜ್ಯ ಭಯೋತ್ಪಾದನ ನಿಗ್ರಹದಳ (ಎಟಿಎಸ್) ಅಧಿಕಾರಿಗಳು ಭೇಟಿಯಾಗಿ ಮಾಹಿತಿ ಕಲೆಹಾಕಿದ್ದಾರೆ. ತಮಿಳುನಾಡು ಪೊಲೀಸರೊಂದಿಗೆ ಸಂಪರ್ಕದಲ್ಲಿದ್ದು, ಅವರ ವಿಚಾರಣೆಯ ಬಳಿಕ ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುವುದು ಎಂದು ಸೀಮಂತ್ ಕುಮಾರ್ ಸಿಂಗ್ ತಿಳಿಸಿದ್ದಾರೆ.

ತಮಿಳುನಾಡು ಮೂಲದ ಅಲ್ ಉಮ್ಮಾ ಸಂಘಟನೆಯ ಸದಸ್ಯನಾಗಿ ಅಬೂಬಕ್ಕರ್ ಸಿದ್ದಿಕಿ ಗುರುತಿಸಿಕೊಂಡಿದ್ದ. 1998ರಲ್ಲಿ ಕೊಯಮತ್ತೂರು ಬಳಿ ಬಾಂಬ್ ಸ್ಫೋಟಿಸಿ ಬಿಜೆಪಿ ನಾಯಕ ಲಾಲ್ ಕೃಷ್ಣ ಅಡ್ವಾಣಿ ಅವರ ಹತ್ಯೆಗೆ ಯತ್ನಿಸಿದ್ದ ಬಳಿಕ ಅಲ್ ಉಮ್ಮಾ ಸಂಘಟನೆಯನ್ನು ನಿಷೇಧಿಸಲಾಗಿತ್ತು. 2013ರಲ್ಲಿ ಬೆಂಗಳೂರಿನ ಬಿಜೆಪಿ ಕಚೇರಿ ಬಳಿ ಬಾಂಬ್ ಸ್ಫೋಟವಾದ ಪ್ರಕರಣದ ಹಿಂದೆ ಅಬೂಬಕ್ಕರ್ ಸಿದ್ದಿಕಿಯ ಕೈವಾಡವಿರುವುದನ್ನು ಸಿಸಿಬಿ ಪೊಲೀಸರು ಪತ್ತೆಹಚ್ಚಿದ್ದರು. ಆಂಧ್ರಪ್ರದೇಶದ ಅನ್ನಮಯ್ಯ ಜಿಲ್ಲೆಯಲ್ಲಿದ್ದ ಆರೋಪಿಯನ್ನು ತಮಿಳುನಾಡು ಪೊಲೀಸರು ಬಂಧಿಸಿದ್ದು, ಶೀಘ್ರದಲ್ಲೇ ಆತನನ್ನು ವಶಕ್ಕೆ ಪಡೆಯಲು ನ್ಯಾಯಾಲಯದ ಮೊರೆ ಹೋಗಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

2013ರ ಏಪ್ರಿಲ್ 17ರಂದು ಮಲ್ಲೇಶ್ವರದಲ್ಲಿರುವ ಬಿಜೆಪಿ ರಾಜ್ಯ ಘಟಕದ ಕಚೇರಿ ಬಳಿ ಹಳೆಯ ಬೈಕ್‌ನಲ್ಲಿ ಬಾಂಬ್ ಇರಿಸಿ ಸ್ಫೋಟಿಸಲಾಗಿತ್ತು. ಸ್ಫೋಟದಿಂದ ಪೊಲೀಸ್ ಸಿಬ್ಬಂದಿ, ಕಾಲೇಜು ವಿದ್ಯಾರ್ಥಿನಿ ಸಹಿತ 16 ಜನ ಗಾಯಗೊಂಡಿದ್ದರು. ಪ್ರಕರಣದ ತನಿಖೆ ನಡೆಸಿದ್ದ ಬೆಂಗಳೂರು ಸಿಸಿಬಿ ಪೊಲೀಸರು ಅಬೂಬಕ್ಕರ್ ಸಿದ್ದಿಕಿ ತಲೆಮರೆಸಿಕೊಂಡಿರುವುದಾಗಿ ಆರೋಪಪಟ್ಟಿ ಸಲ್ಲಿಸಿದ್ದರು.

ಸಂಕ್ಷಿಪ್ತ ಸುದ್ದಿ

ಸಾರ್ವಜನಿಕರ ಅನುಕೂಲಕ್ಕೆ 'ಸೇಫ್ ಕನೆಕ್ಟ್'

ಬೆಂಗಳೂರು: ಸಾರ್ವಜನಿಕರ ಅನುಕೂಲಕ್ಕಾಗಿ ನಗರ ಪೊಲೀಸರು, ಕರ್ನಾಟಕ ಸ್ಟೇಟ್ ಪೊಲೀಸ್ (ಕೆಎಸ್‌ಪಿ) ಸೇಫ್ ಕನೆಕ್ಟ್ ಮೊಬೈಲ್ ಆ್ಯಪ್ ಬಿಡುಗಡೆ ಮಾಡಿದ್ದಾರೆ. ಇದರ ಮೂಲಕ ತುರ್ತು ಸಂದರ್ಭದಲ್ಲಿ ಸಾರ್ವಜನಿಕರು ಆಡಿಯೊ ಮತ್ತು ವಿಡಿಯೊ ಕರೆಗಳನ್ನು ಮಾಡಬಹುದಾಗಿದೆ.

ಸೇಫ್ ಕನೆಕ್ಟ್ ಒಂದು ದ್ವಿಮುಖ ಆಡಿಯೊ, ವಿಡಿಯೊ ಕರೆಗಳನ್ನು ಒದಗಿಸುವ ಆ್ಯಪ್ ಆಗಿದೆ. ಈ ಅತ್ಯಾಧುನಿಕ ವ್ಯವಸ್ಥೆ ಯಾವುದೇ ಘಟನೆಯ ನೈಜ-ಸಮಯದ ವಿಡಿಯೊ ಕರೆಗಳು ಮತ್ತು ಲೈವ್ ಲೊಕೇಶನ್ ಟ್ರ್ಯಾಕಿಂಗ್ ಮಾಹಿತಿಯನ್ನು ಸಿಟಿ ಕಮಾಂಡ್ ಸೆಂಟರ್‌ಗೆ ವರದಿ ಮಾಡಲು ನೆರವಾಗುತ್ತದೆ.

ಸಹಾಯವು ಯಾವಾಗಲೂ ಒಂದು ಕ್ಲಿಕ್ ದೂರದಲ್ಲಿದೆ ಎಂದು ಖಚಿತಪಡಿಸುತ್ತದೆ. ತಕ್ಷಣದ ಮತ್ತು ಪರಿಣಾಮಕಾರಿ ಸಂವಹನವನ್ನು ನಾಗರಿಕರ ಕೈಯಲ್ಲಿ ಇರಿಸಿ, ಸುರಕ್ಷಿತ ವಾತಾವರಣ ನಿರ್ಮಾಣದತ್ತ ಮಹತ್ವದ ಹೆಜ್ಜೆ ಎಂದು ಪೊಲೀಸ್ ಇಲಾಖೆ ತಿಳಿಸಿದೆ.

ಈ ಆ್ಯಪ್‌ನ ಮುಖ್ಯ ಉದ್ದೇಶ ಮಹಿಳೆಯರು ಹಾಗೂ ಸಾರ್ವಜನಿಕರು ತುರ್ತು ಸಂದರ್ಭಗಳಲ್ಲಿ ತಕ್ಷಣ ಸಹಾಯ ಪಡೆಯಲು ಮತ್ತು ಪೊಲೀಸ್ ಠಾಣೆಗಳೊಂದಿಗೆ ಸುಲಭವಾಗಿ ಸಂಪರ್ಕ ಸಾಧಿಸಲು ಸಹಾಯ ಮಾಡುವುದಾಗಿದೆ.

ಸೇಫ್ ಕನೆಕ್ಟ್‌ನಿಂದಾಗಿ ತುರ್ತು ಪರಿಸ್ಥಿತಿಯಲ್ಲಿ ಒಂದು ಕ್ಲಿಕ್‌ನೊಂದಿಗೆ ಪೊಲೀಸ್ ಸಹಾಯ ಪಡೆಯಬಹುದು. ಇದು ಗೂಗಲ್ ಪ್ಲೇಸ್ಟೋರ್ ಹಾಗೂ ಆಪಲ್ ಸ್ಟೋರ್‌ನಲ್ಲಿ ಲಭ್ಯವಿದೆ. ನಾಗರಿಕರು ಸುಲಭವಾಗಿ ತಮ್ಮ ಮೊಬೈಲ್‌ಗಳಲ್ಲಿ ಡೌನ್‌ಲೋಡ್ ಮಾಡಬಹುದು ಎಂದು ಮಾಹಿತಿ ನೀಡಿದೆ.

ಪ್ರತ್ಯೇಕ ತನಿಖೆ ಎಸ್‌ಪಿ

ಪ್ರಜಾವಾಣಿ ವಾರ್ತೆ

ಮಂಗಳೂರು: 'ಧರ್ಮಸ್ಥಳ ಗ್ರಾಮದಲ್ಲಿ ಹಲವಾರು ಅಪರಾಧ ಕೃತ್ಯಗಳು ನಡೆದಿವೆ' ಎಂದು ವಕೀಲರ ಮೂಲಕ ಪೊಲೀಸರಿಗೆ ದೂರು ನೀಡಿದ್ದ ವ್ಯಕ್ತಿ, ಬೆಳ್ತಂಗಡಿ ಪ್ರಧಾನ ಸಿವಿಲ್ ನ್ಯಾಯಾಧೀಶ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ ಸಂದೇಶ್ ಕೆ. ಅವರ ಮುಂದೆ ಶುಕ್ರವಾರ ಹಾಜರಾಗಿದ್ದಾರೆ.

'ಪ್ರಕರಣಕ್ಕೆ ಸಂಬಂಧಿಸಿ ದೂರುದಾರರ ರಕ್ಷಣೆಯ ಉದ್ದೇಶದಿಂದ ಅವರ ಗುರುತು ಬಹಿರಂಗಪಡಿಸದಿರಲು ನಿರ್ಧರಿಸಲಾಗಿದೆ. ಈ ಪ್ರಕರಣಕ್ಕೆ ಸಂಬಂಧಿಸಿ ಬಂಟ್ವಾಳ ಡಿವೈಎಸ್‌ಪಿ ನೇತೃತ್ವದಲ್ಲಿ ಪ್ರತ್ಯೇಕ ತನಿಖೆ ಆರಂಭಿಸಲಾಗಿದೆ' ಎಂದು ಜಿಲ್ಲಾ ಎಸ್‌ಪಿ ತಿಳಿಸಿದ್ದಾರೆ.

'ದೂರುದಾರರು ಸ್ವತಃ ಹೊರ ತೆಗೆದಿರುವುದಾಗಿ ತಿಳಿಸಿರುವ ಅಸ್ಥಿ ಪಂಜರದ ಅವಶೇಷ ಹಾಜರುಪಡಿಸಿದ್ದಾರೆ. ಅವುಗಳನ್ನು ಸಾಕ್ಷಿ ದೂರುದಾರರ ಪರ ವಕೀಲರು, ಪಂಚರ ಸಮ್ಮುಖದಲ್ಲಿ ವಶಕ್ಕೆಪಡೆಯಲಾಗಿದ್ದು, ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗುವುದು' ಎಂದು ಮಾಹಿತಿ ನೀಡಿದ್ದಾರೆ.

ಪಿಆರ್‌ಆರ್ ಭೂ ಪರಿಹಾರ ಕಗ್ಗಂಟು

ಬ್ರಿಟಿಷರ ಕಾಲದ ಕಾಯ್ದೆ ಅನ್ವಯ ಪರಿಹಾರಕ್ಕೆ ರೈತರ ವಿರೋಧ

• ಕೆ.ಎಸ್.ಸುನಿಲ್

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಉದ್ದೇಶಿತ ಪೆರಿಫೆರಲ್ ವರ್ತುಲ ರಸ್ತೆ–ಪಿಆರ್‌ಆರ್ (ಬೆಂಗಳೂರು ಬ್ಯುಸಿನೆಸ್ ಕಾರಿಡಾರ್) ಯೋಜನೆಗೆ ಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಿರುವ ಜಮೀನುಗಳಿಗೆ ಪ್ರಾಧಿಕಾರ ನಿಗದಿಪಡಿಸಿರುವ ಬ್ರಿಟಿಷರ ಕಾಲದ ಭೂ ಪರಿಹಾರ ಮಾದರಿಗೆ ರೈತರು ವಿರೋಧ ವ್ಯಕ್ತಪಡಿಸಿ ರುವ ಕಾರಣ ಭೂ ಪರಿಹಾರ ನಿಗದಿ ಮತ್ತೆ ಕಗ್ಗಂಟಾಗಿದೆ.

ಯೋಜನೆ ಅನುಷ್ಠಾನಗೊಳಿಸಲು ವಿಶೇಷ ಉದ್ದೇಶದ ಘಟಕ (ಎಸ್‌ಪಿವಿ) ಸ್ಥಾಪಿಸಿದ್ದರೂ ಚುರುಕು ಸಿಕ್ಕಿಲ್ಲ. ಪ್ರಾಧಿಕಾರವೇ ಹುಡ್ಕೊದಿಂದ ₹28 ಸಾವಿರ ಕೋಟಿ ಸಾಲ ಪಡೆದು ಯೋಜನೆ ಅನುಷ್ಠಾನಗೊಳಿಸಲು ನಿರ್ಧರಿಸಿದೆ. ಸಾಲಕ್ಕೆ ಮಂಜೂರಾತಿಯೂ ದೊರಕಿದೆ. ಆದರೆ, ಯೋಜನೆಗಾಗಿ ಸ್ವಾಧೀನಪಡಿಸಿಕೊಳ್ಳುವ ಪ್ರತಿ ಎಕರೆಗೆ ಎಷ್ಟು ಪರಿಹಾರ ನೀಡಬೇಕು ಎಂಬುದರ ಬಗ್ಗೆ ಈವರೆಗೆ ನಿರ್ಧಾರವಾಗಿಲ್ಲ.

ಪಿಆರ್‌ಆರ್ ಯೋಜನೆಗೆ ಜಮೀನು ಬಿಟ್ಟುಕೊಡುವವರಿಗೆ 2013ರ ಭೂಸ್ವಾಧೀನ ಕಾಯ್ದೆ ಅನ್ವಯ ಪರಿಹಾರ ನಿಗದಿ ಮಾಡಬೇಕು ಎಂದು ರೈತರು ಪಟ್ಟು ಹಿಡಿದಿದ್ದಾರೆ. ಆದರೆ, ಪ್ರಾಧಿಕಾರ ಮಾತ್ರ ಭೂ ಸ್ವಾಧೀನ ಕಾಯ್ದೆ 1894ರ ಅನ್ವಯ ಸಂಧಾನ ಸೂತ್ರದಡಿ ಪರಿಹಾರ ನಿಗದಿಗೆ ಆದೇಶ ಮಾಡಿದೆ.

ಯೋಜನೆಗೆ ಜಮೀನು ಬಿಟ್ಟುಕೊಡಲಿರುವ ಹಳ್ಳಿಗಳಿಗೆ ತೆರಳಿ ರೈತರನ್ನು ಮನವೊಲಿಸಲು ಸಂಧಾನ ಸಭೆ ನಡೆಸಿದರೂ ಪ್ರಯೋಜನವಾಗಿಲ್ಲ. ಹುಸ್ಕೂರು, ಕೋಗಿಲು, ಸೂಲಿಕುಂಟೆ, ಮಾದನಾಯನಕಹಳ್ಳಿ, ಮಾವಳ್ಳಿಪುರ ಸೇರಿದಂತೆ ಹಲವು ಗ್ರಾಮಗಳಿಗೆ ಅಧಿಕಾರಿಗಳು ಭೇಟಿ ನೀಡಿ, ರೈತರ ಜತೆ ಚರ್ಚಿಸಿದ್ದಾರೆ. ಆದರೆ, ರೈತರು ಬಿಡಿಎ ಪರಿಹಾರ ಸೂತ್ರಕ್ಕೆ ಒಪ್ಪಿಕೊಂಡಿಲ್ಲ.

ಕೆಂಗೇರಿ, ಬೇಗೂರು ಯಶವಂತಪುರ, ದಾಸನಪುರ, ಜಿಗಣಿ, ಉತ್ತರಹಳ್ಳಿ ಹೋಬಳಿಗಳ 53 ಗ್ರಾಮಗಳಲ್ಲಿ ಈ ರಸ್ತೆ ಹಾದು ಹೋಗಲಿದೆ. ಬಹುತೇಕ ಎಲ್ಲ ಗ್ರಾಮಗಳ ಜಮೀನು ಮಾಲೀಕರಿಗೆ ಬಿಡಿಎ ನೋಟಿಸ್ ಜಾರಿ ಮಾಡಿದೆ.

‘ಕೇಂದ್ರ ಸರ್ಕಾರದ 2013ರ ಭೂಸ್ವಾಧೀನ ಕಾಯ್ದೆ ಅಡಿ ಪರಿಹಾರ ನೀಡಬೇಕು ಎಂಬ ರೈತರ ಕೂಗಿಗೆ ಬಿಡಿಎ ಕಿಮ್ಮತ್ತು ನೀಡುತ್ತಿಲ್ಲ. ಈ ಕಾಯ್ದೆ ಪ್ರಕಾರ ಮಾರುಕಟ್ಟೆ ಬೆಲೆಗಿಂತ ಎರಡು ಪಟ್ಟು ಪರಿಹಾರ ನೀಡುವುದರ ಜತೆಗೆ ಪುನರ್ವಸತಿ ಕಲ್ಪಿಸಬೇಕಾಗುತ್ತದೆ. 2007ರಿಂದ ಪ್ರಾಧಿಕಾರದ ಅಧ್ಯಕ್ಷರು, ಆಯುಕ್ತರು, ಸಚಿವರು, ಮುಖ್ಯಮಂತ್ರಿಗಳು ಹಾಗೂ ಈಗ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರೊಂದಿಗೂ ಸಭೆ ನಡೆಸಲಾಗಿದೆ. ಆದರೆ ಎಲ್ಲರೂ ಆಶ್ವಾಸನೆ ನೀಡಿದ್ದಾರೆ ಹೊರತು ನ್ಯಾಯ ದೊರಕಿಸಿಕೊಟ್ಟಿಲ್ಲ’ ಎಂದು ಪಿಆರ್‌ಆರ್ ರೈತ ಹಾಗೂ ನಿವೇಶನದಾರರ ಸಂಘದ ಅಧ್ಯಕ್ಷ ಮಾವಳ್ಳಿಪುರ ಶ್ರೀನಿವಾಸ್ ಬೇಸರ ವ್ಯಕ್ತಪಡಿಸಿದರು.

‘ಪಿಆರ್‌ಆರ್ ವಿಳಂಬದಿಂದಾಗಿ ಯೋಜನೆಯನ್ನೇ ರದ್ದುಪಡಿಸಬೇಕು. ಇಲ್ಲವೇ 2013ರ ಕಾಯ್ದೆಯಡಿ ಭೂ ಪರಿಹಾರ ನೀಡಬೇಕೆಂದು ಹಲವು ರೈತರು ಹೈಕೋರ್ಟ್ ಮೊರೆ ಹೋಗಿದ್ದಾರೆ. ನ್ಯಾಯಾಲಯದ ಆದೇಶಕ್ಕೆ ಕಾಯುತ್ತಿದ್ದೇವೆ. ಯೋಜನೆ ರದ್ದತಿಗೆ ಆಗ್ರಹಿಸಿ ಮುಂದಿನ ದಿನಗಳಲ್ಲಿ ಹೋರಾಟ ನಡೆಸಲಾಗುವುದು. ಯೋಜನೆ ರದ್ದು ಮಾಡಿ ಎನ್‌ಒಸಿ ನೀಡಬೇಕು’ ಎಂದು ಮುಖ್ಯಮಂತ್ರಿ ಅವರನ್ನು ಒತ್ತಾಯಿಸಿದರು.

‘2013ರ ಭೂ ಸ್ವಾಧೀನ ಕಾಯ್ದೆ ಬಿಡಿಎಗೆ ಅನ್ವಯವಾಗುವುದಿಲ್ಲ ಎಂದು ಅಧಿಕಾರಿಗಳು ಹೇಳುತ್ತಾರೆ. ಆದರೆ, ಕರ್ನಾಟಕ ಗೃಹ ಮಂಡಳಿ, ಕೆಐಎಡಿಬಿ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು 2013ರ ಭೂಸ್ವಾಧೀನ ಕಾಯ್ದೆಗೆ ತಿದ್ದುಪಡಿ ಮಾಡಿಕೊಂಡಿವೆ. ಬಿಡಿಎಗೆ ಏಕೆ ಸಾಧ್ಯವಾಗಿಲ್ಲ? ಉದಾಹರಣೆಗೆ ಹೆಸರಘಟ್ಟ ಹೋಬಳಿಯ ಮಾವಳ್ಳಿಪುರ ಗ್ರಾಮದಲ್ಲಿ ಎಕರೆಗೆ ₹2.34 ಕೋಟಿ ಪರಿಹಾರ ನಿಗದಿ ಮಾಡಲಾಗಿದೆ. ವಾಸ್ತವವಾಗಿ ಮಾರುಕಟ್ಟೆ ಮೌಲ್ಯ ದುಪ್ಪಟ್ಟು ಇದೆ. ಸಂಪುಟದಲ್ಲಿ ನಿರ್ಣಯ ಕೈಗೊಂಡಂತೆ ಪರಿಹಾರ ಹಾಗೂ ಪುನರ್ವಸತಿ ಕಲ್ಪಿಸದಿದ್ದರೆ ಯೋಜನೆಗೆ ಭೂಮಿ ನೀಡುವುದಿಲ್ಲ’ ಎಂದು ರೈತ ಸತೀಶ್ ಹೇಳಿದರು.





2,560 ಎಕರೆ ಜಮೀನು

ಸಂಚಾರ ದಟ್ಟಣೆ ಮಾಡುವ ಉದ್ದೇಶದಿಂದ 2006–07ರಲ್ಲಿ ತುಮಕೂರು ರಸ್ತೆಯಿಂದ ಹೊಸೂರು ರಸ್ತೆ ಸಂಪರ್ಕಿಸುವ ಬೆಂಗಳೂರು ಪೆರಿಫೆರಲ್ ವರ್ತುಲ ರಸ್ತೆ (ಪಿಆರ್‌ಆರ್) ಯೋಜನೆ ರೂಪಿಸಲಾಯಿತು. ಇದೀಗ ಪಿಆರ್‌ಆರ್ ಯೋಜನೆಗೆ ಬೆಂಗಳೂರು ಬ್ಯುಸಿನೆಸ್ ಕಾರಿಡಾರ್ (ಬಿಬಿಸಿ) ಎಂದು ಮರುನಾಮಕಾರಣ ಮಾಡಲಾಗಿದೆ. ಈ ಯೋಜನೆಗೆ ಒಟ್ಟು 2,560 ಎಕರೆ ಜಮೀನು ಅಗತ್ಯವಿದೆ. 100 ಮೀಟರ್ ಅಗಲದ ರಸ್ತೆ ಇದಾಗಿದೆ.

73 ಕಿ.ಮೀ. ಉದ್ದದ ಈ ರಸ್ತೆಯೂ 8 ಪಥಗಳನ್ನು ಹೊಂದಿದೆ. ತುಮಕೂರು ರಸ್ತೆ ಮತ್ತು ಹೊಸೂರು ರಸ್ತೆಯನ್ನು ಸಂಪರ್ಕಿಸುವಂತೆ ಹೊರವಲಯದಲ್ಲಿ ಎಂಟು ಪಥಗಳ ರಸ್ತೆ ಹಾಗೂ ರಸ್ತೆ ಇಕ್ಕೆಲಗಳಲ್ಲಿ ವಾಣಿಜ್ಯ ಉದ್ದೇಶದ ಕಾರಿಡಾರ್ ಅಭಿವೃದ್ಧಿಪಡಿಸುವ ಉದ್ದೇಶ ಹೊಂದಲಾಗಿದೆ. ಹೆಸರಘಟ್ಟ ರಸ್ತೆ, ದೊಡ್ಡಬಳ್ಳಾಪುರದ ರಸ್ತೆ, ಬಳ್ಳಾರಿ ರಸ್ತೆ, ಹೆಣ್ಣೂರು ರಸ್ತೆ, ಹಳೇ ಮದ್ರಾಸ್ ರಸ್ತೆ, ಹೊಸಕೋಟೆ ರಸ್ತೆ ಮತ್ತು ಸರ್ಜಾಪುರ ಸೇರಿದಂತೆ 77 ಗ್ರಾಮಗಳ ಮೂಲಕ ಸಾಗಿ ತುಮಕೂರು ರಸ್ತೆ ಮತ್ತು ಹೊಸೂರು ರಸ್ತೆಯನ್ನು ಸಂಪರ್ಕಿಸುತ್ತದೆ.

‘ಪರಿಹಾರದ ಮೊತ್ತ ಶೀಘ್ರ ನಿಗದಿ’

‘ಯೋಜನೆ ಅನುಷ್ಠಾನ ಸಂಬಂಧ ಹಲವು ಸಭೆಗಳನ್ನು ಮಾಡಲಾಗಿದ್ದು, ಅಂತಿಮ ಹಂತಕ್ಕೆ ಬಂದಿದೆ. ರೈತರೊಂದಿಗೆ ಚರ್ಚಿಸಲಾಗಿದ್ದು, ಶೀಘ್ರದಲ್ಲೇ ಪರಿಹಾರದ ಮೊತ್ತ ನಿಗದಿಪಡಿಸಲಾಗುವುದು. ಬೆಂಗಳೂರು ಬ್ಯುಸಿನೆಸ್ ಕಾರಿಡಾರ್ ಯೋಜನೆಗೆ ಜಮೀನು ನೀಡುವ ರೈತರ ಮನವೊಲಿಸಿ, ಪರಿಹಾರ ನಿಗದಿಗೊಳಿಸಲಾಗುವುದು’ ಎಂದು ಬಿಡಿಎ ಅಧ್ಯಕ್ಷ ಎನ್.ಎ.ಹ್ಯಾರಿಸ್ ತಿಳಿಸಿದರು.

‘ಯೋಜನೆಗೆ ಜಮೀನು ನೀಡುವ ರೈತರಿಗೆ ಎಕರೆಗೆ ₹1.5 ಕೋಟಿಯಿಂದ ₹8 ಕೋಟಿವರೆಗೂ ಪರಿಹಾರ ದೊರೆಯಲಿದೆ. ಆದರೆ, ಜಮೀನು ಯಾವ ಪ್ರದೇಶದಲ್ಲಿದೆ ಎಂಬುದರ ಮೇಲೆ ಪರಿಹಾರ ಮೊತ್ತ ಎಷ್ಟು ಎಂಬುದು ತೀರ್ಮಾನ ಆಗಲಿದೆ. ಸರ್ಕಾರದ ಮಾರ್ಗಸೂಚಿ ದರದ ಮೇಲೆ ಪರಿಹಾರ ನೀಡಲಾಗುವುದು’ ಎಂದು ಬಿಡಿಎ ಅಧಿಕಾರಿಯೊಬ್ಬರು ಹೇಳಿದರು.

ಚಿಟಿಕೆ ಸುದ್ದಿ

ಕ್ರೈಸ್ಟ್ ವಿ.ವಿಗೆ 101ನೇ ಸ್ಥಾನ

ಬೆಂಗಳೂರು: ನಗರದ ಕ್ರೈಸ್ಟ್ ವಿಶ್ವವಿದ್ಯಾಲಯವು (ಡೀಮ್ಡ್) ಜಾಗತಿಕ ಮಟ್ಟದಲ್ಲಿ 101ನೇ ಸ್ಥಾನ ಪಡೆದಿದೆ. ವಿವಿಧ ವಿಭಾಗಗಳಲ್ಲಿನ ಸಾಧನೆಯನ್ನು ಪರಿಗಣಿಸಿ ಈ ಸ್ಥಾನ ನೀಡಲಾಗುತ್ತದೆ. ಜಗತ್ತಿನ 87 ದೇಶಗಳ 1,253 ವಿಶ್ವವಿದ್ಯಾಲಯಗಳ ಮೌಲ್ಯಮಾಪನ ಮಾಡಿದ್ದು, ಪ್ರಮುಖ ವಿಷಯಾಧಾರಿತ ಕ್ಷೇತ್ರಗಳಲ್ಲಿ 4,866 ಪ್ರಸ್ತಾವಗಳು ಸಲ್ಲಿಕೆಯಾಗಿದ್ದವು. ಅದರಲ್ಲಿ ಕ್ರೈಸ್ಟ್ ವಿಶ್ವವಿದ್ಯಾಲಯ ಉತ್ತಮ ಸಾಧನೆಯನ್ನು ತೋರಿದೆ.



ಕ್ರೈಸ್ಟ್ ವಿಶ್ವವಿದ್ಯಾಲಯ ಕಳೆದ ವರ್ಷ 172ನೇ ಸ್ಥಾನದಲ್ಲಿತ್ತು. ಈ ವರ್ಷ 71 ಸ್ಥಾನಗಳ ಜಿಗಿತ ಕಂಡಿದ್ದು, 101ನೇ ಸ್ಥಾನ ಪಡೆದಿದೆ. ಜೊತೆಗೆ ಮೂರು ಪ್ರಮುಖ ವಿಭಾಗಗಳಲ್ಲಿ ಮೊದಲ 10 ಸ್ಥಾನಗಳೊಳಗೆ ಗುರುತಿಸಿಕೊಂಡಿದೆ.

‘ಜಾಗತಿಕ ಮನ್ನಣೆಯಲ್ಲಿ ನಮ್ಮ ವಿಶ್ವವಿದ್ಯಾಲಯದ ಸ್ಥಾನವು ನಿರಂತರವಾಗಿ ಏರಿಕೆ ಆಗುತ್ತಿರುವುದು ಹೆಮ್ಮೆಯ ವಿಚಾರ. ನಾವೀನ್ಯತೆ, ಸೇವೆ ಮತ್ತು ವಿದ್ವತ್ತನ್ನು ವಿದ್ಯಾರ್ಥಿಗಳಿಗೆ ನೀಡಲು ಬದ್ಧರಾಗಿದ್ದೇವೆ’ ಎಂದು ಕ್ರೈಸ್ಟ್ ವಿಶ್ವವಿದ್ಯಾಲಯದ ಕುಲಪತಿ ಫಾದರ್ ಜೋಸ್ ಸಿ.ಸಿ. ತಿಳಿಸಿದ್ದಾರೆ.

ಟೋಲ್ ಹೆಚ್ಚಳ ನೈಸ್‌ಗೆ ನೋಟಿಸ್



ಬೆಂಗಳೂರು: ಸರ್ಕಾರದ ಸಮ್ಮತಿ ಪಡೆಯದೆ ಶೇಕಡ 7.5ರಷ್ಟು ಟೋಲ್ ಹೆಚ್ಚಿಸಿರುವ ನಂದಿ ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಎಂಟರ್‌ಪ್ರೈಸಸ್‌ಗೆ (ನೈಸ್) ಲೋಕೋಪಯೋಗಿ ಇಲಾಖೆ ನೋಟಿಸ್ ಜಾರಿ ಮಾಡಿದೆ.

1994ರಲ್ಲಿ ಆಗಿರುವ ಒಪ್ಪಂದದಂತೆ, ಸರ್ಕಾರದ ಸಮ್ಮತಿ ಇಲ್ಲದೆ ಟೋಲ್ ಹೆಚ್ಚಳ ಮಾಡುವಂತಿಲ್ಲ ಎಂದು ಲೋಕೋಪಯೋಗಿ ಇಲಾಖೆ ನೋಟಿಸ್‌ನಲ್ಲಿ ತಿಳಿಸಿದೆ. ‘ಈ ರೀತಿಯ ಯಾವುದೇ ನೋಟಿಸ್ ಬಂದಿಲ್ಲ, ಒಪ್ಪಂದದಂತೆಯೇ ಟೋಲ್ ಹೆಚ್ಚಿಸಲಾಗಿದೆ’ ಎಂದು ನೈಸ್ ಸಂಸ್ಥೆ ಹೇಳಿದೆ.

44 ಕಿ.ಮೀ ಉದ್ದದ ಪೆರಿಫೆರಲ್ ವರ್ತುಲ ರಸ್ತೆ ಮತ್ತು ಲಿಂಕ್ ರಸ್ತೆಯಲ್ಲಿ ಜುಲೈ 1ರಿಂದ ಟೋಲ್ ದರವನ್ನು ಅನ್ನು ನೈಸ್ ಸಂಸ್ಥೆಯು ಶೇ 7.5ರಷ್ಟು ಹೆಚ್ಚಿಸಿತ್ತು. ಕಾರು ಹಾಗೂ ದ್ವಿಚಕ್ರ ವಾಹನ ಸವಾರರಿಗೆ ಇದು ದುಬಾರಿ ಎನಿಸಿದೆ.

‘ಟೋಲ್ ಹೆಚ್ಚಿಸಿರುವುದನ್ನು ಒಪ್ಪಲು ಸಾಧ್ಯವಿಲ್ಲ. ಒಪ್ಪಂದದ ಪ್ರಕಾರ ಟೋಲ್ ಹೆಚ್ಚಿಸುವ ಮುನ್ನ ಸರ್ಕಾರದ ಸಮ್ಮತಿ ಪಡೆಯಬೇಕಿದೆ’ ಎಂದು ಲೋಕೋಪಯೋಗಿ ಇಲಾಖೆ ಉಪ ಕಾರ್ಯದರ್ಶಿ ಎನ್. ಪಾರ್ವತಿ ಅವರು ಜುಲೈ 8ರಂದು ನೀಡಿರುವ ನೋಟಿಸ್‌ನಲ್ಲಿ ತಿಳಿಸಿದ್ದಾರೆ.

‘1994ರ ಒಪ್ಪಂದಂತೆ ಪ್ರತಿ ವರ್ಷ ಶೇ 10ರಷ್ಟು ಟೋಲ್ ಹೆಚ್ಚಿಸುವುದಕ್ಕೆ ಅವಕಾಶವಿದೆ. ನಾವು ಅದಕ್ಕಿಂತ ಕಡಿಮೆಯೇ ಹೆಚ್ಚಿಸಿದ್ದೇವೆ’ ಎಂದು ನೈಸ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಅಶೋಕ್ ಖೇಣಿ ತಿಳಿಸಿದರು.

ಜುಲೈ 25ರಿಂದ ವಚನ ಶ್ರಾವಣ

ಬೆಂಗಳೂರು: ವಚನಜ್ಯೋತಿ ಬಳಗವು ಜುಲೈ 25ರಿಂದ ಆಗಸ್ಟ್ 23ರವರೆಗೆ ವಚನ ಶ್ರಾವಣವನ್ನು ಆಸಕ್ತರ ಅಂಗಳಗಳಲ್ಲಿ ಆಯೋಜಿಸಲಿದೆ. ಸಾಂಸ್ಕೃತಿಕ ಸಂಪತ್ತಾದ ವಚನಗಳನ್ನು ಪರಿಚಯಿಸಿ, ವಚನ ಗಾಯನ ಮತ್ತು ವ್ಯಾಖ್ಯಾನಗಳೊಂದಿಗೆ ವಚನ ಸಂಸ್ಕೃತಿಯನ್ನು ಬಿತ್ತುವ ವಿಶಿಷ್ಟ ಕಾರ್ಯಕ್ರಮ ಸರಣಿ ಇದಾಗಿದೆ. ಗಾಯಕರು - ಉತ್ಸಾಹಿ ವಚನ ಅಧ್ಯಯನ ಶೀಲರು ವಚನ ಶ್ರಾವಣದಲ್ಲಿ ಪಾಲ್ಗೊಳ್ಳಲಿದ್ದಾರೆ. ಆಸಕ್ತ ಯುವಜನತೆಗೂ ಅವಕಾಶ ನೀಡಲಾಗುವುದು ಎಂದು ವಚನಜ್ಯೋತಿ ಬಳಗದ ಅಧ್ಯಕ್ಷ ಎಸ್. ಪಿನಾಕಪಾಣಿ ತಿಳಿಸಿದ್ದಾರೆ.

ಡೆಂಗಿ, ಚಿಕೂನ್‌ಗುನ್ಯಾ ನಿಯಂತ್ರಣಕ್ಕೆ ಅಭಿಯಾನ

ಬೆಂಗಳೂರು: ಸಾಂಕ್ರಾಮಿಕ ರೋಗಗಳಾದ ಡೆಂಗಿ ಹಾಗೂ ಚಿಕೂನ್‌ಗುನ್ಯಾ ನಿಯಂತ್ರಣಕ್ಕೆ ವಿಶೇಷ ಅಭಿಯಾನ ಕೈಗೊಳ್ಳುವಂತೆ ಸೂಚಿಸಿರುವ ಆರೋಗ್ಯ ಇಲಾಖೆ, ಈ ಅಭಿಯಾನಕ್ಕಾಗಿ ₹7.25 ಕೋಟಿ ವೆಚ್ಚ ಮಾಡುವ ಪ್ರಸ್ತಾವಕ್ಕೆ ಅನುಮೋದನೆ ನೀಡಿ ಆದೇಶ ಹೊರಡಿಸಿದೆ.



ರೋಗಗಳ ನಿಯಂತ್ರಣಕ್ಕೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲು ಪ್ರತಿ ಜಿಲ್ಲೆಗೆ ಒಬ್ಬರಂತೆ ಕೀಟ ಸಂಗ್ರಹಕಾರರನ್ನು ನೇಮಿಸಿಕೊಳ್ಳಬೇಕು. ರೋಗ ಹರಡುವ ವೈರಾಣುಗಳನ್ನು ಪತ್ತೆ ಮಾಡಲು ತಂತ್ರಜ್ಞಾನದ ಅಳವಡಿಕೆ, ಈಡಿಸ್ ಲಾರ್ವಾ ನಿರ್ಮೂಲನೆಗೆ ಸ್ವಯಂ ಸೇವಕರ ನಿಯೋಜನೆ, ಡೆಂಗಿ ಪರೀಕ್ಷೆಗೆ ಕಿಟ್‌ಗಳ ಖರೀದಿ ಸೇರಿ ವಿವಿಧ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಕಿರುನಾಟಕೋತ್ಸವ ಅಂತಿಮ ಸ್ಪರ್ಧೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರವರ ಥಿಯೇಟರ್ ಮತ್ತು ಅಶ್ವಘೋಷ ಥಿಯೇಟರ್ ಟ್ರಸ್ಟ್ ಜಂಟಿಯಾಗಿ ‘ಬೆಂಗಳೂರು ಕಿರು ನಾಟಕೋತ್ಸವ’ 5ನೇ ಆವೃತ್ತಿಯ ಅಂತಿಮ ಸ್ಪರ್ಧೆಯನ್ನು ಇದೇ ಶನಿವಾರ (ಜುಲೈ 12) ಸಂಜೆ 6 ಗಂಟೆಗೆ ಮಲ್ಲತ್ತಹಳ್ಳಿಯ ಕಲಾ ಗ್ರಾಮದಲ್ಲಿರುವ ಸಾಂಸ್ಕೃತಿಕ ಸಮುಚ್ಚಯದಲ್ಲಿ ಹಮ್ಮಿಕೊಂಡಿದೆ.



ಈ ನಾಟಕೋತ್ಸವವು ‘ಪ್ರಜಾವಾಣಿ’ ಮಾಧ್ಯಮ ಸಹಯೋಗದಲ್ಲಿ ನಡೆಯಲಿದೆ. ‘ಸಮಗ್ರತೆ’ ನಾಟಕೋತ್ಸವದ ವಿಷಯವಾಗಿದೆ. ಮೊದಲ ಹಂತದ ಸ್ಪರ್ಧೆಯಲ್ಲಿ 13 ತಂಡಗಳು ಭಾಗವಹಿಸಿದ್ದವು. ಆರು ತಂಡಗಳು ಅಂತಿಮ ಸ್ಪರ್ಧೆಗೆ ಆಯ್ಕೆಯಾಗಿವೆ.

ರಂಗಕರ್ಮಿ ಬಿ. ಸುರೇಶ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕಿ ಬನಶಂಕರಿ ವಿ. ಅಂಗಡಿ ಹಾಗೂ ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ. ನಾಗರಾಜಮೂರ್ತಿ ಅವರು ಅಂತಿಮ ಸ್ಪರ್ಧೆಯ ಸಮಾರಂಭದಲ್ಲಿ ಅತಿಥಿಗಳಾಗಿ ಭಾಗವಹಿಸುತ್ತಾರೆ.

ದೃಶ್ಯಕಾವ್ಯ ತಂಡದ ‘ನೀಲಿ-ನೀರು’, ರಂಗಚಿರಂತನ ತಂಡದ ‘ಅಕ್ಕ’, ಖಾಲಿರಂಗ ತಂಡದ ‘ಈ ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ವೀಕೆಂಡ್ ಥಿಯೇಟರ್‌ನ ‘3/4’, ರಿ-ವ್ಯೂ ಥಿಯೇಟರ್ ಕಲೆಕ್ಟಿವ್ ತಂಡದ ‘ವಿಧುರ’ ಹಾಗೂ ಸ್ಪಷ್ಟ ಥಿಯೇಟರ್ ತಂಡದ ‘ಪಲ್ಸ್’ನಾಟಕ ಅಂತಿಮ ಪ್ರದರ್ಶನಕ್ಕೆ ಆಯ್ಕೆಯಾಗಿವೆ.

ಅತ್ಯುತ್ತಮ ನಾಟಕ ಸೇರಿ ಹತ್ತು ಪ್ರಶಸ್ತಿಗಳನ್ನು ಕಿರುನಾಟಕೋತ್ಸವ ಒಳಗೊಂಡಿದ್ದು, ₹2,500ರಿಂದ ₹10,000ದವರೆಗೆ ನಗದು ಬಹುಮಾನ ನೀಡಲಾಗುತ್ತದೆ ಎಂದು ಕಿರುನಾಟಕೋತ್ಸವದ ಕಲಾತ್ಮಕ ನಿರ್ದೇಶಕ ಹನು ರಾಮಸಂಜೀವ ತಿಳಿಸಿದ್ದಾರೆ.

ಪ್ರಾದೇಶಿಕ ಪ್ರಕ್ರಿಯೆ ಪ್ರಯೋಗಾಲಯ ಪ್ರಾರಂಭ

ಬೆಂಗಳೂರು: ಬುಡಕಟ್ಟು ವ್ಯವಹಾರಗಳ ಸಚಿವಾಲಯವು ಆದಿ ಕರ್ಮಯೋಗಿ ಅಭಿಯಾನದ ಅಡಿ ಮೊದಲ ಪ್ರಾದೇಶಿಕ ಪ್ರಕ್ರಿಯೆ ಪ್ರಯೋಗಾಲಯವನ್ನು (ಆರ್‌ಪಿಎಲ್) ಗುರುವಾರ ಪ್ರಾರಂಭಿಸಿತು.

ಈ ಕಾರ್ಯಕ್ರಮವು ಬುಡಕಟ್ಟು ವ್ಯವಹಾರಗಳ ಸಚಿವಾಲಯದ ಉನ್ನತ ಅಧಿಕಾರಿಗಳು, ದಕ್ಷಿಣ ರಾಜ್ಯಗಳ ಹಿರಿಯ ಅಧಿಕಾರಿಗಳು ಮತ್ತು ಕರ್ನಾಟಕ, ಕೇರಳ, ತಮಿಳುನಾಡು, ಆಂಧ್ರಪ್ರದೇಶ ಮತ್ತು ತೆಲಂಗಾಣದ ನಾಮನಿರ್ದೇಶಿತ ರಾಜ್ಯ ಮಾಸ್ಟರ್ ತರಬೇತುದಾರರನ್ನು (ಎಸ್‌ಎಂಟಿ) ಒಂದೆಡೆ ಸೇರಲು ವೇದಿಕೆ ಒದಗಿಸಿತು.

ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್ ಮಾತನಾಡಿ, ‘ಭೂ ಹಕ್ಕುಗಳು, ಜೀವನೋಪಾಯ ಮತ್ತು ಶಿಕ್ಷಣ ಸೇರಿದಂತೆ ಮಾನವ ಅಭಿವೃದ್ಧಿ ಸೂಚಕಗಳತ್ತ ಗಮನ ಹರಿಸಬೇಕು. ಎಸ್‌ಐಆರ್‌ಡಿ ಮೈಸೂರು, ವಿಸ್ತರಣಾ ತರಬೇತಿ ಕೇಂದ್ರಗಳು ಮತ್ತು ಪಂಚಾಯತ್ ಮಟ್ಟದ ಸೌಲಭ್ಯಗಳಂತಹ ತರಬೇತಿ ಮೂಲ ಸೌಕರ್ಯಗಳ ಮೂಲಕ ಎಸ್‌ಎಂಟಿಗಳು ಮತ್ತು ಡಿಎಂಟಿಗಳನ್ನು ಸಬಲೀಕರಣಗೊಳಿಸಲು ರಾಜ್ಯ ಸರ್ಕಾರ ಸಂಪೂರ್ಣ ಸಾಂಸ್ಥಿಕ ಬೆಂಬಲವನ್ನು ನೀಡುತ್ತದೆ’ ಎಂದರು.

ಹೆಚ್ಚು ವಾಹನ ಬಳಕೆಗೆ ಸೂಚನೆ

ಯಲಹಂಕ: ‘ಮುಖ್ಯ ಆಯುಕ್ತರ ನಡೆ ವಲಯದ ಕಡೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಲಹಂಕ ವಲಯ ವ್ಯಾಪ್ತಿಯಲ್ಲಿ ಕಸದ ಸಮಸ್ಯೆ ನಿವಾರಿಸಲು ಹೆಚ್ಚುವರಿ ವಾಹನಗಳ ವ್ಯವಸ್ಥೆ ಮಾಡಬೇಕು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಯಲಹಂಕದಲ್ಲಿ ‘ಮುಖ್ಯ ಆಯುಕ್ತರ ನಡೆ ವಲಯದ ಕಡೆ’ ಕಾರ್ಯಕ್ರಮದ ಅಂಗವಾಗಿ ಸಾರ್ವಜನಿಕರಿಂದ ಶುಕ್ರವಾರ ಅಹವಾಲು ಸ್ವೀಕರಿಸಿದ ಅವರು, ‘ಯಲಹಂಕ ವಲಯ ವ್ಯಾಪ್ತಿಯಲ್ಲಿ ಕಸ ಸಂಗ್ರಹಿಸಲು 50 ಆಟೊ ಟಿಪ್ಪರ್‌ಗಳು ಹಾಗೂ 7 ಕಾಂಪ್ಯಾಕ್ಟರ್‌ಗಳನ್ನು ಹೆಚ್ಚುವರಿಯಾಗಿ ಪಡೆದುಕೊಳ್ಳಬೇಕು’ ಎಂದು ಅಧಿಕಾರಿಗಳಿಗೆ ಆದೇಶಿಸಿದರು.

ಕಸದ ಸಮಸ್ಯೆ

ಪ್ರಾಣಿಗಳ ಚಿಕಿತ್ಸೆಗಾಗಿ ದೊಡ್ಡಬೆಟ್ಟಹಳ್ಳಿಯಲ್ಲಿ ಪಶು ಚಿಕಿತ್ಸಾಲಯಕ್ಕಾಗಿ ಜಾಗ ಮೀಸಲಿರಿಸಿದ್ದು, ಶೀಘ್ರ ಕಾಮಗಾರಿ ಪೂರ್ಣಗೊಳಿಸಿ ಪಶು ಚಿಕಿತ್ಸಾಲಯವನ್ನು ಪ್ರಾರಂಭಿಸಬೇಕು. ಸ್ಥಳೀಯ ಸಮಸ್ಯೆಗಳನ್ನು ನಿವಾರಿಸಲು ತಿಂಗಳಿಗೊಮ್ಮೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳ ಜೊತೆ ಸಭೆ ನಡೆಸಿ ಸಮಸ್ಯೆಗಳನ್ನು ಪರಿಹರಿಸಿ ಎಂದು ಕಾರ್ಯಪಾಲಕ ಎಂಜಿನಿಯರ್ ಅವರಿಗೆ ಸೂಚಿಸಿದರು.

ಯಲಹಂಕ ವಲಯ ವ್ಯಾಪ್ತಿಯಲ್ಲಿ 23 ಸಾರ್ವಜನಿಕರಿಂದ ಅಹವಾಲುಗಳನ್ನು ಸ್ವೀಕರಿಸಿದ್ದು, ನಾಗರಿಕರಿಂದ ಬಂದಂತಹ ದೂರುಗಳಿಗೆ ಶೀಘ್ರವಾಗಿ ಸ್ಪಂದಿಸಿ ಸಮಸ್ಯೆಗಳನ್ನು ಬಗೆಹರಿಸಬೇಕು ಎಂದರು.

ಇ-ಖಾತಾ ಮೇಳ: ಯಲಹಂಕದಲ್ಲಿ ನಡೆಯುತ್ತಿರುವ ಇ-ಖಾತಾ ಮೇಳಕ್ಕೆ ಭೇಟಿ ನೀಡಿದ ಮಹೇಶ್ವರ್ ರಾವ್, ನಗರದಾದ್ಯಂತ ಇ-ಖಾತಾ ಮೇಳ ಆಯೋಜಿಸಲಾಗಿದ್ದು, ಈ ಬಗ್ಗೆ ನಾಗರಿಕರಲ್ಲಿ ಅರಿವು ಮೂಡಿಸಬೇಕು ಎಂದರು.

ಶಾಸಕ ಎಸ್.ಆರ್. ವಿಶ್ವನಾಥ್ ಅವರೊಂದಿಗೆ ಯಲಹಂಕ ಕೆರೆಗೆ ಭೇಟಿನೀಡಿದ ಮಹೇಶ್ವರ್ ರಾವ್, ವಾಯು ವಿಹಾರ, ಸಸಿಗಳ ಪೋಷಣೆ ಸೇರಿದಂತೆ ನಿರ್ವಹಣೆ ಕಾರ್ಯವನ್ನು ಕಟ್ಟುನಿಟ್ಟಾಗಿ ಮಾಡಲು ಸೂಚಿಸಿದರು.

ನಿಟ್ಟೆ ಮೀನಾಕ್ಷಿ ಕಾಲೇಜು ರಸ್ತೆಯ ವಿಸ್ತರಣೆ ಕಾಮಗಾರಿಯನ್ನು ಶೀಘ್ರವಾಗಿ ಮುಗಿಸಬೇಕು. ಮಲ್ಲೇಶ್ವರ– ಸುಬ್ರಮಣ್ಯ ನಗರದಿಂದ 8ನೇ ಮುಖ್ಯರಸ್ತೆಗೆ ಸಂಪರ್ಕ ಕಲ್ಪಿಸುವ ರೈಲ್ವೆ ಲೆವೆಲ್ ಕ್ರಾಸಿಂಗ್ (ಎಲ್‌ಸಿ2) ಬಳಿ ರೈಲ್ವೆ ಕೆಳಸೇತುವೆ ನಿರ್ಮಿಸಬೇಕು ಎಂದು ಅಧಿಕಾರಿಗಳಿಗೆ ತಿಳಿಸಿದರು.

ವಲಯ ಆಯುಕ್ತ ಕರೀಗೌಡ, ಜಂಟಿ ಆಯುಕ್ತ ಮೊಹ್ಮದ್ ನಯೀಮ್ ಮೊಮಿನ್, ಉಪ ಆಯುಕ್ತೆ ಮಮತಾ, ಮುಖ್ಯ ಎಂಜಿನಿಯರ್ ರಂಗನಾಥ್ ಉಪಸ್ಥಿತರಿದ್ದರು.



ಕರೀಗೌಡ, ಮಹೇಶ್ವರ್ ರಾವ್, ಎಸ್.ಆರ್. ವಿಶ್ವನಾಥ್ ಅವರು ಯಲಹಂಕ ಕೆರೆ ಅಂಗಳದಲ್ಲಿ ಪರಿಶೀಲನೆ ನಡೆಸಿದರು

ರಾಜರಾಜೇಶ್ವರಿ ನಗರ, ದಕ್ಷಿಣ ವಲಯದಲ್ಲಿ ಬಿಬಿಎಂಪಿ ಕಾರ್ಯಾಚರಣೆ

ಪಾದಚಾರಿ ಮಾರ್ಗ ಒತ್ತುವರಿ ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಾದ್ಯಂತ ಪಾದಚಾರಿ ಮಾರ್ಗಗಳ ಒತ್ತುವರಿ ತೆರವು ಕಾರ್ಯಾಚರಣೆಯನ್ನು ಬಿಬಿಎಂಪಿ ಆರಂಭಿಸಿದ್ದು, ರಾಜರಾಜೇಶ್ವರಿ ನಗರ ಹಾಗೂ ದಕ್ಷಿಣ ವಲಯದ ಎಂಟು ಮುಖ್ಯ ರಸ್ತೆಗಳಲ್ಲಿ ಒತ್ತುವರಿಯನ್ನು ಶುಕ್ರವಾರ ತೆರವುಗೊಳಿಸಿತು.

ದಕ್ಷಿಣ ವಲಯದ ಬಸವನಗುಡಿ ವಿಭಾಗದ ಬಸವನಗುಡಿಯ ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನ ಬೀದಿ, ಬಿಟಿಎಂ ಲೇಔಟ್ ವಿಭಾಗದ ಲಸ್ಕರ್ ಹೊಸೂರು ರಸ್ತೆ 20ನೇ ಮುಖ್ಯರಸ್ತೆಯ ಫೋರಂ ಮಾಲ್‌ನಿಂದ 80 ಅಡಿ ರಸ್ತೆಯ ಒಳಾಂಗಣ ಕ್ರೀಡಾಂಗಣದವರೆಗೆ, ಚಿಕ್ಕಪೇಟೆ ವಿಭಾಗದ ಕನಕನಪಾಳ್ಯ ಜಯನಗರ 8ನೇ ಮುಖ್ಯರಸ್ತೆಯಿಂದ ಪಟ್ಟಾಲಮ್ಮ ಮುಖ್ಯರಸ್ತೆಯವರೆಗೆ, ಜಯನಗರ ವಿಭಾಗದ 4ನೇ 'ಟಿ' ಬ್ಲಾಕ್‌ನಿಂದ 32ನೇ 'ಇ' ಅಡ್ಡರಸ್ತೆಯಿಂದ ಮಾರೇನಹಳ್ಳಿ ರಸ್ತೆ, ಪದ್ಮನಾಭನಗರ ವಿಭಾಗದ ಕದಿರೇನಹಳ್ಳಿ ಕೆಳಸೇತುವೆಯಿಂದ ಕತ್ತರಿಗುಪ್ಪೆ ಸಿಗ್ನಲ್‌ವರೆಗೆ ಹಾಗೂ ವಿಜಯನಗರ ವಿಭಾಗದ ಕಾರ್ಡ್ ರಸ್ತೆಯ ಅತ್ತಿಗುಪ್ಪೆ ಪೆಟ್ರೋಲ್ ಬಂಕ್‌ನಿಂದ ಸ್ಕೈಲೇನ್ ಅಪಾರ್ಟ್‌ಮೆಂಟ್‌ವರೆಗೆ ಪಾದಚಾರಿ ಮಾರ್ಗದಲ್ಲಿದ್ದ ಅಕ್ರಮ ಶೆಡ್, ತಳ್ಳುವ ಗಾಡಿ, ಅಂಗಡಿ ಸಾಮಗ್ರಿಗಳು, ಶೀಟ್‌ಗಳನ್ನು ತೆರವುಗೊಳಿಸಲಾಯಿತು.

ನ್ಯಾಷನಲ್ ಕಾಲೇಜು ಮೇಲ್ಸೇತುವೆ, ಕದಿರೇನಹಳ್ಳಿ, ಬಸವನಗುಡಿಯ ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನ ಬೀದಿ, ಮಾರೇನಹಳ್ಳಿ ಮುಖ್ಯರಸ್ತೆ, ಬಿನ್ನಿ ಕಾರ್ಮಿಕರ ಬಡಾವಣೆ, ಯಾರಬ್ ನಗರ ಪ್ರದೇಶಗಳ ರಸ್ತೆ ಇಕ್ಕೆಲಗಳಲ್ಲಿ ಹಾಗೂ ಪಾದಚಾರಿ ಮಾರ್ಗಗಳಲ್ಲಿನ ಹೂಳು, ಕಸ ಹಾಗೂ ಘನತ್ಯಾಜ್ಯವನ್ನು ವಿಲೇವಾರಿ ಮಾಡಲಾಯಿತು.

ರಾಜರಾಜೇಶ್ವರಿನಗರ ವಲಯ ವ್ಯಾಪ್ತಿಯಲ್ಲಿ ಬಿಇಎಂಎಲ್ ಕಾಂಪ್ಲೆಕ್ಸ್‌ನಿಂದ (ಮಂದಾರ ರೆಸ್ಟೋರೆಂಟ್) ಬಿಎಂಟಿಸಿ ಬಸ್ ಡಿಪೋವರೆಗಿನ ಮುಖ್ಯರಸ್ತೆ, ಕೆಂಗೇರಿ ವಿಭಾಗದ ಮುದ್ದಿನಪಾಳ್ಯ ಮುಖ್ಯರಸ್ತೆಯಿಂದ (ರಿಲಯನ್ಸ್ ಫ್ರೆಶ್ ಕಾಂಪ್ಲೆಕ್ಸ್) ಮುದ್ದಿನಪಾಳ್ಯ ವೃತ್ತದವರೆಗಿನ ಮುಖ್ಯ ರಸ್ತೆಯ ಪಾದಚಾರಿ ಮಾರ್ಗದಲ್ಲಿದ್ದ ಅಂಗಡಿಗಳ ತಾತ್ಕಾಲಿಕ ತಗಡಿನ ಚಾವಣಿ, ತಾತ್ಕಾಲಿಕ ಶೆಡ್, ಜಾಹೀರಾತು ಫಲಕಗಳು, ತಡೆಗೋಡೆಗಳು, ಮೆಟ್ಟಿಲುಗಳು, ಬೀದಿ ಬದಿ ವ್ಯಾಪಾರಿಗಳ ತಳ್ಳುವ ಗಾಡಿ ಹಾಗೂ ಕಟ್ಟಡ ನಿರ್ಮಾಣದ ಸಾಮಗ್ರಿಗಳನ್ನು ತೆರವುಗೊಳಿಸಲಾಯಿತು.

ಜುಲೈನ ಮೂರನೇ ಶನಿವಾರದಂದು ಕೆಂಗೇರಿ ವಿಭಾಗದ ಮುದ್ದಿನಪಾಳ್ಯ ವೃತ್ತದಿಂದ ದ್ವಾರಕಾವಾಸ ರಸ್ತೆ ರತ್ನನಗರದವರೆಗೆ ಹಾಗೂ ರಾಜರಾಜೇಶ್ವರಿ ನಗರ ವಿಭಾಗದ ಜಯಣ್ಣ ವೃತ್ತದಿಂದ ಕೆಂಪೇಗೌಡ ಡಬಲ್ ರಸ್ತೆ ಹಲಗೆವಡೇರಹಳ್ಳಿ ಮೂಲಕ ಕೆಂಚೇನಹಳ್ಳಿ ಮುಖ್ಯರಸ್ತೆವರೆಗೆ ಪಾದಚಾರಿ ಮಾರ್ಗ ತೆರವುಗೊಳಿಸಲಾಗುತ್ತದೆ ಎಂದು ವಲಯ ಆಯುಕ್ತ ಬಿ.ಸಿ. ಸತೀಶ್ ತಿಳಿಸಿದರು.



ರಾಜರಾಜೇಶ್ವರಿ ನಗರದ ಬಿಇಎಂಎಲ್ ಕಾಂಪ್ಲೆಕ್ಸ್ ರಸ್ತೆಯ ಪಾದಚಾರಿ ಮಾರ್ಗದಲ್ಲಿ ಅಂಗಡಿಗಳ ಚಾವಣಿಯನ್ನು ಬಿಬಿಎಂಪಿ ಸಿಬ್ಬಂದಿ ತೆರವುಗೊಳಿಸಿದರು

30ಗಳಲ್ಲಿ ನಾಲ್ಕು ದಿನ ತೆರವು

ಪ್ರತಿ ತಿಂಗಳ ಒಂದನೇ ಮತ್ತು ಮೂರನೇ ಶನಿವಾರ ಹಾಗೂ ಎರಡನೇ ಮತ್ತು ನಾಲ್ಕನೇ ಶುಕ್ರವಾರದಂದು ಪಾದಚಾರಿ ಮಾರ್ಗ ಒತ್ತುವರಿ ತೆರವು ಕಾರ್ಯಾಚರಣೆ ಎಂಟೂ ವಲಯಗಳಲ್ಲಿ ನಡೆಯಲಿದೆ. ಯಾವ ಪಾದಚಾರಿ ಮಾರ್ಗದಲ್ಲಿ ತೆರವುಗೊಳಿಸಲಾಗುತ್ತದೆ ಎಂಬುದನ್ನು ಮುಂಚಿತವಾಗಿಯೇ ಪ್ರಕಟಿಸಲಾಗುತ್ತದೆ. ಪಾದಚಾರಿ ಮಾರ್ಗವನ್ನು ಅತಿಕ್ರಮಿಸಿದವರು ಸ್ವಯಂಪ್ರೇರಿತರಾಗಿ ತೆರವುಗೊಳಿಸಬಹುದು ಎಂದು ಬಿಬಿಎಂಪಿ ತಿಳಿಸಿದೆ.

500 ಕೋಟಿ ತಲುಪಲಿದೆ ‘ಶಕ್ತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಕ್ತಿ ಯೋಜನೆಯಡಿ ಮಹಿಳಾ ಪ್ರಯಾಣಿಕರಿಗೆ ಜುಲೈ 10ರ ವರೆಗೆ 497 ಕೋಟಿ ಉಚಿತ ಟಿಕೆಟ್ ವಿತರಿಸಿದ್ದು, ಜುಲೈ 14ರಂದು 500 ಕೋಟಿ ತಲುಪುವ ಸಾಧ್ಯತೆ ಇದೆ.

ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳಲ್ಲಿ ಒಂದಾಗಿರುವ ಶಕ್ತಿ ಯೋಜನೆ 2023ರ ಜೂನ್ 11ರಂದು ಆರಂಭವಾಗಿತ್ತು. ಅಲ್ಲಿಂದ ಜುಲೈ 10ರವರೆಗೆ ಕೆಎಸ್‌ಆರ್‌ಟಿಸಿ, ಬಿಎಂಟಿಸಿ, ಎನ್‌ಡಬ್ಲ್ಯುಆರ್‌ಟಿಸಿ, ಕೆಕೆಆರ್‌ಟಿಸಿಯಲ್ಲಿ ಒಟ್ಟು 836.49 ಕೋಟಿ ಜನರು ಪ್ರಯಾಣಿಸಿದ್ದಾರೆ. ಅದರಲ್ಲಿ 497 ಕೋಟಿ ಬಾರಿ ಮಹಿಳೆಯರು ಶಕ್ತಿ ಯೋಜನೆಯ ಉಚಿತ ಸೌಲಭ್ಯವನ್ನು ಬಳಸಿಕೊಂಡಿದ್ದಾರೆ. ಶಕ್ತಿ ಯೋಜನೆಯ ಟಿಕೆಟ್ ಮೌಲ್ಯ ₹12,593 ಕೋಟಿಯಾಗಿದೆ.

ಗುರುವಾರ ಒಂದೇ ದಿನ 1.26 ಕೋಟಿ ಜನರು ಪ್ರಯಾಣಿಸಿದ್ದು, ಅದರಲ್ಲಿ 81.06 ಲಕ್ಷ ಮಹಿಳೆಯರಾಗಿದ್ದಾರೆ.

ಶಕ್ತಿ ಯೋಜನೆ ಜಾರಿಯಾಗುವುದಕ್ಕಿಂತ ಮೊದಲು ನಾಲ್ಕು ನಿಗಮಗಳ ಬಸ್‌ಗಳಲ್ಲಿ ದಿನಕ್ಕೆ 84.5 ಲಕ್ಷ ಜನ ಪ್ರಯಾಣಿಸುತ್ತಿದ್ದರು. ಆನಂತರ ಸರಾಸರಿ 1.10 ಕೋಟಿಗೆ ಏರಿಕೆಯಾಗಿದೆ. ದುಡಿಯುವ ಮಹಿಳೆಯರು ಬಸ್‌ಗಳಲ್ಲಿಯೇ ಸಂಚರಿಸುತ್ತಿದ್ದಾರೆ. ಅಲ್ಲದೇ ಶಕ್ತಿ ಯೋಜನೆಯಿಂದಾಗಿ ಧಾರ್ಮಿಕ ಕೇಂದ್ರ, ಪ್ರವಾಸಿ ತಾಣಗಳ ಸಹಿತ ವಿವಿಧೆಡೆ ಭೇಟಿ ನೀಡುವವರ ಸಂಖ್ಯೆ ಹೆಚ್ಚಾಗಿದೆ.



ಅತಿ ಹೆಚ್ಚು ಮಹಿಳೆಯರನ್ನು ಕರೆದೊಯ್ದ ಹಿರಿಮೆಗೆ ಬಿಎಂಟಿಸಿ ಪಾತ್ರವಾಗಿದೆ. ಬಿಎಂಟಿಸಿ ಬಸ್‌ಗಳಲ್ಲಿ 157.83 ಕೋಟಿ ಬಾರಿ ಮಹಿಳೆಯರು ಇಲ್ಲಿವರೆಗೆ ಸಂಚರಿಸಿದ್ದಾರೆ. ಕೆಎಸ್‌ಆರ್‌ಟಿಸಿಯಲ್ಲಿ 150.97 ಕೋಟಿ, ಎನ್‌ಡಬ್ಲ್ಯುಕೆಆರ್‌ಟಿಸಿಯಲ್ಲಿ 116.34 ಕೋಟಿ ಹಾಗೂ ಕೆಕೆಆರ್‌ಟಿಸಿಯಲ್ಲಿ 71.84 ಕೋಟಿ ಬಾರಿ ಪ್ರಯಾಣಿಸಿದ್ದಾರೆ.

ಟಿಕೆಟ್ ದರದ ಆಧಾರದಲ್ಲಿ ಕೆಎಸ್‌ಆರ್‌ಟಿಸಿ ಮುಂದಿದೆ. ಮಹಿಳೆಯರ ಟಿಕೆಟ್ ಮೌಲ್ಯ ಕೆಎಸ್‌ಆರ್‌ಟಿಸಿಯಲ್ಲಿ ₹4,786 ಕೋಟಿಯಾಗಿದೆ. ಟಿಕೆಟ್ ಮೌಲ್ಯಗಳು ಎನ್‌ಡಬ್ಲ್ಯುಆರ್‌ಟಿಸಿಯಲ್ಲಿ ₹3,115 ಕೋಟಿ, ಕೆಕೆಆರ್‌ಟಿಸಿಯಲ್ಲಿ ₹2521 ಕೋಟಿ, ಬಿಎಂಟಿಸಿಯಲ್ಲಿ ₹2169 ಕೋಟಿಯಾಗಿವೆ.

‘ಟಿಕೆಟ್ ವಿತರಿಸಲಿರುವ ಸಿಎಂ, ಡಿಸಿಎಂ’

‘ಶಕ್ತಿ ಯೋಜನೆಯಡಿ ಮಹಿಳೆಯರಿಗೆ ಉಚಿತವಾಗಿ ವಿತರಿಸಿದ ಟಿಕೆಟ್‌ಗಳ ಸಂಖ್ಯೆ 500 ಕೋಟಿ ತಲುಪಲಿದ್ದು, ಈ ಮೈಲುಗಲ್ಲಿನ ಸಂಭ್ರಮಕ್ಕಾಗಿ ಜುಲೈ 14ರಂದು ವಿಶಿಷ್ಟವಾಗಿ ಕಾರ್ಯಕ್ರಮ ಆಯೋಜಿಸಲಾಗುವುದು’ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ‘ಪ್ರಜಾವಾಣಿ’ಗೆ ತಿಳಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಆ ದಿನ ಯಾವುದಾದರೂ ಒಂದು ಬಸ್‌ನಲ್ಲಿ ಸಂಚರಿಸಿ ಟಿಕೆಟ್ ನೀಡಲಿದ್ದಾರೆ. ಮಹಿಳಾ ಪ್ರಯಾಣಿಕರಿಗೆ ಉಡುಗೊರೆಗಳನ್ನು ನೀಡಲಿದ್ದಾರೆ. ಅಲ್ಲದೇ ಎಲ್ಲ ಜಿಲ್ಲೆಗಳಲ್ಲಿ ಒಂದು ಬಸ್ ಅನ್ನು ಅಲಂಕರಿಸಿ ಪೂಜೆ ಸಲ್ಲಿಸಲಾಗುವುದು. ಮಹಿಳೆಯರಿಗೆ ಸಿಹಿ, ಹೂವು ಹಂಚಲಾಗುವುದು ಎಂದರು.

ಹಲವೆಡೆ ಉತ್ತಮ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಲವೆಡೆ ಶುಕ್ರವಾರ ಮಧ್ಯಾಹ್ನದಿಂದ ಉತ್ತಮವಾಗಿ ಮಳೆ ಸುರಿದು, ತಂಪಾದ ವಾತಾವರಣ ಸೃಷ್ಟಿಸಿತು.



ಬೆಳಿಗ್ಗೆಯಿಂದ ಮೋಡ ಕವಿದ ವಾತಾವರಣವಿತ್ತು. ಮಧ್ಯಾಹ್ನದ ನಂತರ ಹಲವು ಪ್ರದೇಶಗಳಲ್ಲಿ ಮಳೆ ಸುರಿಯಿತು. ಪ್ರಮುಖ ರಸ್ತೆಗಳಲ್ಲಿ ನೀರು ನಿಂತಿದ್ದರಿಂದ ವಾಹನ ಸವಾರರು ಪರದಾಡಿದರು. ವಾಹನ ಸಂಚಾರ ನಿಧಾನಗತಿಯಲ್ಲಿ ಇದ್ದ ಕಾರಣ ದಟ್ಟಣೆ ಉಂಟಾಗಿತ್ತು.

ಶುಕ್ರವಾರ ತಡರಾತ್ರಿಯವರೆಗೂ ಕೆಲವು ಪ್ರದೇಶಗಳಲ್ಲಿ ತುಂತುರು ಮಳೆಯಾಯಿತು. ದೊಡ್ಡಕನ್ನಲ್ಲಿಯಿಂದ ಇಬ್ಲೂರು, ರೂಪೇನ ಅಗ್ರಹಾರದಿಂದ ಬೊಮ್ಮನಹಳ್ಳಿ, ಹೆಬ್ಬಾಳ ಜಂಕ್ಷನ್, ಎಂಪಿಎಸ್‌ನಿಂದ ಎಸ್‌ಪಿ ರಸ್ತೆ, ಕ್ವೀನ್ಸ್ ಜಂಕ್ಷನ್‌ನಿಂದ ಅನಿಲ್ ಕುಂಬ್ಳೆ ವೃತ್ತ, ಕಾಡುಗೋಡಿಯಿಂದ ಬೆಳತ್ತೂರುವರೆಗಿನ ರಸ್ತೆಗಳಲ್ಲಿ ನೀರು ತುಂಬಿಕೊಂಡು ವಾಹನ ಸಂಚಾರಕ್ಕೆ ಅಡ್ಡಿಯಾಗಿತ್ತು.

ವಿದ್ಯಾಪೀಠದಲ್ಲಿ 3.2 ಸೆಂ.ಮೀ, ರಾಜರಾಜೇಶ್ವರಿ ನಗರದಲ್ಲಿ 2.6 ಸೆಂ.ಮೀ, ನಾಯಂಡಹಳ್ಳಿಯಲ್ಲಿ 1.9 ಸೆಂ.ಮೀ, ಬೊಮ್ಮನಹಳ್ಳಿ, ದೊಡ್ಡಬಿದರಕಲ್ಲುನಲ್ಲಿ ತಲಾ 1.8 ಸೆಂ.ಮೀ, ಯಲಹಂಕದಲ್ಲಿ 1.65 ಸೆಂ.ಮೀ, ಪಟ್ಟಾಭಿರಾಮನಗರದಲ್ಲಿ 1.35 ಸೆಂ.ಮೀ, ಕೋರಮಂಗಲದಲ್ಲಿ 1.25 ಸೆಂ.ಮೀ, ಹೆಮ್ಮಿಗೆಪುರ, ಹಂಪಿ ನಗರ, ಕೆಂಗೇರಿಯಲ್ಲಿ ತಲಾ 1.1 ಸೆಂ.ಮೀ ಮಳೆಯಾಯಿತು.

ಆಹಾರದ ಗುಣಮಟ್ಟದ ಬಗ್ಗೆ ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆ ಪರಿಶೀಲನೆ

ಬೀದಿ ಬದಿ ವ್ಯಾಪಾರ: 406 ಮಂದಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಹಾರ ಸುರಕ್ಷತೆ, ಗುಣಮಟ್ಟ ಮತ್ತು ನೈರ್ಮಲ್ಯಕ್ಕೆ ಸಂಬಂಧಿಸಿದಂತೆ ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆಯ ಅಧಿಕಾರಿಗಳು ಜೂನ್ ತಿಂಗಳಲ್ಲಿ ರಾಜ್ಯದಾದ್ಯಂತ 1,557 ಬೀದಿ ಬದಿ ಆಹಾರ ಮಾರಾಟ ಘಟಕಗಳನ್ನು ಪರಿಶೀಲಿಸಿದ್ದಾರೆ. ಕಳಪೆ ಗುಣಮಟ್ಟದ ಆಹಾರ ವಿತರಣೆ ಹಾಗೂ ಶುಚಿತ್ವ ಕಾಯ್ದುಕೊಳ್ಳದ 406 ಮಾರಾಟಗಾರರಿಗೆ ನೋಟಿಸ್ ನೀಡಿದ್ದಾರೆ.

ಜೂನ್ 7 ರಂದು ವಿಶ್ವ ಆಹಾರ ಸುರಕ್ಷತಾ ದಿನ ಇದ್ದ ಕಾರಣ, ಇಡೀ ತಿಂಗಳು ಬೀದಿ ಬದಿ ಹಾಗೂ ಹೋಟೆಲ್‌ಗಳಲ್ಲಿನ ಆಹಾರದ ಗುಣಮಟ್ಟವನ್ನು ಪರೀಕ್ಷಿಸಲಾಗಿದೆ.

‘ಬೀದಿ ಬದಿ ಆಹಾರದ ಮಾರಾಟಕ್ಕೆ ಸಂಬಂಧಿಸಿದಂತೆ ಗುಣಮಟ್ಟ, ನೈರ್ಮಲ್ಯ ಕಾಯ್ದುಕೊಳ್ಳದ ಮಾರಾಟಗಾರರಿಗೆ ಒಟ್ಟು ₹44,500 ದಂಡ ವಿಧಿಸಲಾಗಿದೆ. ಇದೇ ವೇಳೆ 866 ಬೀದಿ ಬದಿ ಆಹಾರ ಮಾರಾಟ ಘಟಕಗಳಿಗೆ ಇಲಾಖೆಯಡಿ ಉಚಿತ ನೋಂದಣಿಯನ್ನು ಒದಗಿಸಲಾಗಿದೆ. ಆಹಾರದ ಗುಣಮಟ್ಟ ಕಾಯ್ದುಕೊಳ್ಳುವಿಕೆ, ಕೌಶಲ ವೃದ್ಧಿಗೆ ಸಂಬಂಧಿಸಿದಂತೆ 1,240 ಬೀದಿ ಬದಿ ಆಹಾರ ಮಾರಾಟಗಾರರಿಗೆ ತರಬೇತಿ ನೀಡಲಾಗಿದೆ’ ಎಂದು ಇಲಾಖೆ ಆಯುಕ್ತರು ತಿಳಿಸಿದ್ದಾರೆ.




‘ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ 2005ರ ಅಡಿ ರಾಜ್ಯದಾದ್ಯಂತ 184 ಬಸ್ ನಿಲ್ದಾಣಗಳಲ್ಲಿ, 871 ಆಹಾರ ಮಳಿಗೆಗಳನ್ನು ಪರಿಶೀಲನೆ ನಡೆಸಲಾಗಿದೆ. ನಿಗದಿತ ಮಾನದಂಡ ಪಾಲಿಸದ 216 ಮಳಿಗೆಗಳಿಗೆ ನೋಟಿಸ್ ನೀಡಿದ್ದು, ₹55 ಸಾವಿರ ದಂಡ ವಿಧಿಸಲಾಗಿದೆ. 95 ಆಹಾರ ಮಾದರಿಗಳನ್ನು ವಿಶ್ಲೇಷಣೆ ನಡೆಸಲು ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ’ ಎಂದು ಹೇಳಿದ್ದಾರೆ.

ಹೋಟೆಲ್ ಪರಿಶೀಲನೆ: ‘ಆಹಾರ ಸುರಕ್ಷತೆ, ಗುಣಮಟ್ಟ ಮತ್ತು ನೈರ್ಮಲ್ಯಕ್ಕೆ ಸಂಬಂಧಿಸಿದಂತೆ ರಾಜ್ಯದಾದ್ಯಂತ 720 ಹೋಟೆಲ್, ರೆಸ್ಟೋರೆಂಟ್‌ಗಳನ್ನು ಪರಿಶೀಲಿಸಲಾಗಿದೆ. ಇವುಗಳಲ್ಲಿ ಗುಣಮಟ್ಟ ಮತ್ತು ನೈರ್ಮಲ್ಯಕ್ಕೆ ಆದ್ಯತೆ ನೀಡದ 183 ಹೋಟೆಲ್‌ಗಳಿಗೆ ನೋಟಿಸ್ ನೀಡಿ, ಒಟ್ಟು ₹21,500 ದಂಡ ವಿಧಿಸಲಾಗಿದೆ. 234 ಕುಡಿಯುವ ನೀರಿನ ಮಾದರಿಗಳನ್ನು ಸಂಗ್ರಹಿಸಿ, ವಿಶ್ಲೇಷಣೆ ನಡೆಸಲು ಪ್ರಯೋಗಾಲಯಕ್ಕೆ ಸಲ್ಲಿಸಲಾಗಿದೆ’ ಎಂದು ತಿಳಿಸಿದ್ದಾರೆ.

‘ರಾಜ್ಯದಾದ್ಯಂತ 604 ಅಂಗನವಾಡಿ ಕೇಂದ್ರಗಳಿಗೆ ಭೇಟಿ ನೀಡಿ, 541 ಆಹಾರ ಮಾದರಿಗಳನ್ನು ವಿಶ್ಲೇಷಣೆಗಾಗಿ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ಆಹಾರ ಮಾದರಿಗಳ ವಿಶ್ಲೇಷಣಾ ಫಲಿತಾಂಶಗಳ ಅನ್ವಯ ಕಾನೂನಾತ್ಮಕ ಕ್ರಮಗಳನ್ನು ಜರುಗಿಸಲಾಗುವುದು’ ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

‘ಔಷಧ ಮಳಿಗೆ ಪರವಾನಗಿ ಅಮಾನತು’



‘ಜೂನ್ ತಿಂಗಳಲ್ಲಿ 2,544 ಔಷಧ ಮಳಿಗೆಗಳನ್ನು ಪರಿಶೀಲನೆ ನಡೆಸಲಾಗಿದ್ದು, ಔಷಧ ಕಾಂತಿವರ್ಧಕ ಕಾಯ್ದೆ 1940ರ ಅಡಿ 133 ಔಷಧ ಮಳಿಗೆಗಳ ಪರವಾನಗಿ ಅಮಾನತು ಮಾಡಲಾಗಿದೆ. 20 ಮಳಿಗೆಗಳ ಪರವಾನಗಿ ರದ್ದುಪಡಿಸಲಾಗಿದೆ. ಔಷಧ ಪ್ರಯೋಗಾಲಯಗಳಲ್ಲಿ 1,333 ಔಷಧ ಮಾದರಿಗಳನ್ನು ವಿಶ್ಲೇಷಿಸಲಾಗಿದ್ದು, ಇವುಗಳಲ್ಲಿ 41 ಔಷಧ ಮಾದರಿಗಳು ಕಳಪೆ ಗುಣಮಟ್ಟ ಹೊಂದಿವೆ ಎನ್ನುವುದು ದೃಢಪಟ್ಟಿದೆ’ ಎಂದು ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆ ತಿಳಿಸಿದೆ.

‘ಮಾದಕ ವಸ್ತುಗಳ ದುರ್ಬಳಕೆಗೆ ಸಂಬಂಧಿಸಿದಂತೆ 233 ಔಷಧ ಮಳಿಗೆಗಳಿಗೆ ನೋಟಿಸ್ ನೀಡಲಾಗಿದೆ. ಔಷಧಗಳಿಗೆ ಸಂಬಂಧಿಸಿದಂತೆ ಪ್ರಮಾಣಿತ ಗುಣಮಟ್ಟ ಹೊಂದಿರದ ₹40.48 ಲಕ್ಷ ಮೌಲ್ಯದ ಔಷಧವನ್ನು ಮಾರುಕಟ್ಟೆಯಿಂದ ಹಿಂಪಡೆದು, ಜಪ್ತಿ ಮಾಡಲಾಗಿದೆ’ ಎಂದು ಮಾಹಿತಿ ನೀಡಿದೆ.

ಬೆಂಗಳೂರು ರೇಸ್

ಐಸ್ ಆಫ್ ಫೈರ್ ಗೆಲ್ಲುವ ನಿರೀಕ್ಷೆ

ಕೋರಮಂಡೆಲ್ ಗ್ರೋಮೋರ್ ಬೆಂಗಳೂರು ಮಿಲಿಯನ್ ಶನಿವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಐಸ್ ಆಫ್ ಫೈರ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1. **ಸ್ಕ್ವಾಡರಾನ್ ಕಪ್:** 1400 ಮೀ. ವೆರ್ರಜ್ಜಾನೊ 3, ಕ್ಯಾಸ್ಟಾಕ್ಸ್ 1, ಸೀ ಡೈಮಂಡ್ 6
2. **ಕೋಲ್ಕತ ಕಪ್:** 1400 ಮೀ. ಸ್ಟ್ರಾವಿನ್‌ಸ್ಕಿ 8, ಬ್ಲೂ ಗಾಡ್ 2, ಮಿಸ್ಟಿಕಲ್ ಏರ್ 5
3. **ದೆಹಲಿ ಕಪ್:** 1600 ಮೀ. ಮಹ್ಲೆರ್ 4, ಆಲಂಗಿರ್ 1, ಸಸ್ಸಿ ಸಾರ 2
4. **ಮೈಸೂರು ಕಪ್:** 1400 ಮೀ. ಯುವರ್ ಅನ್‌ಫಾರ್ಗೆಟಬಲ್ 1, ಸ್ಟಾರ್ ಆಫ್ ಇಂಡಿಯಾ 5, ಹೈಪರ್‌ಡ್ರೈವ್ 3
5. **ಹೂವ್ಸ್ ಆಫ್ ಸ್ಟೀಲ್ ಮಿಲಿಯನ್ – ಡಿ.1:** 1400 ಮೀ. ಟರ್ಫ್ ಪ್ಯಾರಡೈಸ್ 4, ಅಗ್ರೇಡರ್ 1, ಸಿಲ್ವರ್ ಕ್ವೆಸ್ಟ್ 8
6. **ಕೋರಮಂಡೆಲ್ ಗ್ರೋಮೋರ್ ಬೆಂಗಳೂರು ಮಿಲಿಯನ್:** 1400 ಮೀ. ಐಸ್ ಆಫ್ ಫೈರ್ 5, ಬಿಗ್ ಬೇ 1, ಬಿಷಪ್ 2
7. **ಚೆನ್ನೈ ಕಪ್:** 1600 ಮೀ. ಎಂಫಾಟಿಕ್ 4, ರಾಕ್ ಬ್ಯಾಂಕ್ 7, ಆಲ್ ಅಟ್ರ್ಯಾಕ್ಷನ್ 2
8. **ಹೂವ್ಸ್ ಆಫ್ ಸ್ಟೀಲ್ ಮಿಲಿಯನ್ – ಡಿ.2:** 1400 ಮೀ.

ಉತ್ತಮ ಬೆಟ್: ಮಹ್ಲೆರ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	3,4,5	6,7,8

ಮನಗೂಳಿ: ಸ್ನೇಹಿತರಿಂದಲೇ ಬ್ಯಾಂಕ್ ದರೋಡೆ

39 ಕೆ.ಜಿ ಆಭರಣ ವಶ–ಬಂಧಿತರಲ್ಲಿ ಬ್ಯಾಂಕ್, ರೈಲ್ವೆ ನೌಕರರು, ಅತಿಥಿ ಉಪನ್ಯಾಸಕರು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಬಂಧಿತರೆಲ್ಲರೂ ಹುಬ್ಬಳ್ಳಿಯವರು, ಸ್ನೇಹಿತರು ಮೊದಲ ಬಾರಿಗೆ ಕೃತ್ಯ
- ವಿವಿಧ ಬ್ಯಾಂಕ್ ದರೋಡೆ ಕೃತ್ಯಗಳ ವೀಕ್ಷಣೆ

ವಿಜಯಪುರ: ಜಿಲ್ಲೆಯ ಮನಗೂಳಿ ಪಟ್ಟಣದಲ್ಲಿ ಮೇ ತಿಂಗಳಲ್ಲಿ ನಡೆದ ಕೆನರಾ ಬ್ಯಾಂಕ್ ಶಾಖೆಯಲ್ಲಿ ಕಳವು ಪ್ರಕರಣಕ್ಕೆ ಸಂಬಂಧಿಸಿದಂತೆ ಅದೇ ಬ್ಯಾಂಕ್‌ನ ಹಿಂದಿನ ಹಿರಿಯ ವ್ಯವಸ್ಥಾಪಕ, ರೈಲ್ವೆ ಇಲಾಖೆ ಮೂವರು ನೌಕರರು, ಧಾರವಾಡದ ಸರ್ಕಾರಿ ಪ್ರಥಮದರ್ಜೆ ಕಾಲೇಜಿನ ಅತಿಥಿ ಉಪನ್ಯಾಸಕ ಮತ್ತು ವಿವಿಧ ಖಾಸಗಿ ಕಂಪನಿಗಳ ನೌಕರರು, ಲಾರಿ ಚಾಲಕ, ಎಲೆಕ್ಟ್ರಿಷಿಯನ್ ಸೇರಿ 15 ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

‘39 ಕೆಜಿ ಚಿನ್ನ, ₹1.16 ಕೋಟಿ ನಗದು, ಕೃತ್ಯಕ್ಕೆ ಬಳಸಿದ ರೈಲ್ವೆ ಇಲಾಖೆಗೆ ಸೇರಿದ ಸರಕುಸಾಗಣೆ ಲಾರಿ, 4 ವಾಕಿಟಾಕಿ, ಪಿಸ್ತೂಲ್ ಮಾದರಿಯ ಸಿಗರೇಟ್ ಲೈಟರ್, ಎರಡು ಗ್ಯಾಸ್ ಸಿಲಿಂಡರ್, ಒಂದು ಆಮ್ಲಜನಕ ಸಿಲಿಂಡರ್, ಬರ್ನಿಂಗ್ ಗನ್, ನಕಲಿ ಕೀಲಿ ಕೈ, ವಿವಿಧ ಕಂಪನಿಗಳ ಐದು ಕಾರು ವಶಕ್ಕೆ ಪಡೆಯಲಾಗಿದೆ.

‘ಬಂಧಿತರು ₹ 1.16 ಕೋಟಿ ನಗದನ್ನು ಗೋವಾದ ಕ್ಯಾಸಿನೊವೊಂದರಲ್ಲಿ ಜಮೆ ಮಾಡಿದ್ದರು’ ಎಂದು ಬೆಳಗಾವಿ ಉತ್ತರ ವಲಯ ಐಜಿಪಿ ಚೇತನ್ ಸಿಂಗ್ ರಾಥೋಡ್ ಶುಕ್ರವಾರ ಸುದ್ದಿಗಾರರಿಗೆ ತಿಳಿಸಿದರು.



ಕೆನರಾ ಬ್ಯಾಂಕ್‌ನ ಮನಗೂಳಿ ಶಾಖೆಯಲ್ಲಿ ನಡೆದಿದ್ದ ಕಳವು ಪ್ರಕರಣಕ್ಕೆ ಸಂಬಂಧಿಸಿ ವಶಪಡಿಸಿಕೊಂಡಿರುವ ಚಿನ್ನ, ನಗದನ್ನು ಐಜಿಪಿ ಚೇತನ್ ಸಿಂಗ್ ರಾಥೋಡ್ ಮತ್ತು ವಿಜಯಪುರ ಜಿಲ್ಲಾ ಎಸ್ಪಿ ಲಕ್ಷ್ಮಣ ನಿಂಬರಗಿ ವೀಕ್ಷಿಸಿದರು –ಪ್ರಜಾವಾಣಿ ಚಿತ್ರ

‘ಮನಗೂಳಿ ಕೆನರಾ ಬ್ಯಾಂಕ್‌ನ ಹಿಂದಿನ ಹಿರಿಯ ವ್ಯವಸ್ಥಾಪಕ ವಿಜಯಕುಮಾರ್ ಮಿರಿಯಾಲ (41), ಖಾಸಗಿ ಸಂಸ್ಥೆಯ ಉದ್ಯೋಗಿ ಚಂದ್ರಶೇಖರ ನೆರೆಲ್ಲಾ (38), ಸುನೀಲ ಮೋಕಾ (40) ಅವರನ್ನು ಹಿಂದೆಯೇ ಬಂಧಿಸಿ, ₹10.75 ಕೋಟಿ ಮೌಲ್ಯದ 10.5 ಕೆಜಿ ಚಿನ್ನಾಭರಣ ಮತ್ತು ಕರಗಿಸಿದ್ದ ಚಿನ್ನದ ಗಟ್ಟಿ ವಶಪಡಿಸಿಕೊಳ್ಳಲಾಗಿತ್ತು’ ಎಂದು ವಿಜಯಪುರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ ತಿಳಿಸಿದರು.

‘ಸಿನಿಮಾ ನೋಡಿ ಯೋಜನೆ’

ಎಲ್ಲ ಬಂಧಿತರು ಹುಬ್ಬಳ್ಳಿಯವರು ಮತ್ತು ಸ್ನೇಹಿತರು. ಇದೇ ಮೊದಲ ಬಾರಿಗೆ ಕಳವು ಕೃತ್ಯ ನಡೆಸಿದ್ದರು. ಸಿನಿಮಾ, ಧಾರಾವಾಹಿಗಳನ್ನು ನೋಡಿ ಬ್ಯಾಂಕ್ ದರೋಡೆಗೆ ಯೋಜನೆ ರೂಪಿಸಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಕೃತ್ಯಕ್ಕೂ ಮುನ್ನ ರಾಜ್ಯ, ದೇಶದ ವಿವಿಧೆಡೆ ಹಿಂದೆ ನಡೆದಿದ್ದ ದೊಡ್ಡ ಬ್ಯಾಂಕ್ ದರೋಡೆ ಪ್ರಕರಣಗಳನ್ನು ಅಧ್ಯಯನ ಮಾಡಿದ್ದರು ಎಂದು ವಿವರಿಸಿದ್ದಾರೆ.

ನೈರುತ್ಯ ರೈಲ್ವೆ ನೌಕರರಾದ ಬಾಲರಾಜ ಮಣಿಕಮ್ ಯೆರುಕುಲಾ (40), ಬಾಬುರಾವ್ ಮಿರಿಯಾಲ (40), ಸುಲೇಮಾನ್ ವೆಸ್ಲಿ ಪಲುಕುರಿ (40), ಧಾರವಾಡ ಸರ್ಕಾರಿ ಪ್ರಥಮದರ್ಜೆ ಕಾಲೇಜಿನ ಅತಿಥಿ ಉಪನ್ಯಾಸಕ ಪೀಟರ್ (40), ಖಾಸಗಿ ಕಂಪನಿಯ ನೌಕರ ಗುಂಡು ಜೋಸೆಫ್ (28), ಚಂದನರಾಜ್ (29), ಚಾಲಕ ಇಜಾಜ್ ಧಾರವಾಡ (34), ವಾಚಮನ್ ಸುಸೈರಾಜ್ (44), ನಕಲಿ ಕೀಲಿ ಕೈ ತಯಾರಿಕೆ ಅಂಗಡಿಯ ಮಹಮ್ಮದ್ ಆಸೀಫ್ ಕಲ್ಲೂರ (31), ಚಾಲಕ ಅನಿಲ ಮಿರಿಯಾಲ (40), ಖಾಸಗಿ ಸಂಸ್ಥೆ ಉದ್ಯೋಗಿ ಅಬು ಅಲಿಯಾಸ್ ಮೋಹನ ಕುಮಾರ (42), ಎಲೆಕ್ಟ್ರಿಷಿಯನ್ ಮರಿಯಾದಾಸ(40) ಬಂಧಿತ ಆರೋಪಿಗಳು.

58 ಕೆ.ಜಿ ಅಲ್ಲ, 40 ಕೆ.ಜಿ.ಚಿನ್ನ: ‘ಕೃತ್ಯ ನಡೆದಿದ್ದ ವೇಳೆ ಎಫ್‌ಐಆರ್‌ನಲ್ಲಿ 58.97 ಕೆಜಿ ಚಿನ್ನಾಭರಣ ಕಳವಾಗಿದೆ ಎಂದು ಬ್ಯಾಂಕ್ ಅಧಿಕಾರಿಗಳು ತಿಳಿಸಿದ್ದರು. ತನಿಖೆ ನಡೆಸಿದಾಗ 40.7 ಕೆಜಿ ಚಿನ್ನ ಕಳವು ಆಗಿರುವುದು ಖಚಿತವಾಯಿತು. ಇದರ ಕುರಿತು ಬ್ಯಾಂಕ್‌ನ ಅಧಿಕಾರಿಗಳು ಲಿಖಿತ ವರದಿ ನೀಡಿದ್ದಾರೆ’ ಎಂದು ಅಧಿಕಾರಿಗಳು ಸ್ಪಷ್ಟಪಡಿಸಿದರು.

ಸುದ್ದಿ 2 ನಿಮಿಷ

ಟಿಟಿಡಿಗೆ ಹಿಂದೂಯೇತರರ ನೇಮಕ: ಸಚಿವ ಟೀಕೆ

ಹೈದರಾಬಾದ್: ತಿರುಮಲ ತಿರುಪತಿ ದೇವಸ್ಥಾನದಲ್ಲಿ (ಟಿಟಿಡಿ) ಸಾವಿರಕ್ಕೂ ಹೆಚ್ಚು ಹಿಂದೂಯೇತರರಿಗೆ ಉದ್ಯೋಗ ನೀಡಿರುವುದಕ್ಕೆ ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ಬಂಡಿ ಸಂಜಯ್ ಕುಮಾರ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.

‘ತಿರುಮಲ ಹಿಂದೂಗಳ ಆಸ್ತಿ’ ಎಂದು ಹೇಳಿದ ಅವರು, ಟಿಟಿಡಿಯಲ್ಲಿರುವ ಹಿಂದೂಯೇತರ ಸಿಬ್ಬಂದಿಯನ್ನು ಕೆಲಸದಿಂದ ತಕ್ಷಣ ತೆಗೆದುಹಾಕಬೇಕು ಎಂದು ಶುಕ್ರವಾರ ಒತ್ತಾಯಿಸಿದರು.

‘ಹಣೆಗೆ ಕುಂಕುಮ ಹಚ್ಚಿಕೊಂಡ ಹಿಂದೂಗಳಿಗೆ ಮಸೀದಿ ಅಥವಾ ಚರ್ಚುಗಳಲ್ಲಿ ನೀವು ಉದ್ಯೋಗ ನೀಡುತ್ತೀರಾ’ ಎಂದು ಅವರು ಪ್ರಶ್ನಿಸಿದರು.

ಸರ್ಕಾರಗಳು ಬದಲಾದರೂ ಮತ್ತು ದೇವಸ್ಥಾನದ ಆಡಳಿತದಲ್ಲಿ ಹೊಸಬರು ಬಂದರೂ ಹಿಂದೂಯೇತರರಿಗೆ ಉದ್ಯೋಗ ನೀಡುವ ಈ ವ್ಯವಸ್ಥೆ ಮುಂದುವರಿದಿರುವುದಕ್ಕೆ ಅವರು ಅಸಮಾಧಾನ ಹೊರಹಾಕಿದರು.



‘ದುರದೃಷ್ಟಕರ ಸಂಗತಿಯೆಂದರೆ, ಇತರ ಧರ್ಮಗಳ ಸಾವಿರಕ್ಕೂ ಹೆಚ್ಚು ಜನರು ಟಿಟಿಡಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಇವರೆಲ್ಲರೂ ಹಿಂದೂ ಧರ್ಮ ಅಥವಾ ದೇವರನ್ನು ನಂಬುವುದಿಲ್ಲ. ಅಂತಹವರಿಗೆ ಏಕೆ ಉದ್ಯೋಗ ನೀಡಬೇಕು? ಇದು ಒಳ್ಳೆಯ ಬೆಳವಣಿಗೆಯಲ್ಲ. ಅವರನ್ನು ತಕ್ಷಣ ಕೆಲಸದಿಂದ ತೆಗೆದುಹಾಕಬೇಕು. ಸನಾತನ ಧರ್ಮಕ್ಕೆ ವಿರುದ್ಧವಾಗಿ ಕೆಲಸ ಮಾಡುವ ವ್ಯಕ್ತಿಗಳನ್ನು ಟಿಟಿಡಿಯಲ್ಲಿ ಉಳಿಸಿಕೊಳ್ಳುವುದು ತಪ್ಪು’ ಎಂದರು.

ಮಾತುಕತೆ ವಿಫಲ: ಮುಂದುವರಿದ ಪಾಲಿಕೆ ನೌಕರರ ಹೋರಾಟ

ಬೆಂಗಳೂರು: ರಾಜ್ಯದ 10 ಮಹಾನಗರ ಪಾಲಿಕೆಗಳ ನೌಕರರ ಬೇಡಿಕೆಗೆ ಸಂಬಂಧಿಸಿದಂತೆ ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿಯವರೊಂದಿಗೆ ಶುಕ್ರವಾರ ನಡೆದ ಮಾತುಕತೆ ವಿಫಲವಾಗಿದ್ದು, ಅನಿರ್ದಿಷ್ಟಾವಧಿ ಮುಷ್ಕರ ಮುಂದುವರಿಸಲು ನೌಕರರು ನಿರ್ಧರಿಸಿದ್ದಾರೆ.

ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿ ದೀಪಾ ಚೋಳನ್ ಅವರು ಕರ್ನಾಟಕ ರಾಜ್ಯ ಮಹಾನಗರ ಪಾಲಿಕೆ ನೌಕರರ ಸಂಘಗಳ ಪರಿಷತ್ತಿನ ಪದಾಧಿಕಾರಿಗಳನ್ನು ಮಾತುಕತೆಗೆ ಕರೆದಿದ್ದರು. ವಿವಿಧ ನ್ಯಾಯಯುತ ಬೇಡಿಕೆಗಳ ಈಡೇರಿಸಲು ನೌಕರರು ಪಟ್ಟು ಹಿಡಿದರು.

‘ನಮ್ಮ ನ್ಯಾಯಯುತ ಬೇಡಿಕೆಗಳು ಈಡೇರಿಸಲು ಸರ್ಕಾರ ವಿಫಲವಾಗಿದೆ. ಕಾರ್ಯದರ್ಶಿಗಳ ಜೊತೆಯಲ್ಲಿ ನಡೆದ ಚರ್ಚೆ ಫಲಪ್ರದವಾಗಿಲ್ಲ. ಆದ್ದರಿಂದ ಅನಿರ್ದಿಷ್ಟಾವಧಿ ಮುಷ್ಕರ ಮುಂದುವರೆಯಲಿದೆ’ ಎಂದು ಪರಿಷತ್‌ನ ರಾಜ್ಯ ಘಟಕದ ಅಧ್ಯಕ್ಷ ಎ. ಅಮೃತ್‌ರಾಜ್ ತಿಳಿಸಿದರು.

ಹುಬ್ಬಳ್ಳಿ–ಧಾರವಾಡ, ತುಮಕೂರು, ಮಂಗಳೂರು, ಶಿವಮೊಗ್ಗ, ದಾವಣಗೆರೆ, ಮೈಸೂರು, ವಿಜಯಪುರ ಹಾಗೂ ಕಲಬುರಗಿ, ಬೆಳಗಾವಿ, ಬಳ್ಳಾರಿ ಮಹಾನಗರ ಪಾಲಿಕೆಗಳಲ್ಲಿ ಹೋರಾಟ ಮುಂದುವರೆಯಲಿದೆ ಎಂದು ಹೇಳಿದರು.

ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಕೆ.ಷಡಕ್ಷರಿ, ಸಚಿವಾಲಯ ನೌಕರರ ಸಂಘದ ಅಧ್ಯಕ್ಷ ರಮೇಶ್ ಸಂಗಾ ಮತ್ತು 10 ಮಹಾನಗರ ಪಾಲಿಕೆಗಳ ಸಂಘದ ಅಧ್ಯಕ್ಷರು, ಪದಾಧಿಕಾರಿಗಳು ಚರ್ಚೆಯಲ್ಲಿ ಭಾಗವಹಿಸಿದ್ದರು.

ಬೇಡಿಕೆಗಳು: 7ನೇ ವೇತನ ಆಯೋಗದ ವರದಿ ಮಹಾನಗರ ಪಾಲಿಕೆ ನೌಕರರಿಗೆ ವಿಸ್ತರಣೆ, ವೃಂದ ಮತ್ತು ನೇಮಕಾತಿಯಲ್ಲಿ ತಿದ್ದುಪಡಿ ಹಾಗೂ ಕೆಜಿಐಡಿ ಮತ್ತು ಜಿಪಿಎಫ್ ಸೌಲಭ್ಯ ಹಾಗೂ ಆರೋಗ್ಯ ಸಂಜೀವಿನಿ ಯೋಜನೆ ಜಾರಿಯಾಗಬೇಕು. ಮಹಾನಗರ ಪಾಲಿಕೆ ಅಧಿಕಾರಿ ಮತ್ತು ನೌಕರರಿಗೆ ಪ್ರತಿವರ್ಷ ಕ್ರೀಡಾಕೂಟ ಆಯೋಜನೆ ಮಾಡಬೇಕು. ಮಹಾನಗರ ಪಾಲಿಕೆಯಲ್ಲಿ ಮುಂಬಡ್ತಿ ನೀಡಬೇಕು.

ಚಿಟಿಕೆ ಸುದ್ದಿ

ಚಿರತೆ ಕಳೇಬರ ಪತ್ತೆ: ವಿಷಪ್ರಾಶನ ಶಂಕೆ



ಬಿಆರ್‌ಟಿ ಅರಣ್ಯ ಕೊತ್ತಲವಾಡಿಯ ಕರಿಕಲ್ಲು ಕ್ವಾರಿಯಲ್ಲಿ ಗುರುವಾರ ಚಿರತೆಯ ಕಳೇಬರ ಪತ್ತೆಯಾಗಿದೆ

ಚಾಮರಾಜನಗರ: ಬಿಆರ್‌ಟಿ ಅರಣ್ಯ ವ್ಯಾಪ್ತಿಯ ಹರವೆ ಹೋಬಳಿ ತೆರಕಣಾಂಬಿ ಸಮೀಪದ ಕೊತ್ತಲವಾಡಿಯ ಕರಿಕಲ್ಲು ಕ್ವಾರಿಯಲ್ಲಿ ಗುರುವಾರ ಚಿರತೆಯ ಕಳೇಬರ ಪತ್ತೆಯಾಗಿದೆ.

ಮೃತ ಗಂಡು ಚಿರತೆಯು 5ರಿಂದ 6 ವರ್ಷ ವಯಸ್ಸಿನದ್ದಾಗಿದ್ದು, ಸಮೀಪದಲ್ಲೇ ನಾಯಿ ಹಾಗೂ ಕರುವಿನ ಕಳೇಬರವೂ ಪತ್ತೆಯಾಗಿದೆ.

ಚಿರತೆಯು ವಿಷಪ್ರಾಶನದಿಂದ ಮೃತಪಟ್ಟಿರಬಹುದು ಎಂದು ಶಂಕಿಸಲಾಗಿದೆ. ಚಿರತೆ ಸಾವಿನ ಪ್ರಕರಣ ದಾಖಲಿಸಿ ತನಿಖೆ ನಡೆಸಲಾಗುತ್ತಿದೆ ಎಂದು ಅರಣ್ಯ ಅಧಿಕಾರಿಗಳು ತಿಳಿಸಿದ್ದಾರೆ.

ಸ್ಥಳಕ್ಕೆ ಬಿಆರ್‌ಟಿ ಡಿಸಿಎಫ್ ಶ್ರೀಪತಿ, ಎಸಿಎಫ್ ಮಂಜುನಾಥ್ ಭೇಟಿ ನೀಡಿ ಪರಿಶೀಲಿಸಿದ್ದಾರೆ.

ಈಚೆಗಷ್ಟೆ, ಮಲೆ ಮಹದೇಶ್ವರ ವನ್ಯಜೀವಿ ವಿಭಾಗದಲ್ಲಿ ಐದು ಹುಲಿಗಳು ವಿಷಪ್ರಾಶನದಿಂದ ಸಾವಿಗೀಡಾಗಿದ್ದವು.

ರಸ್ತೆಯಲ್ಲೇ ಕುಸಿದು ಯೋಧ ಸಾವು



ಇಬ್ರಾಹಿಂ ದೇವಲಾಪುರ

ಬೆಳಗಾವಿ: ಇಲ್ಲಿನ ಅನಗೋಳದಲ್ಲಿ ಗುರುವಾರ, ನಿವೃತ್ತ ಯೋಧ ಇಬ್ರಾಹಿಂ ದೇವಲಾಪುರ (37) ಅವರು ನಡುರಸ್ತೆಯಲ್ಲೇ ಕುಸಿದುಬಿದ್ದು ಮೃತಪಟ್ಟಿದ್ದಾರೆ.

ಅನಗೋಳದ ಬಜಾರ್ ರಸ್ತೆಯಲ್ಲಿ ಹೋಗುವಾಗ ಕುಸಿದು ಬಿದ್ದ ಅವರನ್ನು ತಕ್ಷಣವೇ ಆಸ್ಪತ್ರೆಗೆ ಒಯ್ಯಲಾಯಿತು. ಅವರು ಹೃದಯಾಘಾತದಿಂದ ಮೃತಪಟ್ಟಿದ್ದಾರೆ ಎಂದು ವೈದ್ಯರು ಖಚಿತಪಡಿಸಿದರು.

ಪಾಲಿಕೆ ನೌಕರರ ಹೋರಾಟಕ್ಕೆ ಬಿಎಸ್‌ವೈ ಬೆಂಬಲ

ಮೈಸೂರು: ಬಡ್ತಿ ನೀಡಬೇಕು ಎಂಬುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಇಲ್ಲಿನ ಮಹಾನಗರ ಪಾಲಿಕೆ ನೌಕರರು ನಡೆಸುತ್ತಿರುವ ಪ್ರತಿಭಟನೆಯಲ್ಲಿ ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಅವರು ಶುಕ್ರವಾರ ಭಾಗವಹಿಸಿ, ಬೆಂಬಲ ಸೂಚಿಸಿದರು.

ಈ ವೇಳೆ ಮಾತನಾಡಿದ ಅವರು, ‘ಮೈಸೂರು ಮುಖ್ಯಮಂತ್ರಿಗಳ ತವರು. ಇಲ್ಲಿ ನ್ಯಾಯಕ್ಕಾಗಿ ನೌಕರರು ಪ್ರತಿಭಟಿಸುತ್ತಿದ್ದಾರೆ. ಅವರು ತಕ್ಷಣವೇ ನೌಕರರ ಬೇಡಿಕೆ ಈಡೇರಿಸಬೇಕು’ ಎಂದು ಒತ್ತಾಯಿಸಿದರು.

ಶಿವಮೊಗ್ಗ ಸಂಸದ ಬಿ.ವೈ.ರಾಘವೇಂದ್ರ ಮಾತನಾಡಿ, ‘ಹೋರಾಟದ ಧ್ವನಿಯನ್ನು ವಿಧಾನಸಭೆಗೆ ಮುಟ್ಟಿಸುವ ಕೆಲಸವನ್ನು ಪಕ್ಷ ಮಾಡುತ್ತದೆ’ ಎಂದರು.

ಕೆ.ಎಸ್.ಈಶ್ವರಪ್ಪ ವಿರುದ್ಧದ ತನಿಖೆಗೆ ಹೈಕೋರ್ಟ್ ತಡೆ

ಪ್ರಜಾವಾಣಿ ವಾರ್ತೆ



ಕೆ.ಎಸ್.ಈಶ್ವರಪ್ಪ

ಶಿವಮೊಗ್ಗ: ಆದಾಯ ಮೀರಿ ಅಕ್ರಮ ಆಸ್ತಿ ಗಳಿಸಿದ ಆರೋಪದಡಿ ಮಾಜಿ ಉಪ ಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪ, ಅವರ ಪುತ್ರ ಕೆ.ಈ.ಕಾಂತೇಶ್ ಹಾಗೂ ಸೊಸೆ ಶಾಲಿನಿ ವಿರುದ್ಧ ದಾಖಲಾಗಿರುವ ಪ್ರಕರಣದ ತನಿಖೆಗೆ ಹೈಕೋರ್ಟ್ ಗುರುವಾರ ತಡೆ ನೀಡಿದೆ.

ಶಿವಮೊಗ್ಗದ ವಕೀಲ ಬಿ.ವಿನೋದ್ ಖಾಸಗಿ ದೂರು ಸಲ್ಲಿಸಿದ್ದರು. ‘ಶಾಸಕರು- ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ಕೋರ್ಟ್ ಕ್ರಿಮಿನಲ್ ಪ್ರಕರಣ ದಾಖಲಿಸಿ, ತನಿಖೆ ನಡೆಸಲು ಲೋಕಾಯುಕ್ತ ಪೊಲೀಸರಿಗೆ ಆದೇಶಿಸಿತ್ತು. ಈಚೆಗೆ ಎಫ್‌ಐಆರ್ ದಾಖಲಿಸಲಾಗಿತ್ತು.

‘ವಕೀಲ ಬಿ.ವಿನೋದ್ ಅವರು ನನ್ನ ಹಾಗೂ ಕುಟುಂಬಸ್ಥರ ವಿರುದ್ಧ ಬ್ಲ್ಯಾಕ್ ಮೇಲ್ ಮಾಡುವ ಉದ್ದೇಶದಿಂದ ಪ್ರಕರಣ ದಾಖಲಿಸಲಾಗಿತ್ತು. ಹೀಗಾಗಿ ಅವರ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡಿದ್ದೇನೆ. ನ್ಯಾಯಾಲಯದಲ್ಲಿ ಜಯ ಸಿಕ್ಕಿದೆ’ ಎಂದು ಈಶ್ವರಪ್ಪ, ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ನೆರಳು–ಬೆಳಕಿನಾಟ

ಪ್ರಜಾವಾಣಿ ಚಿತ್ರ: ಅನೂಪ್ ರಾಘ. ಟಿ.



ಮೈಸೂರಿನ ಸರಸ್ವತಿಪುರಂನ, ವಿಶ್ವಮಾನವ ಜೋಡಿ ರಸ್ತೆಯಲ್ಲಿ ಪೈಪ್‌ಲೈನ್ ಕಾಮಗಾರಿ ನಡೆಯುತ್ತಿದ್ದು, ಗುರುವಾರ ರಾತ್ರಿ ಆ ದೂಳಿನ ನಡುವೆಯೇ ವಾಹನ ಸವಾರರು ಸಂಚರಿಸಿದ್ದು ಕ್ಯಾಮೆರಾ ಕಣ್ಣಲ್ಲಿ ಈ ರೀತಿ ಸೆರೆಯಾಯಿತು

ಕೋರ್ಟ್‌ನಲ್ಲಿ ಹೇಳಿಕೆ ದಾಖಲಿಸಿದ ದೂರುದಾರ

ಧರ್ಮಸ್ಥಳ ಗ್ರಾಮದಲ್ಲಿ ಅಪರಾಧ ಕೃತ್ಯ ಕುರಿತ ಆರೋಪ ಪ್ರಕರಣ; ಪೊಲೀಸರಿಂದ ಬಿಗಿ ಭದ್ರತೆ

ಪ್ರಜಾವಾಣಿ ವಾರ್ತೆ

ಬೆಳ್ತಂಗಡಿ (ದಕ್ಷಿಣ ಕನ್ನಡ): ‘ಧರ್ಮಸ್ಥಳ ಗ್ರಾಮದಲ್ಲಿ ಹಲವಾರು ಅಪರಾಧ ಕೃತ್ಯಗಳು ನಡೆದಿವೆ’ ಎಂದು ವಕೀಲರ ಮೂಲಕ ಪೊಲೀಸರಿಗೆ ದೂರು ನೀಡಿದ್ದ ವ್ಯಕ್ತಿ, ಶುಕ್ರವಾರ ಬೆಳ್ತಂಗಡಿ ಪ್ರಧಾನ ಸಿವಿಲ್ ನ್ಯಾಯಾಧೀಶ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ ಸಂದೇಶ್ ಕೆ. ಅವರ ಮುಂದೆ ಹಾಜರಾಗಿ ಹೇಳಿಕೆ ನೀಡಿದ್ದಾರೆ.

ವಕೀಲರಾದ ಓಜಸ್ವಿ ಗೌಡ, ಸಚಿನ್ ದೇಶಪಾಂಡೆ ಅವರ ಜೊತೆ ಕಾರಿನಲ್ಲಿ ನ್ಯಾಯಾಲಯಕ್ಕೆ ಬಂದ ಈ ವ್ಯಕ್ತಿ, ಗುರುತು ಪತ್ತೆಯಾಗದಂತೆ ತಲೆಯಿಂದ ಕಾಲಿನವರೆಗೆ ಕಪ್ಪು ಬಣ್ಣದ ಮುಸುಕು ಧರಿಸಿದ್ದರು. ಪೊಲೀಸರು ಬಿಗಿ ಭದ್ರತೆ ಒದಗಿಸಿದ್ದರು. ನಂತರ ಈ ವ್ಯಕ್ತಿಯನ್ನು ಪೊಲೀಸ್ ಠಾಣೆಗೆ ಕರೆದೊಯ್ದು ಹೇಳಿಕೆ ಪಡೆಯಲಾಯಿತು ಎಂದು ಮೂಲಗಳು ತಿಳಿಸಿವೆ.



ಮುಸುಕು ಹಾಕಿಕೊಂಡು ವಕೀಲರೊಂದಿಗೆ ಬೆಳ್ತಂಗಡಿ ನ್ಯಾಯಾಲಯಕ್ಕೆ ಹಾಜರಾದ ವ್ಯಕ್ತಿ

‘ಬೆಳ್ತಂಗಡಿ ನ್ಯಾಯಾಲಯಕ್ಕೆ ಬಂದಿದ್ದ ದೂರುದಾರರ ದೂರನ್ನು, ಬಿಎನ್‌ಎಸ್ ಸೆಕ್ಷನ್ 183ರ ಅಡಿಯಲ್ಲಿ ನ್ಯಾಯಾಲಯ ದಾಖಲಿಸಿಕೊಂಡಿದೆ’ ಎಂದು ವಕೀಲರಾದ ಓಜಸ್ವಿ ಗೌಡ ಮತ್ತು ಸಚಿನ್ ದೇಶಪಾಂಡೆ ಜಂಟಿ ಹೇಳಿಕೆಯಲ್ಲಿ ತಿಳಿಸಿದ್ದಾರೆ.

‘ದೂರುದಾರ ನ್ಯಾಯಾಲಯದಲ್ಲಿ ಹೇಳಿಕೆ ನೀಡುವಾಗ ನಿಮ್ಮಿಬ್ಬರಲ್ಲಿ ಒಬ್ಬ ವಕೀಲರು ಜೊತೆಗಿರುವಂತೆ ನಮಗೆ ತಿಳಿಸಿದ್ದರು. ತಾವು ಅನಕ್ಷರಸ್ಥರಾಗಿದ್ದು, ಈವರೆಗೆ ಯಾವುದೇ ನ್ಯಾಯಾಲಯಕ್ಕೆ ಹೋಗಿಲ್ಲ ಎಂದು ಹೇಳಿಕೊಂಡಿದ್ದರು. ಈ ಅಂಶವನ್ನು ನಾವು ನ್ಯಾಯಾಲಯಕ್ಕೆ ತಿಳಿಸಿದ್ದೆವು. ಆದರೆ, ನ್ಯಾಯಾಲಯವು ಹೇಳಿಕೆ ಪಡೆಯುವ ವೇಳೆ ವಕೀಲರು ಹಾಜರಿರುವುದನ್ನು ಒಪ್ಪಲಿಲ್ಲ’ ಎಂದು ಅವರು ತಿಳಿಸಿದ್ದಾರೆ.

‘ದೂರುದಾರರಿಗೆ ಸಾಕ್ಷಿ ರಕ್ಷಣಾ ಯೋಜನೆ 2018ರ ಅಡಿಯಲ್ಲಿ ಸೂಕ್ತ ರಕ್ಷಣೆ ಒದಗಿಸಲಾಗಿದೆ ಎಂದು ಸಂಬಂಧಪಟ್ಟ ಅಧಿಕಾರಿಗಳು ಜುಲೈ 10ರಂದು ನಮಗೆ ತಿಳಿಸಿದ್ದರು. ಈ ಕಾರಣಕ್ಕೆ ನ್ಯಾಯಾಲಯ, ದಕ್ಷಿಣ ಕನ್ನಡ ಜಿಲ್ಲೆಯ ಪೊಲೀಸ್ ಅಧಿಕಾರಿಗಳು ಮತ್ತು ಕರ್ನಾಟಕ ಸರ್ಕಾರಕ್ಕೆ ದೂರುದಾರರು ಕೃತಜ್ಞತೆ ಸಲ್ಲಿಸಿದ್ದಾರೆ’ ಎಂದು ಅವರು ಹೇಳಿದ್ದಾರೆ.

‘ಈಗಾಗಲೇ ತೆಗೆದಿರುವ ಒಂದು ತಲೆ ಬುರುಡೆಯನ್ನು ಹಸ್ತಾಂತರಿಸುವ ಕಾರ್ಯ ನಡೆಯುತ್ತಿದೆ. ಎಫ್.ಎಸ್.ಎಲ್. ತಂಡದವರು ಇದ್ದಾರೆ. ಉಳಿದ ಹೂತು ಹಾಕಿರುವ ದೇಹಗಳನ್ನು ದೂರುದಾರ ವ್ಯಕ್ತಿ ಈಗಲೂ ತೋರಿಸಲು ಸಿದ್ಧ ಇದ್ದಾರೆ. ಅದರ ಹಿಂದಿರುವ ಸಾಕ್ಷ್ಯ ನಾಶವಾಗುವ ಮೊದಲು ಅದಷ್ಟು ಬೇಗ ತನಿಖೆ ಆಗಬೇಕು. ದೂರುದಾರ ವ್ಯಕ್ತಿಗೆ ಕಸ್ಟಡಿ ಇಲ್ಲ. ಅವರು ನಮ್ಮ ಜತೆಯೇ ಇರುತ್ತಾರೆ’ ಎಂದು ವಕೀಲರು ತಿಳಿಸಿದರು

‘ನನಗೆ ಜೀವಬೆದರಿಕೆ ಒಡ್ಡಿ, ಅಪರಾಧ ಕೃತ್ಯಗಳ ಮೃತದೇಹಗಳನ್ನು ರಹಸ್ಯವಾಗಿ ವಿಲೇವಾರಿ ಮಾಡಿಸಿದ್ದಾರೆ ಹಲವಾರು ಮೃತದೇಹಗಳ ವಿಲೇವಾರಿ ಮಾಡಿದ್ದು, ಈ ಬಗ್ಗೆ ಪಾಪಪ್ರಜ್ಞೆ ಕಾಡುತ್ತಿದೆ. ನನಗೆ ಹಾಗೂ ನನ್ನ ಕುಟುಂಬದವರಿಗೆ ಕಾನೂನಾತ್ಮಕ ರಕ್ಷಣೆ ದೊರೆತರೆ ಕೃತ್ಯ ನಡೆಸಿದವರ ಮಾಹಿತಿ ಹಾಗೂ ನಾನು ಮೃತದೇಹ ವಿಲೇವಾರಿ ಮಾಡಿದ ಸ್ಥಳಗಳನ್ನು ತಿಳಿಸಲು ಸಿದ್ಧನಿದ್ದೇನೆ’ ಎಂದು ಆ ವ್ಯಕ್ತಿ ಜುಲೈ 3ರಂದು ನೀಡಿದ್ದ ದೂರಿನಲ್ಲಿ ತಿಳಿಸಿದ್ದರು.

ಅದರಂತೆ ದೂರಿನ ಬಗ್ಗೆ ಕೋರ್ಟ್ ಅನುಮತಿ ಪಡೆದು ಪ್ರಕರಣ ದಾಖಲಿಸಿದ್ದು, ಮುಂದಿನ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ತಿಳಿಸಿದ್ದರು.

ದೂರುದಾರರು ದೂರಿನಲ್ಲಿ ತಮ್ಮ ಹೆಸರು ಮತ್ತು ಮಾಹಿತಿಯನ್ನು ಗೋಪ್ಯವಾಗಿ ಇಡುವಂತೆ ವಿನಂತಿಸಿಕೊಂಡ ಕಾರಣ ಅವರ ವಿವರವನ್ನು ಬಹಿರಂಗಗೊಳಿಸಲಾಗದು ಎಂದು ಹೇಳಿದ್ದರು. ಈಗಲೂ ಪೊಲೀಸರು ಯಾವುದೇ ಮಾಹಿತಿ ನೀಡಿಲ್ಲ.

ಸಿಇಟಿ: ಆಯ್ಕೆ ದಾಖಲು ಅವಧಿ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಜನಿಯರಿಂಗ್ ಸೇರಿದಂತೆ ವೃತ್ತಿಶಿಕ್ಷಣ ಕೋರ್ಸ್‌ಗಳ ಪ್ರವೇಶಕ್ಕೆ ಸೀಟು ಹಂಚಿಕೆ ಪ್ರಕ್ರಿಯೆ ಆರಂಭವಾಗಿದ್ದು, ಸರ್ವರ್ ಸಮಸ್ಯೆಯ ಕಾರಣ ಆಯ್ಕೆಗಳನ್ನು (ಆಪ್ಷನ್) ದಾಖಲಿಸಲು ನೀಡಿದ್ದ ಅವಧಿಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಜುಲೈ 18ರವರೆಗೆ ವಿಸ್ತರಿಸಿದೆ.

ಎಂಜಿನಿಯರಿಂಗ್, ಪಶು ವೈದ್ಯಕೀಯ ಮತ್ತು ಪಶುಸಂಗೋಪನೆ, ಕೃಷಿ ವಿಜ್ಞಾನ, ಅಲೈಡ್ ಹೆಲ್ತ್‌ಸೈನ್ಸ್ ಕೋರ್ಸುಗಳಿಗೆ ಆಯ್ಕೆಗಳನ್ನು ದಾಖಲಿಸಲು ಜುಲೈ 15ರವರೆಗೆ ಅವಕಾಶ ನೀಡಲಾಗಿತ್ತು. ಕೆಲ ಪ್ರದೇಶಗಳಲ್ಲಿ ಸರ್ವರ್ ಸಮಸ್ಯೆ ಕಾಣಿಸಿಕೊಂಡ ಕಾರಣ ಅವಧಿ ವಿಸ್ತರಿಸಲಾಗಿದೆ. ಅಭ್ಯರ್ಥಿಗಳು ಆತಂಕಕ್ಕೆ ಒಳಗಾಗದೆ ಪ್ರಕ್ರಿಯೆ ಪೂರೈಸಬೇಕು. ಜುಲೈ 21ರಂದು ಅಣಕು ಸೀಟು ಹಂಚಿಕೆ ಫಲಿತಾಂಶ, ಜುಲೈ 28ರಂದು ಅಂತಿಮ ಫಲಿತಾಂಶ ಪ್ರಕಟಿಸಲಾಗುವುದು ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಹೇಳಿದ್ದಾರೆ.

ವೈದ್ಯಕೀಯ ಕೋರ್ಸ್‌ಗೆ 17ರಿಂದ ದಾಖಲೆ ಪರಿಶೀಲನೆ: ನೀಟ್-2025ಕ್ಕೆ ನೋಂದಣಿ ಮತ್ತು ಆನ್‌ಲೈನ್ ಅರ್ಜಿ ಭರ್ತಿ ಮಾಡಿ, ಶುಲ್ಕ ಪಾವತಿಸಿರುವ ಅಭ್ಯರ್ಥಿಗಳು ಅಗತ್ಯ ಮೂಲ ದಾಖಲೆಗಳ ಪರಿಶೀಲನೆಗೆ ಕೆಇಎ ಕಚೇರಿಗೆ ಜುಲೈ 17ರಿಂದ 19ರ ಒಳಗೆ ಹಾಜರಾಗಬೇಕು ಎಂದು ಸೂಚಿಸಲಾಗಿದೆ.

ಕನ್ನಡ ಭಾಷಾ ಪರೀಕ್ಷೆ: ಹೊಸದಾಗಿ ನೋಂದಣಿ ಮಾಡಿರುವ ಹೊರನಾಡು ಮತ್ತು ಗಡಿನಾಡು ಕನ್ನಡ ಅಭ್ಯರ್ಥಿಗಳಿಗೆ ಜುಲೈ 17ರಂದು ಮಧ್ಯಾಹ್ನ 3.30 ರಿಂದ ಸಂಜೆ 4.30ರವರೆಗೆ ಬೆಂಗಳೂರು ಕೇಂದ್ರದಲ್ಲಿ ಕನ್ನಡ ಭಾಷಾ ಪರೀಕ್ಷೆ ನಡೆಯಲಿದೆ.

ಕೋಟೆಕಾರ್‌ನಲ್ಲಿ 12 ಸೆಂ.ಮೀ ಮಳೆ

ಪ್ರಜಾವಾಣಿ ವಾರ್ತೆ



ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಶುಕ್ರವಾರ ಆಗಾಗ ಬಿಡುವು ಕೊಟ್ಟು ರಭಸದ ಮಳೆ ಸುರಿಯಿತು. ಉಡುಪಿ ಜಿಲ್ಲೆಯ ಕೆಲವೆಡೆ ಸಾಧಾರಣ ಮಳೆಯಾಗಿದೆ. ಶುಕ್ರವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡ 24 ತಾಸುಗಳಲ್ಲಿ ಉಳ್ಳಾಲ ತಾಲ್ಲೂಕಿನ ಕೋಟೆಕಾರ್‌ನಲ್ಲಿ 12 ಸೆಂ.ಮೀ ಮಳೆಯಾಗಿದೆ.

ಕಿನ್ಯಾದಲ್ಲಿ 10, ಮುನ್ನೂರಿನಲ್ಲಿ 9, ಬಂಟ್ವಾಳ ತಾಲ್ಲೂಕಿನ ಮಂಚಿಯಲ್ಲಿ 9 ಸೆಂ.ಮೀ ಮಳೆ ದಾಖಲಾಗಿದೆ. ಎಂದು ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ ತಿಳಿಸಿದೆ.

ಮಡಿಕೇರಿ– ಜೋರು ಮಳೆ ಕೊಡಗು ಜಿಲ್ಲೆಯ ವಿವಿಧೆಡೆ ದಿನವಿಡೀ ಸಾಧಾರಣ ಮಳೆಯಾಗಿದೆ. ನಗರ, ಸುತ್ತಮುತ್ತಲ ಪ್ರದೇಶಗಳಲ್ಲಿ ಮಧ್ಯಾಹ್ನ ಒಂದೂವರೆ ಗಂಟೆಗೂ ಹೆಚ್ಚು ಕಾಲ ಭಾರಿ ಮಳೆ ಸುರಿಯಿತು.

ಮಡಿಕೇರಿ ಮತ್ತು ಭಾಗಮಂಡಲದಲ್ಲಿ 4 ಸೆಂ.ಮೀ, ಸಂಪಾಜೆಯಲ್ಲಿ 3 ಸೆಂ.ಮೀ ಮಳೆಯಾಗಿದೆ. ಮುಂಜಾಗ್ರತೆ ಕ್ರಮ ಕುರಿತು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಭೋಸರಾಜು ಅಧಿಕಾರಿಗಳ ಸಭೆ ನಡೆಸಿದರು.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	122.30	22,769	23,344
ಹಾರಂಗಿ	2,859	2,853.82	5,673	4,000
ಕಬಿನಿ	2,284.00	2,281.97	13,511	12,000
ಹೇಮಾವತಿ	2,922	2,920.25	9,117	5,180
ಲಿಂಗನಮಕ್ಕಿ	1,819	1,797.60	23,158	7,668
ಸೂಪಾ (ಮೀ)	564	543.93	15,780.4	5,651.91
ಮಾಣಿ	595	586.58	3,725	-
ತುಂಗಭದ್ರಾ	1,633	1,624.86	41,972	40,652
ಮಲಪ್ರಭಾ	2,079.5	2,069.65	6,249	194
ಘಟಪ್ರಭಾ	2175	2,166.70	12,555	8,578
ಭದ್ರಾ *	186	174.4	11,991	2,304
ಆಲಮಟ್ಟಿ (ಮೀ)	519.6	517.31	1,11,206	1,00,870
ನಾರಾಯಣಪುರ (ಮೀ)	492.25	490.79	1,00,000	95,760

* ನೆಲಮಟ್ಟದಿಂದ

ಸರ್ಕಾರಿ ಶಾಲೆ: ಎಲ್ಲ ವಿಶೇಷ ಶಿಕ್ಷಕರೂ ‘ಹೆಚ್ಚುವರಿ’

ಒಂದನೇ ಪುಟದಿಂದ...


ಪಠ್ಯೇತರ ಚಟುವಟಿಕೆಗಳಾದ ಚಿತ್ರಕಲೆ, ಸಂಗೀತ, ನಾಟಕ, ನೃತ್ಯ, ವೃತ್ತಿಶಿಕ್ಷಣದಂತಹ ವಿಷಯಗಳನ್ನು ಕಲಿಸಲು ವಿಶೇಷ ಶಿಕ್ಷಕರನ್ನು ಸರ್ಕಾರ ನೇಮಕ ಮಾಡಿದೆ. ಈ ವಿಶೇಷ ಶಿಕ್ಷಕರು ಸರ್ಕಾರಿ ಪ್ರೌಢಶಾಲೆಗಳಲ್ಲಿ ಶೈಕ್ಷಣಿಕ ಜ್ಞಾನದ ಜತೆಗೆ ವಿದ್ಯಾರ್ಥಿಗಳ ಸೃಜನಶೀಲತೆ, ಕಲಾತ್ಮಕ ಕೌಶಲ, ಜೀವನ ಕೌಶಲಗಳನ್ನು ಬೆಳೆಸುವಲ್ಲಿ ಮಹತ್ವದ ಪಾತ್ರ ವಹಿಸುತ್ತಾ ಬಂದಿದ್ದಾರೆ.

ಚಿತ್ರಕಲೆ, ಸಂಗೀತ, ಮತ್ತು ನಾಟಕದಂತಹ ವಿಷಯಗಳು ವಿದ್ಯಾರ್ಥಿಗಳ ಮಾನಸಿಕ ಆರೋಗ್ಯವನ್ನು ಸುಧಾರಿಸುವುದರ ಜತೆಗೆ, ಅವರ ಸಾಮಾಜಿಕ ಮತ್ತು ಭಾವನಾತ್ಮಕ ಬೆಳವಣಿಗೆಗೆ ಸಹಾಯ ಮಾಡುತ್ತವೆ. ಇಂತಹ ಕಲೆಗಳು ವಿದ್ಯಾರ್ಥಿಗಳಿಗೆ ಒತ್ತಡ ನಿರ್ವಹಣೆ,



ಸಹಕಾರ, ಮತ್ತು ಸ್ವಯಂ-ಅಭಿವ್ಯಕ್ತಿಯ ಕೌಶಲಗಳನ್ನು ಕಲಿಸುತ್ತವೆ. ಪಠ್ಯೇತರ ಚಟುವಟಿಕೆಗಳಿಗೆ ಆದ್ಯತೆ ನೀಡಲು, ವಿಶೇಷ ಶಿಕ್ಷಕರ ನೇಮಕಾತಿಗೆ ಆದ್ಯತೆ ನೀಡಬೇಕು ಎಂದು ರಾಷ್ಟ್ರೀಯ ಶಿಕ್ಷಣ ನೀತಿಗಳಲ್ಲೂ ಉಲ್ಲೇಖಿಸಲಾಗಿದೆ.

‘ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇದ್ದರೂ ಕಲೆ ಮತ್ತು ಸಂಸ್ಕೃತಿಯ ಶಿಕ್ಷಣ ಅಗತ್ಯ. ಕೇಂದ್ರೀಯ ವಿದ್ಯಾಲಯಗಳು, ನವೋದಯ ವಿದ್ಯಾಲಯಗಳು ಮತ್ತು ಸಿಬಿಎಸ್‌ಇ, ಐಸಿಎಸ್‌ಇ ಪಠ್ಯಕ್ರಮ ಅನುಸರಿಸುವ ಖಾಸಗಿ ಶಾಲೆಗಳು ವಿಶೇಷ ಶಿಕ್ಷಕರನ್ನು ನೇಮಿಸಿಕೊಂಡಿವೆ. ಸರ್ಕಾರದ ಈ ನಿರ್ಧಾರದಿಂದ ಸರ್ಕಾರಿ ಶಾಲೆಗಳ ಗ್ರಾಮೀಣ ಮಕ್ಕಳು ಅವಕಾಶ ವಂಚಿತರಾಗಲಿದ್ದಾರೆ’ ಎನ್ನುತ್ತಾರೆ ರಂಗ ಶಿಕ್ಷಕ ಬಸವರಾಜು.



ಸರ್ಕಾರಿ ಪ್ರೌಢಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರ ಸ್ತರವಿನ್ಯಾಸವನ್ನು ಹಿಂದಿನಂತೆ ಮರುನಿಗದಿ ಮಾಡಬೇಕು. ವಿಶೇಷ ಶಿಕ್ಷಕರ ಸಾಮೂಹಿಕ ವರ್ಗಾವಣೆ ನಿರ್ಧಾರವನ್ನು ಹಿಂಪಡೆಯಬೇಕು


ಬಸವರಾಜ ಹೊರಟ್ಟಿ, ಸಭಾಪತಿ, ವಿಧಾನಪರಿಷತ್

ದೇಶದ ಮೊದಲ ‘ವಯಸ್ಕ ಬಿಸಿಜಿ ಲಸಿಕೆ ಅಭಿಯಾನ’; ಮಹಿಳೆಯರಿಂದ ಹೆಚ್ಚು ಸ್ಪಂದನ

ಬಿಸಿಜಿ ಲಸಿಕೆ: ಬೆಳಗಾವಿ ಮುಂದು

• ಅಮೃತ್ ಕಿರಣ್ ಬಿ.ಎಂ.

ದಾವಣಗೆರೆ: ಕ್ಷಯರೋಗ (ಟಿ.ಬಿ) ನಿರ್ಮೂಲನೆ ಉದ್ದೇಶದಿಂದ ಮೂರು ತಿಂಗಳ ಹಿಂದೆ 15 ಜಿಲ್ಲೆಗಳಲ್ಲಿ ಆರೋಗ್ಯ ಇಲಾಖೆ ಪ್ರಾಯೋಗಿಕವಾಗಿ ಪ್ರಾರಂಭಿಸಿದ್ದ ದೇಶದ ಮೊದಲ ‘ವಯಸ್ಕ ಬಿಸಿಜಿ (ಬ್ಯಾಸಿಲಸ್ ಕ್ಯಾಲ್ಮೆಟ್ ಗೆರಿನ್) ಲಸಿಕೆ ಅಭಿಯಾನ’ಕ್ಕೆ ಉತ್ತಮ ಪ್ರತಿಕ್ರಿಯೆ ಕಂಡುಬಂದಿದೆ.



ಮಹಿಳೆಯರಿಂದ ಅಧಿಕ ಸ್ಪಂದನ ದೊರೆತಿದೆ. ಹೆಚ್ಚು ಜನರು ಲಸಿಕೆ ಹಾಕಿಸಿಕೊಂಡ ಜಿಲ್ಲೆಗಳ ಪೈಕಿ ಬೆಳಗಾವಿ ರಾಜ್ಯದಲ್ಲೇ ಅಗ್ರ ಸ್ಥಾನದಲ್ಲಿದೆ. ಕಲಬುರಗಿ, ಬೆಂಗಳೂರು ನಗರ, ವಿಜಯಪುರ ಮತ್ತು ದಾವಣಗೆರೆ ನಂತರದ ನಾಲ್ಕು ಸ್ಥಾನಗಳಲ್ಲಿವೆ. ದಕ್ಷಿಣ ಕನ್ನಡ ಅಂತಿಮ ಸ್ಥಾನದಲ್ಲಿದೆ.

ಆಯ್ಕೆಯಾಗಿದ್ದ ಎಲ್ಲ 15 ಜಿಲ್ಲೆಗಳಲ್ಲಿ ಈವರೆಗೆ 4,16,524 ಜನರಿಗೆ ಬಿಸಿಜಿ ಲಸಿಕೆ ನೀಡಲಾಗಿದೆ. ಇವರಲ್ಲಿ 2,21,204 ಮಹಿಳೆಯರು, 1,94,758 ಪುರುಷರು ಮತ್ತು 562 ಲಿಂಗತ್ವ ಅಲ್ಪಸಂಖ್ಯಾತರು ಸೇರಿದ್ದಾರೆ. ಫಲಾನುಭವಿಗಳ ಲಿಖಿತ ಒಪ್ಪಿಗೆ ಪಡೆದೇ ಸಿಬ್ಬಂದಿ ಅವರಿಗೆ ಲಸಿಕೆ ನೀಡುತ್ತಿದ್ದಾರೆ. ಮೇ ತಿಂಗಳಲ್ಲಿ ಆರಂಭವಾಗಿದ್ದ ಅಭಿಯಾನ ಈ ತಿಂಗಳಾಂತ್ಯಕ್ಕೆ ಬಹುತೇಕ ಕೊನೆಗೊಳ್ಳುವ ಸಾಧ್ಯತೆಯಿದೆ.

ಅಭಿಯಾನ ವ್ಯಾಪ್ತಿಯ ಜಿಲ್ಲೆಗಳ ಸ್ಥಿತಿಯನ್ನು ಉಳಿದ ಜಿಲ್ಲೆಗಳ ಕ್ಷಯದ ಪ್ರಕರಣಗಳ ಜತೆ ಹೋಲಿಸಲಾಗುತ್ತದೆ. ಪ್ರಗತಿ ಆಧರಿಸಿ ಉಳಿದ ಜಿಲ್ಲೆಗಳಿಗೂ ವಿಸ್ತರಿಸುವ ಸಾಧ್ಯತೆಯಿದೆ

ಪಿ.ಡಿ. ಮುರಳೀಧರ್ ಜಿಲ್ಲಾ ಕ್ಷಯರೋಗ ಅಧಿಕಾರಿ, ದಾವಣಗೆರೆ

ದಾವಣಗೆರೆ ಜಿಲ್ಲೆಯಲ್ಲೇ ಲಸಿಕೆ ಪಡೆಯಲು ಅರ್ಹರಾಗಿರುವ 2.5 ಲಕ್ಷ ಜನರಿದ್ದಾರೆ. ಈ ಪೈಕಿ 30,546 ಜನ ಲಸಿಕೆ ಪಡೆದಿದ್ದಾರೆ. ಜಾಗೃತಿ ಮೂಡಿಸಿ, ಎಲ್ಲರಿಗೂ ಲಸಿಕೆ ನೀಡುವ ವಿಶ್ವಾಸ ಆರೋಗ್ಯ ಇಲಾಖೆಯದ್ದಾಗಿದೆ.

ಯಾರೆಲ್ಲ ಅರ್ಹರು?: ಐದು ವರ್ಷಗಳಲ್ಲಿ ಕ್ಷಯಕ್ಕೆ ಚಿಕಿತ್ಸೆ ಪಡೆದು ಗುಣಮುಖರಾದವರು, 3 ವರ್ಷಗಳಿಂದ ಕ್ಷಯರೋಗಿಗಳ ನಿಕಟ ಸಂಪರ್ಕದಲ್ಲಿ ಇರುವವರು, ದೇಹಗಾತ್ರದ ಸೂಚ್ಯಂಕ (ಬಿಎಂಐ) ಆಧಾರದಲ್ಲಿ ಎತ್ತರಕ್ಕೆ ಸಮನಾದ ದೇಹ ತೂಕ ಇಲ್ಲದವರು, ಧೂಮಪಾನಿಗಳು, ಮಧುಮೇಹ ಇರುವವರು ಮತ್ತು 60 ವರ್ಷ ದಾಟಿದವರು ಈ ಲಸಿಕೆ ಪಡೆಯಲು ಅರ್ಹರು. ಆದರೆ, ಈ ವಿಭಾಗಗಳಡಿ ಬರುವ ಬಹುತೇಕರು ಲಸಿಕೆ ತೆಗೆದುಕೊಳ್ಳಲು ಮುಂದೆ ಬರುತ್ತಿಲ್ಲ ಎಂದು ಅಧಿಕಾರಿಗಳು ‘ಪ್ರಜಾವಾಣಿ’ ಎದುರು ಬೇಸರ ವ್ಯಕ್ತಪಡಿಸಿದರು.

ಮೂರು ವರ್ಷಗಳವರೆಗೆ ಲಸಿಕೆ ಹಾಕಿದವರ ಮೇಲೆ ಇಲಾಖೆ ನಿಗಾ ವಹಿಸಲಿದೆ. ನಂತರ ಈ 15 ಜಿಲ್ಲೆಗಳಲ್ಲಿ ವರದಿಯಾದ ಟಿ.ಬಿ ಪ್ರಕರಣಗಳ ಸಂಖ್ಯೆಯನ್ನು ಪರಿಗಣಿಸಿ ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿಯು (ಐಸಿಎಂಆರ್) ಕೇಂದ್ರ ಸರ್ಕಾರಕ್ಕೆ ವರದಿ ಸಲ್ಲಿಸಲಿದೆ.

‘ಇದು ಹೊಸ ಲಸಿಕೆ ಅಲ್ಲ. ಕೋವಿಡ್, ಎಚ್1ಎನ್1 ಸೇರಿದಂತೆ ಉಸಿರಾಟದ ಸಮಸ್ಯೆ ಎದುರಿಸುತ್ತಿರುವ ಜನರನ್ನೂ ಈ ಲಸಿಕೆ ರಕ್ಷಿಸುತ್ತದೆ ಎಂಬುದನ್ನು ಕೆಲವು ಅಧ್ಯಯನಗಳು ಉಲ್ಲೇಖಿಸಿವೆ’ ಎಂದು ಜಿಲ್ಲಾ ಕ್ಷಯರೋಗ ಅಧಿಕಾರಿ ಪಿ.ಡಿ. ಮುರಳೀಧರ್ ಮಾಹಿತಿ ನೀಡಿದರು.

ಲಸಿಕೆಯಿಂದ ಅಡ್ಡ ಪರಿಣಾಮ ಇಲ್ಲ. ಶೇ 10ರಷ್ಟು ಜನರಲ್ಲಿ ಲಸಿಕೆ ಹಾಕಲಾದ ಜಾಗದಲ್ಲಿ ಕೀವು ಕಾಣಿಸಬಹುದು. ಜೀವಕ್ಕೆ ಯಾವುದೇ ಅಪಾಯವಿಲ್ಲ ಎಂದು ಸ್ಪಷ್ಟಪಡಿಸಿದರು.

ಲಸಿಕೆ: ಜಿಲ್ಲಾವಾರು ಪ್ರಗತಿ

ಜಿಲ್ಲೆ	ಒಟ್ಟು	ಪುರುಷರು	ಮಹಿಳೆಯರು	ಇತರೆ
ಬಾಗಲಕೋಟೆ	27,867	12,429	15,396	42
ಬೆಳಗಾವಿ	67,277	31,664	35,529	84
ಬೆಂ. ಗ್ರಾಮಾಂತರ	22,546	10,863	11,652	31
ಬೆಂಗಳೂರು ನಗರ	39,867	19,286	20,543	38
ಬೀದರ್	20,114	9,986	10,105	23
ಚಾಮರಾಜನಗರ	16,199	7217	8,950	32
ಚಿಕ್ಕಮಗಳೂರು	22,504	10,444	12,022	38
ದಕ್ಷಿಣ ಕನ್ನಡ	12,276	5,761	6,500	15
ದಾವಣಗೆರೆ	30,546	13,913	16,601	32
ಧಾರವಾಡ	19,627	8,262	11,330	35
ಕಲಬುರಗಿ	41,270	20,271	20,919	80
ಕೋಲಾರ	22,547	10,226	12,294	27
ಉಡುಪಿ	26,043	11,543	14,484	16
ಉತ್ತರ ಕನ್ನಡ	15,795	7,274	8,499	22
ವಿಜಯಪುರ	32,046	15,619	16,380	47

‘ಭವಿಷ್ಯದಲ್ಲಿ ಹೈಡ್ರೊ, ಸೋಲಾರ್ ಬಸ್ ಬಳಕೆ’

ಡೀಸೆಲ್ ಬಸ್‌ಗಳಿಂದ ಹೆಚ್ಚು ಮಾಲಿನ್ಯ: ರಾಮಲಿಂಗಾರೆಡ್ಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡೀಸೆಲ್ ಬಸ್‌ಗೆ ಬದಲಾಗಿ ಎಲೆಕ್ಟ್ರಿಕ್ ಬಸ್‌ಗಳು ಹೆಚ್ಚಾಗುತ್ತಿರುವುದರಿಂದ ವಾಯು ಮಾಲಿನ್ಯ ಕಡಿಮೆ ಆಗುತ್ತಿದೆ. ಭವಿಷ್ಯದಲ್ಲಿ ಹೈಡ್ರೊ, ಸೋಲಾರ್ ಬಸ್‌ಗಳು ಬಳಕೆಗೆ ಬಂದರೆ ಮಾಲಿನ್ಯ ನಿಯಂತ್ರಣವಾಗುತ್ತದೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ಬಿಎಂಟಿಸಿಗೆ ಹೊಸದಾಗಿ 148 ನಾನ್–ಎಸಿ ಎಲೆಕ್ಟ್ರಿಕ್ ಬಸ್‌ಗಳ ಸೇರ್ಪಡೆ ಕಾರ್ಯಕ್ರಮದಲ್ಲಿ ಶುಕ್ರವಾರ ಮಾತನಾಡಿದ ಅವರು, ‘ನಮ್ಮಲ್ಲಿರುವ 1,779 ಎಸಿ ಬಸ್‌ಗಳಿಂದ ದಿನಕ್ಕೆ ಸುಮಾರು 77 ಸಾವಿರ ಲೀಟರ್ ಡೀಸೆಲ್ ವ್ಯಯವಾಗುತ್ತದೆ. ಇದರಿಂದ ಎಷ್ಟು ವಾಯುಮಾಲಿನ್ಯ ಉಂಟಾಗುತ್ತದೆ ಎಂಬುದನ್ನು ಅಂದಾಜಿಸಬಹುದು. ಆದ್ದರಿಂದ ಮುಂದಿನ ದಿನಗಳಲ್ಲಿ ಎಲೆಕ್ಟ್ರಿಕ್ ಜೊತೆಗೆ ಸಂಶೋಧನೆಯ ಅಂತಿಮ ಹಂತದಲ್ಲಿರುವ ಹೈಡ್ರೊ ಹಾಗೂ ಸೋಲಾರ್ ಬಸ್‌ಗಳನ್ನು ಬಳಸಬಹುದು’ ಎಂದರು.

‘ಬಿಎಂಟಿಸಿಯಲ್ಲಿ 921 ಎಲೆಕ್ಟ್ರಿಕ್ ಬಸ್‌ಗಳನ್ನು ಟಾಟಾ ಸಂಸ್ಥೆ ನಿರ್ವಹಿಸುತ್ತಿದೆ. ಇದೀಗ ಮತ್ತೆ 148 ಬಸ್‌ಗಳು ಸೇರ್ಪಡೆಯಾಗಿವೆ. ಪ್ರತಿ ಕಿ.ಮೀ.ಗೆ ₹41 ನಿರ್ವಹಣಾ ವೆಚ್ಚವನ್ನು ಬಿಎಂಟಿಸಿ ನೀಡುತ್ತದೆ. ಕಂಡಕ್ಟರ್ ಮಾತ್ರ ನಮ್ಮವರು, ಉಳಿದ ಎಲ್ಲ ನಿರ್ವಹಣೆಯೂ ಅವರದೇ’ ಎಂದು ಮಾಹಿತಿ ನೀಡಿದರು.

ದೇಶದಲ್ಲೇ ಹೆಚ್ಚು: ‘ಕೇಂದ್ರ ಸರ್ಕಾರ ಬಿಎಂಟಿಸಿಗೆ 4,500 ಎಲೆಕ್ಟ್ರಿಕ್ ಬಸ್ ವಿತರಿಸಲು ಅನುಮೋದನೆ ನೀಡಿದೆ. ಆಗ ಒಟ್ಟಾರೆ 5,569 ಎಲೆಕ್ಟ್ರಿಕ್ ಬಸ್‌ಗಳಾಗುತ್ತವೆ. ದೆಹಲಿಯಲ್ಲಿ ಈಗ 2,200 ಎಲೆಕ್ಟ್ರಿಕ್ ಬಸ್ ಇದ್ದು, ಕೇಂದ್ರದ ಯೋಜನೆಯಲ್ಲಿ 2,500 ಸೇರಿಕೊಂಡರೂ, ಬೆಂಗಳೂರು ದೇಶದಲ್ಲಿ ಅತಿಹೆಚ್ಚು ಎಲೆಕ್ಟ್ರಿಕ್ ಬಸ್ ಹೊಂದಿರುವ ಹೆಗ್ಗಳಿಕೆಗೆ ಪಾತ್ರವಾಗುತ್ತದೆ’ ಎಂದರು.

ದೇಗುಲ ದರ್ಶನ ವಿಸ್ತರಣೆ: ‘ನಗರದಲ್ಲಿ ಆರಂಭಿಸಿರುವ ‘ದೇಗುಲ ದರ್ಶನ’ ಬಿಎಂಟಿಸಿ ಬಸ್‌ಗಳಿಗೆ ಉತ್ತಮ ಪ್ರತಿಕ್ರಿಯೆ ಬಂದಿದೆ. ಹೀಗಾಗಿ, ಶುಕ್ರವಾರದಿಂದ ನಾಗೇಶ್ವರ ದೇವಾಲಯ, ಬೇಗೂರು, ಬೆಟ್ಟದಾಸನಪುರ, ಮದ್ದೂರಮ್ಮ, ಹುಸ್ಕೂರು, ನಾರಾಯಣ ದೇವಾಲಯಗಳ ದರ್ಶನ ಮಾಡಿಸುವ ಪ್ಯಾಕೇಜ್ ಆರಂಭಿಸಲಾಗಿದೆ. ಮೂರು ದಿಕ್ಕುಗಳಲ್ಲಿ ‘ದೇಗುಲ ದರ್ಶನ’ ಆರಂಭವಾಗಿದ್ದು, ಉಳಿದ ದಿಕ್ಕಿನಲ್ಲೂ ಶೀಘ್ರವೇ ಪ್ರಾರಂಭ ಆಗಲಿದೆ’ ಎಂದು ತಿಳಿಸಿದರು.

‘ಬಿಡದಿ, ಆನೇಕಲ್, ದೊಡ್ಡಬಳ್ಳಾಪುರ ಹಾಗೂ ಹೊಸಕೋಟೆಗೆ ಎಕ್ಸ್‌ಪ್ರೆಸ್ ಬಸ್‌ಗಳನ್ನು ಆರಂಭಿಸಲಾಗುತ್ತದೆ. ವೇಗದೂತ ಬಸ್‌ಗಳಿಂದ 20ರಿಂದ 30 ನಿಮಿಷ ಉಳಿತಾಯವಾಗುತ್ತದೆ. 120 ಬಸ್‌ಗಳು ವೇಗದೂತವಾಗಿ ಸಂಚರಿಸಲಿವೆ’ ಎಂದು ಮಾಹಿತಿ ನೀಡಿದರು.

ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ ರಾಮಚಂದ್ರನ್ ಆರ್., ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಅಕ್ರಂ ಪಾಷ, ಕೆಕೆಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕಿ ಸುಶೀಲಾ ಬಿ., ಕೆಎಸ್‌ಆರ್‌ಟಿಸಿ ನಿರ್ದೇಶಕಿ ಶಿಲ್ಪಾ ಎಂ. ಉಪಸ್ಥಿತರಿದ್ದರು.

ಮುಖ್ಯಾಂಶಗಳು

- 1,779 ಬಸ್‌ಗಳಿಗೆ ದಿನಕ್ಕೆ 77 ಸಾವಿರ ಲೀಟರ್ ಡೀಸೆಲ್ ವ್ಯಯ
- ದೇಶದಲ್ಲೇ ಅತಿಹೆಚ್ಚು ಎಲೆಕ್ಟ್ರಿಕ್ ಬಸ್ ಹೊಂದಲಿರುವ ಬಿಎಂಟಿಸಿ

ಸಾರಿಗೆ ಇಲಾಖೆಯ ಸಿಬ್ಬಂದಿಗೆ ನಾಲ್ಕೈದು ವರ್ಷದಿಂದ ಪ್ರತಿ ವರ್ಷವೂ ಆರೋಗ್ಯ ತಪಾಸಣೆ ನಡೆಸಲಾಗುತ್ತಿದೆ. ಹೃದಯಕ್ಕೆ ಸಂಬಂಧಿಸಿದ ರೋಗಗಳು ಕಡಿಮೆಯಾಗಿವೆ

ರಾಮಲಿಂಗಾರೆಡ್ಡಿ
ಸಾರಿಗೆ ಸಚಿವ

ಗಾಳಿ ಆಂಜನೇಯ ವರದಿಯಂತೆ ಸುಪರ್ದಿಗೆ

‘ಗಾಳಿ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಹಣಕಾಸಿಗೆ ಸಂಬಂಧಪಟ್ಟಂತೆ ಯಾವುದೇ ದಾಖಲಾತಿಗಳು ಇಲ್ಲ. ಈ ಬಗ್ಗೆ ತನಿಖೆ ನಡೆಸಿ ವರದಿ ಸಲ್ಲಿಸಲಾಗಿದೆ. ಅದನ್ನು ಆಧರಿಸಿ ಗಾಳಿ ಆಂಜನೇಯ ಸ್ವಾಮಿ ದೇವಸ್ಥಾನವನ್ನು ಮುಜರಾಯಿ ಇಲಾಖೆಯ ಸುಪರ್ದಿಗೆ ಪಡೆಯಲಾಗಿದೆ. ಐದು ವರ್ಷವಾದ ಮೇಲೆ ವಾಪಸ್ ಟ್ರಸ್ಟ್‌ಗೆ ಕೊಡುತ್ತೇವೆ’ ಎಂದು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

‘ಹುಂಡಿಯಲ್ಲಿನ ಹಣವನ್ನು ಹೇಗೆ ದುರುಪಯೋಗ ಪಡಿಸಿಕೊಂಡಿದ್ದಾರೆ ಎಂಬುದನ್ನು ಮಾಧ್ಯಮಗಳೇ ತೋರಿಸಿವೆ. ಹಣ ದುರುಪಯೋಗವಾದರೆ ಸುಮ್ಮನಿರಲು ಸಾಧ್ಯವಿಲ್ಲ’ ಎಂದರು.



ಶಾಂತಿನಗರ ಬಿಎಂಟಿಸಿ ಕೇಂದ್ರ ಕಚೇರಿ ಎದುರು 148 ಎಸಿ–ರಹಿತ ಎಲೆಕ್ಟ್ರಿಕ್ ಬಸ್‌ಗಳಿಗೆ ರಾಮಲಿಂಗಾರೆಡ್ಡಿ ಚಾಲನೆ ನೀಡಿದರು ಪ್ರಜಾವಾಣಿ ಚಿತ್ರ

‘ಕೆಪಿಎಸ್ ಬಾಲಕರಿಗೆ ಉಚಿತ ಪ್ರಯಾಣ: ಸಲಹೆಯಷ್ಟೇ’

‘ಕರ್ನಾಟಕ ಪಬ್ಲಿಕ್ ಸ್ಕೂಲ್‌ನ (ಕೆಪಿಎಸ್) ಬಾಲಕರಿಗೆ ಉಚಿತವಾಗಿ ಪ್ರಯಾಣ ಸೌಲಭ್ಯ ಒದಗಿಸುವ ಸಂಬಂಧ ಯಾವುದೇ ನಿರ್ಧಾರವಾಗಿಲ್ಲ. ₹10 ಕೋಟಿಗಿಂತ ಹೆಚ್ಚಿನ ಪ್ರಸ್ತಾವವಿದ್ದರೆ ಹಣಕಾಸು ಇಲಾಖೆಯ ಸಮ್ಮತಿ ಪಡೆದು, ಸಚಿವ ಸಂಪುಟದಲ್ಲಿ ತೀರ್ಮಾನವಾಗಬೇಕು. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಬಾಲಕರಿಗೂ ಉಚಿತ ಪ್ರಯಾಣ ಕಲ್ಪಿಸುವ ಸಲಹೆ ನೀಡಿದ್ದಾರೆ ಅಷ್ಟೇ’ ಎಂದು ಪ್ರಶ್ನೆಯೊಂದಕ್ಕೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಉತ್ತರಿಸಿದರು.

‘ಒಂದೇ ಚುನಾವಣೆ: ಅಭಿವೃದ್ಧಿಗೆ ಪೂರಕ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಒಂದು ದೇಶ ಒಂದು ಚುನಾವಣೆ’ ಪರಿಕಲ್ಪನೆಯ ಅನುಷ್ಠಾನದಿಂದ ದೇಶವು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯವಾಗಿ ಅಭಿವೃದ್ಧಿ ಆಗಲಿದೆ’ ಎಂದು ಬಿಜೆಪಿಯ ತಮಿಳುನಾಡು ರಾಜ್ಯ ಘಟಕದ ಮಾಜಿ ಅಧ್ಯಕ್ಷ ಕೆ.ಅಣ್ಣಾಮಲೈ ಅಭಿಪ್ರಾಯಪಟ್ಟರು.

ಅಭ್ಯುದಯ ಫೌಂಡೇಷನ್ ಶುಕ್ರವಾರ ‘ಒಂದು ರಾಷ್ಟ್ರ ಒಂದು ಚುನಾವಣೆ’ ವಿಷಯ ಕುರಿತು ಆಯೋಜಿಸಿದ್ದ ಯುವ ಸಂವಾದದಲ್ಲಿ ಅವರು ಮಾತನಾಡಿದರು.

ದೇಶವು ವೇಗವಾಗಿ ಬೆಳವಣಿಗೆ ಸಾಧಿಸಬೇಕಿದೆ. ಇದಕ್ಕಾಗಿ ಚುನಾವಣಾ ವ್ಯವಸ್ಥೆಯಲ್ಲೂ ಸುಧಾರಣೆ ಅಗತ್ಯವಿದೆ. ದೇಶದಾದ್ಯಂತ ಒಂದೇ ಚುನಾವಣೆ ಮಾಡುವುದರಿಂದ ಹಣ ಉಳಿತಾಯ ಆಗಲಿದೆ. ಒಂದೇ ಚುನಾವಣೆಯಿಂದ ಆಗುವ ಉಳಿತಾಯದಿಂದ ದೇಶದ ಜಿಡಿಪಿಗೆ ₹4.5 ಲಕ್ಷ ಕೋಟಿ ಹಣ ಲಭಿಸಬಹುದು. ಇದರಿಂದ ಅಭಿವೃದ್ಧಿಗೆ ಹೆಚ್ಚು ಹಣ ದೊರೆಯಲಿದೆ’ ಎಂದರು.

‘ದೇಶದಲ್ಲಿ 28 ರಾಜ್ಯಗಳಿದ್ದು, ಒಂದಲ್ಲ ಒಂದು ಚುನಾವಣೆ ನಿರಂತರವಾಗಿರುತ್ತದೆ. ಇದರಿಂದ ಪದೇ ಪದೇ 45 ದಿನಗಳ ನೀತಿಸಂಹಿತೆ ಜಾರಿಯಾಗಿ, ಅಭಿವೃದ್ಧಿ ಪ್ರಕ್ರಿಯೆಗೆ ತೊಡಕಾಗುತ್ತದೆ’ ಎಂದು ಅವರು ವಿಶ್ಲೇಷಿಸಿದರು.



ಯುವ ಸಂವಾದದಲ್ಲಿ ಕೆ.ಅಣ್ಣಾಮಲೈ ಮತ್ತು ತೇಜಸ್ವಿನಿ ಅನಂತ ಕುಮಾರ್ ಪರಸ್ಪರ ಚರ್ಚಿಸಿದರು

‘ಒಂದು ದೇಶ ಒಂದೇ ಚುನಾವಣೆಯಿಂದ ಪ್ರಾದೇಶಿಕ ಪಕ್ಷವು ರಾಷ್ಟ್ರ ಹಿತದೊಂದಿಗೆ ಹಾಗೂ ರಾಷ್ಟ್ರೀಯ ಪಕ್ಷವು ಪ್ರಾದೇಶಿಕ ಹಿತೈಷಿಯಾಗಿ ಚಿಂತಿಸುವಂತೆ ಆಗಲಿದೆ. ಎಲ್ಲವೂ ನಿರೀಕ್ಷೆಯಂತೆ ನಡೆದರೆ 2034ರಲ್ಲಿ ಒಂದೇ ಚುನಾವಣೆ ಜಾರಿ ಆಗಲಿದೆ’ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

ಅದಮ್ಯ ಚೇತನ ಪ್ರತಿಷ್ಠಾನದ ಅಧ್ಯಕ್ಷೆ ತೇಜಸ್ವಿನಿ ಅನಂತಕುಮಾರ್ ಮಾತನಾಡಿದರು. ಬಿಜೆಪಿ ಪ್ರಕೋಷ್ಠಗಳ ರಾಜ್ಯ ಸಂಯೋಜಕ ಎಸ್. ದತ್ತಾತ್ರಿ, ಹಾಲು ಉತ್ಪಾದಕರ ಪ್ರಕೋಷ್ಠದ ಸಂಚಾಲಕ ಬೇಳೂರು ರಾಘವೇಂದ್ರ ಶೆಟ್ಟಿ, ಅಭ್ಯುದಯ ಪ್ರತಿಷ್ಠಾನದ ಅಕ್ಷಯ ಜೋಗಿಹಳ್ಳಿ ಉಪಸ್ಥಿತರಿದ್ದರು.

‘ಇವಿಎಂ’ ಪ್ರಕರಣ ಸುಪ್ರೀಂನಲ್ಲಿದೆ

‘ಇವಿಎಂಗೆ ಬ್ಲೂಟೂತ್, ವೈಫೈ ಇಲ್ಲ. ಈ ವಿಚಾರವಾಗಿ ಸುಪ್ರೀಂ ಕೋರ್ಟ್‌ನಲ್ಲಿ ಪ್ರಕರಣ ನಡೆಯುತ್ತಿದೆ. ಕೆಲವು ರಾಜಕೀಯ ಪಕ್ಷಗಳು ಈ ಸಂಬಂಧ ಕೋರ್ಟ್ ಮೊರೆ ಹೋಗಿವೆ’ ಎಂದು ಅಣ್ಣಾಮಲೈ ಅವರು ಸಂವಾದದಲ್ಲಿ ಇವಿಎಂ ಕುರಿತು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

‘ಮಹಾರಾಷ್ಟ್ರ ಚುನಾವಣೆ ಸಂದರ್ಭದಲ್ಲೂ ಹೀಗೆ ಹೇಳಲಾಗಿದೆ. ಸೋತ ಪಕ್ಷ ಕಾರಣ ಹೇಳುವುದು ಸಹಜ. ಇದು ಹೇಗಿದೆಯೆಂದರೆ, ‘ಜಿಮ್’ಗೆ ಹೋದವರು ‘ಬಾಡಿ’ ಬರ್ತಾ ಇಲ್ಲ, ಉಪಕರಣ ಸರಿ ಇಲ್ಲ’ ಎಂದ ಹಾಗಾಗಿದೆ’ ಎಂದು ವಿಶ್ಲೇಷಿಸಿದರು.

ಮತ್ತೆ ಬರಲಿದೆ ಬಸ್ ಆದ್ಯತಾ ಪಥ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೂರು ವರ್ಷಗಳ ಹಿಂದೆ ಸ್ಥಗಿತಗೊಂಡಿದ್ದ ಬಸ್ ಆದ್ಯತಾ ಪಥವನ್ನು ಮತ್ತೆ ಜಾರಿಗೊಳಿಸಲು ಬಿಎಂಟಿಸಿ ಚಿಂತನೆ ನಡೆಸಿದೆ.

ನಗರದ ಕೆಲವು ಭಾಗಗಳಲ್ಲಿ ಈ ಹಿಂದೆ ಬಸ್‌ಗಳಿಗಾಗಿಯೇ ಪ್ರತ್ಯೇಕ ಮಾರ್ಗ ಮಾಡಲಾಗಿತ್ತು. ಇದರಿಂದ ಸಮಯ ಮತ್ತು ಇಂಧನ ಉಳಿತಾಯವಾಗುತ್ತಿತ್ತು. ಕೆ.ಆರ್. ಪುರ ಮತ್ತು ಕೇಂದ್ರ ರೇಷ್ಮೆ ಮಂಡಳಿ ಜಂಕ್ಷನ್ ನಡುವಿನ ಹೊರವರ್ತುಲ ರಸ್ತೆಯಲ್ಲಿ ನಮ್ಮ ಮೆಟ್ರೊ ನೀಲಿ ಮಾರ್ಗದ ಕಾಮಗಾರಿಗಾಗಿ 2022ರಲ್ಲಿ ಬಸ್ ಆದ್ಯತಾ ಪಥ ಸ್ಥಗಿತಗೊಳಿಸಲಾಗಿತ್ತು. ಕ್ರಮೇಣ ಉಳಿದ ಭಾಗಗಳಲ್ಲಿಯೂ ಆದ್ಯತಾ ಪಥಕ್ಕೆ ಆದ್ಯತೆ ಇಲ್ಲವಾಗಿತ್ತು.

‘ಹೊರ ವರ್ತುಲ ರಸ್ತೆಯಲ್ಲಿ ಬಸ್ ಆದ್ಯತಾ ಪಥ ಹೇಗೆ ನಿರ್ವಹಿಸುವುದು ಎಂದು ಬಿಎಂಆರ್‌ಸಿಎಲ್, ಬಿಬಿಎಂಪಿ, ಡಲ್ಟ್, ಬೆಂಗಳೂರು ಸಂಚಾರ ಪೊಲೀಸ್ ಸೇರಿದಂತೆ ಸಂಬಂಧಪಟ್ಟ ವಿವಿಧ ಇಲಾಖೆ, ಸಂಸ್ಥೆಗಳೊಂದಿಗೆ ಮಾತುಕತೆ ನಡೆಸಲಾಗುವುದು. ಈ ಬಗ್ಗೆ ಈಗಾಗಲೇ ಪತ್ರ ವ್ಯವಹಾರ ನಡೆಸಲಾಗಿದೆ’ ಎಂದು ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ ಆರ್. ರಾಮಚಂದ್ರನ್ ತಿಳಿಸಿದ್ದಾರೆ.

ಮೆಟ್ರೊ ಕಾಮಗಾರಿಗಳು ಮುಗಿಯುವ ಹೊತ್ತಿಗೆ ರಸ್ತೆಗಳು ಹಿಂದಿನ ರೀತಿಯಲ್ಲಿ ಇರುವುದಿಲ್ಲ. ಪರಿಸ್ಥಿತಿ ಬದಲಾಗಿರುತ್ತದೆ. ರಸ್ತೆಗಳನ್ನು ಪುನರ್‌ನಿರ್ಮಿಸಬೇಕಾಗುತ್ತದೆ. ಆಗ ಬಸ್ ಆದ್ಯತಾ ಪಥಕ್ಕೆ ಯೋಜನೆಯನ್ನು ಮರುವಿನ್ಯಾಸಗೊಳಿಸಬೇಕಾಗಿದೆ ಎಂದು ಅವರು ವಿವರಿಸಿದ್ದಾರೆ.



ಕೆ.ಆರ್.ಪುರ ಮತ್ತು ಕೇಂದ್ರ ರೇಷ್ಮೆ ಮಂಡಳಿ ನಡುವಿನ 17 ಕಿ.ಮೀ. ರಸ್ತೆಯಲ್ಲಿ ಆದ್ಯತಾ ಪಥಕ್ಕೆ ಗಮನ ನೀಡಲಾಗುವುದು. ಐದು ವರ್ಷಗಳ ಹಿಂದಿನ ಸಮೀಕ್ಷೆಯ ದತ್ತಾಂಶಗಳನ್ನು ಇಟ್ಟುಕೊಂಡು ಯೋಜನೆ ರೂಪಿಸಲು ಸಾಧ್ಯವಿಲ್ಲ. ಅದಕ್ಕಾಗಿ ಮತ್ತೊಮ್ಮೆ ಸಮೀಕ್ಷೆ, ಅಧ್ಯಯನ ನಡೆಸಬೇಕಾಗುತ್ತದೆ ಎಂದು ತಿಳಿಸಿದ್ದಾರೆ.

ಹೊರವರ್ತುಲ ರಸ್ತೆಯಲ್ಲಿ ಬಿಎಂಟಿಸಿ ಸಂಸ್ಥೆಯ 300ಕ್ಕೂ ಅಧಿಕ ಬಸ್‌ಗಳು ಹೊರವರ್ತುಲ ರಸ್ತೆಯಲ್ಲಿ ಸಂಚರಿಸುತ್ತಿವೆ. ಹಿಂದೆ ಆದ್ಯತಾ ಪಥ ಇದ್ದಾಗ ಈ ಮಾರ್ಗದಲ್ಲಿ ಪ್ರಯಾಣದ ಅವಧಿ ಕನಿಷ್ಠ 15 ನಿಮಿಷಗಳಷ್ಟು ಕಡಿಮೆಯಾಗುತ್ತಿತ್ತು. ಇಂಧನ ಬಳಕೆಯೂ ಕಡಿಮೆ ಇತ್ತು. ಆದ್ಯತಾ ಪಥ ಮತ್ತೆ ಆರಂಭಗೊಂಡರೆ ಬಸ್‌ಗಳು ಬೇಗ ಸಂಚರಿಸಲು ಅನುಕೂಲವಾಗುತ್ತದೆ. ವಾಹನ ದಟ್ಟಣೆಯ ರಸ್ತೆಯಲ್ಲಿ ಸಿಲುಕುವ ಪ್ರಮೇಯ ತಪ್ಪಲಿದೆ ಎಂದು ಬಿಎಂಟಿಸಿಯ ಮುಖ್ಯ ಸಂಚಾರ ವ್ಯವಸ್ಥಾಪಕ (ಕಾರ್ಯಾಚರಣೆ) ಜಿ.ಟಿ. ಪ್ರಭಾಕರ್ ರೆಡ್ಡಿ ಹೇಳಿದರು.

ಸಾರ್ವಜನಿಕ ಸಾರಿಗೆ ಬಳಕೆಯಾಗಲಿ

ಹೊರವರ್ತುಲ ರಸ್ತೆಯಲ್ಲಿ ವಾಹನದಟ್ಟಣೆ ಕಡಿಮೆಯಾಗಬೇಕಿದ್ದರೆ ಐಟಿ ಪಾರ್ಕ್‌ಗಳ ಉದ್ಯೋಗಿಗಳು ಬಿಎಂಟಿಸಿ ಬಸ್‌ನಂಥ ಸಾರ್ವಜನಿಕ ಸಾರಿಗೆ ಕಡೆಗೆ ಮುಖ ಮಾಡಬೇಕು ಎಂದು ಬೆಂಗಳೂರು ನಗರದ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ಹೇಳಿದರು.

ವಿಮಾನ ನಿಲ್ದಾಣಕ್ಕೆ ಉತ್ತಮ ವೋಲ್ವೊ ಬಸ್‌ಗಳು ಸಂಚರಿಸುತ್ತಿವೆ. ಟೆಕ್ ಪಾರ್ಕ್‌ಗಳ ಕಡೆಗೂ ಇಂಥದ್ದೇ ಬಸ್‌ಗಳನ್ನು ನಿಯೋಜಿಸಬೇಕು. ಖಾಸಗಿ ವಾಹನಗಳಲ್ಲಿ ಸಂಚರಿಸುತ್ತಿರುವ ಟೆಕ್ ಪಾರ್ಕ್‌ಗಳ ಉದ್ಯೋಗಿಗಳಲ್ಲಿ ಶೇ 20ರಷ್ಟು ಜನರು ಬಸ್‌ಗಳಲ್ಲಿ ಸಂಚರಿಸಿದರೆ ವಾಹನದಟ್ಟಣೆ ಗಣನೀಯವಾಗಿ ಕಡಿಮೆಯಾಗಲಿದೆ ಎಂದು ತಿಳಿಸಿದರು.

‘ಬಸ್ ಆದ್ಯತಾ ಪಥ ಮತ್ತೆ ನಿರ್ಮಾಣವಾಗುವ ಬಗ್ಗೆ ನಮಗೆ ಯಾವುದೇ ಮಾಹಿತಿ ಬಂದಿಲ್ಲ. ಆದರೆ, ಸಂಚಾರ ದಟ್ಟಣೆಯನ್ನು ಕಡಿಮೆ ಮಾಡಲು, ಸಾರ್ವಜನಿಕ ಸಾರಿಗೆಯನ್ನು ಜನರು ಹೆಚ್ಚು ಬಳಸುವಂತಾಗಲು ಆದ್ಯತಾ ಪಥ ಮುಖ್ಯ’ ಎಂದು ಪೂರ್ವ ವಿಭಾಗದ ಸಂಚಾರ ಡಿಸಿಪಿ ಸಾಹಿಲ್ ಬಾಗ್ಲಾ ಈ ಬಗ್ಗೆ ಪ್ರತಿಕ್ರಿಯಿಸಿದರು.

ತರಳು ಗ್ರಾ.ಪಂ ಉಪಾಧ್ಯಕ್ಷೆ ಉಷಾ ರಿಚರ್ಡ್

ರಾಜರಾಜೇಶ್ವರಿನಗರ: ತರಳು ಗ್ರಾಮ ಪಂಚಾಯಿತಿಯಲ್ಲಿ ಉಪಾಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಉಷಾ ರಿಚರ್ಡ್ ಅವರು 14 ಮತಗಳನ್ನು ಪಡೆದು ಜಯಗಳಿಸಿದರು. ಅವರ ಪ್ರತಿಸ್ಪರ್ಧಿ ಮಹಾದೇವಮ್ಮ ಅವರು 6 ಮತಗಳೊಂದಿಗೆ ಪರಾಭವಗೊಂಡರು.

ತೋಟಗಾರಿಕೆ ಇಲಾಖೆಯ ಸಹಾಯಕ ನಿರ್ದೇಶಕಿ ಶಿಲ್ಪಾ ಅವರು ಚುನಾವಣಾಧಿಕಾರಿಯಾಗಿ ಕಾರ್ಯನಿರ್ವಹಿಸಿದರು. ಉಪಾಧ್ಯಕ್ಷರ ಆಯ್ಕೆಯನ್ನು ಘೋಷಿಸಿದರು.

ಮೇರಿ ಆಂಟೊನಿ ಅವರ ರಾಜೀನಾಮೆಯಿಂದ ತೆರವಾಗಿದ್ದ ಉಪಾಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಯಿತು.

ನಿಧನ ವಾರ್ತೆ

ಪಿ. ರಮೇಶ್

ಬೆಂಗಳೂರು: ನಗರದ ಶೂಲೇ ಸರ್ಕಲ್‌ನಲ್ಲಿ ಪತ್ರಿಕಾ ವಿತರಕರಾಗಿದ್ದ, ಅಶೋಕನಗರ ನಿವಾಸಿ ಪಿ.ರಮೇಶ್ (61) ಗುರುವಾರ ನಿಧನರಾದರು.



ಪಿ. ರಮೇಶ್

‘ಪ್ರಜಾವಾಣಿ’, ‘ಡೆಕ್ಕನ್ ಹೆರಾಲ್ಡ್’ ಸಹಿತ ವಿವಿಧ ಪತ್ರಿಕೆಗಳನ್ನು ಅವರು ‘ರಾಜ್ ನ್ಯೂಸ್ ಏಜೆನ್ಸಿ’ ಮೂಲಕ ಹಲವು ವರ್ಷಗಳಿಂದ ವಿತರಣೆ ಮಾಡುತ್ತಿದ್ದರು.

ಅವರಿಗೆ ಪತ್ನಿ, ಪುತ್ರಿ ಇದ್ದಾರೆ. ವಿಲ್ಸನ್ ಗಾರ್ಡನ್ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದವರು ತಿಳಿಸಿದ್ದಾರೆ.

‘ಜನೋಪಯೋಗಿ ಸಂಶೋಧನೆ ಅಗತ್ಯ’

ಘಟಿಕೋತ್ಸವದಲ್ಲಿ ಐಐಎಸ್‌ಸಿ ಕೌನ್ಸಿಲ್ ಅಧ್ಯಕ್ಷ ‘ಕ್ರಿಸ್’ ಗೋಪಾಲಕೃಷ್ಣನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ವಿಜ್ಞಾನ ಸಂಸ್ಥೆಯು ದೇಶದಲ್ಲಿ ಮೊದಲ ಸ್ಥಾನದಲ್ಲಿದೆ. ಜಗತ್ತಿನಲ್ಲಿ ಮೊದಲ ಸ್ಥಾನ ಪಡೆಯುವಂತಾಗಬೇಕು. ಇಲ್ಲಿ ನಡೆಯುವ ಸಂಶೋಧನೆಗಳು ಜನರ ಉಪಯೋಗಕ್ಕೆ ಸಿಗುವಂತಾಗಬೇಕು ಎಂದು ಐಐಎಸ್‌ಸಿ ಕೌನ್ಸಿಲ್ ಅಧ್ಯಕ್ಷ ಸೇನಾಪತಿ ‘ಕ್ರಿಸ್’ ಗೋಪಾಲಕೃಷ್ಣನ್ ತಿಳಿಸಿದರು.

ಶುಕ್ರವಾರ ನಡೆದ ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್‌ಸಿ) ಘಟಿಕೋತ್ಸವದಲ್ಲಿ ಅವರು ಮಾತನಾಡಿದರು.

ಬಹುಶಿಸ್ತೀಯ ಸಂಶೋಧನೆಗಳನ್ನು ನಡೆಸಿದಾಗ ಅವುಗಳು ಕೈಗಾರಿಕೆಗಳಲ್ಲಿ ಬಳಕೆಯಾಗುತ್ತವೆ. ಯಾವುದೇ ಸಂಶೋಧನೆ ಮಾರುಕಟ್ಟೆಗೆ ಹೋಗಬೇಕು ಎಂದು ಆಶಿಸಿದರು.

‘ಶತಮಾನದ ಹಿಂದೆ ಐಐಎಸ್‌ಸಿ ಪ್ರಾರಂಭವಾದಾಗ, ಕೇವಲ ಎರಡು ಶೈಕ್ಷಣಿಕ ಕಾರ್ಯಕ್ರಮಗಳಿದ್ದವು. ವಿದ್ಯಾರ್ಥಿಗಳು ಮತ್ತು ಸಿಬ್ಬಂದಿ ಸೇರಿ ಕೇವಲ 30 ಜನರು ಕ್ಯಾಂಪಸ್‌ನಲ್ಲಿದ್ದರು. ಇಂದು 6,000 ಜನರಿರುವ ದೊಡ್ಡ ಸಂಸ್ಥೆಯಾಗಿ ಬೆಳೆದಿದೆ, ಸುಧಾರಿತ ಸಂಯೋಜಿತ ಕಾರ್ಯಕ್ರಮಗಳು ಮತ್ತು ಉದ್ಯಮ-ಕೇಂದ್ರಿತ ಕೌಶಲ್ಯ ಅಭಿವೃದ್ಧಿ ಸೇರಿದಂತೆ ಸುಮಾರು 800 ಕೋರ್ಸ್‌ಗಳಿವೆ. ಹೊಸ ಸ್ನಾತಕೋತ್ತರ ಮತ್ತು ಡಾಕ್ಟರೇಟ್ ಕಾರ್ಯಕ್ರಮಗಳನ್ನು ಮುಂದಿನ ವರ್ಷ ಆರಂಭಿಸಲಾಗುವುದು’ ಎಂದು ಅವರು ಹೇಳಿದರು.

ಪದವಿ ಪ್ರದಾನ ಮಾಡಿ ಮಾತನಾಡಿದ ಪ್ರಿನ್ಸ್‌ಟನ್ ವಿಶ್ವವಿದ್ಯಾಲಯದ ಗಣಿತ ಪ್ರಾಧ್ಯಾಪಕ ಮಂಜುಲ್ ಭಾರ್ಗವ, ‘ಪದವಿ ಪಡೆದವರು ವೈಜ್ಞಾನಿಕ ಚಿಂತನೆ ಇಟ್ಟುಕೊಂಡು ಸಮಸ್ಯೆಗಳನ್ನು ಪರಿಹರಿಸಲು ಸಜ್ಜಾಗಬೇಕು. ಯಾವುದೇ ಕೆಲಸವನ್ನು ಮಾಡುವಾಗ ಅದರಲ್ಲಿ ತಜ್ಞರಾಗಬೇಕು. ಹಿಂದಿನ ಚಿಂತನೆ, ನಿರೀಕ್ಷೆಗಳನ್ನು ಮೀರಿ ಹೊಸ, ಭಿನ್ನ ಚಿಂತನೆಗೆ ತೆರೆದುಕೊಳ್ಳಬೇಕು. ಹೊಸತನ ಮತ್ತು ಸೃಜನಶೀಲರಾಗಿ ಕೆಲಸ ಮಾಡಬೇಕು’ ಎಂದು ಸಲಹೆ ನೀಡಿದರು.



ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ವಿವಿಧ ವಿಭಾಗಗಳಲ್ಲಿ ಚಿನ್ನದ ಪದಕ ಪಡೆದ 84 ವಿದ್ಯಾರ್ಥಿಗಳಿಗೆ ಶುಕ್ರವಾರ ಪದಕ ಮತ್ತು ಪದವಿ ಪ್ರದಾನ ಮಾಡಲಾಯಿತು ಪ್ರಜಾವಾಣಿ ಚಿತ್ರ

ಜೀವ ಕಳೆದುಕೊಂಡಿರುವ ಚಿನ್ನದ ಪದಕದ ವಿದ್ಯಾರ್ಥಿ

ಎರಡು ತಿಂಗಳ ಹಿಂದೆ ಅಗರ ಕೆರೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದ ಸೋಮವಂಶಿ ನಿಖಿಲ್ ಚೋಟು ಅವರು ಬಿಸಿನೆಸ್ ಅನಾಲಿಟಿಕ್ಸ್‌ನಲ್ಲಿ 2023–24ನೇ ಸಾಲಿನಲ್ಲಿ ಪ್ರಥಮ ಸ್ಥಾನ ಪಡೆದಿದ್ದರು. ವಿವಿಧ ವಿಭಾಗದಲ್ಲಿ ಅತ್ಯುತ್ತಮ ಸಾಧನೆ ತೋರಿದ 84 ವಿದ್ಯಾರ್ಥಿಗಳ ಪಟ್ಟಿಯಲ್ಲಿ ಅವರ ಹೆಸರೂ ಇತ್ತು.

ಸೋಮವಂಶಿ ಪರವಾಗಿ ಚಿನ್ನದ ಪದಕ ಸ್ವೀಕರಿಸಲು ಹೆತ್ತವರು ಇದ್ದರೆ ಬನ್ನಿ ಎಂದು ಘಟಿಕೋತ್ಸವದಲ್ಲಿ ತಿಳಿಸಲಾಯಿತು. ಹೆತ್ತವರು ಕಾರ್ಯಕ್ರಮಕ್ಕೆ ಬಂದಿರಲಿಲ್ಲ.

ಮಹಾರಾಷ್ಟ್ರದ ಜಲಗಾಂವ್ ನಿವಾಸಿಯಾಗಿದ್ದ ಸೋಮವಂಶಿ ಅವರು ಮೇ 7ರಂದು ಜೀವ ಕಳೆದುಕೊಂಡಿದ್ದರು.

‘ಜ್ಞಾನವನ್ನು ವೈಯಕ್ತಿಕ ಸಾಧನೆಗೆ ಸೀಮಿತಗೊಳಿಸಬಾರದು. ಸಮಾಜದ ಮತ್ತು ವೈಜ್ಞಾನಿಕ ಪ್ರಗತಿಗೂ ನಿಮ್ಮ ಜ್ಞಾನ ಬಳಕೆಯಾಗಬೇಕು. ಅಂತರಶಿಸ್ತೀಯ ಕಲಿಕೆ, ಸಂಶೋಧನೆ, ವೈದ್ಯಕೀಯ ಶಿಕ್ಷಣ ಮತ್ತು ಉದ್ಯಮದದ ಕಡೆಗೆ ಗಮನ ನೀಡಬೇಕು’ ಎಂದು ಹೇಳಿದರು.

1,487 ಮಂದಿಗೆ ಸ್ನಾತಕೋತ್ತರ ಮತ್ತು ಪಿಎಚ್.ಡಿ ಪದವಿ, 106 ಮಂದಿಗೆ ಪದವಿ ಸೇರಿದಂತೆ ಒಟ್ಟು 1,593 ಮಂದಿಗೆ ಪದವಿ ಪ್ರದಾನ ಮಾಡಲಾಯಿತು. ಅತ್ಯುತ್ತಮ ಸಾಧನೆ ತೋರಿದ 84 ವಿದ್ಯಾರ್ಥಿಗಳಿಗೆ ಚಿನ್ನದ ಪದಕಗಳನ್ನು ನೀಡಲಾಯಿತು.

ಡೀನ್‌ಗಳಾದ ಗೋವಿಂದ ರಂಗರಾಜನ್, ಅಶೋಕ ಸುಂದರರಾಜನ್, ವಿವಿಧ ವಿಭಾಗಗಳ ಮುಖ್ಯಸ್ಥರು, ನಿರ್ದೇಶಕರು ಉಪಸ್ಥಿತರಿದ್ದರು.

ನಾಡಪ್ರಭು ಕೆಂಪೇಗೌಡರ ಜಯಂತ್ಯುತ್ಸವದಲ್ಲಿ ಡಿಸಿಎಂ

‘ವಕೀಲರ ಕಲ್ಯಾಣಕ್ಕೆ ₹5ಕೋಟಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಡ್ವೊಕೇಟ್ಸ್ ಅಕಾಡೆಮಿಗೆ ಬೆಂಗಳೂರಿನ ಹೊರಭಾಗದಲ್ಲಿ 20 ಕಿ.ಮೀ ವ್ಯಾಪ್ತಿಯಾಚೆಗೆ 10 ಎಕರೆ ಜಮೀನು ಕೊಡಿಸಲು ಕಂದಾಯ ಸಚಿವರ ಜೊತೆ ಮಾತನಾಡುತ್ತೇನೆ. ವಕೀಲರ ಕಲ್ಯಾಣಕ್ಕಾಗಿ ₹5 ಕೋಟಿ ನೀಡುತ್ತೇನೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭರವಸೆ ನೀಡಿದರು.

‘ಬೆಂಗಳೂರು ವಕೀಲರ ಸಂಘ’ದ ವತಿಯಿಂದ ಸಿಟಿ ಸಿವಿಲ್ ಕೋರ್ಟ್ ಆವರಣದ ವಕೀಲರ ಸಭಾಭವನದಲ್ಲಿ ಶುಕ್ರವಾರ ಆಯೋಜಿಸಲಾಗಿದ್ದ ನಾಡಪ್ರಭು ಕೆಂಪೇಗೌಡರ ಜಯಂತ್ಯುತ್ಸವದಲ್ಲಿ ಅಭಿನಂದನೆ ಸ್ವೀಕರಿಸಿ ಅವರು ಮಾತನಾಡಿದರು. ತಮ್ಮ ಭಾಷಣ ದುದ್ದಕ್ಕೂ ಒಗಟು, ಪಾರಮಾರ್ಥ, ಸಂಸ್ಕೃತ ಸುಭಾಷಿತ ಮತ್ತು ಡಿವಿಜಿ ಅವರ ಕಗ್ಗಗಳನ್ನು ಉಲ್ಲೇಖಿಸಿದರು.

‘ಕೆಂಪೇಗೌಡ ಜಯಂತಿ ಆಚರಣೆ ಶುರು ಮಾಡಿದ್ದೇ ನಾನು. ಈ ಆಚರಣೆ ಬೆಂಗಳೂರಿಗೆ ಮಾತ್ರವಲ್ಲ. ರಾಜ್ಯಕ್ಕೂ ವಿಸ್ತರಣೆಯಾಗಬೇಕು. ಈ ನಗರ ಜ್ಞಾನ, ಸಂಪನ್ಮೂಲ ಮತ್ತು ಮಾನವ ಶಕ್ತಿಯನ್ನು ಹೊಂದಿದ, ದೇಶದಲ್ಲೇ ಅತ್ಯುತ್ತಮವಾದ ನಗರ. ಬೆಂಗಳೂರು ಇಂದು ವ್ಯಾಪಕವಾಗಿ ಬೆಳೆದಿದೆ. ಇಲ್ಲಿಗೆ ಬಂದ ಯಾರೂ ಕೂಡಾ ಇಲ್ಲಿಂದ ವಾಪಸು ಹೋಗುವುದಿಲ್ಲ. ಬೆಂಗಳೂರು ಅಭಿವೃದ್ಧಿ ಸಚಿವನಾಗಿ ಕೆಲಸ ಮಾಡುವಲ್ಲಿ ನನಗೆ ಅತೀವ ಆಸಕ್ತಿ ಇದೆ’ ಎಂದರು.

‘ರಾಜ್ಯ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ’ ಎಂದು ಶ್ಲಾಘಿಸಿದರು.

ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, ಪ್ರಾಧ್ಯಾಪಕ ಎಂ.ಕೃಷ್ಣೇಗೌಡ, ನಟಿ ಪ್ರೇಮಾ, ವಕೀಲರ ಸಂಘದ ಅಧ್ಯಕ್ಷ ವಿವೇಕ್ ರೆಡ್ಡಿ, ಉಪಾಧ್ಯಕ್ಷ ಸಿ.ಎಸ್. ಗಿರೀಶ್ ಕುಮಾರ್, ಪ್ರಧಾನ ಕಾರ್ಯದರ್ಶಿ ಎಚ್.ವಿ.ಪ್ರವೀಣ್ ಗೌಡ, ಖಜಾಂಚಿ ಪ್ರೇಮಾ ರವಿಶಂಕರ್, ಟಿ.ಅಂಜನಕುಮಾರ್ ಗೌಡ, ಎಸ್.ಎನ್. ರಾಕೇಶ್ ಹಾಜರಿದ್ದರು.



‘ವಕೀಲರ ರಕ್ಷಣಾ ಕಾಯ್ದೆ ಅನುಷ್ಠಾನದ ರೂವಾರಿ’ ಎಂಬ ಅಭಿದಾನದೊಂದಿಗೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಬೆಂಗಳೂರು ವಕೀಲರ ಸಂಘದ ವತಿಯಿಂದ ಶುಕ್ರವಾರ ಸಿಟಿ ಸಿವಿಲ್ ಕೋರ್ಟ್‌ನ ವಕೀಲರ ಸಭಾಭವನದಲ್ಲಿ, ಹಸು–ಕರುವಿನ ಕಾಮಧೇನು ಸ್ಮರಣಿಕೆಯನ್ನು ನೀಡಿ ಅಭಿನಂದಿಸಲಾಯಿತು

ನಗರದಲ್ಲಿ ಇಂದು

ಯಕ್ಷ ನೃತ್ಯ–ಸಂವಾದ–ಸನ್ಮಾನ: ಯಕ್ಷ ನೃತ್ಯ: ತುಳಸಿ ಹೆಗಡೆ, ಸನ್ಮಾನ: ದಿನೇಶ್ ಉಪ್ಪೂರ, ಉಪಸ್ಥಿತಿ: ರಾಜು ಅಡಕಳ್ಳಿ, ಜಿ.ಮೃತ್ಯುಂಜಯ, ಅಶೋಕ ಹಾಸ್ಯಗಾರ ಅವರ ‘ದಶರೂಪಕಗಳ ದಶಾವತಾರ’ ಕೃತಿಯ ಬಗ್ಗೆ ಸಂವಾದ: ಆನಂದರಾಮ ಉಪಾಧ್ಯ, ರವಿ ಮಡೋಡಿ, ಆಯೋಜನೆ ಮತ್ತು ಸ್ಥಳ: ಬೆಳ್ಳಿ ಭವನ, ಕ.ವಿ.ಪ್ರ.ನಿ.ನಿ. ಲೆಕ್ಕಾಧಿಕಾರಿಗಳ ಸಂಘ, ಆನಂದರಾವ್ ವೃತ್ತ, ಬೆಳಿಗ್ಗೆ 10

ಪತ್ರಿಕಾ ದಿನಾಚರಣೆ ಹಾಗೂ ಜೀವಮಾನ ಸಾಧನೆ ಪ್ರಶಸ್ತಿ ಪ್ರದಾನ ಸಮಾರಂಭ: ಉದ್ಘಾಟನೆ: ಬಸವರಾಜ ಹೊರಟ್ಟಿ, ಅಧ್ಯಕ್ಷತೆ: ಜಿ.ವೈ. ಪದ್ಮನಾಗರಾಜು, ಸಂಚಿಕೆ ಬಿಡುಗಡೆ: ಎನ್.ಎಸ್. ಬೋಸರಾಜು, ಗುರುತಿನ ಚೀಟಿ ವಿತರಣೆ: ಕೆ.ವಿ. ಪ್ರಭಾಕರ್, ಅತಿಥಿಗಳು: ತಿಪ್ಪಣ್ಣಪ್ಪ ಬಿ. ಕಮಕನೂರ, ಆಯೇಶಾ ಖಾನುಂ, ಶಿವನಂದ ತಗಡೂರು, ಆರ್.ಶ್ರೀಧರ, ವಿಶೇಷ ಸನ್ಮಾನ: ಡಾ.ವಿಜಯಲಕ್ಷ್ಮೀ ದೇಶಮಾನೆ, ಪ್ರಶಸ್ತಿ ಪುರಸ್ಕೃತರು: ಬಸವರಾಜ ಸ್ವಾಮಿ, ಚಿನ್ನೇಗೌಡ, ಸಿದ್ದರಾಜು, ಮಾಲತಿ ಸುಧೀರ್, ಗಂಗಾಧರ್ ಮೊದಲಿಯಾರ್, ಆಯೋಜನೆ: ಕರ್ನಾಟಕ ದಿನಪತ್ರಿಕೆಗಳ ಸಂಘ, ಸ್ಥಳ: ಮಹಾದೇವ ದೇಸಾಯಿ ಸಭಾಂಗಣ, ಗಾಂಧಿ ಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10.30



ವಿಜಯಲಕ್ಷ್ಮೀ ದೇಶಮಾನೆ

‘ಆನ್ ಬೋರ್ಡ್’ ತಂತ್ರಜ್ಞಾನಕ್ಕೆ ಚಾಲನೆ: ರಾಮಲಿಂಗಾರೆಡ್ಡಿ, ಆಯೋಜನೆ: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಕಾಂಟಿನೆಂಟಲ್ ಇಂಡಿಯಾ, ಸ್ಥಳ: ಬಿಎಂಟಿಸಿ ಕೇಂದ್ರ ಕಚೇರಿ ಆವರಣ, ಶಾಂತಿನಗರ, ಬೆಳಿಗ್ಗೆ 10.30

ಮಹಿಳಾ ಉದ್ದಿಮೆದಾರರಿಗೆ ಸಾಲ ಸೌಲಭ್ಯ ವಿತರಣಾ ಕಾರ್ಯಕ್ರಮ: ಅಧ್ಯಕ್ಷತೆ: ಡಿ.ರೂಪಾ ಮೌದ್ಗಿಲ್, ಅತಿಥಿ: ಸ್ಮಿತಾ ರಂಗನಾಥ, ಸಿ.ಎನ್. ದೇವರಾಜ್, ಪ್ರಾಸ್ತಾವಿಕ ನುಡಿ: ಎಂ.ಆರ್. ವೆಂಕಟೇಶ್, ಆಯೋಜನೆ ಮತ್ತು ಸ್ಥಳ: ಆಡಳಿತ ಕಚೇರಿ, ಶ್ರೀ ತ್ಯಾಗರಾಜ ಕೋ–ಆಪರೇಟಿವ್ ಬ್ಯಾಂಕ್, ಎನ್.ಆರ್. ಕಾಲೊನಿ, ಬೆಳಿಗ್ಗೆ 11

ಸಂಸ್ಥಾಪನಾ ದಿನ: ಮುಖ್ಯ ಅತಿಥಿ: ಬಾನು ಮುಷ್ತಾಕ್, ಆಯೋಜನೆ ಹಾಗೂ ಸ್ಥಳ: ಮೌಂಟ್ ಕಾರ್ಮೆಲ್ ಕಾಲೇಜು, ಅರಮನೆ ರಸ್ತೆ, ಬೆಳಿಗ್ಗೆ 11



ಬಾನು ಮುಷ್ತಾಕ್

ಮಹಿಳೆಯರಿಗೆ ಮತ್ತು ಲಿಂಗತ್ವ ಅಲ್ಪಸಂಖ್ಯಾತರಿಗೆ ಆಟೊ ರಿಕ್ಷಾ ಚಾಲನಾ ಕೌಶಲ ತರಬೇತಿ: ಮುಖ್ಯ ಅತಿಥಿ: ಶೋಭಾ ಕರಂದ್ಲಾಜೆ, ಉಪಸ್ಥಿತಿ: ಶ್ರೀವಿದ್ಯಾ, ಸಾರಿಕಾ ಪ್ರಧಾನ್, ಸುಧಾಕಾರ ಪೈ, ಮಿಮಿ ಪಾರ್ಥಸಾರಥಿ, ಚಿತ್ರ ತಳವಾರ, ಅನುಪಮಾ ಶೆಟ್ಟಿ, ಆಯೋಜನೆ: ಬಿ.ಪ್ಯಾಕ್, ಸ್ಥಳ: ಬಿಡಬ್ಲ್ಯುಎಸ್‌ಎಸ್‌ಬಿ ಸುವರ್ಣ ಭವನ, ಮಲ್ಲೇಶ್ವರ, ಬೆಳಿಗ್ಗೆ 11

ಅಂಗವಿಕಲ ಮಕ್ಕಳಿಂದ ‘ನನ್ನ ಮೆಚ್ಚಿನ ಪುಸ್ತಕ’ ಕಾರ್ಯಕ್ರಮ: ಉದ್ಘಾಟನೆ: ಸುಬ್ಬು ಹೊಲೆಯಾರ್, ಅಧ್ಯಕ್ಷತೆ: ಶಿವಪ್ರಕಾಶ್ ಹಿರೇಮಠ, ಅತಿಥಿ: ಕರುಣಾ ವೀರಕೆಂಪಯ್ಯ, ಉಪಸ್ಥಿತಿ: ರಾಕೇಶ್ ಎಂ., ಪ್ರಾಸ್ತಾವಿಕ ನುಡಿ: ವಿಜಯಲಕ್ಷ್ಮೀ ಸತ್ಯಮೂರ್ತಿ, ಆಯೋಜನೆ: ಋತುಗಾನ ಪ್ರತಿಷ್ಠಾನ, ಪ್ರೇಮಾಂಜಲಿ ಫೌಂಡೇಷನ್, ಸ್ಥಳ: ಆದಿಚುಂಚನಗಿರಿ ಮಹಿಳಾ ಸಂಘ, ಎರಡನೇ ಮಹಡಿ, ನಂ. 587, ಮಹಾನಗರ ಪಾಲಿಕೆ ವಿವಿಧೋದ್ದೇಶ ಕಟ್ಟಡ ಸಂಕೀರ್ಣ, ಎಂ.ಸಿ ಬಡಾವಣೆ, ವಿಜಯನಗರ, ಮಧ್ಯಾಹ್ನ 3

‘ಯುವ ಪುಸ್ತಕ ಸರಣಿ’ ಉದ್ಘಾಟನೆ: ಸುಧಾ ಮೂರ್ತಿ, ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಮಧುಸೂದನ್ ಸಾಯಿ, ಸಂವಾದ: ವಿಕ್ರಮ್ ಸಂಪತ್, ಆಯೋಜನೆ: ಫೌಂಡೇಷನ್ ಫಾರ್ ಇಂಡಿಯನ್ ಹಿಸ್ಟಾರಿಕಲ್ ಆ್ಯಂಡ್ ಕಲ್ಚರಲ್ ರಿಸರ್ಚ್, ಸ್ಥಳ: ಹೋಟೆಲ್ ಕೋರ್ಟ್‌ಯಾರ್ಡ್ ಬೈ ಮ್ಯಾರಿಯಟ್, ಹೆಬ್ಬಾಳ, ಸಂಜೆ 4.30



ಸುಧಾ ಮೂರ್ತಿ

15 ಪುಸ್ತಕಗಳ ಬಿಡುಗಡೆ: ಗಿರೀಶ್ ಕಾಸರವಳ್ಳಿ, ಅತಿಥಿ: ಜೋಗಿ, ಉಪಸ್ಥಿತಿ: ಡಿ.ವಿ.ಗುರುಪ್ರಸಾದ್, ಡುಂಡಿರಾಜ್, ಎಂ.ಕೆ.ಮಂಜುನಾಥ, ಜಯಪ್ರಕಾಶ್ ನಾಗತಿಹಳ್ಳಿ, ಆಯೋಜನೆ ಹಾಗೂ ಸ್ಥಳ: ಸಪ್ನ ಬುಕ್ ಹೌಸ್, 3ನೇ ಮುಖ್ಯರಸ್ತೆ, ಗಾಂಧಿನಗರ, ಸಂಜೆ 5



ಗಿರೀಶ್ ಕಾಸರವಳ್ಳಿ

ಅಶೋಕ್ ಕುಮಾರ್ ಅವರ ಎರಡು ಪುಸ್ತಕಗಳ ಬಿಡುಗಡೆ: ‘ಏಕಸ್ವಾಮ್ಯ ಖರೀದಿ ಬಂಡವಾಳಶಾಹಿ’, ‘ಏಕಸ್ವಾಮ್ಯ ಖರೀದಿ ಬಂಡವಾಳ’, ಪುಸ್ತಕ ಬಿಡುಗಡೆ: ದೊಡ್ಡಿಪಾಳ್ಯ ನರಸಿಂಹಮೂರ್ತಿ, ಪುಸ್ತಕಗಳ ಬಗ್ಗೆ ಮಾತು: ಶಿವಸುಂದರ್, ಟಿ.ಪದ್ಮಶ್ರೀ, ಉಪಸ್ಥಿತಿ: ನಾ.ದಿವಾಕರ, ಮಂಜುನಾಥ್ ಬಿ.ಆರ್, ವಿ.ಎಸ್. ಎಸ್. ಶಾಸ್ತ್ರಿ, ಮಂಗಳಾ, ಚೇತನ್ ಅಹಿಂಸಾ, ಆಯೋಜನೆ: ಆಕೃತಿ ಪುಸ್ತಕ, ಜೀರುಂಡೆ ಪುಸ್ತಕ, ಸ್ಥಳ: ದೇವರಾಜ ಅರಸು ಗ್ಯಾಲರಿ, ಚಿತ್ರಕಲಾ ಪರಿಷತ್ತು, ಕುಮಾರಪಾರ್ಕ್, ಸಂಜೆ 5

ಗುಡಿಬಂಡೆ ಎ. ಕುಮಾರಸ್ವಾಮಿ ಅವರಿಗೆ ಗುರುವಂದನೆ: ಸಂಜೆ 5ರಿಂದ ಗಾಯನ: ಸ್ಮಿತಾ ನಿತ್ಯಾನಂದ, ಪಿಟೀಲು: ಕೆ.ಎಸ್. ವಾಸುಕಿ, ಮೃದಂಗ: ಶ್ರೀವತ್ಸ ಎಸ್., ಸಂಜೆ 6.15ರಿಂದ, ಗಾಯನ: ಉತ್ತರ ಸ್ವಾಮಿನಾಥನ್, ಪಿಟೀಲು: ನಳಿನಾ ಮೋಹನ್, ಮೃದಂಗ: ರವಿಶಂಕರ್ ಶರ್ಮಾ, ಆಯೋಜನೆ: ಗುಡಿಬಂಡೆ ಸಂಗೀತ ಕಲಾ ಶಾಲೆ ಟ್ರಸ್ಟ್, ಸ್ಥಳ: ಜಯರಾಮ ಸೇವಾ ಮಂಡಳಿ, ಜಯನಗರ

‘ಗಂಧವ್ರತ’ ಎಚ್ಚೆಸ್ವಿ ಕಾವ್ಯೋತ್ಸವ: ಉಪಸ್ಥಿತಿ: ರಾಘವೇಂದ್ರ ಪಾಟೀಲ, ಟಿ.ಎಸ್. ನಾಗಾಭರಣ, ಕವಿತಾ ಗಾನೋತ್ಸವ: ಶ್ರೀರಕ್ಷಾ ಪ್ರಿಯರಾವ್, ನಿತಿನ್ ರಾಜಾರಾಮ್ ಶಾಸ್ತ್ರಿ, ಅನುರಾಗ್ ಗದ್ದಿ, ಚಿನ್ಮಯ್, ರೂಪಾ ಭಟ್, ಜಯರಾಮ್ ಪಾರೆ, ಚಿದಂಬರ ಕೋಟೆ, ವಿರೇಶ ಎಂ.ಪಿ.ಎಂ., ಆಯೋಜನೆ: ಡಾ.ಜಯಶ್ರೀ ಅರವಿಂದ ಪ್ರತಿಷ್ಠಾನ, ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5.30

ಎಂ.ಪಿ.ಪ್ರಕಾಶ್ 85: ಉದ್ಘಾಟನೆ: ಸದಾಶಿವಪ್ಪ ಬಿ., ಅಧ್ಯಕ್ಷತೆ: ಪಿ. ವಿಜಯಕುಮಾರ್, ಅತಿಥಿ: ಕೆ.ವಿ. ನಾಗರಾಜಮೂರ್ತಿ, ಉಪಸ್ಥಿತಿ: ದಿಬ್ಬೂರು ಎಸ್. ಗಿರೀಶ್, ಸುಧಾ ನಾಗರಾಜ, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಸ್ಥಳ: ಜೆ.ಎಸ್. ಎಸ್. ಕಾಲೇಜು ಸಭಾಂಗಣ, ಗೇಟ್ ಸಂಖ್ಯೆ 7, 38ನೇ ಕ್ರಾಸ್, 1ನೇ ಮುಖ್ಯರಸ್ತೆ, 8ನೇ ವಿಭಾಗ, ಜಯನಗರ, ಸಂಜೆ 5.30

ರಾಮಕೃಷ್ಣ ಸಂಗೀತ ಸೌರಭ: ವೀಣಾ ವಾದನ: ಡಿ.ಬಾಲಕೃಷ್ಣ, ಕೊಳಲು: ವಿ.ವಂಶಿಧರ, ಮೃದಂಗ: ಬಿ.ಎಸ್.ಪ್ರಶಾಂತ, ಘಟ: ಶಮಿತ್ ಗೌಡ, ಆಯೋಜನೆ ಮತ್ತು ಸ್ಥಳ: ಸ್ವಾಮಿ ವಿವೇಕಾನಂದ ಸಭಾಂಗಣ, ರಾಮಕೃಷ್ಣ ಮಠ, ಬಸವನಗುಡಿ, ಸಂಜೆ 6

ರಂಜನಿಪ್ರಭು ಅವರ ‘ಸಖ ನಿನ್ನ ಕಣ್ಣು’ ಪುಸ್ತಕ ಬಿಡುಗಡೆ ಮತ್ತು ಗೀತಗಾಯನ: ಅತಿಥಿಗಳು: ಬಿ.ಆರ್.ಲಕ್ಷ್ಮಣರಾವ್, ಎಚ್.ಎಸ್.ಸತ್ಯನಾರಾಯಣ, ನಿರ್ಮಾಣ: ಶ್ರೀನಿವಾಸಪ್ರಭು, ಆಯೋಜನೆ: ಉಪಾಸನಾ ಟ್ರಸ್ಟ್, ಆದ್ಯ ಅಕಾಡೆಮಿ ಆಫ್ ಆರ್ಟ್ಸ್, ಸ್ಥಳ: ಸಿ.ಅಶ್ವತ್ ಕಲಾಭವನ, ಎನ್.ಆರ್. ಕಾಲೊನಿ, ಬಸವನಗುಡಿ, ಸಂಜೆ 6

‘ದೀವರ ಚಿತ್ತಾರ’ ಪುಸ್ತಕದ ಬಗ್ಗೆ ಸಂವಾದ: ಭಾಷಣಕಾರರು: ಗೀತಾ ಭಟ್, ನಮ್ರತಾ ಕಾವಲೆ, ಸ್ಮಿತಾ ತುಮಲೂರು, ಗದ್ದೆಮನೆ ಪದ್ಮಾವತಿ, ದಿಗಟೆಕೊಪ್ಪ ಅಣ್ಣಪ್ಪ, ಆಯೋಜನೆ: ಸೆಂಟರ್ ಫಾರ್ ರಿವೈವಲ್ ಆಫ್ ಇಂಡಿಜೀನಸ್ ಆರ್ಟ್, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ದೊಮ್ಮಲೂರು, ಸಂಜೆ 6

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in







ಗುಜರಾತ್: ಸೇತುವೆ ಕುಸಿತ ಸಾವಿನ ಸಂಖ್ಯೆ 21ಕ್ಕೆ ಏರಿಕೆ



ವಡೋದರಾ (ಪಿಟಿಐ): ವಡೋದರಾ ಜಿಲ್ಲೆಯ ಪಾದರಾ ನಗರದಲ್ಲಿ ಮಹಿಸಾಗರ್ ನದಿಗೆ ನಿರ್ಮಿಸಿದ್ದ ಸೇತುವೆ ಕುಸಿದ ಪ್ರಕರಣದಲ್ಲಿ ಮೃತಪಟ್ಟವರ ಸಂಖ್ಯೆ 21ಕ್ಕೆ ಏರಿದೆ.

ಸೇತುವೆಯಿಂದ ಬಿದ್ದು ಗಾಯಗೊಂಡು ಇಲ್ಲಿನ ಆಸ್ಪತ್ರೆಗೆ ದಾಖಲಾಗಿದ್ದ ಐದು ಮಂದಿಯ ಪೈಕಿ ದಹೆವಾನ್ ಗ್ರಾಮದ ನಿವಾಸಿ ನರೇಂದ್ರ ಸಿಂಗ್ ಪರ್ಮಾರ್ (45) ಮೃತಪಟ್ಟಿದ್ದಾರೆ. ನದಿಯಲ್ಲಿ ಮತ್ತಿಬ್ಬರ ಮೃತದೇಹಗಳು ಸಿಕ್ಕಿವೆ.

'ಗುರುವಾರ ರಾತ್ರಿಯವರೆಗೂ 20 ಮೃತದೇಹಗಳನ್ನು ವಶಕ್ಕೆ ಪಡೆಯಲಾಗಿದ್ದು, ಸತತ ಮೂರನೇ ದಿನವೂ ಶೋಧ ಕಾರ್ಯಾಚರಣೆ ಮುಂದುವರಿಸಲಾಗಿದೆ. ' ಎಂದು ವಡೋದರ ಜಿಲ್ಲಾಧಿಕಾರಿ ಅನಿಲ್ ಧಮೆಲಿಯಾ ತಿಳಿಸಿದ್ದಾರೆ.

ಉನ್ನತ ಮಟ್ಟದ ಸಮಿತಿ ರಚನೆ: 'ಸೇತುವೆ ಕುಸಿತಕ್ಕೆ ಸಂಬಂಧಿಸಿದಂತೆ ರಾಜ್ಯ ರಸ್ತೆ ಹಾಗೂ ಕಟ್ಟಡ ನಿರ್ಮಾಣಗಳ ವಿಭಾಗದ ಅಧಿಕಾರಿಗಳ ನೇತೃತ್ವದಲ್ಲಿ ಉನ್ನತ ಮಟ್ಟದ ಸಮಿತಿ ರಚಿಸಲಾಗಿದ್ದು, 30 ದಿನಗಳ ಒಳಗಾಗಿ ವರದಿ ನೀಡುವಂತೆ ಸೂಚಿಸಲಾಗಿದೆ. ಸೇತುವೆಯ ಜೋಡಣಾ ಸ್ತಂಭದಲ್ಲಿ ಉಂಟಾದ ಒತ್ತಡದಿಂದ ಮುರಿದು ಬಿದ್ದಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ' ಎಂದು ಸಚಿವ ಋಷಿಕೇಶ್ ಪಟೇಲ್ ತಿಳಿಸಿದರು.

'ರಾಜ್ಯದಲ್ಲಿ 7 ಸಾವಿರ ಸೇತುವೆಗಳಿದ್ದು, ಈ ಪೈಕಿ ರಿಪೇರಿ ಮಾಡಬೇಕಾದ ಹಾಗೂ ಹೊಸದಾಗಿ ನಿರ್ಮಾಣ ಮಾಡಬೇಕಾದ ಸೇತುವೆಗಳ ಕುರಿತು ವರದಿ ಪಡೆದು, ಅದರ ಅನ್ವಯ ಸರ್ಕಾರ ಕೈಗೊಳ್ಳಲಿದೆ' ಎಂದು ತಿಳಿಸಿದರು.

ರಾಜ್ಯದಲ್ಲಿರುವ ಎಲ್ಲ ಸೇತುವೆಗಳ ತಪಾಸಣಾ ವರದಿ ಹಾಗೂ ಫಿಟ್ನೆಸ್ ಪ್ರಮಾಣಪತ್ರವನ್ನು ಸಾರ್ವಜನಿಕರ ಮುಂದಿಡಬೇಕು ಎಂದು ಗುಜರಾತ್‌ನ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಅಮಿತ್ ಚವ್ಡಾ ಒತ್ತಾಯಿಸಿದ್ದಾರೆ.

800 ಗ್ರಾಂ ಚಿನ್ನಾಭರಣ ದರೋಡೆ

ಒಂದನೇ ಪುಟದಿಂದ...

'ಅಂದಾಜು 800 ಗ್ರಾಂನಷ್ಟು ಚಿನ್ನಾಭರಣ ದೋಚಿರುವ ಮಾಹಿತಿಯಿದೆ. ದರೋಡೆ ಪ್ರಕರಣ ಭೇದಿಸಲು ಐವರು ಹಿರಿಯ ಅಧಿಕಾರಿಗಳ ತಂಡ ರಚಿಸಲಾಗಿದೆ' ಎಂದು ನಗರ ಪೊಲೀಸ್ ಕಮಿಷನರ್ ಶರಣಪ್ಪ ಎಸ್.ಡಿ. 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

'ಶುಕ್ರವಾರ ಮಧ್ಯಾಹ್ನ 12ರಿಂದ 12.45ರ ನಡುವಿನ ಅವಧಿಯಲ್ಲಿ ದರೋಡೆ ನಡೆದಿದೆ. ಮಳಿಗೆ ಮಾಲೀಕರು ಅಂದಾಜು 2ರಿಂದ 3 ಕೆ.ಜಿಯಷ್ಟು ಚಿನ್ನಾಭರಣ ಕಳವಾಗಿದೆ ಎಂದು ಅಂದಾಜಿಸಿದ್ದರು. 1300 ಗ್ರಾಂ ತೂಕದ ಆಭರಣ ಅಂಗಡಿಯಲ್ಲೇ ಉಳಿದಿದೆ' ಎಂದರು. ಬ್ರಹ್ಮಪುರ ಠಾಣೆಯಲ್ಲಿ ದೂರು ದಾಖಲಾಗಿದೆ.

'ಬಿಹಾರ ಚುನಾವಣೆ ಹೈಜಾಕ್'

ರಾಹುಲ್ ಗಾಂಧಿ ಆರೋಪ

• 'ಮಹಾರಾಷ್ಟ್ರದಲ್ಲೂ 'ಹೈಜಾಕ್' ನಡೆದಿತ್ತು'

ಭುವನೇಶ್ವರ (ಪಿಟಿಐ): ಮಹಾರಾಷ್ಟ್ರದ ರೀತಿಯಲ್ಲಿ ಮುಂದಿನ ಬಿಹಾರ ವಿಧಾನಸಭೆ ಚುನಾವಣೆಯನ್ನು ಸಹ ಬಿಜೆಪಿ 'ಹೈಜಾಕ್' ಮಾಡಲಿದೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಶುಕ್ರವಾರ ಆರೋಪಿಸಿದ್ದಾರೆ.



ರಾಹುಲ್ ಗಾಂಧಿ

ಪಕ್ಷದ ವತಿಯಿಂದ ನಡೆದ 'ಸಂವಿಧಾನ ಉಳಿಸಿ' ಸಮಾವೇಶದಲ್ಲಿ ಮಾತನಾಡಿದ ಅವರು, 'ಬಿಹಾರದಲ್ಲಿ ಬಿಜೆಪಿ ಹೈಜಾಕ್ ಮಾಡುವುದನ್ನು ತಡೆಯಲು ಇಂಡಿಯಾ ಒಕ್ಕೂಟದ ಪಕ್ಷಗಳು ಗುರುವಾರದ ಸಭೆಯಲ್ಲಿ ನಿರ್ಧರಿಸಿವೆ' ಎಂದು ಹೇಳಿದರು.

'ಭಾರತೀಯ ಚುನಾವಣಾ ಆಯೋಗವು ತನ್ನ ಕರ್ತವ್ಯವನ್ನು ನಿರ್ವಹಿಸುತ್ತಿಲ್ಲ. ಬದಲಾಗಿ ಬಿಜೆಪಿಯ ಹಿತಾಸಕ್ತಿಗಾಗಿ ಕೆಲಸ ಮಾಡುತ್ತಿದೆ. ಬಿಜೆಪಿಯು ಉದ್ಯಮಿಗಳಿಗಾಗಿ ಸರ್ಕಾರ ನಡೆಸುತ್ತಿದೆ. ದೇಶದ ಸಾಮಾನ್ಯ ಜನರಿಗಾಗಿ ಕೆಲಸ ಮಾಡುತ್ತಿಲ್ಲ' ಎಂದು ರಾಹುಲ್ ಟೀಕಿಸಿದರು.

'ನೀರು, ಕಾಡು ಮತ್ತು ಜಮೀನು ಬುಡಕಟ್ಟು ಜನರಿಗೆ ಸೇರಿದ್ದು, ಅದು ಅವರ ಬಳಿಯೇ ಇರಬೇಕು. ಒಡಿಶಾದ ಬಿಜೆಪಿ ಸರ್ಕಾರವು ಪಂಚಾಯತ್ ಕಾಯ್ದೆ 1996 (ಪಿಇಎಸ್‌ಎ) ಅನ್ನು ಅನುಷ್ಠಾನಗೊಳಿಸಿಲ್ಲ. ಪಿಇಎಸ್‌ಎ ಮತ್ತು ಬುಡಕಟ್ಟು ಮಸೂದೆಯನ್ನು ಕಾಂಗ್ರೆಸ್ ತಂದಿದೆ. ಈ ಕಾನೂನುಗಳನ್ನು ಜಾರಿಗೆ ತಂದು, ಬುಡಕಟ್ಟು ಜನರಿಗೆ ಭೂಮಿ ಒದಗಿಸಲಿದೆ' ಎಂದರು.

'ಸಂವಿಧಾನ ಬದಲಾವಣೆಗೆ ಯತ್ನ'

ಜಾತ್ಯತೀತ ಮತ್ತು ಸಮಾಜವಾದ ಪದಗಳನ್ನು ಸಂವಿಧಾನದಿಂದ ಕೈಬಿಡಲು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಪ್ರಯತ್ನಿಸು-ತ್ತಿದೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಶುಕ್ರವಾರ ಆರೋಪಿಸಿದ್ದಾರೆ.



ಮಲ್ಲಿಕಾರ್ಜುನ ಖರ್ಗೆ

'ಸಂವಿಧಾನ ಉಳಿಸಿ' ಸಮಾವೇಶದಲ್ಲಿ ಮಾತನಾಡಿದ ಅವರು, 'ಬಿಜೆಪಿಯು ಸಂವಿಧಾನವನ್ನು ಬದಲಾಯಿಸಲು ಪ್ರಯತ್ನಿಸುತ್ತಿದೆ' ಎಂದು ಹೇಳಿದರು.

'ನರೇಂದ್ರ ಮೋದಿ ಸರ್ಕಾರವು ಕೈಗಾರಿಕೆಯ ಹೆಸರಲ್ಲಿ ಅರಣ್ಯವನ್ನು ನಾಶಮಾಡುತ್ತಿದೆ. ಬುಡಕಟ್ಟು ಜನರು, ದಲಿತರು, ಮಹಿಳೆಯರು ಮತ್ತು ಯುವಕರು ಬಿಜೆಪಿ ಆಡಳಿತದಲ್ಲಿ ಸುರಕ್ಷಿತರಾಗಿಲ್ಲ. ಅವರು ತಮ್ಮ ಹಕ್ಕುಗಳಿಗಾಗಿ ಹೋರಾಡಲು ಕಲಿಯದಿರುವವರೆಗೆ ಅವರನ್ನು ಅಳಿಸಿಹಾಕುವ ಪ್ರಯತ್ನ ನಡೆಯುತ್ತಿರುತ್ತದೆ ಎಂದು ಹೇಳಿದರು.

ಮತದಾರ ಪಟ್ಟಿ ಪರಿಷ್ಕರಣೆ: ಬಿಎಲ್‌ಎ ಸಂಖ್ಯೆ ಹೆಚ್ಚಳ

ಪಟ್ನಾ (ಪಿಟಿಐ): ಬಿಹಾರದಲ್ಲಿ ಕೈಗೆತ್ತಿಕೊಂಡಿರುವ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ ಪ್ರಕ್ರಿಯೆಗಾಗಿ ವಿವಿಧ ರಾಜಕೀಯ ಪಕ್ಷಗಳು 1.5 ಲಕ್ಷಕ್ಕೂ ಅಧಿಕ ಬೂತ್‌ಮಟ್ಟದ ಏಜೆಂಟ್‌ಗಳನ್ನು (ಬಿಎಲ್‌ಎ) ನೇಮಿಸಿವೆ.

ಈ ಪ್ರಕ್ರಿಯೆಯನ್ನು ತೀವ್ರವಾಗಿ ವಿರೋಧಿಸುತ್ತಿರುವ ಪಕ್ಷಗಳೂ ಈಗ ಹೆಚ್ಚಿನ ಸಂಖ್ಯೆಯ ಬಿಎಲ್‌ಎಗಳನ್ನು ನೇಮಿಸುತ್ತಿವೆ ಎಂದು ಚುನಾವಣಾ ಆಯೋಗದ ಮಾಹಿತಿ ಬಹಿರಂಗಪಡಿಸಿದೆ.

ಜೂನ್ 24ರಂದು ಈ ಪ್ರಕ್ರಿಯೆ ಆರಂಭವಾದಾಗಿನಿಂದ ಆಯೋಗದಲ್ಲಿ ನೋಂದಾಯಿಸಲಾದ ಬಿಎಲ್‌ಎಗಳ ಸಂಖ್ಯೆಯಲ್ಲಿ ಶೇ 13ರಷ್ಟು ಹೆಚ್ಚಳವಾಗಿದೆ ಎಂದು ದತ್ತಾಂಶಗಳು ತಿಳಿಸಿವೆ.

ಸಿಪಿಐ (ಎಂಎಲ್) ಲಿಬರೇಶನ್, ಸಿಪಿಎಂ ಮತ್ತು ಕಾಂಗ್ರೆಸ್ ಪಕ್ಷಗಳು ಬೂತ್‌ಮಟ್ಟದ ಏಜೆಂಟ್‌ಗಳ ಸಂಖ್ಯೆಯನ್ನು ಹೆಚ್ಚಿಸಿವೆ. ಎಡಪಕ್ಷಗಳ ಬಿಎಲ್‌ಎಗಳ ಸಂಖ್ಯೆ 233 ರಿಂದ 1,227ಕ್ಕೆ ಏರಿಕೆಯಾಗಿದೆ. 8,585ರಷ್ಟಿದ್ದ ಕಾಂಗ್ರೆಸ್‌ನ ಬಿಎಲ್‌ಎಗಳ ಸಂಖ್ಯೆ ಈಗ 16,500ಕ್ಕೆ ಹೆಚ್ಚಳವಾಗಿದೆ.

'ಮತದಾರರ ಪಟ್ಟಿ ಪರಿಷ್ಕರಣೆ ವೇಳೆ ವಿಶೇಷವಾಗಿ, ನಮ್ಮ ಪ್ರದೇಶದಲ್ಲಿ ಯಾವುದೇ ಮತದಾರರು ಪಟ್ಟಿಯಿಂದ ಹೊರಗುಳಿಯದಂತೆ ನೋಡಿಕೊಳ್ಳಲು ಹೆಚ್ಚಿನ ಸಂಖ್ಯೆಯ ಬಿಎಲ್‌ಎಗಳನ್ನು ಈ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡಿದ್ದೇವೆ' ಎಂದು ಸಿಪಿಐ (ಎಂಎಲ್) ಲಿಬರೇಶನ್‌ನ ರಾಜ್ಯ ಕಾರ್ಯದರ್ಶಿ ಕುನಾಲ್ ತಿಳಿಸಿದ್ದಾರೆ.

ಬಿಜೆಪಿಯು ಅತಿಹೆಚ್ಚು ಬಿಎಲ್‌ಎಗಳನ್ನು (52,689) ಹೊಂದಿದ್ದರೆ, ಆರ್‌ಜೆಡಿ (47,504) ಎರಡನೇ ಸ್ಥಾನದಲ್ಲಿದೆ. ಪರಿಷ್ಕರಣೆ ಪ್ರಕ್ರಿಯೆ ಆರಂಭವಾದಾಗಿನಿಂದ ಇಲ್ಲಿಯವರೆಗೆ 5.22 ಕೋಟಿ ಮತದಾರರ ಸಮೀಕ್ಷೆ ಪೂರ್ಣಗೊಂಡಿದೆ. ಈ ಸಂಖ್ಯೆ ರಾಜ್ಯದ ಒಟ್ಟು ಮತದಾರರ ಮೂರನೇ ಎರಡರಷ್ಟು ಆಗಿದೆ.

ಭಾಗವತ್ ಹೇಳಿಕೆ ಉಲ್ಲೇಖಿಸಿ ಮೋದಿಗೆ ಕುಟುಕಿದ 'ಕೈ'




ನರೇಂದ್ರ ಮೋದಿ

ನವದೆಹಲಿ (ಪಿಟಿಐ): '75 ವರ್ಷ ತುಂಬಿದ ಮೇಲೆ ಯಾರೇ ಆದರೂ ನಿವೃತ್ತರಾಗ-ಬೇಕು ಹಾಗೂ ಕೆಲಸ ಮಾಡಲು ಬೇರೆಯವರಿಗೆ ಅವಕಾಶ ಮಾಡಿಕೊಡಬೇಕು' ಎಂದು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರ ಹೇಳಿಕೆ ಉಲ್ಲೇಖಿಸುವ ಮೂಲಕ ಕಾಂಗ್ರೆಸ್ ಪಕ್ಷವು ಪ್ರಧಾನಿ ನರೇಂದ್ರ ಮೋದಿ ಅವರನ್ನು ಶುಕ್ರವಾರ ಕುಟುಕಿದೆ.

'ವಿದೇಶ ಪ್ರವಾಸ ಮುಗಿಸಿ ಭಾರತಕ್ಕೆ ಮರಳಿದ ಸಂದರ್ಭದಲ್ಲಿಯೇ, ಮೋದಿ ಅವರಿಗೆ 75 ವರ್ಷ ತುಂಬಲಿರುವ ಕುರಿತು ಮೋಹನ್ ಭಾಗವತ್ ನೆನಪಿಸಿದ್ದಾರೆ. ಇದು ಎಂಥ 'ಘರ್ ವಾಪ್ಸಿ'' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, 'ಎಕ್ಸ್'ನಲ್ಲಿ ಬರೆದುಕೊಂಡಿದ್ದಾರೆ.

'ಭಾಗವತ್ ಅವರ ಈ ಹೇಳಿಕೆ ಒಳ್ಳೆಯ ಸುದ್ದಿಯೇ ಆಗಿದೆ. ಭಾಗವತ್ ಮತ್ತು ಮೋದಿ ಅವರಿಗೆ ಈ ವರ್ಷ 75 ವರ್ಷ ತುಂಬಲಿದೆ. ಹೀಗಾಗಿ, ಇದು ದೇಶ ಹಾಗೂ ಸಂವಿಧಾನಕ್ಕೆ ಒಳ್ಳೆಯ ದಿನಗಳೇ' ಎಂದು ಜೈರಾಮ್ ರಮೇಶ್ ವ್ಯಂಗ್ಯವಾಡಿದ್ದಾರೆ.



ಜೈರಾಮ್ ರಮೇಶ್

ನಾಗ್ಪುರದಲ್ಲಿ ಬುಧವಾರ ನಡೆದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಭಾಗವತ್, ಆರ್‌ಎಸ್‌ಎಸ್‌ನ ಹಿರಿಯ ನಾಯಕರಾಗಿದ್ದ ಮೋರೋಪಂತ ಪಿಂಗ್ಲೆ ಅವರ ಹೇಳಿಕೆಯನ್ನು ಉಲ್ಲೇಖಿಸಿದ್ದರು.

'ನಿಮಗೆ 75 ವರ್ಷ ತುಂಬಿದಾಗ ಶಾಲು ಹೊದಿಸಿ ಸನ್ಮಾನಿಸಿದರೆ, ನಿಮಗೆ ವಯಸ್ಸಾಯಿತು. ಅಧಿಕಾರದಿಂದ ಕೆಳಗಿಳಿದು, ಬೇರೆಯವರಿಗೆ ಜವಾಬ್ದಾರಿ ವಹಿಸಬೇಕು ಎಂಬುದಾಗಿ ಪಿಂಗ್ಲೆ ಹೇಳಿದ್ದರು' ಎಂದು ಭಾಗವತ್ ಪ್ರಸ್ತಾಪಿಸಿದ್ದರು.

'ಪ್ರಶಸ್ತಿ ಜೀವಿ' ಪ್ರಧಾನಿ, ನೀವು ವಿದೇಶ ಪ್ರವಾಸದಿಂದ ತವರಿಗೆ ಮರಳಿದ ಕೂಡಲೇ ಸೆಪ್ಟೆಂಬರ್ 17ರಂದು ನಿಮಗೆ 75 ವರ್ಷ ತುಂಬಲಿದೆ ಎಂದು ಸರಸಂಘಚಾಲಕ ಅವರು ನೆನಪಿಸಿದ್ದಾರೆ' ಎಂದೂ ಜೈರಾಮ್ ರಮೇಶ್ ಹೇಳಿದ್ದಾರೆ.

'ನಿಮಗೆ ಕೂಡ ಬರುವ ಸೆಪ್ಟೆಂಬರ್ 11ಕ್ಕೆ 75 ವರ್ಷ ತುಂಬಲಿದೆ ಎಂಬುದಾಗಿ ಮೋದಿ ಅವರು ಭಾಗವತ್ ಅವರಿಗೆ ಹೇಳಬಹುದಾಗಿದೆ. ಒಂದು ಬಾಣ, ಎರಡು ಗುರಿ' ಎಂದಿದ್ದಾರೆ.

ಜಲಾವೃತ ಪ್ರದೇಶ

ಪಿಟಿಐ ಚಿತ್ರ



ರಾಜಸ್ಥಾನದ ಬಿಕಾನೇರ್‌ನಲ್ಲಿ ಶುಕ್ರವಾರ ಭಾರಿ ಮಳೆಯಾಗಿದ್ದರಿಂದ ನಗರದ ರಸ್ತೆಗಳು ಜಲಾವೃತಗೊಂಡಿದ್ದವು

ಚಿರತೆ ಹಲ್ಲು: ಕೇಂದ್ರ ಸಚಿವ ಗೋಪಿ ವಿರುದ್ಧ ತನಿಖೆ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಚಿರತೆ ಹಲ್ಲು ಹೊಂದಿದ್ದಾರೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಕೇರಳದ ಬಿಜೆಪಿ ಸಂಸದ ಮತ್ತು ಕೇಂದ್ರ ಸಚಿವ ಸುರೇಶ್ ಗೋಪಿ ಅವರ ವಿರುದ್ಧ ತನಿಖೆ ನಡೆಯಲಿದೆ.



ಸುರೇಶ್ ಗೋಪಿ

ಚಿರತೆ ಹಲ್ಲು ಹೊಂದಿರುವ ಆರೋಪದ ಮೇಲೆ ರ‍್ಯಾಪರ್ ವೇಡನ್ (ಹಿರಣ್‌ದಾಸ್ ಮುರಳಿ) ವಿರುದ್ಧ ಅರಣ್ಯ ಇಲಾಖೆ ಏಪ್ರಿಲ್‌ನಲ್ಲಿ ಪ್ರಕರಣ ದಾಖಲಿಸಿತ್ತು. ಅದರ ಬೆನ್ನಲ್ಲೇ, ಗೋಪಿ ಅವರು ಹಾಕಿಕೊಂಡಿರುವ ವಸ್ತುವಿನ ವಿರುದ್ಧವೂ ವಿವಾದ ಭುಗಿಲೆದ್ದಿತ್ತು.

ಅದರ ನಡುವೆಯೇ ಕಾಂಗ್ರೆಸ್ ಕಾರ್ಯಕರ್ತರೊಬ್ಬರು ಈ ಸಂಬಂಧ ಅರಣ್ಯ ಇಲಾಖೆಯಲ್ಲಿ ದೂರು ದಾಖಲಿಸಿದ್ದರು. ಈ ಸಂಬಂಧ ಅರಣ್ಯ ಇಲಾಖೆ ಇದೀಗ ವಿಚಾರಣಾ ಪ್ರಕ್ರಿಯೆ ಆರಂಭಿಸಿದೆ. ತಾವು ಮಾಡಿರುವ ಆರೋಪಗಳ ಕುರಿತು ಸಮಗ್ರ ಮಾಹಿತಿ ಮತ್ತು ಸಾಕ್ಷ್ಯಗಳನ್ನು ಒದಗಿಸುವಂತೆ ಇಲಾಖೆ ದೂರುದಾರರನ್ನು ಕೇಳಿದೆ.

ಈ ಪ್ರಕರಣ ಕುರಿತು ಇಲಾಖೆ ಶೀಘ್ರ ಗೋಪಿ ಅವರನ್ನೂ ವಿಚಾರಣೆಗೆ ಒಳಪಡಿಸಿ, ಅವರ ಹೇಳಿಕೆ ದಾಖಲಿಸಲಿದೆ ಎಂದು ಮೂಲಗಳು ತಿಳಿಸಿವೆ.

ನಕ್ಸಲ್ ನಿಗ್ರಹ ಮಸೂದೆಗೆ ಅಸ್ತು

ಮುಂಬೈ (ಪಿಟಿಐ): ರಾಜ್ಯದಲ್ಲಿ ನಕ್ಸಲೀಯ ಚಟುವಟಿಕೆಗಳನ್ನು ನಿಗ್ರಹಿಸುವ ಮಸೂದೆಗೆ ಮಹಾರಾಷ್ಟ್ರ ವಿಧಾನ ಪರಿಷತ್ತು ಶುಕ್ರವಾರ ಅನುಮೋದನೆ ನೀಡಿತು.

ಮಸೂದೆ ವಿರೋಧಿಸಿ ವಿಪಕ್ಷಗಳ ಸದಸ್ಯರ ಸಭಾತ್ಯಾಗದ ನಡುವೆಯೇ, 'ಮಹಾರಾಷ್ಟ್ರ ವಿಶೇಷ ಸಾರ್ವಜನಿಕ ಭದ್ರತಾ ಮಸೂದೆ'ಯನ್ನು ವಿಧಾನ ಪರಿಷತ್ತು ಅನುಮೋದಿಸಿತು.

ವಿಧಾನಸಭೆಯು ಈ ಮಸೂದೆಯನ್ನು ಗುರುವಾರ ಅನುಮೋದಿಸಿತ್ತು. ಗೃಹ ಖಾತೆ ರಾಜ್ಯ ಸಚಿವ ಯೋಗೇಶ್ ಕದಮ್, ಪರಿಷತ್ತಿನಲ್ಲಿ ಈ ಮಸೂದೆ ಮಂಡಿಸಿದರು.

ಮಸೂದೆ ಮಂಡಿಸಿ ಮಾತನಾಡಿದ ಸಚಿವ ಕದಮ್, 'ಸಿಪಿಐ (ಮಾವೋವಾದಿ) ರಾಜ್ಯದಲ್ಲಿ ಸಶಸ್ತ್ರ ದಂಗೆಯನ್ನು ಹಬ್ಬಿಸುತ್ತಿದೆ. ಇದನ್ನು ನಿಷೇಧಿಸಲಾಗಿದ್ದರೂ, ಇದರಡಿ ಕಾರ್ಯನಿರ್ವಹಿಸುವ ಕೆಲ ಸಂಘಟನೆಗಳು ಭಯೋತ್ಪಾದಕ ಕೃತ್ಯಗಳಲ್ಲಿ ತೊಡಗಿವೆ' ಎಂದರು.

'ಯುಎಪಿಎ ಮತ್ತು ಮಹಾರಾಷ್ಟ್ರ ಸಂಘಟಿತ ಅಪರಾಧ ನಿಯಂತ್ರಣ ಕಾಯ್ದೆ ಇರುವಾಗ ನಕ್ಸಲೀಯ ಚಟುವಟಿಕೆಗಳ ನಿಗ್ರಹಕ್ಕೆ ಮತ್ತೊಂದು ಹೊಸ ಕಾನೂನಿನ ಅಗತ್ಯವಿದೆಯೇ' ಎಂದು ವಿರೋಧ ಪಕ್ಷಗಳು ಪ್ರಶ್ನಿಸಿದವು. ಸಚಿವರ ಉತ್ತರದಿಂದ ತೃಪ್ತರಾಗದ ವಿರೋಧ ಪಕ್ಷಗಳ ಶಾಸಕರು ನಂತರ, ಸಭಾತ್ಯಾಗ ಮಾಡಿದರು. ಇದು ಕಾಯ್ದೆಯಾಗಿ ಜಾರಿಗೆ ಬಂದ ನಂತರ, ಇದರಡಿ ದಾಖಲಾಗುವ ಎಲ್ಲ ಪ್ರಕರಣಗಳನ್ನು ಗಂಭೀರ ಸ್ವರೂಪದ ಹಾಗೂ ಜಾಮೀನು ರಹಿತ ಪ್ರಕರಣಗಳು ಎಂದು ಪರಿಗಣಿಸಲಾಗುತ್ತದೆ.

22 ನಕ್ಸಲರು ಶರಣಾಗತಿ

ನಾರಾಯಣಪುರ (ಪಿಟಿಐ): ಛತ್ತೀಸಗಢದ ನಾರಾಯಣಪುರ ಜಿಲ್ಲೆಯಲ್ಲಿ 22 ಮಂದಿ ನಕ್ಸಲರು ಶಸ್ತ್ರಾಸ್ತ್ರ ತ್ಯಜಿಸಿ ಶುಕ್ರವಾರ ಶರಣಾಗಿದ್ದಾರೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಇವರೆಲ್ಲರೂ ಅಂಬೂಝಮಾಡ ಪ್ರದೇಶದಲ್ಲಿ ಸಕ್ರಿಯರಾಗಿದ್ದು, ಇವರ ಸುಳಿವು ನೀಡಿದವರಿಗೆ ಒಟ್ಟು ₹37.5 ಲಕ್ಷ ಬಹುಮಾನ ಘೋಷಿಸಲಾಗಿತ್ತು.

'ನಕ್ಸಲ್ ಸಿದ್ಧಾಂತದಿಂದ ಬೇಸತ್ತಿದ್ದೇವೆ ಮತ್ತು ನಿಷೇಧಿತ ಸಂಘಟನೆ ಜೊತೆ ಆಂತರಿಕ ಭಿನ್ನಾಭಿಪ್ರಾಯ ಏರ್ಪಟ್ಟ ಕಾರಣ ಶರಣಾಗುತ್ತಿದ್ದೇವೆ ಎಂದು ಅವರು ತಿಳಿಸಿದ್ದಾರೆ' ಎಂದು ಪೊಲೀಸ್ ವರಿಷ್ಠಾಧಿಕಾರಿ ರಾಬಿನ್‌ಸನ್ ಗುರಿಯಾ ತಿಳಿಸಿದರು. ವಿಭಾಗೀಯ ಸಮಿತಿಯ ಸದಸ್ಯರಾಗಿದ್ದ ಮಂಕು ಕುಂಜಾಮ್ (33) ಅವರ ಸುಳಿವು ನೀಡಿದವರಿಗೆ ₹8 ಲಕ್ಷ ಬಹುಮಾನ ಘೋಷಿಸಲಾಗಿತ್ತು. ಪ್ರದೇಶ ಸಮಿತಿ ಸದಸ್ಯರಾದ ಹಿದ್ಮೆ ಕುಂಜಾಮ್ (28), ಪುಣ್ಣಾ ಲಾಲ್ ಅಲಿಯಾಸ್ ಬೋಟಿ (26) ಸನಿರಾಮ್ ಕೊರ್‍ರಮ್ (25) ಇವರ ಸುಳಿವು ನೀಡಿದವರಿಗೆ ತಲಾ ₹5 ಲಕ್ಷ ಬಹುಮಾನ ಘೋಷಿಸಲಾಗಿತ್ತು. ಉಳಿದ 11 ಮಂದಿ ಸುಳಿವು ನೀಡಿದವರಿಗೆ ತಲಾ ₹1 ಲಕ್ಷ ಹಾಗೂ ಉಳಿದ ಏಳು ಮಂದಿ ಸುಳಿವು ನೀಡಿದವರಿಗೆ ತಲಾ ₹50,000 ಘೋಷಿಸಲಾಗಿತ್ತು.

ಸಂಕ್ಷಿಪ್ತ ಸುದ್ದಿ

'ಅಸ್ತ್ರ' ಕ್ಷಿಪಣಿ ಪರೀಕ್ಷೆ ಯಶಸ್ವಿ

ನವದೆಹಲಿ: ದೇಶೀಯವಾಗಿಯೇ ಅಭಿವೃದ್ಧಿಸಿರುವ 'ಅಸ್ತ್ರ ಬಿವಿಆರ್' (ದೃಷ್ಟಿಗೆ ಗೋಚರವಾಗುವ ವ್ಯಾಪ್ತಿ ಮೀರಿದ–ಬಿವಿಆರ್) ಕ್ಷಿಪಣಿಗಳ ಎರಡು ಪರೀಕ್ಷಾರ್ಥ ಪ್ರಯೋಗಗಳನ್ನು ಯಶಸ್ವಿಯಾಗಿ ಶುಕ್ರವಾರ ನಡೆಸಲಾಗಿದೆ.

'ಒಡಿಶಾದ ಬಾಲೇಶ್ವರ ಬಳಿಯ ಚಾಂದಿಪುರದಲ್ಲಿನ ಸಮಗ್ರ ಪರೀಕ್ಷಾ ವಲಯದಲ್ಲಿ ಈ ಕ್ಷಿಪಣಿ ವ್ಯವಸ್ಥೆಯ ಪರೀಕ್ಷಾರ್ಥ ಪ್ರಯೋಗ ನಡೆಸಲಾಯಿತು' ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ.

'ಸುಖೋಯ್–30 ಎಂಕೆಐ ಯುದ್ಧವಿಮಾನದಲ್ಲಿ ಅಳವಡಿಸಿದ್ದ ಈ ಕ್ಷಿಪಣಿಗಳು ಗುರಿಯನ್ನು ನಿಖರವಾಗಿ ತಲುಪಿ, ನಾಶಪಡಿಸಿತು. ಈ ಮೂಲಕ ಅಸ್ತ್ರ ಕ್ಷಿಪಣಿ ವ್ಯವಸ್ಥೆಯ ಕಾರ್ಯಕ್ಷಮತೆ ಸಾಬೀತಾಯಿತು' ಎಂದು ತಿಳಿಸಿದೆ.

100 ಕಿ.ಮೀ.ಗಿಂತಲೂ ಅಧಿಕ ದೂರದ ಗುರಿಗಳನ್ನು ನಾಶಪಡಿಸುವ ಸಾಮರ್ಥ್ಯ ಹೊಂದಿರುವ ಈ ಕ್ಷಿಪಣಿ ವ್ಯವಸ್ಥೆಗಳನ್ನು ಸುಖೋಯ್–30 ಎಂಕೆಐ ಹಾಗೂ ಇತರ ಯುದ್ಧವಿಮಾನಗಳಲ್ಲಿ ಬಳಸಬಹುದಾಗಿದೆ.

ಡಿಆರ್‌ಡಿಒ ಅಭಿವೃದ್ಧಿಪಡಿಸಿರುವ ಈ ಕ್ಷಿಪಣಿ ವ್ಯವಸ್ಥೆಯನ್ನು ಹೈದರಾಬಾದ್ ಮೂಲದ ಭಾರತ ಡೈನಾಮಿಕ್ಸ್ ಲಿಮಿಟೆಡ್ ತಯಾರಿಸುತ್ತಿದೆ. ಇವುಗಳನ್ನು ವಾಯುಪಡೆ ಹಾಗೂ ನೌಕಾಪಡೆಗೆ ಬಳಸಲು ಉದ್ದೇಶಿಸಲಾಗಿದೆ.

ಬೌದ್ಧ ವಿಹಾರದ ಮೇಲೆ ವಾಯು ದಾಳಿ; 23 ಮಂದಿ ಬಲಿ


ಬ್ಯಾಂಕಾಕ್ (ಎಪಿ): ಮ್ಯಾನ್ಮಾರ್‌ನ ಮಧ್ಯ ಭಾಗದ ಸಾಗ್ಯಾಂಗ್ ಪ್ರಾಂತ್ಯದ ಬೌದ್ಧ ವಿಹಾರದ ಮೇಲೆ ನಡೆದ ವಾಯುದಾಳಿಯಲ್ಲಿ 23 ಮಂದಿ ಮೃತಪಟ್ಟಿದ್ದಾರೆ.

'ಲಿನ್ ತ-ಲು ಗ್ರಾಮದಲ್ಲಿರುವ ವಿಹಾರದ ಮೇಲೆ ರಾತ್ರಿ ವೇಳೆ ನಡೆದ ದಾಳಿಯಲ್ಲಿ 30 ಮಂದಿ ಗಾಯಗೊಂಡಿದ್ದು, ಈ ಪೈಕಿ 10 ಮಂದಿ ತೀವ್ರವಾಗಿ ಗಾಯಗೊಂಡಿದ್ದಾರೆ' ಎಂದು ಬಂಡುಕೋರರ ಗುಂಪಿನ ಸದಸ್ಯರು ತಿಳಿಸಿದ್ದಾರೆ.

'ಇತ್ತೀಚಿನ ದಿನಗಳಲ್ಲಿ ನಡೆದ ಸಂಘರ್ಷದಿಂದಾಗಿ 150ಕ್ಕೂ ಅಧಿಕ ಗ್ರಾಮಸ್ಥರು ವಿಹಾರದಲ್ಲಿ ನೆಲೆ ಪಡೆದಿದ್ದರು. ರಾತ್ರಿ 1 ಗಂಟೆ ವೇಳೆ ಯುದ್ಧ ವಿಮಾನದ ಮೂಲಕ ಬಾಂಬ್ ದಾಳಿ ನಡೆದಿದ್ದು, ನಾಲ್ವರು ಮಕ್ಕಳು ಸೇರಿದಂತೆ 23 ಮಂದಿ ಮೃತಪಟ್ಟಿದ್ದಾರೆ' ಎಂದು ತಿಳಿಸಿದ್ದಾರೆ.

2021ರಲ್ಲಿ ಮ್ಯಾನ್ಮಾರ್‌ನಲ್ಲಿ ಅಂಗ್ ಸಾನ್ ಸೂಕಿ ನೇತೃತ್ವದ ಚುನಾಯಿತ ಸರ್ಕಾರದಿಂದ ಅಧಿಕಾರ ಕಿತ್ತುಕೊಂಡು, ಸೇನೆಯು ಆಡಳಿತ ನಡೆಸುತ್ತಿದೆ. ಇಡೀ ದೇಶದಲ್ಲಿ ದಂಗೆ ಆರಂಭವಾಗಿದ್ದು, ಪ್ರತಿರೋಧ ವ್ಯಕ್ತಪಡಿಸುವವರ ವಿರುದ್ಧ ಸೇನೆಯು ಹಿಂಸಾ ಕ್ರಮಗಳನ್ನು ಕೈಗೊಳ್ಳುತ್ತಿದೆ. ದಾಳಿ ಕುರಿತು ಸೇನೆಯು ಪ್ರತಿಕ್ರಿಯಿಸಿಲ್ಲ.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in



ಸುಭಾಷಿತ

ಬುದ್ಧಿ ಬಲಕ್ಕಿಂತ ನೀತಿ ಬಲವೇ ಶ್ರೇಷ್ಠವಾದುದು.

–ಮಹಾತ್ಮ ಗಾಂಧೀಜಿ

ಸಂಪಾದಕೀಯ

ಬೀದಿ ನಾಯಿಗಳಿಗೆ ಪೌಷ್ಟಿಕ ಆಹಾರ ಬಿಬಿಎಂಪಿ ನಡೆ ಸರಿ, ಬದ್ಧತೆ ಪ್ರಶ್ನಾರ್ಹ

ಬೀದಿ ನಾಯಿಗಳಿಗೆ ಪ್ರತಿ ದಿನ ಪೌಷ್ಟಿಕ ಆಹಾರ ನೀಡಲು ₹2.88 ಕೋಟಿ ವೆಚ್ಚದ ಯೋಜನೆಯೊಂದನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರೂಪಿಸಿದೆ. ಪಾಲಿಕೆಯ ಯೋಜನೆ ಮೇಲ್ನೋಟಕ್ಕೆ ಮಾನವೀಯ ಅಂತಃಕರಣದ ಅಭಿವ್ಯಕ್ತಿಯಂತಿದೆ. ಆದರೆ, ಮಹಾನಗರದ ನಾಗರಿಕರಿಗೆ ಮೂಲ ಸೌಕರ್ಯಗಳನ್ನು ಒದಗಿಸುವಲ್ಲಿ ನಿರ್ಲಕ್ಷ್ಯ ತೋರಿಸುವ ಪಾಲಿಕೆಯ ಪ್ರಾಣಿದಯೆ ಅನುಮಾನಕ್ಕೆ ಆಸ್ಪದ ಕಲ್ಪಿಸುವಂತಿದೆ. ಬೀದಿ ನಾಯಿಗಳಿಗೆ ಆಹಾರ ನೀಡುವ ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಜನರು ಮುಂದಾಗದೆ ಹೋದುದರಿಂದ, ಪಾಲಿಕೆಯೇ ಆಹಾರ ಪೂರೈಸಲಿದೆ ಎಂದು ಬಿಬಿಎಂಪಿಯ ಆರೋಗ್ಯ ಮತ್ತು ನೈರ್ಮಲ್ಯ ವಿಭಾಗದ ವಿಶೇಷ ಆಯುಕ್ತರು ಹೇಳಿದ್ದಾರೆ. ಅವರ ಮಾತು, ಸಮುದಾಯದ ಸಂವೇದನೆಯನ್ನು ಅವಮಾನಿಸುವಂತಿದೆ ಹಾಗೂ ಪಾಲಿಕೆಗೆ ತಾನು ಮಾಡಬೇಕಾದುದರ ಕುರಿತು ಉಂಟಾಗಿರುವ ಮರೆವೆಯನ್ನು ಸಂಕೇತಿಸುವಂತಿದೆ. ಬೆಂಗಳೂರಿನ ನಾಗರಿಕರ ಪ್ರೀತಿ ಮತ್ತು ಕಾಳಜಿಯಿಂದಲೇ ಪ್ರತಿ ಬಡಾವಣೆಯಲ್ಲೂ ನೂರಾರು ಬೀದಿ ನಾಯಿಗಳು ಈವರೆಗೂ ಜೀವವುಳಿಸಿಕೊಂಡಿವೆ. ಉದ್ಯಾನಗಳಲ್ಲಿ ಬೀದಿ ನಾಯಿಗಳಿಗೆ ಬಿಸ್ಕತ್ತು ನೀಡುವ ಸಹೃದಯರು ಹಾಗೂ ತಮ್ಮ ಮನೆಗಳ ಸುತ್ತಮುತ್ತ ಓಡಾಡಿಕೊಂಡಿರುವ ನಾಯಿಗಳಿಗೆ ಊಟ ನೀಡುವ ಗೃಹಿಣಿಯರು ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಬೀದಿ ನಾಯಿಗಳೂ ಸೇರಿದಂತೆ ಪ್ರಾಣಿಗಳ ಹಿತಾಸಕ್ತಿಗಾಗಿ ಕಾರ್ಯ ನಿರ್ವಹಿಸುವ ಸಾಕಷ್ಟು ಸಂಸ್ಥೆಗಳೂ, ಸ್ವಯಂ ಸೇವಕರೂ ಇದ್ದಾರೆ. ಅವರ ಮೂಲಕ ಬೀದಿ ನಾಯಿಗಳ ಹಿತಾಸಕ್ತಿಗಾಗಿ ಕಾರ್ಯಕ್ರಮಗಳನ್ನು ರೂಪಿಸಲು ಬಿಬಿಎಂಪಿ ಮುಂದಾಗಬಹುದಿತ್ತು. ಬೀದಿ ನಾಯಿಗಳ ಸಂಖ್ಯೆಯನ್ನು ನಿಯಂತ್ರಿಸುವ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರುವುದರಲ್ಲಿ ಹಾಗೂ ಆಕ್ರಮಣಶೀಲವಾಗಿ ವರ್ತಿಸುವ ನಾಯಿಗಳಿಂದ ನಾಗರಿಕರಿಗೆ ರಕ್ಷಣೆ ಒದಗಿಸುವಲ್ಲಿ ವಿಫಲವಾಗಿರುವ ಪಾಲಿಕೆಗೆ ಇದ್ದಕ್ಕಿದ್ದಂತೆ ಪ್ರಾಣಿಪ್ರೀತಿ ಉಂಟಾಗಿರುವುದು ಅಚ್ಚರಿ ಹುಟ್ಟಿಸುವಂತಿದೆ. ನಾಯಿ ಕಡಿತದ ಪ್ರಕರಣಗಳು ಹೆಚ್ಚಾಗಿರುವ ಪ್ರದೇಶಗಳಲ್ಲಿ ಆಹಾರ ನೀಡುವ ಕಾರ್ಯಕ್ರಮ ಅನುಷ್ಠಾನಗೊಳ್ಳುವುದು ಎನ್ನುವ ಪಾಲಿಕೆಯ ಮಾತಿನಲ್ಲಿ, ಕೋಳಿ ಮಾಂಸವನ್ನೊಳಗೊಂಡ ಊಟ ನೀಡುವ ಮೂಲಕ ನಾಯಿಗಳ ಆಕ್ರಮಣಶೀಲತೆಯನ್ನು ಕಡಿಮೆ ಮಾಡುವ ಇಂಗಿತ ಇರುವಂತಿದೆ. ನಾಯಿಗಳ ಸ್ವಭಾವಕ್ಕೂ ಊಟ ನೀಡುವುದಕ್ಕೂ ಸಂಬಂಧ ಕಲ್ಪಿಸಲು ಹೊರಟಿರುವ ಪಾಲಿಕೆ, ತನ್ನ ಅಭಿಪ್ರಾಯಕ್ಕೆ ಇರುವ ವೈಜ್ಞಾನಿಕ ಅಧ್ಯಯನಗಳನ್ನು ಸಾರ್ವಜನಿಕರ ಮುಂದಿಡಬೇಕಾಗಿದೆ.



ಬೀದಿ ನಾಯಿಗಳಿಗೆ ಪೌಷ್ಟಿಕ ಆಹಾರ ನೀಡುವ ಬಿಬಿಎಂಪಿಯ ಯೋಜನೆ ಚೆನ್ನಾಗಿದೆ. ಆದರೆ, ಈ ಕಾಳಜಿ ನಾಗರಿಕರ ಬಗ್ಗೆಯೂ ಇರಬೇಕಲ್ಲವೇ?

ಬೀದಿ ನಾಯಿಗಳನ್ನು ಅಂತಃಕರಣದಿಂದ ನೋಡುವುದರಲ್ಲಿ ಯಾರಿಗೂ ತಕರಾರು ಇರಲಾರದು. ಆದರೆ, ಜನರ ತೆರಿಗೆ ಹಣದಲ್ಲಿ ಕಾರ್ಯನಿರ್ವಹಿಸುವ ಸರ್ಕಾರಿ ಅಂಗಸಂಸ್ಥೆಗಳ ಆದ್ಯತೆ ಮನುಷ್ಯರು ಆಗಿರಬೇಕೇ ಹೊರತು ಪ್ರಾಣಿಗಳಲ್ಲ. ಸರ್ಕಾರದ ಹಲವು ಯೋಜನೆಗಳ ನಡುವೆಯೂ, ಹಸಿವು ಹಾಗೂ ಪೌಷ್ಟಿಕಾಂಶಗಳ ಕೊರತೆಯಿಂದ ಬಳಲುತ್ತಿರುವ ದೊಡ್ಡ ಸಮುದಾಯ ನಗರದಲ್ಲಿದೆ. ಅವರ ಅಳಲಿಗೆ ಓಗೊಡದೆ, ಬೀದಿ ನಾಯಿಗಳ ಬಗ್ಗೆ ಯೋಚಿಸುವುದು ಅಸಹಜ ಹಾಗೂ ಅಗ್ಗದ ಜನಪ್ರಿಯ ಚಿಂತನೆ. ಇಂದಿರಾ ಕ್ಯಾಂಟೀನ್‌ಗಳ ಉಸ್ತುವಾರಿಯನ್ನು ಸಮರ್ಪಕವಾಗಿ ನಡೆಸುವ ಇಚ್ಛಾಶಕ್ತಿ ಪ್ರದರ್ಶಿಸದ ಪಾಲಿಕೆ, ಬೀದಿನಾಯಿಗಳಿಗೆ ಅನ್ನ ಹಾಗೂ ಕೋಳಿ ಮಾಂಸವನ್ನೊಳಗೊಂಡ ಪೌಷ್ಟಿಕ ಆಹಾರ ಕೊಡಲು ಮುಂದಾಗಿದೆ. ಈ ಯೋಜನೆಯಲ್ಲಿನ ಬದ್ಧತೆ ಹಾಗೂ ಪ್ರಾಮಾಣಿಕತೆ ಪ್ರಶ್ನಾರ್ಹ. ನಾಯಿಗಳ ಆಹಾರ ತಯಾರಿಕೆಗೆ ಕರೆದಿರುವ ಟೆಂಡರ್‌ನಲ್ಲಿ, ಕೃತಕ ಬಣ್ಣ ಬಳಸಬಾರದು ಹಾಗೂ ತಾಜಾತನದಿಂದ ಕೂಡಿರುವ ಸ್ವಚ್ಛ ಆಹಾರ ತಯಾರಿಸಬೇಕು ಎನ್ನುವ ಷರತ್ತುಗಳನ್ನು ವಿಧಿಸಲಾಗಿದೆ. ತಯಾರಿಸಿದ ಊಟವನ್ನು ಸತತ ಎರಡು ದಿನ ಬೀದಿ ನಾಯಿಗಳು ತಿನ್ನದಿದ್ದರೆ, ಆಹಾರವನ್ನು ಬದಲಿಸಬೇಕು ಎಂದೂ ಹೇಳಲಾಗಿದೆ. ನಾಯಿಗಳ ಬಗೆಗಿನ ಈ ಕಾಳಜಿ ಸಮಾಜದ ಕಟ್ಟಕಡೆಯ ಮನುಷ್ಯನ ಬಗ್ಗೆ ಪಾಲಿಕೆಗೆ ಇದ್ದಿದ್ದರೆ ಬೆಂಗಳೂರಿನ ಪರಿಸ್ಥಿತಿ ಈಗಿರುವುದಕ್ಕಿಂತಲೂ ಉತ್ತಮವಾಗಿರುತ್ತಿತ್ತು. ಪಾದಚಾರಿ ಮಾರ್ಗಗಳೇ ಇಲ್ಲದ ಹಾಗೂ ಇರುವ ಪಾದಚಾರಿ ಮಾರ್ಗಗಳು ಕಿತ್ತುಹೋಗಿರುವ ರಸ್ತೆಗಳಲ್ಲಿ ಪಾದಚಾರಿಗಳು ಆತಂಕದಿಂದ ಸಂಚರಿಸುವಂತಾಗಿದೆ. ತೆರೆದ ಮ್ಯಾನ್‌ಹೋಲ್‌ಗಳಿಂದ ಕೊಳಕುನೀರು ರಸ್ತೆಯ ಮೇಲೆ ಹರಿಯುವುದು ಸಾಮಾನ್ಯ ಎನ್ನುವಂತಾಗಿದೆ. ಹೈಕೋರ್ಟ್ ತಪರಾಕಿಯ ನಂತರವೂ, ಗುಂಡಿಮುಕ್ತ ರಸ್ತೆಗಳು ತನ್ನ ವರ್ಚಸ್ಸಿಗೆ ಧಕ್ಕೆ ಎನ್ನುವ ಪಾಲಿಕೆಯ ನಂಬಿಕೆಯಲ್ಲಿ ಹೆಚ್ಚು ಬದಲಾವಣೆ ಆದಂತಿಲ್ಲ. ಮಳೆ ಬಂದಾಗ ಕೆಲವು ಬಡಾವಣೆಗಳ ನಾಗರಿಕರು ನಿದ್ದೆಗೆಡುವುದೂ ಅನಿವಾರ್ಯ ಎನ್ನುವಂತಾಗಿದೆ. ಹೀಗೆ, ಜ್ವಲಂತ ನಾಗರಿಕ ಸಮಸ್ಯೆಗಳ ನಡುವೆಯೂ ಬೀದಿನಾಯಿಗಳಿಗೆ ಪೌಷ್ಟಿಕ ಆಹಾರ ಕೊಡುವ ಬಗ್ಗೆ ಪಾಲಿಕೆ ಯೋಚಿಸುತ್ತದೆಂದರೆ, ಅದು ಮನುಷ್ಯಮಾತ್ರರನ್ನು ಮೀರಿದ ದೈವಿಕ ಮನಃಸ್ಥಿತಿಯನ್ನು ಸಿದ್ಧಿಸಿಕೊಂಡಿರಬೇಕು ಇಲ್ಲವೇ ನಾಗರಿಕರನ್ನು ಬೀದಿನಾಯಿಗಳಿಗಿಂತಲೂ ಕನಿಷ್ಠ ಎಂದು ಭಾವಿಸಿರಬೇಕು.

ದೂರ ದಂಡಂ ಕೋಟಿ ಲಾಭಂ!



ಆಷಾಢ ಮಾಸ ಬಂತೆಂದರೆ ಮೈಸೂರಿನ ಚಾಮುಂಡೇಶ್ವರಿ ದೇವಿಯ ದರ್ಶನಕ್ಕೆ ಫುಲ್ ಡಿಮ್ಯಾಂಡ್. ದಸರಾ ಪಾಸ್‌ಗೆ ಇರುವಷ್ಟೇ ಬೇಡಿಕೆಯು ದೇವಿಯ ದರ್ಶನದ ಪಾಸ್‌ಗೂ ಇರುತ್ತಿತ್ತು. ಈಗ ಪಾಸ್ ವ್ಯವಸ್ಥೆ ರದ್ದಾಗಿದೆ. ಆದರೂ, ಪ್ರಭಾವಿಗಳು ಪ್ರಭಾವ ಬೀರುವುದು ನಿಂತಿಲ್ಲ. ಹಾಗಾಗಿ, ಜನಸಾಮಾನ್ಯರಿಗೆ 'ದೂರ ದಂಡಂ ಕೋಟಿ ಲಾಭಂ' ಎನ್ನುವ ಮಾತು ಒಪ್ಪುತ್ತದೆ.

ಮಹೇಶ್‌ಕುಮಾರ್ ವಿ., ಪತ್ರಕರ್ತ, 'ಎಕ್ಸ್'ನಿಂದ

ಕಿಡಿನುಡಿ



ಸರ್ಕಾರ ಯಾರೋ ಮೂವರು ರೈತರನ್ನು ನಡುವೆ ಕರೆ ತಂದು ಚಳವಳಿ ಒಡೆಯುವ ಪ್ರಯತ್ನ ಮಾಡುತ್ತಿದೆ. ಹಳ್ಳಿಗಳಿಗೆ ಪುಢಾರಿಗಳನ್ನು ಕಳುಹಿಸಿ ಹೆದರಿಸುತ್ತಿದೆ. ಹಸಿರು ವಲಯ ಮಾಡುತ್ತೇವೆ ಎಂಬ ನಾಟಕ ಆಡಿ ಜನರನ್ನು ಹೆದರಿಸುತ್ತಿದೆ. ನಿಮ್ಮ ನಾಟಕ ನಮ್ಮೆಲ್ಲರ ಕಣ್ಣಿಗೆ ಕಾಣಿಸುತ್ತಿದೆ. ಇದೇ 15ರಂದು ರೈತ ಪರ ನಿರ್ಧಾರ ಪ್ರಕಟಿಸದಿದ್ದರೆ ಹೋರಾಟ ತೀವ್ರಗೊಳಿಸುತ್ತೇವೆ.

ಪ್ರಕಾಶ್ ರಾಜ್, ನಟ

25 ವರ್ಷಗಳ ಹಿಂದೆ

ಬುಧವಾರ, 12-7-2000

• ರೂ. 27,000 ಕೋಟಿ ಹೂಡಿಕೆಗೆ ಮಂಜೂರಾತಿ

ಬೆಂಗಳೂರು, ಜುಲೈ 11– ರಾಜ್ಯ ಸರ್ಕಾರ ಖಾಸಗಿ ಬಂಡವಾಳ ಆಕರ್ಷಿಸಲು ಹಮ್ಮಿಕೊಂಡಿರುವ ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶದಲ್ಲಿ ಖಾಸಗಿ ಉದ್ಯಮಿಗಳಿಂದ ಸ್ವೀಕರಿಸಿದ ಅರ್ಜಿ ಪರಿಶೀಲಿಸಿದ ನಂತರ ಇಂದು 27,050 ಕೋಟಿ ರೂಪಾಯಿಗಳ 254 ಯೋಜನೆಗಳಿಗೆ ಎಲ್ಲಾ ರೀತಿಯ ಅನುಮತಿ ನೀಡಿತು.

ವಿಧಾನಸೌಧದಲ್ಲಿ ಸಮಾವೇಶದ ಅಂಗವಾಗಿ ಹಮ್ಮಿಕೊಂಡಿದ್ದ 'ಹೂಡಿಕೆದಾರರ ದಿನ'ದ ಸಂದರ್ಭದಲ್ಲಿ ಮುಖ್ಯಮಂತ್ರಿಗಳು, ರೂ. 24,703 ಕೋಟಿ ಮೊತ್ತದ 59 ಬೃಹತ್, 2,347 ಕೋಟಿ ರೂಪಾಯಿ ಬಂಡವಾಳ ಹೂಡಿಕೆ ಅವಕಾಶ ಇರುವ ಸಣ್ಣ, ಮಧ್ಯಮ ಪ್ರಮಾಣದ ಯೋಜನೆ ಅನುಷ್ಠಾನಕ್ಕೆ ಎಲ್ಲಾ ಬಗೆ ಅನುಮತಿ ನೀಡಿದರು.

75 ವರ್ಷಗಳ ಹಿಂದೆ

ಬುಧವಾರ, 12-7-1950

• ಖಾನ್ ಸೋದರರನ್ನು ಬಿಡುಗಡೆ ಮಾಡಬೇಕೆಂದು ಮನವಿ

ಮದರಾಸ್, ಜುಲೈ 11– ಗಡಿನಾಡಿನ ಪ್ರದೇಶದಲ್ಲಿ ಖಾನ್ ಅಬ್ದುಲ್ ಗಫಾರ್ ಖಾನ್, ಡಾ. ಖಾನ್ ಸಾಹೇಬ್ ಮತ್ತು ನೂರಾರು ಖುದಾಯಿ ಖಿದ್ಮತ್‌ಗಾರರು ಬಂಧನವಾಗಿರುವ ಬಗ್ಗೆ ಸೋಷಲಿಸ್ಟ್ ಪಕ್ಷವು ಕಳವಳ ವ್ಯಕ್ತಪಡಿಸಿ, ಅವರನ್ನು ತಡಮಾಡದೆ ಬಿಡುಗಡೆ ಮಾಡಬೇಕೆಂದು ಪಾಕಿಸ್ತಾನದ ಅಧಿಕಾರಿಗಳಲ್ಲಿ ಮನವಿ ಮಾಡಿಕೊಳ್ಳುವ ನಿರ್ಣಯವನ್ನು ಅಂಗೀಕರಿಸಿತು.

ಹಸಿರು ಪವರ್ ದಾರಿಯಲ್ಲಿ...

ವಿಶ್ಲೇಷಣೆ



ಗುರುರಾಜ್ ಎಸ್. ದಾವಣಗೆರೆ

ಜಗತ್ತಿನ ಆರ್ಥಿಕ ಮತ್ತು ಮಿಲಿಟರಿ ಕ್ಷೇತ್ರಗಳ ಸೂಪರ್ ಪವರ್ ಎನ್ನುವ ಹೆಗ್ಗಳಿಕೆ ಅಮೆರಿಕದ್ದು. ತಂತ್ರಜ್ಞಾನ ಕ್ಷೇತ್ರದಲ್ಲಿ ಚೀನಾ ಸೂಪರ್ ಪವರ್. ತಮ್ಮ ಸ್ಥಾನಗಳನ್ನು ಈ ದೇಶಗಳು ನಿರಂತರವಾಗಿ ಕಾಯ್ದುಕೊಳ್ಳುತ್ತಿವೆ. ಸೌದಿ ಅರೇಬಿಯಾ ಮತ್ತು ರಷ್ಯಾಗಳದ್ದು ತೈಲೋದ್ಯಮದ ಸೂಪರ್ ಪವರ್ ಎನ್ನುವ ಖ್ಯಾತಿ. ಸಾಫ್ಟ್‌ವೇರ್ ಸೂಪರ್ ಕ್ಷೇತ್ರದ ಸೂಪರ್ ಪವರ್ ಎನಿಸಿರುವ ಭಾರತ, 'ಹಸಿರು ಸೂಪರ್ ಪವರ್' ಆಗುವ ಲಕ್ಷಣಗಳೂ ಕಾಣಿಸುತ್ತಿವೆ. ಆ ಹಿರಿಮೆಯನ್ನು ಸಾಕಾರಗೊಳಿಸುವ ಹಲವು ಕೆಲಸಗಳು ಯುದ್ಧೋಪಾದಿಯಲ್ಲಿ ನಡೆಯುತ್ತಿವೆ.

ಮುಂದಿನ ಐದು ವರ್ಷಗಳಲ್ಲಿ 500 ಗಿಗಾವಾಟ್ ವಿದ್ಯುಚ್ಛಕ್ತಿಯನ್ನು ನವೀಕರಿಸಬಹುದಾದ ಇಂಧನ ಮೂಲಗಳ ಮೂಲಕ ಪಡೆಯುವ ವಿಶ್ವದ ಅತ್ಯಂತ ಬೃಹತ್ ಯೋಜನೆ ನಮ್ಮಲ್ಲಿ ಶುರುವಾಗಿದೆ. ಇದಕ್ಕಾಗಿ 50 ಬೃಹತ್ ಸೌರ ಪಾರ್ಕ್‌ಗಳು ನಿರ್ಮಾಣವಾಗಲಿವೆ. ಇವುಗಳಿಂದ 37.49 ಗಿಗಾವಾಟ್ ವಿದ್ಯುತ್ ಉತ್ಪಾದನೆಯೊಂದಿಗೆ, 50 ಲಕ್ಷ ಟನ್ ಹಸಿರು ಜಲಜನಕ ಉತ್ಪಾದಿಸುವ ನೀಲನಕ್ಷೆ ತಯಾರಾಗಿದೆ. ಯೋಜನೆಯು ಸಾಕಾರಗೊಂಡರೆ, ಇನ್ನು 25 ವರ್ಷಗಳಲ್ಲಿ ವಾತಾವರಣಕ್ಕೆ 72 ಕೋಟಿ ಟನ್ ಇಂಗಾಲದ ಡೈಆಕ್ಸೈಡ್ (ಇಂಡೈ) ಸೇರ್ಪಡೆಗೊಳ್ಳುವುದು ನಿಲ್ಲುತ್ತದೆ. 'ಇಂಡೈ' ನಿಯಂತ್ರಣದಲ್ಲಿ ಭಾರತದಂಥ ಬೃಹತ್ ಜನಸಂಖ್ಯೆಯ ದೇಶವು ಯಶಸ್ವಿಯಾದರೆ, ಏರುತ್ತಿರುವ ಭೂತಾಪವನ್ನು ಒಂದೂವರೆ ಡಿಗ್ರಿ ಸೆಲ್ಸಿಯಸ್ ಒಳಗಿರುವಂತೆ ನಿಯಂತ್ರಿಸಬಹುದು.

ಪ್ರಸ್ತುತ, ದೇಶದ ಒಟ್ಟು ವಿದ್ಯುತ್ ಉತ್ಪಾದನೆಯಲ್ಲಿ ಸೌರ ವಿದ್ಯುತ್ ಪಾಲು ಶೇ 17ರಷ್ಟಿದೆ. ಪ್ಯಾರಿಸ್ ಒಪ್ಪಂದದ ನಿಬಂಧನೆಗೆ ದೇಶವನ್ನು ಸಜ್ಜುಗೊಳಿಸಲು ಹಲವು ಪರಿಸರಸ್ನೇಹಿ ಯೋಜನೆಗಳನ್ನು ಕೇಂದ್ರ ಸರ್ಕಾರ ಜಾರಿಗೊಳಿಸಿದೆ. ಅದರಲ್ಲಿ 'ಪಿಎಂ ಸೂರ್ಯ ಘರ್: ಮುಫ್ತ್ ಬಿಜ್ಲಿ' ಯೋಜನೆಯೂ ಒಂದು. ಮನೆಗಳ ತಾರಸಿ ಮೇಲೆ ಸೌರ ವಿದ್ಯುತ್ ಫಲಕ ಅಳವಡಿಸಿ ಉಚಿತ ವಿದ್ಯುತ್ ನೀಡುವ ಯೋಜನೆ ಇದಾಗಿದೆ. ಇದಕ್ಕಾಗಿ ₹75 ಸಾವಿರ ಕೋಟಿ ಮೀಸಲಿರಿಸಿದೆ. ದೇಶದ ಒಂದು ಕೋಟಿ ಕುಟುಂಬಗಳಿಗೆ ಪ್ರತಿ ಮಾಸಿಕ ತಲಾ 300 ಯೂನಿಟ್‌ವರೆಗೆ ಉಚಿತವಾಗಿ ವಿದ್ಯುತ್ ಪೂರೈಸುವ ಗುರಿ ಹೊಂದಲಾಗಿದೆ. ಯೋಜನೆಯ ಫಲವಾಗಿ, 17 ಲಕ್ಷ ಜನರಿಗೆ ಉದ್ಯೋಗ ದೊರಕಲಿದೆ; ಪ್ರತಿ ಮನೆಯ ವಿದ್ಯುತ್ ಬಿಲ್ಲಿನ ಮೇಲೆ ವಾರ್ಷಿಕ ₹15 ಸಾವಿರದಿಂದ ₹18 ಸಾವಿರ ಉಳಿತಾಯವಾಗಲಿದೆ. ತಾರಸಿ ಸೌರ ಘಟಕ ಅಳವಡಿಸಿಕೊಳ್ಳುವ ಪ್ರತಿ ಕುಟುಂಬಕ್ಕೆ ₹30 ಸಾವಿರದಿಂದ ₹78 ಸಾವಿರದವರೆಗೆ ಸಬ್ಸಿಡಿ ಸಿಗಲಿದೆ. ಅಲ್ಲದೆ, ಪ್ರತಿ ಜಿಲ್ಲೆಯಲ್ಲೂ 'ಮಾದರಿ ಸೌರ ಗ್ರಾಮ' ನಿರ್ಮಾಣಗೊಳ್ಳಲಿವೆ.

ಇಡೀ ಜಗತ್ತು ಪರಿಸರಸ್ನೇಹಿ ವಿದ್ಯುತ್ ಪಡೆಯುವ ಪ್ರಯತ್ನದಲ್ಲಿದೆ. ಅಭಿವೃದ್ಧಿ ಹೊಂದಿರುವ ದೇಶಗಳು ದೊಡ್ಡ ಬಂಡವಾಳ ಹೂಡಿ ತಮ್ಮ ವಾತಾವರಣಕ್ಕೆ ಸೇರುವ 'ಇಂಡೈ'ಯನ್ನು ಸಾಧ್ಯವಾದಷ್ಟೂ ನಿಯಂತ್ರಿಸುತ್ತಿವೆ.

ಈಗಂತೂ ಎಲ್ಲೆಡೆ ಹಸಿರು ಜಲಜನಕದ್ದೇ ಜಪ. ನವೀಕರಿಸಬಹುದಾದ ಇಂಧನ ಬಳಸಿ ನೀರನ್ನು ವಿಭಜಿಸಿ ಪಡೆಯುವ ಜಲಜನಕವನ್ನು ಹಸಿರು ಜಲಜನಕ ಎನ್ನುತ್ತೇವೆ. ಇದನ್ನು ಶಕ್ತಿಯನ್ನಾಗಿ ಬಳಸಬಹುದು. ಭಾರತದ ಬಹುಭಾಗ ಬಿಸಿಲಿನ ಭಂಡಾರವೇ ಆಗಿದೆ. ಒಂದು ಚ.ಮೀ. ಜಾಗದಲ್ಲಿ 500 ವಾಟ್‌ನಷ್ಟು ಶಕ್ತಿ ಬಿಸಿಲಿನ ರೂಪದಲ್ಲಿ ಬೀಳುತ್ತದೆ. ಇದರ ನಾಲ್ಕನೇ ಒಂದು ಭಾಗದಷ್ಟನ್ನು ವಿದ್ಯುತ್ತನ್ನಾಗಿ ಪರಿವರ್ತಿಸಿದರೆ, ದೇಶದ ಅರ್ಧದಷ್ಟು ಬೇಡಿಕೆ ಪೂರೈಕೆಗೊಳ್ಳುತ್ತದೆ. ಒಂದು ಮೆಗಾವಾಟ್ ವಿದ್ಯುತ್ ಉತ್ಪಾದನೆಯಿಂದ 2,600 ಟನ್ 'ಇಂಡೈ' ಹೊರ ಸೂಸುವಿಕೆಯನ್ನು ತಡೆಯಬಹುದು. ಸದ್ಯಕ್ಕೆ ನಮ್ಮ ಅಕ್ಷಯ ಇಂಧನ ಸ್ಥಾಪಿತ ಸಾಮರ್ಥ್ಯವು 212 ಗಿಗಾವಾಟ್‌ನಷ್ಟಿದೆ.

ಭಾರತ ಹಸಿರು ಸೂಪರ್ ಪವರ್ ಆಗುವ ನಿಟ್ಟಿನಲ್ಲಿ ಆಗಬೇಕಾದ ಮುಖ್ಯ ಕೆಲಸಗಳಲ್ಲಿ ಮೊದಲನೆಯದು, ಬಂಡವಾಳದ ಕ್ರೋಡೀಕರಣ. ಭಾರೀ ಪ್ರಮಾಣದ ಆರ್ಥಿಕ ಮತ್ತು ಮಾನವಿಕ ಬಂಡವಾಳ ಬೇಕು. ನಮ್ಮಲ್ಲಿ ಮಾನವಿಕ ಬಂಡವಾಳಕ್ಕೆ ಕೊರತೆ ಇಲ್ಲ. ಆದರೆ, ಸೂಕ್ತ ಕೌಶಲದ ಕೊರತೆ ದೊಡ್ಡದಾಗಿದೆ. ಉತ್ಪಾದನೆ ಪ್ರಾರಂಭಗೊಳ್ಳುವ ವೇಳೆಗೆ ಜನರ ಕೌಶಲ ವೃದ್ಧಿಗೊಳ್ಳಬೇಕು. ಬಂಡವಾಳಕ್ಕೆ ಹೊರಗಿನ ಮತ್ತು ನಮ್ಮ ಬ್ಯಾಂಕ್‌ಗಳ ಹಣ ಹರಿದು ಬರಬೇಕು. ವಿದೇಶಿ ಬ್ಯಾಂಕ್‌ಗಳಿಂದ ಸಾಲವೇನೋ ಸಿಗುತ್ತದೆ. ಆದರೆ, ಆ ಸಾಲಗಳ ಬಡ್ಡಿದರ ತಲೆಸುತ್ತು ತರುವಂತಿರುತ್ತದೆ. ನಮ್ಮ ಬ್ಯಾಂಕ್‌ಗಳು ಸರ್ಕಾರದ ಯೋಜನೆಗಳನ್ನು ನಂಬಿ ಹಣ ಹೂಡಬೇಕು.

ಉತ್ಪಾದನೆಯಾದ ಮಾತ್ರಕ್ಕೆ ಕೆಲಸ ಮುಗಿಯುವುದಿಲ್ಲ. ಉತ್ಪಾದನೆಯಾಗುವ ವಿದ್ಯುತ್ ಅನ್ನು ಪೂರ್ಣ ಪ್ರಮಾಣದಲ್ಲಿ ಕೊಳ್ಳುವ ವ್ಯವಸ್ಥೆ ಇರಬೇಕು ಮತ್ತು ಕೊಳ್ಳುವುದು ನಿಧಾನವಾದಾಗ, ಅದನ್ನು ಶೇಖರಿಸಿಡುವ ವ್ಯವಸ್ಥೆಯಾಗಬೇಕು. ವಿದ್ಯುತ್ ಶೇಖರಣೆಯ ಆಧುನಿಕ ವಿಧಾನಗಳು ರೂಪುಗೊಳ್ಳಬೇಕು. ಈಗ ಲಭ್ಯವಿರುವ ತಂತ್ರಜ್ಞಾನ, ಕಡಿಮೆ ಪ್ರಮಾಣದ ವಿದ್ಯುತ್ ಸಂಗ್ರಹಕ್ಕೆ ಸಾಕು. ಬೃಹತ್ ಪ್ರಮಾಣದ ವಿದ್ಯುತ್ ಉತ್ಪಾದನೆ ಶುರುವಾಗುವ ವೇಳೆಗೆ ತಂತ್ರಜ್ಞಾನ–ಸಲಕರಣೆ ಎರಡೂ ನಮ್ಮಲ್ಲಿರಬೇಕು. ವಿದ್ಯುತ್ ಸರಬರಾಜು ಕಂಪನಿಗಳು ಕಡ್ಡಾಯವಾಗಿ ಹಸಿರು ವಿದ್ಯುತ್ ಖರೀದಿಸಬೇಕು ಮತ್ತು ಶೇ 85ರಷ್ಟು ವಿದ್ಯುಚ್ಛಕ್ತಿಯನ್ನು ಶೇಖರಿಸಿಟ್ಟುಕೊಳ್ಳಬೇಕು.

> ಪರಿಸರಸ್ನೇಹಿ ಇಂಧನ ಉತ್ಪಾದನೆಯಲ್ಲಿ ವಿಶ್ವಕ್ಕೇ ಮಾದರಿ ಎನ್ನಬಹುದಾದ ಯೋಜನೆಗಳನ್ನು ಭಾರತ ರೂಪಿಸಿದೆ. ಈ ಯೋಜನೆಗಳು ಕಾರ್ಯಗತಗೊಂಡರೆ, ವಿಶ್ವದ 'ಹಸಿರು ಸೂಪರ್ ಪವರ್' ಹಿರಿಮೆಗೆ ಭಾರತ ಪಾತ್ರವಾಗಲಿದೆ; ಭೂಮಿಯ ಉಷ್ಣತೆ ಕಡಿಮೆಗೊಳಿಸಲಿಕ್ಕೂ ಭಾರತ ಮಹತ್ವದ ಕೊಡುಗೆ ನೀಡಿದಂತೆ ಆಗುತ್ತದೆ

ಉತ್ಪಾದನೆಯಾದ ವಿದ್ಯುತ್ ಅನ್ನು ಮಾರಲು ಸಶಕ್ತವಾದ ಮಾರಾಟ ವ್ಯವಸ್ಥೆ ರೂಪಿಸುವುದು ಮತ್ತು ಯೋಜನಾಬದ್ಧವಾಗಿ ಮಾರುವುದು ಕೂಡ ಅಗತ್ಯ. ಸರ್ಕಾರ ಮತ್ತು ಖಾಸಗಿ ವಲಯಗಳೆರಡೂ ಪಾಲುದಾರಿಕೆಯಿಂದ ಕೆಲಸ ಮಾಡುವುದು, ಭಾರತದ 'ಹಸಿರು ಶಕ್ತಿ' ಪರಿಕಲ್ಪನೆ ಸಾಕಾರಗೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಸಾಗಣೆ ವಿಷಯದಲ್ಲಿ ನಮ್ಮಲ್ಲಿ ದುರ್ಬಲವಾಗಿರುವ ಮೂಲ ಸೌಲಭ್ಯಗಳು ಸದೃಢಗೊಳ್ಳಬೇಕು. ಹಣಕಾಸಿನ ನೀತಿಯು ಸರ್ಕಾರ ಮಾಡುವ ಖರ್ಚಿಗೆ ಅನುಗುಣವಾಗಿರಬೇಕು ಮತ್ತು ಆ ನೀತಿ 'ಶೂನ್ಯ ಇಂಗಾಲ ಪರಿಸರ'ದ ಗುರಿ ಸಾಧನೆಗೆ ಹೊಂದುವಂತಿರಬೇಕು. ಇಂಗಾಲ ತೆರಿಗೆಯನ್ನು ಜಾರಿಗೆ ತರಬೇಕು. ಲಾಭ–ನಷ್ಟದ ವಿಷಯದಲ್ಲಿ ಸರ್ಕಾರ ಮತ್ತು ಖಾಸಗಿಯವರಿಬ್ಬರೂ ಸಮಾನ ಜವಾಬ್ದಾರಿ ಹೊರಬೇಕು. ದೂರದರ್ಶಿತ್ವ ಮತ್ತು ಭದ್ರತೆ ಆಧಾರದ ಮೇಲೆ ಕೆಲಸಗಳು ನಡೆದು, ಸ್ಥಳೀಯ ಆರ್ಥಿಕ ಅಭಿವೃದ್ಧಿಗೆ ಒತ್ತು ನೀಡುವ ಹಸಿರು ಮೂಲ ಸೌಲಭ್ಯ ರೂಪುಗೊಳ್ಳಬೇಕು.

ಖಾಸಗಿ ಮತ್ತು ಸರ್ಕಾರಿ ಸಹಭಾಗಿತ್ವವನ್ನು ಸಶಕ್ತಗೊಳಿಸಲು ಈಗ ಅಸ್ತಿತ್ವದಲ್ಲಿರುವ ಸಂಸ್ಥೆಗಳ ಕಾರ್ಯಕ್ಷಮತೆಯನ್ನು ಮತ್ತಷ್ಟು ಹೆಚ್ಚಿಸಬೇಕಾಗಿದೆ. ವಿದ್ಯುತ್ ಕೊಳ್ಳುವವರಲ್ಲಿ ನಿಯಂತ್ರಕರು, ಯೋಜನಾ ತಜ್ಞರು ಆತ್ಮವಿಶ್ವಾಸ ತುಂಬಬೇಕು. 'ಬ್ಯೂರೊ ಆಫ್ ಎನರ್ಜಿ ಎಫಿಷಿಯನ್ಸಿ', 'ಇಂಡಿಯನ್ ರಿನೆವಬಲ್ ಎನರ್ಜಿ ಡೆವಲಪ್‌ಮೆಂಟ್ ಏಜೆನ್ಸಿ, 'ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಸೋಲಾರ್ ಎನರ್ಜಿ' ಮತ್ತು 'ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ವಿಂಡ್ ಎನರ್ಜಿ' ಸಂಸ್ಥೆಗಳು 'ಹಸಿರು ಪವರ್' ಗುರಿ ಸಾಧನೆಯಲ್ಲಿ ಮುಂಚೂಣಿ ಪಾತ್ರ ವಹಿಸಬೇಕು.

ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಗಳ ನೆರವು ಹಸಿರು ಪವರ್ ಸಾಕಾರಗೊಳ್ಳಲು ಅಗತ್ಯ. ವಿಶ್ವಬ್ಯಾಂಕ್ ಮತ್ತು ಅಂತರರಾಷ್ಟ್ರೀಯ ಹಣಕಾಸು ನಿಧಿಯು (ಐಎಂಎಫ್) ಭಾರತವೂ ಸೇರಿ ಸುಧಾರಣೆ ಬಯಸುತ್ತಿರುವ ದೇಶಗಳ ಬೆನ್ನಿಗೆ ನಿಲ್ಲಬೇಕು. ಇತ್ತೀಚೆಗೆ, ವಿಶ್ವಬ್ಯಾಂಕ್ ಕೊಡುವ ಸಾಲದ ಮೊತ್ತ 600 ಕೋಟಿ ಡಾಲರ್‌ವರೆಗೆ ಹೆಚ್ಚಾಗಿರುವುದು ಆಶಾದಾಯಕ ಸಂಗತಿ. ಹೂಡಿಕೆಗೆ ಭಾರತವು ಅತ್ಯಂತ ಸಶಕ್ತ ನೆಲ ಹಾಗೂ ನವೀಕೃತ ಇಂಧನ ಯೋಜನೆಗಳು ಇಲ್ಲಿ ಯಶಸ್ವಿಯಾಗುವುದು ಸುಲಭ ಎನ್ನುವುದನ್ನು ವಿದೇಶಿ ಬಂಡವಾಳದಾರರಿಗೆ ಮನದಟ್ಟು ಮಾಡಿಕೊಡಬೇಕು. ಹಸಿರು ಶಕ್ತಿ ಯೋಜನೆಗಳಿಂದ ದೊಡ್ಡ ಲಾಭಗಳಿವೆ ಎಂಬ ಮಾತು ಮಾರುಕಟ್ಟೆಯಲ್ಲಿ ಸ್ಥಿರವಾಗಬೇಕು.

'ಹಸಿರು ಶಕ್ತಿ' ಉತ್ಪಾದನೆಯ ಯೋಜನೆಗಳಲ್ಲಿನ ಸಂಭಾವ್ಯ ಅಪಾಯಗಳನ್ನು ಗುರ್ತಿಸಿ, ಅವುಗಳ ನಿಯಂತ್ರಣ ಕ್ರಮಗಳ ಜವಾಬ್ದಾರಿಯನ್ನು ಯೋಜನೆಯಲ್ಲಿನ ಎಲ್ಲ ಪಾಲುದಾರ ದೇಶಗಳಿಗೆ ವಹಿಸಬೇಕಾಗಿದೆ. ಉದಾಹರಣೆಗೆ, ನಮ್ಮ ಯೋಜನೆಯೊಂದಕ್ಕೆ ಅಮೆರಿಕ ಬಂಡವಾಳ ಹೂಡಿತ್ತು ಎಂದಿಟ್ಟುಕೊಳ್ಳೋಣ. ಆ ಯೋಜನೆ ವಿಫಲವಾಗಿ ಅಪಾರ ಆಸ್ತಿ–ಜೀವ ನಷ್ಟವಾದರೆ, ಅದರ ಹೊಣೆಗಾರಿಕೆ ಭಾರತದೊಂದಿಗೆ ಅಮೆರಿಕದ್ದೂ ಆಗಿರಬೇಕು. ಎಲ್ಲಕ್ಕಿಂತ ಮೊದಲು, ಅಪಾಯ ಸ್ವೀಕರಿಸುವ ಮನೋಭಾವ ಬೆಳೆಯುವಂತೆ ಸಹಭಾಗಿತ್ವದ ದೇಶಗಳನ್ನು ಸಜ್ಜುಗೊಳಿಸಬೇಕು. ಯೋಜನೆಯ ಪ್ರಾರಂಭಕ್ಕೂ ಮುನ್ನ ಲಾಭಗಳ ಜೊತೆ ಜೊತೆಗೆ ಅಪಾಯಗಳನ್ನೂ ಎದುರಿಸುವ ಕುರಿತು ಆಳವಾದ ಚಿಂತನೆ ಅಗತ್ಯ. ಹೂಡಿದ ಬಂಡವಾಳಕ್ಕೆ ತಕ್ಕಂತೆ ಲಾಭ ಬರುತ್ತದೆ ಎಂಬ ಭರವಸೆಯನ್ನು ಮಾರುಕಟ್ಟೆಯಲ್ಲಿರುವ ವಹಿವಾಟುದಾರರಿಗೆ ಮನದಟ್ಟು ಮಾಡಿಕೊಡಬೇಕು.

ವಿದ್ಯುತ್ ಉತ್ಪಾದನೆ, ನಿರ್ವಹಣೆ ಮತ್ತು ಸಾಗಣೆಗಳಿಗೆಂದೇ ಹಲವು ನೀತಿ ನಿಬಂಧನೆಗಳಿವೆ. 2022ರ 'ಶಕ್ತಿ ಸಂರಕ್ಷಣಾ ಕಾಯ್ದೆ'ಯು ಕಟ್ಟಡ, ಉದ್ಯಮ, ಉಪಕರಣ ಹಾಗೂ ವಾಹನಗಳು ಬಳಸುವ ವಿದ್ಯುತ್‌ನ ಪ್ರಮಾಣವನ್ನು ನಿಯಂತ್ರಿಸುವ ಕುರಿತು ಬೆಳಕು ಚೆಲ್ಲುತ್ತದೆ. ಕಾರ್ಬನ್ ಟ್ರೇಡಿಂಗ್ ಮತ್ತು ಕಟ್ಟಡ ಹಾಗೂ ಉದ್ಯಮಗಳಿಗಾಗಿ 'ಶಕ್ತಿ ಸಂರಕ್ಷಣಾ ಕೋಡ್' ನೀಡುವ ವ್ಯವಸ್ಥೆ ನಮ್ಮಲ್ಲಿದೆ. 2006ರ ರಾಷ್ಟ್ರೀಯ ದರ ನೀತಿಯು ನವೀಕರಿಸಬಹುದಾದ ಇಂಧನ ತಂತ್ರಜ್ಞಾನದ ಬೆಳವಣಿಗೆಗೆ ಸಹಾಯ ಮಾಡುತ್ತದೆ. 2017ರಲ್ಲಿ ಜಾರಿಗೆ ಬಂದ ಟೆಕ್ನಾಲಜಿ ಡೆವಲಪ್‌ಮೆಂಟ್ ಆ್ಯಂಡ್ ಇನ್ವೆಸ್ಟ್‌ಮೆಂಟ್ ಪ್ರಮೋಷನ್ (ಟಿಡಿಐಪಿ) ನೀತಿಯು ಇಂಧನ ಕ್ಷೇತ್ರದ ಸಂಶೋಧನೆ ಮತ್ತು ಅಭಿವೃದ್ಧಿಗೆ ಹೆಚ್ಚಿನ ಪುಷ್ಟಿ ನೀಡುತ್ತದೆ.

ಹೊಸದಾಗಿ ಜಾರಿಗೆ ಬಂದಿರುವ 'ಇಂಟರ್ ಸ್ಟೇಟ್ ಟ್ರಾನ್ಸ್‌ಮಿಷನ್ ಸಿಸ್ಟಂ' ಅಂತರರಾಜ್ಯ ವಿದ್ಯುತ್ ಸಾಗಣೆಯ ಮೇಲಿನ ಶುಲ್ಕವನ್ನು ತೆಗೆದು ಹಾಕಿರುವುದರಿಂದ, ನವೀಕರಿಸಬಹುದಾದ ಇಂಧನ ಉದ್ಯಮ ದೊಡ್ಡದಾಗಿ ತಲೆ ಎತ್ತುವ ಸೂಚನೆ ಇದೆ. ಸೌರ ಪಾರ್ಕ್‌ಗಳು ವಿಳಂಬವಿಲ್ಲದೆ ನಿರ್ಮಾಣವಾಗಬೇಕು. ಹಸಿರು ಜಲಜನಕದಿಂದ ಉತ್ಪಾದಿಸುವ ವಿದ್ಯುತ್ ಅನ್ನು ಗ್ರಿಡ್‌ಗೆ ಜೋಡಿಸಲು ಆದ್ಯತೆ ನೀಡಬೇಕು.

ಸರ್ಕಾರದ ನೀತಿ ಹಾಗೂ ಪ್ರೋತ್ಸಾಹದ ಕ್ರಮಗಳು ಬೃಹತ್ ಸೌರ ಪಾರ್ಕ್‌ಗಳಿಗೆ ಬಂಡವಾಳ ಹೂಡುವವರಲ್ಲಿ ಹುರುಪು ಮೂಡಿಸುತ್ತಿರುವುದು ನಿಜ. ಆರ್ಥಿಕ ಅಭಿವೃದ್ಧಿಯ ಜೊತೆಗೆ ಉದ್ಯೋಗ ಸೃಷ್ಟಿ, ಹವಾಮಾನ ವೈಪರೀತ್ಯಗಳ ನಿಯಂತ್ರಣ ಹಾಗೂ ಪುಟಿದೇಳುವ ಶಕ್ತಿಯ ಸಂಪಾದನೆ ಆಗುತ್ತದೆ. ಹವಾಮಾನ ವೈಪರೀತ್ಯ ನಿಯಂತ್ರಣಕ್ಕೆ ಕ್ರಮಕೈಗೊಳ್ಳುವ ನಿರ್ಧಾರ ದೃಢವಾಗಿದ್ದರೆ ಇಂಗಾಲದ ಹೆಜ್ಜೆಗುರುತುಗಳನ್ನು ಅರ್ಧದಷ್ಟು ಕಡಿಮೆಗೊಳಿಸಬಹುದು.

ಹಸಿರು ಶಕ್ತಿಯ ಹರಿಕಾರನಾಗಿ ಗುರ್ತಿಸಿಕೊಳ್ಳುವ ಮೂಲಕ ಇಂಧನ ಕ್ಷೇತ್ರದಲ್ಲಿ ಮಹತ್ವದ ಮುನ್ನಡೆ ಸಾಧಿಸುವುದರೊಂದಿಗೆ, ಜಾಗತಿಕ ಮಟ್ಟದಲ್ಲಿ ಪರಿಸರಸ್ನೇಹಿ ಮಾದರಿಯೊಂದರ ಮುಂದಾಳತ್ವ ವಹಿಸಿದ ಕೀರ್ತಿಯೂ ಭಾರತದ್ದಾಗುತ್ತದೆ.

ವಾಚಕರ ವಾಣಿ

4 ವರ್ಷಕ್ಕೊಮ್ಮೆ ಸಮ್ಮೇಳನ ಸಾಕಲ್ಲವೇ?

ವರ್ಷಕ್ಕೊಮ್ಮೆ ನಡೆಯುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಸುಮಾರು ₹30 ಕೋಟಿಗೂ ಹೆಚ್ಚು ಖರ್ಚಾಗುತ್ತಿದೆ. ಇದರ ಬದಲು ನಾಲ್ಕು ವರ್ಷಕ್ಕೊಮ್ಮೆ ನುಡಿಜಾತ್ರೆ ಹಮ್ಮಿಕೊಳ್ಳುವುದು ಉತ್ತಮ. ಆಗ ಸಮ್ಮೇಳನಕ್ಕೂ ವಿಶೇಷ ಮೆರುಗು ಸಿಗಲಿದೆ. ಸಮ್ಮೇಳನ ಮುಗಿದು ತಿಂಗಳುಗಳು ಕಳೆದರೂ ಅದರ ಲೆಕ್ಕಪತ್ರ ಬಹಿರಂಗವಾಗುವುದೇ ಇಲ್ಲ. ಹಾಗಾಗಿ, ಪ್ರತಿ ವರ್ಷ ಸಮ್ಮೇಳನಕ್ಕೆ ಖರ್ಚು ಮಾಡುವ ಹಣವನ್ನು ಸರ್ಕಾರಿ ಕನ್ನಡ ಮಾಧ್ಯಮ ಶಾಲೆಗಳಿಗೆ ಮೂಲ ಸೌಕರ್ಯ ಕಲ್ಪಿಸಲು ಬಳಸಬಹುದು. ಈ ಬಗ್ಗೆ ಸಮ್ಮೇಳನದ ಆಯೋಜಕರು ಮತ್ತು ರಾಜ್ಯ ಸರ್ಕಾರ ಚಿಂತನೆ ನಡೆಸಬೇಕಿದೆ.

ಗಿರಿಯಪ್ಪ ಕೊಳ್ಳಣ್ಣವರ, ತುಮಕೂರು

ಉತ್ತಮ ವ್ಯಕ್ತಿತ್ವಕ್ಕೆ ರಂಗಭೂಮಿ ಮದ್ದು

ಯುವ'ರಂಗ': ಯಾವಾಗ ಸಂಕ್ರಮಣ? ಲೇಖನವು (ಮಂಡ್ಯ ರಮೇಶ್, ಪ್ರ.ವಾ., ಜುಲೈ 11) ಸಮಾಯೋಚಿತವೂ ಸಮರ್ಪಕವೂ ಆಗಿದೆ. ಇಂದಿನ ಯುವ ಜನಾಂಗವನ್ನು ಅಡ್ಡದಾರಿಗೆಳೆದು ಅವರ ಜೀವನವನ್ನೇ ಹಾಳು ಮಾಡುತ್ತಿರುವ ಸಿನಿಮಾ ಸಂಸ್ಕೃತಿಯ ಆಕ್ರಮಣದ ಭರಾಟೆಯ ಸಮಯದಲ್ಲಿ ರಂಗಭೂಮಿ ಅವರಲ್ಲಿ ಉತ್ತಮ ವ್ಯಕ್ತಿತ್ವವನ್ನು ಯಾವ ರೀತಿ ನಿರ್ಮಿಸಬಲ್ಲದು ಎಂಬ ಮಾತುಗಳನ್ನು ಹೇಳಿರುವ ಬಗೆ ಹೃದಯಸ್ಪರ್ಶಿಯಾಗಿದೆ. ಲೇಖಕರು ಹೇಳಿದಂತೆ 'ನಮ್ಮ ಇಂದಿನ ಶಿಕ್ಷಣ ಕ್ರಮದಲ್ಲಿ ರಂಗಭೂಮಿ ಒಂದು ಅಧ್ಯಯನದ ವಿಷಯವಾಗಬೇಕು' ಎಂಬ ವಿಚಾರ ತುಂಬಾ ಅಗತ್ಯ ಎನಿಸುತ್ತದೆ.

ಮಾಲತಿ ಪಟ್ಟಣಶೆಟ್ಟಿ, ಧಾರವಾಡ

ಮುಖ್ಯಮಂತ್ರಿಯ ಧೈರ್ಯ ಮೆಚ್ಚಬೇಕು

'ಡಿಕೆಶಿಗೆ ಶಾಸಕರ ಬೆಂಬಲ ಇಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ (ಪ್ರ.ವಾ., ಜುಲೈ 11). ಅಂತೂ ಸಿದ್ದರಾಮಯ್ಯ ಹೆಣೆದ ಬಲೆಗೆ ಬಿದ್ದಿರುವ ಡಿ.ಕೆ. ಶಿವಕುಮಾರ್ ವಿಲವಿಲನೆ ಒದ್ದಾಡುತ್ತಿದ್ದಾರೆ. ಇನ್ನು 2028ರ ವಿಧಾನಸಭೆ ಚುನಾವಣೆಗೆ ನನ್ನದೇ ನೇತೃತ್ವ ಎಂದೂ ಹೇಳಿದ್ದಾರೆ. ಅವರ ಮಾತುಗಳನ್ನು ಅವಲೋಕಿಸಿದರೆ, ಕಾಂಗ್ರೆಸ್ ಹೈಕಮಾಂಡ್‌ಗೂ ಅವರು ಸಡ್ಡು ಹೊಡೆದಂತಿದೆ. ಮತ್ತೊಂದೆಡೆ, 2028ಕ್ಕೆ ಸಿ.ಎಂ ಆಗಲು ಸತೀಶ ಜಾರಕಿಹೊಳಿ ಟವೆಲ್ ಹಾಸಿದ್ದಾರೆ. ಹೀಗಾಗಿ, ಡಿಕೆಶಿ ಅವರ ಪರಿಸ್ಥಿತಿ ಅಯೋಮಯವಾಗಿದೆ. ಆದರೆ, ಎಲ್ಲವನ್ನೂ ಕಾದು ನೋಡಬೇಕಿದೆ. ಹೈಕಮಾಂಡ್‌ಗೂ ಕೈಕಟ್ಟಿ ಕೂರಬೇಕಾದ ಪರಿಸ್ಥಿತಿ ಬಂದಿರುವುದು ನಾಚಿಕೆಗೇಡಿನ ಸಂಗತಿ. ದೆಹಲಿಯಲ್ಲಿ ಕೂತು 'ಐದು ವರ್ಷ ನಾನೇ ಮುಖ್ಯಮಂತ್ರಿ' ಎಂದಿರುವ ಸಿದ್ದರಾಮಯ್ಯ ಅವರ ಧೈರ್ಯವನ್ನು ಮೆಚ್ಚಲೇಬೇಕಿದೆ.

ವಿರೇಶ ಬಂಗಾರಶೆಟ್ಟರ, ಕುಷ್ಟಗಿ

ನಾಯಿಗೆ ಆಹಾರ: ಪ್ರಾಮಾಣಿಕತೆ ಅಗತ್ಯ

ಬೆಂಗಳೂರು ನಗರದಲ್ಲಿರುವ ಬೀದಿ ನಾಯಿಗಳಿಗೆ ಪೌಷ್ಟಿಕ ಆಹಾರ ನೀಡಲು ಬಿಬಿಎಂಪಿ ಮುಂದಾಗಿರುವುದು ಒಳ್ಳೆಯ ಕ್ರಮ (ಪ್ರ.ವಾ., ಜುಲೈ 11). ಸರ್ಕಾರದ ಯಾವುದೇ ಯೋಜನೆಗಳ ಅನುಷ್ಠಾನದಲ್ಲಿ ಭ್ರಷ್ಟಾಚಾರ ಇಣುಕುವುದು ಸರ್ವೇ ಸಾಮಾನ್ಯ. ಈ ಯೋಜನೆಯ ಜಾರಿಯಲ್ಲಿ ಸಂಬಂಧಿಸಿದ ಅಧಿಕಾರಿಗಳು ಭ್ರಷ್ಟಾಚಾರ ಎಸಗದಂತೆ ಎಚ್ಚರಿಕೆವಹಿಸಬೇಕಿದೆ. ನಾಯಿಗಳಿಗೆ ಆಹಾರ ಪೂರೈಸುವ ಸಿಬ್ಬಂದಿಯೂ ಮಾನವೀಯತೆ ಮೆರೆಯಬೇಕಿದೆ.

ಎಂ.ಎ. ಸುರೇಶ್, ಬೆಂಗಳೂರು

ಬ್ಯಾಂಕ್‌ಗಳ ನಿಯಮ ಬದಲಾಗುವುದೇ?

ಮಂಡ್ಯದ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಶಾಖೆಯೊಂದಕ್ಕೆ ವೈಯಕ್ತಿಕ ಸಾಲದ ಬಗ್ಗೆ ಮಾಹಿತಿ ಪಡೆಯಲು ತೆರಳಿದ್ದೆ. ಸಾಲ ಮಂಜೂರಾತಿಗಾಗಿ, ನೀವು ಕರ್ತವ್ಯ ನಿರ್ವಹಿಸುತ್ತಿರುವ ಕಚೇರಿ ಮುಖ್ಯಸ್ಥರಿಂದ ಅಧಿಕಾರ ಪತ್ರ ಹಾಗೂ ಪತ್ನಿಯ ಸಾಲಕ್ಕೆ ಪತಿಯು ಸಹ ಅರ್ಜಿದಾರರಾಗಿ ಸಹಿ ಮಾಡಬೇಕಾಗುತ್ತದೆ ಎಂದು ಹೇಳಿದ ಬ್ಯಾಂಕ್‌ನ ಮ್ಯಾನೇಜರ್, ಅದಕ್ಕೆ ಸಂಬಂಧಿಸಿದ ಸುತ್ತೋಲೆ ತೋರಿಸಿದರು. ಸರ್ಕಾರಿ ನೌಕರರು ಗೃಹಕೃತ್ಯದ ತುರ್ತಿಗಾಗಿ ವೈಯಕ್ತಿಕ ಸಾಲ ಪಡೆಯುವುದು ಅನಿವಾರ್ಯ. ಆದರೆ, ಸಾಲ ಮಂಜೂರಾತಿಗೆ ಬ್ಯಾಂಕ್‌ಗಳು ಈ ರೀತಿಯ ನಿಯಮ ವಿಧಿಸಿದಾಗ ಅನೇಕರಿಗೆ ದಾಖಲೆ ಒದಗಿಸುವುದು ಕಷ್ಟವಾಗಿ, ಸುಲಭವಾಗಿ ಸಾಲ ನೀಡುವ ಆ್ಯಪ್‌ಗಳ ಮೊರೆ ಹೋಗಿ ಸಾಲದ ಸುಳಿಗೆ ಸಿಲುಕುತ್ತಾರೆ. ಕೃಷಿ ಸಾಲ ನೀಡಲು ರೈತರನ್ನು ಅಲೆದಾಡಿಸುವ ಬ್ಯಾಂಕ್‌ಗಳು, ಸರ್ಕಾರಿ ನೌಕರರಿಗೆ ವೈಯಕ್ತಿಕ ಸಾಲ ನೀಡಲು ಅನಗತ್ಯ ಷರತ್ತು ವಿಧಿಸುವುದನ್ನು ನೋಡಿದಾಗಲೂ ಬೇಸರವಾಗುತ್ತದೆ. ಭಾರತೀಯ ರಿಸರ್ವ್ ಬ್ಯಾಂಕ್ ಇದಕ್ಕೊಂದು ಪರಿಹಾರ ರೂಪಿಸಬೇಕು.

ಅನಸೂಯ ವಿ., ಮಂಡ್ಯ

ಆನ್‌ಲೈನ್ ಅರ್ಜಿ: ತಿದ್ದುಪಡಿ ಸಮಸ್ಯೆ

ಸರ್ಕಾರದ ವಿವಿಧ ಇಲಾಖೆಯ ಮೂಲಕ ಪ್ರತಿವರ್ಷ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಲಾಗುತ್ತದೆ. ವಿದ್ಯಾರ್ಥಿಗಳ ಶೈಕ್ಷಣಿಕ ಮತ್ತು ಆರ್ಥಿಕ ದೃಷ್ಟಿಯಿಂದ ಇದು ಒಳ್ಳೆಯದು. ಈ ಸೌಲಭ್ಯ ಪಡೆಯಲು ಕೆಲವು ಮಾನದಂಡ ನಿಗದಿಪಡಿಸಲಾಗಿದೆ. ವಿದ್ಯಾರ್ಥಿ ವೇತನ ಪಡೆಯಲು ವಿದ್ಯಾರ್ಥಿಗಳು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬೇಕಿದೆ. ಅರ್ಜಿ ಸಲ್ಲಿಸುವ ವೇಳೆ ಏನಾದರೂ ಲೋಪದೋಷಗಳಾದರೆ, ಆ ನಂತರ ತಿದ್ದುಪಡಿಗೆ ಅವಕಾಶ ಇರುವುದಿಲ್ಲ. ಒಮ್ಮೆ ಸಲ್ಲಿಸಿದ ಅರ್ಜಿಯನ್ನೇ ಅಂತಿಮವೆಂದು ಪರಿಗಣಿಸಲಾಗುತ್ತದೆ. ಅರ್ಜಿಯಲ್ಲಿ ತಪ್ಪುಗಳಿದ್ದರೆ ತಿರಸ್ಕರಿಸಲಾಗುತ್ತಿದೆ. ಈ ಕುರಿತು ಸಂಬಂಧಿಸಿದ ಇಲಾಖೆಯ ಸಹಾಯವಾಣಿಗೆ ಸಂಪರ್ಕಿಸಿದರೂ ಪ್ರಯೋಜನವಾಗುತ್ತಿಲ್ಲ. ಅರ್ಜಿಗಳ ತಿದ್ದುಪಡಿಗೆ ಅವಕಾಶ ಕಲ್ಪಿಸಲು ಸರ್ಕಾರ ಕ್ರಮವಹಿಸಬೇಕಿದೆ.

ರಾಕೇಶ ಅಲಬಾಳ, ಅಥಣಿ

ಚುರುಮುರಿ



ನಕಲು–ಅಸಲು!

• ಚಂದ್ರಕಾಂತ ವಡ್ಡು

'ಇನ್ನೇನು ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ನಕಲು ನಿಲ್ಲಲಿದೆ' ಬೈಟು ಬಳಗದ ಚರ್ಚೆಗೆ ಚಾಲನೆ ನೀಡಿದ ತಿಂಗಳೇಶ.

'ಹೌದು, ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿಯವರು ತೇರ್ಗಡೆಗೆ 33 ಅಂಕ ನಿಗದಿಪಡಿಸಿ ಮಕ್ಕಳ ಮತ್ತು ಮೌಲ್ಯಮಾಪಕರ ಹೊರೆ ಕಡಿಮೆ ಮಾಡಿದ್ದಾರೆ'.

'ಇದರಿಂದ ಪೋಷಕರ ಹೊರೆಯೂ ಕಡಿಮೆಯಾಗಲಿದೆ. ಶಾಲೆಯ ಫಲಿತಾಂಶದ ಗುರಿಗಾಗಿ ಸಾಮೂಹಿಕ ನಕಲಿಗೆ ಮೊರೆ ಹೋಗುತ್ತಿದ್ದ ಶಿಕ್ಷಕರ ಭಾರವೂ ಇಳಿಯಲಿದೆ'.

'ಅಂದ್ರೇ... ನಕಲು ನಿಲ್ಲಿಸುವ ಅಸಲು ಉಪಾಯ!'.

'ಫಲಿತಾಂಶ ಕುಸಿತದಿಂದ ಪಾರಾಗಬಹುದು. ಆದರೆ, ಲಿಖಿತ ಪರೀಕ್ಷೆಯಲ್ಲಿ 13 ಅಂಕ ಪಡೆದು ಪಾಸಾಗುವ ವಿದ್ಯಾರ್ಥಿಗಳಿಂದ ಶಿಕ್ಷಣದ ಮೌಲ್ಯ ಕುಸಿಯುವುದಿಲ್ಲವೇ?'

'ಹಾಗೇನಿಲ್ಲ, ಈ ನಿರ್ಧಾರದಲ್ಲಿ ಕುವೆಂಪು ವೈಚಾರಿಕತೆ ಬೆಳೆಸುವ ಉನ್ನತ ಮೌಲ್ಯ ಅಡಗಿದೆ. ಶಿಕ್ಷಣ ಹೆಚ್ಚಾದಷ್ಟೂ ಕಂದಾಚಾರ ಹೆಚ್ಚಾಗಿ ವೈಜ್ಞಾನಿಕ ಪ್ರಜ್ಞೆ ಕಡಿಮೆಯಾಗುವುದನ್ನು ಮುಖ್ಯಮಂತ್ರಿಗಳೇ ಗುರುತಿಸಿಲ್ಲವೇ? ಹಾಗಾಗಿ, ಶಿಕ್ಷಣದ ಗುಣಮಟ್ಟ ಕಡಿಮೆ ಮಾಡಿ ವೈಚಾರಿಕತೆ ಬೆಳೆಸುವ ವಿನೂತನ ಪ್ರಯೋಗವಿದು...'

'ಆದ್ರೂ... ಮೊಬೈಲ್‌ಗಳಲ್ಲಿ ಮುಳುಗಿರುವ ವಿದ್ಯಾರ್ಥಿಗಳು 33 ಅಂಕ ಪಡೆಯೋದೂ ಅನುಮಾನ ಅನ್ನಿಸುತ್ತದೆ'.

'ಅದಕ್ಕೂ ಒಂದು ಪರಿಹಾರ ಕಂಡುಕೊಂಡರೆ ಆಯ್ತು ಬಿಡು'.

'ಅದೇನಪ್ಪಾ ಅದು... ಅಂಥಾ ಚಮತ್ಕಾರ... 'ಸೆಪ್ಟೆಂಬರ್ ಕ್ರಾಂತಿ' ಥರ ಮಾತಾಡ್ತೀಯಾ...!'

'ಅದು ಅಧಿಕಾರ ಹಸ್ತಾಂತರದಷ್ಟು ಸಂಕೀರ್ಣ ವಿಷಯವಲ್ಲ; ಬಿಕ್ಕಟ್ಟು ನಿವಾರಿಸಲು ಆಯೋಗ ರಚಿಸಿದಷ್ಟೇ ಸುಲಭ. ಎಲ್ಲಾ ಶಾಲೆಗಳ ಗ್ರಂಥಾಲಯಗಳನ್ನು ಖಾಲಿ ಮಾಡಿಸುವುದು ಮೊದಲ ಸ್ಟೆಪ್'.

'ಮುಖ್ಯಮಂತ್ರಿಗಳ 'ಕಡಿಮೆ ಶಿಕ್ಷಣ-ಹೆಚ್ಚಿನ ವೈಚಾರಿಕತೆ' ನೀತಿಗೆ ಅನುಗುಣವಾಗಿದೆ! ಮುಂದ...?'

'ಗ್ರಂಥಾಲಯಗಳ ಜಾಗದಲ್ಲಿ ಪ್ರಾರ್ಥನಾ ಮಂದಿರಗಳ ಸ್ಥಾಪನೆ ಮಾಡುವುದು ಎರಡನೇ ಸ್ಟೆಪ್'

'ಓಹ್...! ಉಪ ಮುಖ್ಯಮಂತ್ರಿಗಳ ನೀತಿಯಂತೆ 'ಕಡಿಮೆ ಪ್ರಯತ್ನ-ಹೆಚ್ಚಿನ ಪ್ರಾರ್ಥನೆ' ಅಳವಡಿಕೆ!'

ಸಂಗತ

ಅವಸರದ ಬೆನ್ನೇರಿ 'ಕ್ಷಿಪ್ರ ಡೆಲಿವರಿ'

ಆನ್‌ಲೈನ್ ವಹಿವಾಟಿನಲ್ಲಿ ವಸ್ತುಗಳನ್ನು ಕ್ಷಿಪ್ರವಾಗಿ ತಲುಪಿಸುವ ವ್ಯವಸ್ಥೆ ಉದ್ಯೋಗಿಗಳ ವ್ಯಕ್ತಿಘನತೆ ಎತ್ತಿಹಿಡಿಯುವಂತೆ ಇದೆಯೆ?

• ಸುಶಿ ಕಾಡನಕುಪ್ಪೆ

ಸಂಜೆಯ ವಾಹನ ದಟ್ಟಣೆಯಲ್ಲಿ ಯಾರಿಗೂ ಇರುಸು ಮುರುಸು ಮಾಡದೆ ಕಾರು ಓಡಿಸುತ್ತಿದ್ದ ಡ್ರೈವರ್ ತುಂಬಾ ಅನುಭವಿ ಅನ್ನಿಸಿ ಮಾತಿಗೆಳೆದಾಗ, ನಾವು ಹೆಚ್ಚು ಯೋಚಿಸದ ನಗರ ನಾಗರಿಕತೆಯ ತಲ್ಲಣಗಳನ್ನು ಆತ ಹಾದುಬಂದಂತೆ ಅನ್ನಿಸಿತು.

'ಆರು ತಿಂಗಳಿಂದ ಕ್ಯಾಬ್ ಓಡಿಸುತ್ತಿರುವೆ. ಅದಕ್ಕೂ ಮೊದಲು, ಡೆಲಿವರಿ ಬಾಯ್ ಆಗಿ ಕೆಲಸ ಮಾಡುತ್ತಿದ್ದೆ. ಎಂಟು ತಿಂಗಳಲ್ಲಿಯೇ ಬಹಳ ಕಷ್ಟವೆನಿಸಿ ಬಿಟ್ಟುಬಿಟ್ಟೆ. ಹತ್ತು ನಿಮಿಷಗಳ ಒಳಗೆ ದಿನಸಿ ತಲುಪಿಸಬೇಕಾಗಿತ್ತು. ತುಂಬಾ ವೇಗವಾಗಿ ಗಾಡಿ ಓಡಿಸುತ್ತಿದ್ದೆ. ಒಮ್ಮೆ ಸಿಗ್ನಲ್ ಜಂಪ್ ಮಾಡಿಬಿಟ್ಟೆ. ದಂಡ ಕಟ್ಟಬೇಕಾಯಿತು. ಇನ್ನೊಮ್ಮೆ ಅಪಘಾತವಾಯಿತು. ಗ್ರಾಹಕರ ಬೈಗುಳದ ಜೊತೆಗೆ ಆಸ್ಪತ್ರೆಯ ಖರ್ಚು. ಇದೆಲ್ಲ ರಗಳೆ ಬೇಡವೆಂದು ಆ ಕೆಲಸ ಬಿಟ್ಟುಬಿಟ್ಟೆ' ಎಂದು ತಮ್ಮ ಅನುಭವ ಹಂಚಿಕೊಂಡರು. ಅವರ ಮಾತುಗಳನ್ನು ಕೇಳುತ್ತ 'ಇನ್‌ಸ್ಟಂಟ್ ಡೆಲಿವರಿ' ಸಂಸ್ಕೃತಿಯ ಬಗ್ಗೆ ಯೋಚಿಸುವಂತೆ ಮಾಡಿತು.

ಕೆಲವೇ ನಿಮಿಷಗಳಲ್ಲಿ ದಿನಸಿ ತಲುಪಿಸುವ ಆಲೋಚನೆಯನ್ನು ಮೊದಲು ವ್ಯಾಪಾರವಾಗಿಸಿದ್ದು ಟರ್ಕಿ ದೇಶದ 'ಗೆಟಿರ್' ಹೆಸರಿನ ಕಂಪನಿ. ಹತ್ತು ನಿಮಿಷಗಳಲ್ಲಿ ಯಾವುದೇ ದಿನಸಿ, ತಿನಿಸು ಅಥವಾ ವಸ್ತುವನ್ನು ಗ್ರಾಹಕರಿಗೆ ತಲುಪಿಸುವ 'ಇನ್‌ಸ್ಟಂಟ್ ಡೆಲಿವರಿ' ಕಂಪನಿಗಳು, ಯಾವ ದೇಶಗಳಲ್ಲಿ ನಿರುದ್ಯೋಗ ಮತ್ತು ಯುವಕರ ಸಂಖ್ಯೆ ಹೆಚ್ಚಿದೆಯೋ ಅಲ್ಲಿ ಹೆಚ್ಚು ಸಕ್ರಿಯವಾಗಿವೆ. 'ಬ್ಲಿಂಕಿಟ್' ಸಂಸ್ಥೆ ಈ ಸೇವೆಯನ್ನು 2013ರಲ್ಲಿ ಭಾರತದಲ್ಲಿ ಮೊದಲ ಬಾರಿಗೆ ಪ್ರಾರಂಭಿಸಿತು.



ಬೆಂಗಳೂರಿನಂತಹ ಪಟ್ಟಣಗಳಲ್ಲಿ 'ಇನ್‌ಸ್ಟಂಟ್ ಡೆಲಿವರಿ' ಕಂಪನಿಗಳು ಪ್ರತಿ ಬಡಾವಣೆಯಲ್ಲೂ ತಮ್ಮ 'ಡಾರ್ಕ್ ಸ್ಟೋರ್'ಗಳನ್ನು ಹೊಂದಿವೆ. ಆ್ಯಪ್ ತಂತ್ರಜ್ಞಾನದ ಮೂಲಕ ಗ್ರಾಹಕರಿಗೆ ಸೇವೆ ಒದಗಿಸುತ್ತಿವೆ. ಆದರೆ, ವಸ್ತುಗಳನ್ನು ತಲುಪಿಸಲು ತಂತ್ರಜ್ಞಾನವಷ್ಟೇ ಸಾಲದು. ನಮಗೆ ಇಷ್ಟವಾದ ವಸ್ತುವನ್ನು ಮತ್ತೊಬ್ಬ ವ್ಯಕ್ತಿಯೇ ನಾವಿರುವ ಕಡೆಗೆ ತಂದು ತಲುಪಿಸಬೇಕು.

ಈ ಕಂಪನಿಗಳ ವ್ಯಾಪಾರ ಸೃಜನಶೀಲತೆಯನ್ನು ಮೆಚ್ಚಿ ನಮ್ಮ ದೇಶದ ನವೋದ್ಯಮಗಳ (ಸ್ಟಾರ್ಟ್‌ಅಪ್) ಬೆಳವಣಿಗೆಯನ್ನು ಶ್ಲಾಘಿಸುವುದರ ಹಿಂದೆ ಯಾರ ಲಾಭವಿದೆ ಎಂಬುದನ್ನೂ ನೋಡಬೇಕು. ಅನೇಕ ಗಿಗ್ ಕಂಪನಿಗಳು ಕಾರ್ಮಿಕರ ಹಕ್ಕುಗಳು ಮತ್ತು ಯೋಗಕ್ಷೇಮಕ್ಕೆ ಅನುಸರಿಸಬೇಕಾದ ಕಾನೂನುಗಳನ್ನೂ ಪಾಲಿಸುವುದಿಲ್ಲ. ಉದ್ಯೋಗಿಗೆ 'ಕನಿಷ್ಠ ವೇತನ'ವನ್ನೂ ನೀಡುವುದಿಲ್ಲ.

ಉದ್ಯೋಗದ ಕೊರತೆಯಿಂದ ನಲುಗಿರುವ ವಿದ್ಯಾವಂತ ಯುವಜನ ಬದುಕು ಕಟ್ಟಿಕೊಳ್ಳುವ ಅನಿವಾರ್ಯತೆಗಾಗಿ 'ಗಿಗ್' ಉದ್ಯೋಗಗಳ ಮೊರೆ ಹೋಗುತ್ತಾರೆ. ಸರ್ಕಾರಿ ಕೆಲಸಗಳು ಅಥವಾ ಒಳ್ಳೆಯ ಸಂಬಳದ ಖಾಸಗಿ ಕೆಲಸ ಎಲ್ಲರಿಗೂ ಸಿಗುವುದಿಲ್ಲ. ಕುಟುಂಬವನ್ನು ನಿಭಾಯಿಸಲು ಯಾವುದಾದರೂ ಕೆಲಸವಿರಬೇಕು ಎನ್ನುವ ಅನಿವಾರ್ಯತೆಯಲ್ಲಿ 'ಡೆಲಿವರಿ' ಕೆಲಸ ಒಂದು ಅವಕಾಶದಂತೆ ಕಾಣಿಸುತ್ತದೆ. ಆದರೆ, ಆ ಕೆಲಸದಲ್ಲಿ ದಿನಕ್ಕೆ 14–15 ಗಂಟೆ ಕೆಲಸ ಮಾಡಿಯೂ ಕುಟುಂಬಕ್ಕೆ ಭದ್ರತೆಯಿರುವುದಿಲ್ಲ. ಇಂತಹ ಸನ್ನಿವೇಶದಲ್ಲಿ ಬದುಕುತ್ತಿರುವವರಿಗೆ 'ಡೆಲಿವರಿ ಬಾಯ್/ ಗರ್ಲ್' ಎಂಬ ಹಣೆಪಟ್ಟಿಯನ್ನು ಕೊಡುತ್ತೇವೆ. ಹತ್ತೇ ನಿಮಿಷದಲ್ಲಿ ಮನೆ ಬಾಗಿಲಿಗೆ ನಮಗೆ ಬೇಕಾದ ವಸ್ತು ಪಡೆವ ಅವಸರದ ಬದುಕನ್ನು ಅಭಿವೃದ್ಧಿ ಎಂದು ನಂಬಿದ್ದೇವೆ.

ವಸ್ತುಗಳನ್ನು ತ್ವರಿತವಾಗಿ ಪಡೆಯುವ ಆರ್ಥಿಕ ಸ್ಥಿತಿವಂತಿಕೆಯನ್ನು ಯಶಸ್ಸು ಎಂದು ಭ್ರಮಿಸುತ್ತೇವೆ. ನಮ್ಮ ಈ ಮನಃಸ್ಥಿತಿ ಇನ್ನೊಬ್ಬರ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳುವ ಮತ್ತು ಸ್ಪಂದಿಸುವ ಕ್ಷಮತೆಯನ್ನೇ ಕೊಂದು ಹಾಕುತ್ತಿದೆ. ಹಿಂದೆ, ಅಂಗಡಿಯವರ ಜೊತೆಗಿನ ಮಾತುಕತೆ ಒಂದು ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂವಹನ ಕ್ರಿಯೆಯಾಗಿ ನಡೆದು ವ್ಯಕ್ತಿತ್ವವನ್ನು ರೂಪಿಸುತ್ತಿದ್ದವು. ಸಣ್ಣಪುಟ್ಟ ಕೆಲಸಗಳಿಗೆ ನೆರೆಹೊರೆಯವರನ್ನು ಅವಲಂಬಿಸುತ್ತಿದ್ದೆವು. ಪರಸ್ಪರ ಅವಲಂಬನೆಗೆ ಬೇಕಾದ ವ್ಯಕ್ತಿಗೌರವವಿರುತ್ತಿತ್ತು.

ಈಗ ಎಲ್ಲದಕ್ಕೂ ಅತಿಯಾದ ಅವಸರ, ಅತೃಪ್ತಿ, ಅಶಾಂತಿ. ಹಾಗಾಗಿಯೇ, ಡೆಲಿವರಿ ಮಾಡುವ ವ್ಯಕ್ತಿಗಳ ಜೊತೆ ರಸ್ತೆಯಲ್ಲಿ ಜಗಳವಾಡುವುದು, ಮನೆ ಬಾಗಿಲಿಗೆ ಬಂದಾಗ ಕ್ಷುಲ್ಲಕ ವಿಷಯಕ್ಕೆ ರೇಗುವುದು ಹೆಚ್ಚಾಗಿದೆ. ನಮ್ಮ ಹಣದಿಂದ ಡೆಲಿವರಿ ಆರ್ಡರ್ ಮಾಡಿರಬಹುದು. ಆದರೆ, ಅದನ್ನು ನಮ್ಮ ಕೈಗೆ ತಲುಪಿಸಲು ಆತನ/ ಆಕೆಯ ಶಕ್ತಿ ಮತ್ತು ಸಮಯ ವ್ಯಯವಾಗಿರುತ್ತದೆ. ಇದನ್ನು ನಾವು ಪರಿಗಣಿಸಬೇಡವೆ?

ವೇಗವಾಗಿ ಬದಲಾಗುತ್ತಿರುವ ಜೀವನಶೈಲಿ ಯಾವ ವಿಚಾರವನ್ನೂ ಮಾಡಲಾಗದ 'ಗಮನದ ಮತ್ತು ಸಮಯದ ಕೊರತೆ'ಯನ್ನು ತಂದೊಡ್ಡಿದೆ. ಇದರಿಂದ ನಮ್ಮ ಮಾನಸಿಕ ಆರೋಗ್ಯವಷ್ಟೇ ಅಲ್ಲದೆ, ಸಾಮಾಜಿಕ ಸ್ವಾಸ್ಥ್ಯವೂ ಹಾಳಾಗುತ್ತಿದೆ. ಪರಸ್ಪರ ಅವಲಂಬನೆಗೆ ಬೇಕಾದ ತಾಳ್ಮೆ, ಪ್ರೀತಿ, ಅಂತಃಕರಣ ಮತ್ತು ವೈಚಾರಿಕತೆ ನಮ್ಮಲ್ಲಿ ಕ್ಷೀಣಿಸುತ್ತಿದೆ. ಸಮಾಜದಲ್ಲಿ ಅವಸರ ಮತ್ತು ಅಸಹನೆ ಹೆಚ್ಚಿದಂತೆ, ದೇಶದ ಆರ್ಥಿಕ ಪ್ರಗತಿಯೂ ಕುಸಿಯುತ್ತದೆ.

ಒಂದು ಸಮಾಜದ ಸಾಂಸ್ಕೃತಿಕ ಗುರಿ, ಸಹಬಾಳ್ವೆ, ಶಾಂತಿ ಮತ್ತು ಪ್ರೀತಿಯನ್ನು ಉಸಿರಾಡುವಂತೆ ನೋಡಿಕೊಳ್ಳುವುದು. ಆಧುನಿಕ ತಂತ್ರಜ್ಞಾನದಿಂದ ಉದಯವಾಗಿರುವ ನವೋದ್ಯಮಗಳು ಈ ಸಾಮಾಜಿಕ ಗುರಿ ಸಾಧನೆಗೆ ವಿಮುಖವಾಗಿರಬಾರದು. ಉದ್ಯೋಗಿಗಳ ವ್ಯಕ್ತಿ ಘನತೆಯನ್ನು ಎತ್ತಿಹಿಡಿಯುವ ನೀತಿಗಳು ಇರುವಂತೆ ರಾಜಕೀಯ ನಾಯಕತ್ವವು ಕಾರ್ಯ ನಿರ್ವಹಿಸಬೇಕು. ಸಮಸಮಾಜದ ತಾತ್ವಿಕತೆಯ ತಳಹದಿಯಲ್ಲೇ ಸಾಮಾಜಿಕ ಅಭಿವೃದ್ಧಿ ರೂಪುಗೊಳ್ಳಬೇಕು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಸಿಬಿಎಸ್‌ಇ ಪರೀಕ್ಷೆ ಮಾದರಿಯಲ್ಲಿ ರಾಜ್ಯದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ನಡೆಸುವುದು ಅನುಕೂಲಕರವೇ?

ಬೇಕಿದೆ ಪರೀಕ್ಷಾ ಸಾಮ್ಯತೆ



• ಜ್ಯೋತಿಕುಮಾರಿ ಕೆ.ವಿ.



ಎಸ್‌ಎಸ್‌ಎಲ್‌ಸಿ ಸೇರಿದಂತೆ ತತ್ಸಮಾನ ಪರೀಕ್ಷೆಗಳ ಮಧ್ಯೆ ಹೆಚ್ಚು ಸಾಮ್ಯತೆ ಇದ್ದಷ್ಟೂ ವಿದ್ಯಾರ್ಥಿಗಳ ನಡುವಿನ ಕೀಳರಿಮೆ ತೊಡೆದು ಹಾಕಲು ಸಹಕಾರಿಯಾಗುತ್ತದೆ. ಎಲ್ಲಾ ವಿದ್ಯಾರ್ಥಿಗಳಿಗೂ ಸಮಾನ ಅವಕಾಶ ಕಲ್ಪಿಸಲು ರಾಷ್ಟ್ರ ಹಾಗೂ ರಾಜ್ಯಗಳಲ್ಲಿನ ವಿವಿಧ ಮಂಡಳಿಗಳು ನಡೆಸುವ ಪರೀಕ್ಷೆಗಳಲ್ಲಿ ಏಕರೂಪತೆ ಸಾಧ್ಯವಾಗದಿದ್ದರೂ ಸಾಮ್ಯತೆಯಂತೂ ಇರಬೇಕು ಎನ್ನುವುದು ಬಹುತೇಕ ಶಿಕ್ಷಣ ತಜ್ಞರ ವಾದ. ಕರ್ನಾಟಕದಲ್ಲೂ ಇಂತಹ ಒಂದು ಅವಕಾಶದ ಬಾಗಿಲು ತೆರೆಯುತ್ತಿದೆ. ಪರೀಕ್ಷಾ ಸುಧಾರಣಾ ಸಮಿತಿ ಸಲಹೆಯಂತೆ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿಯು ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳನ್ನು ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿ (ಸಿಬಿಎಸ್‌ಇ) ಮಾದರಿಯಲ್ಲಿ ನಡೆಸಲು ಶಿಫಾರಸು ಮಾಡಿರುವುದು ಅತ್ಯಂತ ಉಪಯುಕ್ತ ನಡೆ.

ಪಾಠಗಳಾಗಲಿ, ಕಲಿಕಾ ಪದ್ಧತಿ, ಪರೀಕ್ಷೆಗಳಾಗಲಿ ವಿದ್ಯಾರ್ಥಿ ಕೇಂದ್ರಿತವಾಗಿರಬೇಕು ಎಂಬ ತಾತ್ವಿಕ ಆಶಯ ಸದಾ ಜೀವಂತ. ಆದರೆ, ಎಲ್ಲಾ ವಿದ್ಯಾರ್ಥಿಗಳಿಗೂ ಸಮಾನ ಅವಕಾಶ ಒದಗಿಸಬೇಕು. ದೇಶದಲ್ಲಿ 66 ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಗಳು ಕಾರ್ಯನಿರ್ವಹಿಸುತ್ತಿವೆ. ಸಿಬಿಎಸ್‌ಇಯು ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಪರಿಷತ್ (ಎನ್‌ಸಿಇಆರ್‌ಟಿ) ನಿಗದಿಪಡಿಸಿದ ಕೇಂದ್ರ ಪಠ್ಯಕ್ರಮದ ಆಧಾರದ ಮೇಲೆ ಪರೀಕ್ಷೆಗಳನ್ನು ನಡೆಸುತ್ತದೆ. ಈ ಪರೀಕ್ಷೆಗಳು ಭಾರತದಾದ್ಯಂತ ಏಕರೂಪವಾಗಿರುತ್ತವೆ. ಆದರೆ ಆಯಾ ರಾಜ್ಯದ ಪರೀಕ್ಷಾ ಮಂಡಳಿಗಳು ಆಯಾ ರಾಜ್ಯ ಶಿಕ್ಷಣ ಸಂಶೋಧನಾ ಸಂಸ್ಥೆಯ ಪಠ್ಯವಸ್ತು ಆಧರಿಸಿ ಪರೀಕ್ಷೆಗಳನ್ನು ನಡೆಸುವುದರಿಂದ ಪ್ರತಿ ರಾಜ್ಯದ ಪರೀಕ್ಷೆಗಳು ಭಿನ್ನವಾಗಿರುತ್ತವೆ. ಉದಾಹರಣೆಗೆ, ಪ್ರಥಮ ಭಾಷೆಗಾಗಿ ಸಿಬಿಎಸ್‌ಇ ಅಥವಾ ಇತರೆ ರಾಜ್ಯಗಳಲ್ಲಿ 100 ಅಂಕದ ಪ್ರಶ್ನೆ ಪತ್ರಿಕೆಯಿದ್ದರೆ ನಮ್ಮ ರಾಜ್ಯದಲ್ಲಿ 125 ಅಂಕದ ಪರೀಕ್ಷೆ ಇದೆ. ಒಟ್ಟಾರೆ ಅಂಕಗಳಲ್ಲಿಯೂ ವ್ಯತ್ಯಾಸವಿದೆ. ಈ ಭಿನ್ನತೆಗಳನ್ನು ಹೋಗಲಾಡಿಸಬೇಕಿದ್ದು, ಏಕರೂಪದ ಮೌಲ್ಯ ನೀಡುವುದರಿಂದ ಕಲಿಕೆಯಲ್ಲೇನೂ ವ್ಯತ್ಯಾಸವಾಗದು. ಅಲ್ಲದೇ ಶಿಫಾರಸಿನಂತೆ ಎಲ್ಲಾ ವಿಷಯಗಳಲ್ಲಿ ಏಕರೂಪದ ಅಂಕ ಹಂಚಿಕೆ ಸಮಾನತೆ ತರುತ್ತದೆ. ಹಾಗೂ ಅನ್ಯಭಾಷೆಯನ್ನು ಮನೆಭಾಷೆಯನ್ನಾಗಿ ಹೊಂದಿರುವ ವಿದ್ಯಾರ್ಥಿಗಳಿಗೆ ಕನ್ನಡ ಕಲಿಯಲು ಇದರಿಂದ ಅನುಕೂಲವಾಗುತ್ತದೆ.

ವಿವಿಧ ರೀತಿಯ ಪರೀಕ್ಷೆಗಳಿದ್ದಾಗ ಪಠ್ಯಕ್ರಮ, ಪರೀಕ್ಷೆಯ ಮಾದರಿ, ಮೌಲ್ಯಮಾಪನದ ಸ್ವರೂಪ, ಪ್ರಶ್ನೆಗಳ ರೀತಿ, ಅಂಕ ಮತ್ತು ಗ್ರೇಡ್ ಮೌಲ್ಯ ಹೀಗೆ ಹಲವು ಅಂಶಗಳಲ್ಲಿ ಭಿನ್ನತೆ ಹೊಂದಿರುವ ಬಗ್ಗೆ ಅಧ್ಯಯನಗಳು ಆಗಿವೆ. ಹೀಗಿದ್ದಾಗ ಪರೀಕ್ಷೆಗಳಿಂದ ಉತ್ತೀರ್ಣರಾಗಿ ಹೊರಬಂದ ವಿದ್ಯಾರ್ಥಿಗಳ ಕ್ಷಮತೆಗಳಲ್ಲೂ ವ್ಯತ್ಯಾಸಗಳಾಗುತ್ತವೆ. ಮೇಲ್ನೋಟಕ್ಕೆ ಕೆಲವು ವಿಷಯದ ಅಗತ್ಯಗಳಲ್ಲಿ ವ್ಯತ್ಯಾಸವಿದ್ದರೆ ಸಮಸ್ಯೆಯಿಲ್ಲ. ಭಾರತದಂತಹ ಬಹುರೂಪಿ ಅನನ್ಯತೆಯ ರಾಷ್ಟ್ರದಲ್ಲಿ ವಿಷಯ ಭಿನ್ನತೆ ಇರುವುದು ಅಗತ್ಯವೇ. ಆದರೆ ಸಮಸ್ಯೆ ಆಗುವುದು ಮೂಲಭೂತ ಕೌಶಲಗಳು, ಬೌದ್ಧಿಕ ಕ್ಷಮತೆ, ಸಾಮರ್ಥ್ಯಗಳ ವ್ಯತ್ಯಾಸವಾದಾಗ. ಇದು ಅನೇಕ ವಿದ್ಯಾರ್ಥಿಗಳು ತಮ್ಮದಲ್ಲದ ತಪ್ಪಿಗೆ ಅವಕಾಶ ವಂಚಿತರಾಗುವಂತೆ ಮಾಡುತ್ತದೆ. ಆದ್ದರಿಂದಲೇ ಏಕರೂಪವಲ್ಲದಿದ್ದರೂ ಮೂಲಭೂತ ಕೌಶಲಗಳ ಪರೀಕ್ಷೆಯ ಸಾಮ್ಯತೆ ನಮ್ಮ ರಾಜ್ಯ ಮತ್ತು ಕೇಂದ್ರ ಪರೀಕ್ಷಾ ಪದ್ಧತಿಗಳಲ್ಲಿ ಇರಲೇಬೇಕಿದೆ. ಸಮಿತಿಯೂ ಇದನ್ನು ಶಿಫಾರಸು ಮಾಡಿರುವುದು ಕೆಲವು ಶಿಕ್ಷಕರು ಮತ್ತು ವಿದ್ಯಾರ್ಥಿಗಳ ಮೆಚ್ಚುಗೆಗೆ ಪಾತ್ರವಾಗಿದೆ.

ಈಗ ಪ್ರಶ್ನೆ ಬರುವುದು ಸ್ಥಳೀಯ ಅಗತ್ಯ, ಅನನ್ಯತೆಯ ಕಲಿಕೆಯ ವಿಷಯದಲ್ಲಿ. ಪ್ರಾದೇಶಿಕ ಭಾಷೆ, ಸಂಸ್ಕೃತಿ ಮತ್ತು ರಾಜ್ಯ-ನಿರ್ದಿಷ್ಟ ವಿಷಯಗಳ ಕಲಿಕೆ ಮತ್ತು ಪರೀಕ್ಷೆ ಹೇಗೆ ಎಂಬ ವಿಷಯ ಸಹಜವಾಗಿ ಸವಾಲಿನ ರೂಪದಲ್ಲಿ ಚರ್ಚಿತವಾಗುತ್ತದೆ. ಆಗ ಸಹಾಯಕ್ಕೆ ಬರುವುದು ಕಲಿಕಾ ಫಲಗಳು ಮತ್ತು ಸಾಮರ್ಥ್ಯಗಳು. ಭಾಷೆ ಯಾವುದಾದರೂ ಗ್ರಹಿಕೆ, ಅಭಿವ್ಯಕ್ತಿ, ವಿಶ್ಲೇಷಣೆಯ ಆಧಾರಾಂಶಗಳು ಒಂದೇ. ಅವುಗಳ ಪರೀಕ್ಷೆಯಾಗಬೇಕು. ಸ್ಥಳೀಯ ಜಾತ್ರೆ, ಹಬ್ಬ, ಆಚರಣೆ ಬೇರೆಯಾದರೂ ಸಾಮಾಜಿಕ ಸೇರುವಿಕೆ, ಸಾಮುದಾಯಿಕ ಜೀವನದ ಆಶಯಗಳು ಒಂದೇ. ಆ ಆಶಯಗಳ ಪರೀಕ್ಷೆಗಳಾಗಬೇಕು. ಅಲ್ಲಿಗೆ, ಈ ಪರೀಕ್ಷಾ ಪದ್ಧತಿ ಸಿಬಿಎಸ್‌ಇ ಮಾದರಿಯದ್ದಲ್ಲ. ಪರೀಕ್ಷಾ ಪದ್ಧತಿಯ ಆಧಾರಾಂಶಗಳು ಪರಸ್ಪರ ಸಹಸಂಬಂಧ ಹೊಂದಿರುತ್ತವೆ ಎಂಬುದನ್ನು ನಾವು ಮನಗಾಣಬೇಕು. ಹೀಗೆ ಮೂಲಾಂಶಗಳ ಕಲಿಕೆಯ ಪರೀಕ್ಷೆಗಳು ಸಾಮ್ಯತೆ ಹೊಂದಿದರೆ ವಿದ್ಯಾರ್ಥಿಗಳಲ್ಲಿ ತಾರತಮ್ಯವನ್ನು ನೀಗಿಸಿದಂತಾಗುತ್ತದೆ. ಇದು ಶಿಕ್ಷಣ ವ್ಯವಸ್ಥೆಯ ಭಾಗೀದಾರರಲ್ಲಿ ಪರೀಕ್ಷಾ ಪದ್ಧತಿಯ ನಡುವಿನ ದ್ವಂದ್ವವನ್ನೂ ಕಡಿಮೆ ಮಾಡಿದಂತಾಗುತ್ತದೆ.

ಪ್ರಸ್ತುತ ಸಿಬಿಎಸ್‌ಇ ಪರೀಕ್ಷೆಗಳು ಮತ್ತು ರಾಜ್ಯ ಮಂಡಳಿಯ ಪರೀಕ್ಷೆಗಳಲ್ಲಿ ಬೌದ್ಧಿಕ ಸ್ವರೂಪದ ಭಿನ್ನತೆಯಿದ್ದು, ಎರಡೂ ಪರೀಕ್ಷೆಗಳನ್ನು ಬರೆದು ಉತ್ತೀರ್ಣರಾದ ವಿದ್ಯಾರ್ಥಿಗಳನ್ನು ನೋಡುವ ದೃಷ್ಟಿಕೋನದಲ್ಲೂ ಸಾಮಾಜಿಕ ವ್ಯತ್ಯಾಸವಿರುವುದು ನೋವಿನ ವಿಷಯ. ಇದನ್ನು ತೊಡೆದುಹಾಕುವುದು ಕಾಳಜಿಯ ಕ್ಷೇತ್ರವಾಗಬೇಕಿದೆ. ಈ ಹಿನ್ನೆಲೆಯಲ್ಲಿ ಇಲಾಖೆಯು ಶಾಲಾ ಶಿಕ್ಷಣ ಮತ್ತು ಮೌಲ್ಯಮಾಪನದಲ್ಲಿ ಅನೇಕ ಪ್ರಗತಿದಾಯಕ ಹೆಜ್ಜೆಗಳನ್ನಿಡುತ್ತಿರುವುದು ಕೆಲವರ ಮೆಚ್ಚುಗೆಗೆ ಪಾತ್ರವಾಗಿದೆ.

ಪ್ರಸ್ತುತ ರಾಜ್ಯ ಪರೀಕ್ಷೆಯಲ್ಲಿ ಆಂತರಿಕ ಮೌಲ್ಯಾಂಕನವನ್ನು ಉತ್ತೀರ್ಣಕ್ಕೆ ಪರಿಗಣಿಸಲಾಗುತ್ತಿಲ್ಲ. ಕೇಂದ್ರ ಮಾದರಿ ಜಾರಿಯಾದಲ್ಲಿ ಅದು ವಿದ್ಯಾರ್ಥಿಯ ನಿರಂತರ ಹಾಗೂ ಸಮಗ್ರ ಮೌಲ್ಯಮಾಪನವನ್ನು ಖಾತರಿ ಪಡಿಸುತ್ತದೆ. ಪ್ರತಿ ವಿದ್ಯಾರ್ಥಿಯ ಕಲಿಕಾ ವೇಗವು ಭಿನ್ನವಿರುವುದರಿಂದ ಈ ಸಮಗ್ರ ಮೌಲ್ಯಮಾಪನವು ವಿದ್ಯಾರ್ಥಿಗಳಿಗೆ ತಮ್ಮದೇ ಆದ ವೇಗದಲ್ಲಿ ಕಲಿಯಲು ಮತ್ತು ಉತ್ತೀರ್ಣಗೊಳ್ಳಲು ಅನುಕೂಲ ಮಾಡುತ್ತದೆ. ಅಷ್ಟರಮಟ್ಟಿಗೆ ಪರೀಕ್ಷೆ ವಿದ್ಯಾರ್ಥಿ ಕೇಂದ್ರಿತವಾಗುತ್ತದೆ. ನಿಧಾನಗತಿಯ ಕಲಿಕಾ ಮಕ್ಕಳ ಒತ್ತಡವನ್ನು ಕಡಿಮೆಗೊಳಿಸುತ್ತದೆ. ಸಹಜವಾಗಿ ಈ ಕ್ರಮವು ಮಕ್ಕಳಲ್ಲಿ ಆತ್ಮವಿಶ್ವಾಸ ಮತ್ತು ಮನಃಸ್ಥೈರ್ಯ ಹೆಚ್ಚಿಸುತ್ತದೆ. ವಿದ್ಯಾರ್ಥಿಗಳು ಸರಳವಾಗಿ ತೇರ್ಗಡೆಗೊಳ್ಳಲು, ಶಿಕ್ಷಣವನ್ನು ಮುಂದುವರಿಸಲು ಸಹಾಯಕವಾಗುತ್ತದೆ.

ವಿದ್ಯಾರ್ಥಿಯು ಶಿಕ್ಷಣ ಮುಂದುವರಿಸುವುದು ಅತೀ ಮುಖ್ಯ. 2025ರ ಎಸ್‌ಎಸ್‌ಎಲ್‌ಸಿ ಮೊದಲ ಪರೀಕ್ಷೆಯಲ್ಲಿ 7,90,890 ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದು, 5,23,075 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ರಾಜ್ಯದ ಫಲಿತಾಂಶ ಶೇ 66.14. ಇದ್ದು, ಶೇ 33.86 ವಿದ್ಯಾರ್ಥಿಗಳು ಅನುತ್ತೀರ್ಣಗೊಂಡಿದ್ದಾರೆ. ಪರೀಕ್ಷಾ ಒತ್ತಡದಿಂದಾಗಿ ಪ್ರೌಢ ಹಂತದಲ್ಲಿ ಮತ್ತು ನಂತರ ಶೇ 40ರಷ್ಟು ವಿದ್ಯಾರ್ಥಿಗಳು ಶಾಲೆಯಿಂದ ಹೊರಗುಳಿಯುತ್ತಾರೆ. ಹತ್ತನೇ ತರಗತಿ ಅನುತ್ತೀರ್ಣರಾಗಿ ಶಾಲೆ ಬಿಡುವ ವಿದ್ಯಾರ್ಥಿಗಳು ಅಪಾಯಕಾರಿ ವಲಯದ ಕಾರ್ಮಿಕರಾಗಿ, ಇನ್ನೂ ಕೆಲವೊಮ್ಮೆ ಸಮಾಜಘಾತುಕ ಕೆಲಸಗಳಲ್ಲಿಯೂ ತೊಡಗಿಕೊಳ್ಳುವ ಅಪಾಯಗಳಿವೆ. ಉತ್ತೀರ್ಣದ ಸಮಾನ ಸೂಚಕ ಮತ್ತು ಸರಳತೆಗಳು ಜಾರಿಯಾದರೆ ಸಹಜವಾಗಿ ಫಲಿತಾಂಶದಲ್ಲಿಯೂ ಸುಧಾರಣೆಯನ್ನು ನಿರೀಕ್ಷಿಸಬಹುದು. ಭಾರತದಂತಹ ದೇಶದ ಶಿಕ್ಷಣ ವ್ಯವಸ್ಥೆಯಲ್ಲಿ ಉತ್ತೀರ್ಣವಾಗುವುದು ಸಾಮಾಜಿಕ ಬದಲಾವಣೆಯಲ್ಲಿ ಬಹಳ ಮುಖ್ಯವಾದ ಪಾತ್ರವನ್ನು ವಹಿಸುವುದರಿಂದ ವಿದ್ಯಾರ್ಥಿಗಳಿಗೆ ತಮ್ಮ ಭವಿಷ್ಯದ ಶೈಕ್ಷಣಿಕ ಮಾರ್ಗವನ್ನು ಆಯ್ಕೆ ಮಾಡಲು ಈ ಸಾಮ್ಯತೆಯ ಪರೀಕ್ಷೆಗಳು ಸಹಾಯ ಮಾಡುತ್ತವೆ. ವಿದ್ಯಾರ್ಥಿಗಳ ಸಾಮರ್ಥ್ಯ ಮತ್ತು ಆಸಕ್ತಿಯನ್ನು ಆಧರಿಸಿ ಸರಿಯಾದ ವೃತ್ತಿಪಥವನ್ನು ಆಯ್ಕೆ ಮಾಡಲು ದಾರಿ ಮಾಡಿಕೊಡುತ್ತದೆ.

ಪರೀಕ್ಷೆಗಿಂತಲೂ ಕಲಿಕೆ ಮುಖ್ಯ. ಆದರೆ, ಪರೀಕ್ಷೆಗಳು ಕಲಿಯುವಂತೆ ಮಾಡುತ್ತವೆ ಎಂಬುದೂ ಸತ್ಯ. ಆದ್ದರಿಂದ ಕೊನೆಯ ಸವಾಲಿನ ವಿಷಯವೆಂದರೆ, ಯಾವುದೇ ಮಂಡಳಿಯಿರಲಿ ಕಲಿಕಾ ಫಲ ಆಧಾರಿತ ಪ್ರಶ್ನೆಗಳನ್ನು ಒಳಗೊಂಡಿರುವಂತೆ ಪ್ರಶ್ನೆಪತ್ರಿಕೆಗಳು ರಚನೆಯಾಗಬೇಕು. ನಮ್ಮ ಶಿಕ್ಷಕರೂ ಹಾಗೆಯೇ ಕಲಿಕಾ ಫಲಗಳನ್ನು ಗಳಿಸುವಂತೆ ಮಾಡಬೇಕು. ಮಾಹಿತಿ ಬೇಡುವ, ವಿಷಯಾಂಶಕ್ಕಿಂತ ಅನ್ವಯಿಕ, ಸೃಜನಶೀಲ ಉತ್ತರ ನೀಡುವ ಪ್ರಶ್ನೆಗಳನ್ನು ಒಳಗೊಂಡಿರಬೇಕು. ಸಾಮರ್ಥ್ಯ-ಆಧಾರಿತ ಕಲಿಕೆ, ಯಾಂತ್ರಿಕ ಕಲಿಕೆಗಿಂತ ಅನ್ವಯಿಕ ಕಲಿಯುವಿಕೆಗೆ ಮಹತ್ವ ನೀಡುವುದು, ವಿಶ್ಲೇಷಣಾತ್ಮಕ ಮತ್ತು ಸಮಸ್ಯೆ-ಪರಿಹರಿಸುವ ಕೌಶಲಗಳ ಮೇಲೆ ಒತ್ತು ನೀಡುವುದು, ಕೇಂದ್ರಾಂಶ, ಮೂಲ ಪರಿಕಲ್ಪನೆಗಳನ್ನು ಪರೀಕ್ಷಿಸುವುದನ್ನು ಮಾಡಿದಲ್ಲಿ ತಂತಾನೆ ಎಲ್ಲಾ ಮಂಡಳಿಗಳ ಪರೀಕ್ಷೆಗಳಲ್ಲಿ ಸಾಮ್ಯತೆ ಬರುತ್ತದೆ. ವಿದ್ಯಾರ್ಥಿಗಳ ಒತ್ತಡವೂ ಕಡಿಮೆಯಾಗಿ ವಿಷಯದ ಆಳ ಪ್ರವೇಶಕ್ಕೆ ಅನುಕೂಲವಾಗುತ್ತದೆ. ಹಾಗೆಯೇ ಆಗಲೆಂದು ಆಶಿಸೋಣ.

ಲೇಖಕಿ: ಶಿವಮೊಗ್ಗದ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯಲ್ಲಿ ಉಪನ್ಯಾಸಕಿ

> ಪ್ರಸ್ತುತ ರಾಜ್ಯ ಪರೀಕ್ಷೆಯಲ್ಲಿ ಆಂತರಿಕ ಮೌಲ್ಯಾಂಕನವನ್ನು ಉತ್ತೀರ್ಣಕ್ಕೆ ಪರಿಗಣಿಸಲಾಗುತ್ತಿಲ್ಲ. ಕೇಂದ್ರ ಮಾದರಿ ಜಾರಿಯಾದಲ್ಲಿ ಅದು ವಿದ್ಯಾರ್ಥಿಯ ನಿರಂತರ ಹಾಗೂ ಸಮಗ್ರ ಮೌಲ್ಯಮಾಪನವನ್ನು ಖಾತರಿ ಪಡಿಸುತ್ತದೆ. ಪ್ರತಿ ವಿದ್ಯಾರ್ಥಿಯ ಕಲಿಕಾ ವೇಗವು ಭಿನ್ನವಿರುವುದರಿಂದ ಈ ಸಮಗ್ರ ಮೌಲ್ಯಮಾಪನವು ವಿದ್ಯಾರ್ಥಿಗಳಿಗೆ ತಮ್ಮದೇ ಆದ ವೇಗದಲ್ಲಿ ಕಲಿಯಲು ಮತ್ತು ಉತ್ತೀರ್ಣಗೊಳ್ಳಲು ಅನುಕೂಲ ಮಾಡಿಕೊಡುತ್ತದೆ. ಅಷ್ಟರಮಟ್ಟಿಗೆ ಪರೀಕ್ಷೆ ವಿದ್ಯಾರ್ಥಿ ಕೇಂದ್ರಿತವಾಗುತ್ತದೆ

ಸ್ಪರ್ಧಾತ್ಮಕ ಪರೀಕ್ಷೆ ಸುಲಭ

ಬಹಳ ಮುಖ್ಯವಾಗಿ ಇಂದಿನ ದಿನಮಾನದಲ್ಲಿ ಯಾವುದೇ ಮಂಡಳಿಯಿಂದ ನಡೆಸುವ ಅಂತಿಮ ಪರೀಕ್ಷೆಗಳಿಗಿಂತ, ಕೋರ್ಸ್ ಪ್ರವೇಶ ಪರೀಕ್ಷೆಗಳಿಗೆ ಹೆಚ್ಚಿನ ಮಹತ್ವವಿದೆ. ಎಂದರೆ, 12ನೇ ತರಗತಿಯ ಅಂತಿಮ ಬೋರ್ಡ್ ಪರೀಕ್ಷೆಗಿಂತಲೂ ಪ್ರವೇಶ ಪರೀಕ್ಷೆಗಳಾದ ನೀಟ್, ಜೆಇಇ, ಸಿಇಟಿ, ಕ್ಲಾಟ್ ಪರೀಕ್ಷೆಗಳೇ ಪ್ರಧಾನವೆನಿಸಿವೆ. ಈ ಪ್ರವೇಶ ಪರೀಕ್ಷೆಗಳು ಕೇಂದ್ರ ಪರೀಕ್ಷೆ ಎದುರಿಸಿದ ವಿದ್ಯಾರ್ಥಿಗಳಿಗೆ ಅನುಕೂಲಕರವಾಗಿವೆ. ಕೇಂದ್ರ ಮಂಡಳಿಯ ಮಾದರಿಯಲ್ಲಿ ವಿಮರ್ಶಾತ್ಮಕ ಚಿಂತನೆ, ಸಮಸ್ಯೆ ಪರಿಹಾರ ಮತ್ತು ಜೀವನ ಕೌಶಲಗಳಿಗೆ ಒತ್ತು ನೀಡಿ ಕಲಿಸಿ, ಆ ವಿದ್ಯಾರ್ಥಿಗಳನ್ನು ಪ್ರೌಢಹಂತದಲ್ಲಿಯೇ ಸಿದ್ಧಗೊಳಿಸುತ್ತಾರೆ. ಸಾಮ್ಯತೆ/ ಏಕರೂಪದ ಪರೀಕ್ಷೆ ನಡೆಸಿದರೆ ಈ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ಎಲ್ಲಾ ಮಕ್ಕಳಿಗೂ ಸುಲಭವಾಗುತ್ತದೆ.

ರಾಜ್ಯ ಶಿಕ್ಷಣ ನೀತಿ ಯಾಕಾಗಿ?



• ಹಂ.ಗು.ರಾಜೇಶ್



ಭಾರತದ ಒಕ್ಕೂಟ ವ್ಯವಸ್ಥೆಯಲ್ಲಿ ಶಿಕ್ಷಣವು ಸಮವರ್ತಿ ಪಟ್ಟಿಗೆ ಸೇರಿರುವುದರಿಂದ ಕೇಂದ್ರ ಮತ್ತು ರಾಜ್ಯಗಳಿಗೂ ಸಮಾನ ಅವಕಾಶವನ್ನು ಸಂವಿಧಾನದಲ್ಲಿ ಕಲ್ಪಿಸಲಾಗಿದೆ. ಏಕೆಂದರೆ, ಒಂದೊಂದು ರಾಜ್ಯವೂ ಪ್ರಾದೇಶಿಕವಾಗಿ ತನ್ನದೇ ಆದ ವಿಶೇಷಗಳನ್ನು ಹೊಂದಿರುತ್ತದೆ. ಆದ್ದರಿಂದ ಎಲ್ಲ ರಾಜ್ಯಗಳೂ ತಮ್ಮ ತಮ್ಮ ಪ್ರಾದೇಶಿಕ ಶೈಕ್ಷಣಿಕ ಸ್ವಾಯತ್ತೆಯನ್ನು ಕಾಪಾಡಿಕೊಳ್ಳಲು ಅರ್ಹವಾಗಿರುತ್ತವೆ. ಈ ಹಿನ್ನೆಲೆಯಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಗೆ (ಎನ್‌ಇಪಿ) ಪರ್ಯಾಯವಾಗಿ ರಾಜ್ಯ ಸರ್ಕಾರವು ಪ್ರೊ.ಸುಖದೇವ್ ಥೋರಟ್ ಅವರ ಅಧ್ಯಕ್ಷತೆಯಲ್ಲಿ ಕರ್ನಾಟಕ ರಾಜ್ಯ ಶಿಕ್ಷಣ ನೀತಿಯ (ಎಸ್‌ಇಪಿ) ಸಮಿತಿ ರಚಿಸಿದೆ ಮತ್ತು ವರದಿಯ ನಿರೀಕ್ಷೆಯಲ್ಲಿದೆ. ಇಂತಹ ಸಂದರ್ಭದಲ್ಲಿ ಸಿಬಿಎಸ್‌ಇ ಪರೀಕ್ಷಾ ಮಾದರಿಯನ್ನು ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಅಳವಡಿಸಿಕೊಳ್ಳುವ ಸಂಬಂಧ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿಯು ಸರ್ಕಾರಕ್ಕೆ ಪ್ರಸ್ತಾಪ ಸಲ್ಲಿಸಿರುವುದು ಎಷ್ಟರಮಟ್ಟಿಗೆ ಸರಿ?

ಸಾಮಾನ್ಯವಾಗಿ ಸಿಬಿಎಸ್‌ಇ ಕಲಿಯುವ ಮಕ್ಕಳು ಮೇಲ್ಮಧ್ಯಮ ಹಾಗೂ ಮಧ್ಯಮ ವರ್ಗಕ್ಕೆ ಸೇರಿದವರಾಗಿರುತ್ತಾರೆ. ಇಂತಹ ಶಾಲೆಗಳು ನಗರಕೇಂದ್ರಿತವಾಗಿರುತ್ತವೆ. ಆದರೆ, ರಾಜ್ಯ ಶಿಕ್ಷಣ ನೀತಿಯು ಕೇವಲ ನಗರಕೇಂದ್ರಿತವಾಗಿಲ್ಲ. ಬದಲಿಗೆ ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಭಿನ್ನ ವಿಭಿನ್ನ ಸ್ತರಗಳ ಗ್ರಾಮೀಣ ಪ್ರದೇಶ, ಪಟ್ಟಣ ಪ್ರದೇಶ, ಕೊಳಚೆ ಪ್ರದೇಶ ಮೊದಲಾದ ಪ್ರದೇಶಗಳ ಮಕ್ಕಳು ರಾಜ್ಯ ಪಠ್ಯಕ್ರಮವನ್ನು ಅಭ್ಯಾಸ ಮಾಡುತ್ತಾರೆ. ಇವರೆಲ್ಲರನ್ನೂ ದೃಷ್ಟಿಯಲ್ಲಿರಿಸಿಕೊಂಡು ರಾಜ್ಯದ ಮಾದರಿಯನ್ನು ರೂಪಿಸುವ ನಿಟ್ಟಿನಲ್ಲಿ ಆಲೋಚಿಸಬೇಕಿದೆ.

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿಯು ಅಳವಡಿಸಿಕೊಳ್ಳಲು ಹೊರಟಿರುವ ಪರೀಕ್ಷಾ ಮಾದರಿಯಲ್ಲಿ ಕೆಲವು ಮೂಲಭೂತವಾದ ತಾತ್ವಿಕ ಹಾಗೂ ಪ್ರಾಯೋಗಿಕ ಸಮಸ್ಯೆಗಳೂ ಇವೆ. ಉದಾಹರಣೆಗೆ, ರಾಜ್ಯದಲ್ಲಿ ಕನ್ನಡ ಸೇರಿದಂತೆ ಪ್ರಥಮ ಭಾಷೆಯ ಪರೀಕ್ಷೆಯನ್ನು 125 ಅಂಕಗಳಿಗೆ ನಡೆಸುವುದರ ಹಿಂದೆ ಕನ್ನಡ ಚಳವಳಿಯ ಹೋರಾಟದ ತಾತ್ವಿಕತೆಯ ಹಿನ್ನೆಲೆ ಇದೆ. ಕನ್ನಡ ಅಸ್ಮಿತೆಯ ದ್ಯೋತಕವಾದ 'ಗೋಕಾಕ್ ಚಳವಳಿ'ಯ ಪ್ರೇರಣೆ ಮತ್ತು ಪ್ರಭಾವವಿದೆ. ಇದನ್ನು ಅರಿಯದೆ ರಾಜ್ಯದಲ್ಲಿ ಪ್ರಥಮ ಭಾಷಾ ಪರೀಕ್ಷೆಯನ್ನು 125ರಿಂದ 100 ಅಂಕಗಳಿಗೆ ಇಳಿಸುವುದು ಕನ್ನಡದ ಹಿರಿಯ ಸಾಹಿತಿ, ಕಲಾವಿದರು, ಚಳವಳಿಗಾರರು ಮಾತ್ರವಲ್ಲ; ಕರ್ನಾಟಕದ ಸಾಂಸ್ಕೃತಿಕ ನಾಯಕ ಡಾ.ರಾಜಕುಮಾರ್ ಅವರ ಹೋರಾಟವನ್ನೂ ಅವಮಾನಿಸಿದಂತಾಗುತ್ತದೆ.

ಒಂದು ವೇಳೆ ಎನ್‌ಇಪಿ ಆಶಯಕ್ಕೆ ಪೂರಕವಾಗಿರುವ ಸಿಬಿಎಸ್‌ಇ ಪರೀಕ್ಷಾ ಮಾದರಿಯನ್ನು ಅಳವಡಿಸಿಕೊಂಡಲ್ಲಿ, ಮುಂದಿನ ದಿನಗಳಲ್ಲಿ ಭಿನ್ನ ಸ್ವರೂಪದ ಪಠ್ಯಗಳನ್ನು ತೂರಿದು ಎನ್‌ಇಪಿ ಪಠ್ಯಕ್ರಮಗಳನ್ನೇ ಅಳವಡಿಸಿಕೊಳ್ಳುವುದಿಲ್ಲ ಎಂಬುದಕ್ಕೆ ಖಾತರಿ ಏನಿದೆ? ಮುಂದಿನ ದಿನಗಳಲ್ಲಿ ಅಂತಹ ತೀರ್ಮಾನಗಳನ್ನು ತೆಗೆದುಕೊಂಡರೂ ಯಾರೂ ಅಚ್ಚರಿ ಪಡಬೇಕಿಲ್ಲ. ಏಕೆಂದರೆ, ಈ ಹಿಂದೆ ಸುರೇಶ್ ಕುಮಾರ್ ಅವರು ಸಚಿವರಾಗಿದ್ದ ಸಂದರ್ಭದಲ್ಲಿ ಎನ್‌ಸಿಇಆರ್‌ಟಿ ಪಠ್ಯಪುಸ್ತಕಗಳನ್ನೇ ರಾಜ್ಯದಲ್ಲಿಯೂ ಅನುಷ್ಠಾನಕ್ಕೆ ತರಲು ರಾಜ್ಯ ಪಠ್ಯಪುಸ್ತಕ ಸಂಘದ ಮೂಲಕ ತರಾತುರಿಯಲ್ಲಿ ಅನುವಾದ ಕಾರ್ಯವನ್ನು ನಡೆಸಲಾಗಿತ್ತು. ಆದರೆ, ಉತ್ತರ ಭಾರತ ಕೇಂದ್ರಿತವಾದ ಎನ್‌ಸಿಇಆರ್‌ಟಿ ಪಠ್ಯಪುಸ್ತಕಗಳಲ್ಲಿ ರಾಜ್ಯದ ಇತಿಹಾಸ, ಸಂಸ್ಕೃತಿ, ಭೌಗೋಳಿಕತೆಗೆ ಯಾವುದೇ ಸ್ಥಾನ ಇಲ್ಲ. ಅಂತಹ ಪಠ್ಯಗಳನ್ನು ನಮ್ಮ ಮಕ್ಕಳಿಗೆ ಕಲಿಸುವ ಅಗತ್ಯವಾದರೂ ಏನಿದೆ? ಇದು ನಾಡಿನ ಅಸ್ಮಿತೆಯನ್ನು ಕಡೆಗಣಿಸುವುದು ಮಾತ್ರವಲ್ಲ; ಮಕ್ಕಳಲ್ಲಿ ನಮ್ಮ ನಾಡಿಗೆ ಯಾವುದೇ ಇತಿಹಾಸ ಮತ್ತು ಸಂಸ್ಕೃತಿಯೂ ಇಲ್ಲವೆಂಬ ಕೀಳರಿಮೆಯನ್ನು ಮೂಡಿಸುತ್ತದೆಂಬ ವಿರೋಧ ವ್ಯಕ್ತವಾಯಿತು. ಇದನ್ನು ಅರಿತ ಸಚಿವರು ಕೂಡಲೇ ಎಚ್ಚೆತ್ತುಕೊಂಡು ಎನ್‌ಸಿಇಆರ್‌ಟಿ ಪಠ್ಯಪುಸ್ತಕಗಳ ಅನುವಾದ ಕಾರ್ಯವನ್ನು ಸ್ಥಗಿತಗೊಳಿಸಿ, ಪುನಃ ರಾಜ್ಯ ಪಠ್ಯಪುಸ್ತಕಗಳನ್ನೇ ಯಥಾವತ್ ಮುಂದುವರಿಸಿದ್ದನ್ನು ಇಲ್ಲಿ ನೆನೆಯಬಹುದು.

ಈಗ ತರಲು ಹೊರಟಿರುವ ಪರೀಕ್ಷಾ ಮಾದರಿಯಲ್ಲಿನ ಮತ್ತೊಂದು ಸಮಸ್ಯೆ ಎಂದರೆ, ಸಿಬಿಎಸ್‌ಇ ಮಾದರಿಯಲ್ಲಿ ಆಂತರಿಕ ಅಂಕಗಳು 20 ಮತ್ತು ಲಿಖಿತ ಪರೀಕ್ಷೆಯ ಅಂಕಗಳು 80. ವಿದ್ಯಾರ್ಥಿ ಉತ್ತೀರ್ಣನಾಗಲು ಒಟ್ಟು 100ಕ್ಕೆ ಒಟ್ಟು 33 ಅಂಕ ಪಡೆದರೆ ಸಾಕು. ಅಂತರಿಕ ಪರೀಕ್ಷೆಯಲ್ಲಿ ಗರಿಷ್ಠ ಅಂಕ ಪಡೆದ ವಿದ್ಯಾರ್ಥಿ ಲಿಖಿತ ಪರೀಕ್ಷೆಯಲ್ಲಿ 80ಕ್ಕೆ ಕೇವಲ 13 ಅಂಕ ಪಡೆದರೂ ಪಾಸು. ಆದರೆ, ಪ್ರಸ್ತುತ ಇರುವ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಪದ್ಧತಿಯಲ್ಲಿ ವಿದ್ಯಾರ್ಥಿಯು ಉತ್ತೀರ್ಣನಾಗಲು 35 ಅಂಕ ಪಡೆಯಬೇಕಿದ್ದು, ಈ 35 ಅಂಕಗಳಲ್ಲಿ ಲಿಖಿತ ಪರೀಕ್ಷೆಯ 80ಕ್ಕೆ ಕನಿಷ್ಠ 28 ಅಂಕ ಪಡೆದಿರಲೇಬೇಕು. ಒಟ್ಟಾರೆ, ಪರೀಕ್ಷಾ ಪಾವಿತ್ರ್ಯವನ್ನು ಗೌಣಗೊಳಿಸುವ ಸಿಬಿಎಸ್‌ಇ ಪರೀಕ್ಷಾ ಮಾದರಿಗಿಂತ ಗುಣಾತ್ಮಕತೆಯ ದೃಷ್ಟಿಯಿಂದ ಉನ್ನತವಾದ ನಮ್ಮ ಪರೀಕ್ಷಾ ಮಾದರಿಯೇ ಉತ್ತಮ ಮಾದರಿಯಲ್ಲವೇ? ಒಂದು ವೇಳೆ ಸಿಬಿಎಸ್‌ಇ ಮಾದರಿಯನ್ನೇ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯು ಒಪ್ಪಿಕೊಳ್ಳುವುದಾದರೆ ಈವರೆಗೆ 'ಕರ್ನಾಟಕ ಮಾದರಿ' ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಿರುವ ಮೂರು ಪರೀಕ್ಷೆಗಳನ್ನು ಕೈಬಿಟ್ಟು, ಎರಡು ಪರೀಕ್ಷೆಗಳನ್ನೇ ನಡೆಸಬೇಕಾಗುತ್ತದೆ.

ಸುಧಾರಣಾತ್ಮಕ ದೃಷ್ಟಿಯಿಂದ ಮೂರು ಪರೀಕ್ಷೆಗಳ ಬದಲು ಎರಡು ಪರೀಕ್ಷಾ ಮಾದರಿ ಉತ್ತಮವಾದುದೇ ಸರಿ. ಏಕೆಂದರೆ, ಮೂರು ಪರೀಕ್ಷೆಗಳಿಂದಾಗಿ ವಿದ್ಯಾರ್ಥಿಗಳ ಜೊತೆಗೆ ಪೋಷಕರು ಮತ್ತು ಶಿಕ್ಷಕರು ಕೂಡ ಅನಗತ್ಯ ಒತ್ತಡಕ್ಕೆ ಒಳಗಾಗುತ್ತಿದ್ದಾರೆ. ಶೈಕ್ಷಣಿಕ ವರ್ಷ ಆರಂಭವಾದರೂ ಹೊಸ ವಿದ್ಯಾರ್ಥಿಗಳಿಗೆ ಪಾಠ ಮಾಡುವುದನ್ನು ಬಿಟ್ಟು ಹಳೆಯ ವಿದ್ಯಾರ್ಥಿಗಳ ಪರೀಕ್ಷಾ ಹಾಗೂ ಮೌಲ್ಯಮಾಪನ ಕಾರ್ಯದಲ್ಲಿಯೇ ಶಿಕ್ಷಕರು ತೊಡಗಬೇಕಾಗುತ್ತದೆ. ಇದರಿಂದ ಹೊಸ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತದೆ. ಆದರೆ, ಎರಡು ಪರೀಕ್ಷೆಗಳು ಸಾಕೆಂದ ಮಾತ್ರಕ್ಕೆ ರಾಜ್ಯ ಪರೀಕ್ಷಾ ಮಾದರಿಯನ್ನು ಸಾರಾಸಗಟಾಗಿ ನಿರಾಕರಿಸಬೇಕೆಂತೇನೂ ಅಲ್ಲ; ಒಳ್ಳೆಯ ಅಂಶಗಳನ್ನು ಅಳವಡಿಸಿಕೊಳ್ಳುವ ಮೂಲಕ ಸುಧಾರಣೆಯಾಗಬೇಕು. ಏಕೆಂದರೆ ನಿರಾಕರಣೆಯೇ ಬೇರೆ; ಸುಧಾರಣೆಯೇ ಬೇರೆ. ಈ ರೀತಿಯ ಯಾವುದೇ ಶೈಕ್ಷಣಿಕ ಸುಧಾರಣೆಗಳನ್ನು ತರುವ ಮುನ್ನ ಚಿಂತಕರು, ಶಿಕ್ಷಣ ತಜ್ಞರು ಹಾಗೂ ಶಿಕ್ಷಕ ಸಂಘಟನೆಗಳ ಪ್ರತಿನಿಧಿಗಳ ಜೊತೆಗೆ ಚರ್ಚೆ ಮತ್ತು ಸಮಾಲೋಚನೆ ನಡೆಸುವುದು ಉತ್ತಮ.

ಇನ್ನೊಂದು ವಿಚಾರದ ಕಡೆಗೆ ನಾವು ಗಮನ ಹರಿಸಲೇಬೇಕಿದೆ. ಸಿಬಿಎಸ್‌ಇ ಪರೀಕ್ಷಾ ಮಾದರಿಯಲ್ಲಿ ವಸ್ತುನಿಷ್ಠ ಪ್ರಶ್ನೋತ್ತರಗಳಿಗೆ ಹೆಚ್ಚಿನ ಆದ್ಯತೆ ನೀಡಿರುವಂತೆ ತೋರುತ್ತದೆ. ಇದು ವಿದ್ಯಾರ್ಥಿಗಳಲ್ಲಿನ ಬರವಣಿಗೆಯ ಕೌಶಲವನ್ನು ಕುಂಠಿತಗೊಳಿಸುತ್ತದೆ. ವಿಶೇಷವಾಗಿ ಭಾಷಾ ವಿಷಯಗಳಲ್ಲಿ ಈ ಸಮಸ್ಯೆ ಗಂಭಿರವಾಗಿ ಕಾಡುತ್ತದೆ.

ಕೊನೆಯದಾಗಿ ಹೇಳುವುದಿಷ್ಟೇ: ರಾಜ್ಯದಲ್ಲಿಯೂ ಕೂಡ ಸುಧಾರಣಾತ್ಮಕ ದೃಷ್ಟಿಯಿಂದ ಸಿಬಿಎಸ್‌ಇ ಮಾದರಿಯಂತೆ ಎಸ್‌ಎಸ್‌ಎಲ್‌ಸಿ ಹಂತದಲ್ಲಿ ಮೂರು ಭಾಷಾ ವಿಷಯಗಳ ಬದಲು ಎರಡು ಭಾಷಾ ವಿಷಯಗಳನ್ನು ಪರಿಚಯಿಸುವುದು ಉಚಿತವೆಂದು ತೋರುತ್ತದೆ. ಈ ನಿಟ್ಟಿನಲ್ಲಿ ಯೋಚಿಸಿದರೆ ಮಕ್ಕಳ ಮೇಲಿನ ಅನಗತ್ಯ ಒತ್ತಡವನ್ನು ನಿವಾರಿಸಬಹುದು. ಇಂತಹ ಸೂಕ್ಷ್ಮ ಶೈಕ್ಷಣಿಕ ತೀರ್ಮಾನಗಳನ್ನು ಮೊದಲು ಕಾನೂನು ತಜ್ಞರು, ಶಿಕ್ಷಣ ತಜ್ಞರು, ಚಿಂತಕರು ಮತ್ತು ಶಿಕ್ಷಣ ಸಂಘಟನೆಗಳ ಜೊತೆಗೆ ಚರ್ಚಿಸಬೇಕು. ಇಲ್ಲವೇ ಇದಕ್ಕಾಗಿಯೇ ಒಂದು ಶಾಶ್ವತ 'ಶೈಕ್ಷಣಿಕ ಪರಿಷತ್' ಸ್ಥಾಪಿಸಬೇಕು. ಸದ್ಯಕ್ಕೆ ಇವೆಲ್ಲಕ್ಕೂ ಪ್ರೊ.ಸುಖದೇವ್ ಥೋರಟ್ ಅವರ ನೇತೃತ್ವದ ಎಸ್‌ಇಪಿ ಸಮಿತಿಯು ತನ್ನ ವರದಿಯಲ್ಲಿ ಪರಿಹಾರ ನೀಡಬಲ್ಲದೇ?

ಕಾದು ನೋಡಬೇಕು.

ಲೇಖಕ: ಬೆಂಗಳೂರಿನ ಕೆಂಗೇರಿಯ ಸರ್ಕಾರಿ ಪಿಯು ಕಾಲೇಜಿನಲ್ಲಿ ಉಪನ್ಯಾಸಕ

> ಪರೀಕ್ಷಾ ಪಾವಿತ್ರ್ಯವನ್ನು ಗೌಣಗೊಳಿಸುವ ಸಿಬಿಎಸ್‌ಇ ಪರೀಕ್ಷಾ ಮಾದರಿಗಿಂತ ಗುಣಾತ್ಮಕತೆಯ ದೃಷ್ಟಿಯಿಂದ ಉನ್ನತವಾದ ನಮ್ಮ ಪರೀಕ್ಷಾ ಮಾದರಿಯೇ ಉತ್ತಮ ಮಾದರಿಯಲ್ಲವೇ? ಒಂದು ವೇಳೆ ಸಿಬಿಎಸ್‌ಇ ಮಾದರಿಯನ್ನೇ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯು ಒಪ್ಪಿಕೊಳ್ಳುವುದಾದರೆ ಈವರೆಗೆ 'ಕರ್ನಾಟಕ ಮಾದರಿ' ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಿರುವ ಮೂರು ಪರೀಕ್ಷೆಗಳನ್ನು ಕೈಬಿಟ್ಟು, ಎರಡು ಪರೀಕ್ಷೆಗಳನ್ನೇ ನಡೆಸಬೇಕಾಗುತ್ತದೆ

ಭಾಷಾ ಕಲಿಕೆಯಲ್ಲಿ ಭಿನ್ನತೆ

ಸಿಬಿಎಸ್‌ಇಯಲ್ಲಿ 8ನೇ ತರಗತಿಯವರೆಗೂ ಕಡ್ಡಾಯವಾಗಿ ಹಿಂದಿಯನ್ನು ಒಳಗೊಂಡಂತೆ ಮೂರು ಭಾಷಾ ವಿಷಯಗಳನ್ನು ಕಲಿಸಲಾಗುತ್ತದೆ. ಆದರೆ, 9 ಹಾಗೂ 10ನೇ ತರಗತಿಯಲ್ಲಿ ಎರಡು ಭಾಷಾ ವಿಷಯಗಳನ್ನು ಕಲಿಸಲಾಗುತ್ತದೆ. ಆದರೆ ನಮ್ಮಲ್ಲಿ 10ನೇ ತರಗತಿಯವರೆಗೂ ಮೂರು ಭಾಷಾ ವಿಷಯಗಳನ್ನು ಕಲಿಸುವ ಪದ್ಧತಿ ಇದೆ. ಒಟ್ಟಾರೆ, ಎರಡೂ ಪಠ್ಯ ವಿಷಯಗಳ ಮಾದರಿಯಲ್ಲಿ ಭಿನ್ನತೆ ಇರುವುದರಿಂದ ಸಿಬಿಎಸ್‌ಇ ಮಾದರಿ ಪರೀಕ್ಷಾ ಮಾದರಿಯನ್ನೇ ರಾಜ್ಯದಲ್ಲಿಯೂ ಅಳವಡಿಸಿಕೊಳ್ಳುವುದರ ಕುರಿತು ಮರುಚಿಂತನೆ ನಡೆಸುವ ಅಗತ್ಯವಿದೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

12 ಜುಲೈ 2025 ಶನಿವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಆಷಾಢ ಕೃಷ್ಣ ದ್ವಿತೀಯ ಗಂ 25-47 **ನಕ್ಷತ್ರ:** ಉತ್ತರಾಷಾಢ ಗಂ. 06-36 **ಯೋಗ:** ವಿಷ್ಕಂಭ ಗಂ. 19-32 ಕರಣ: ತೈತಿಲ ಗಂ. 14-01, ಮಿಥುನ ಮಾಸದ 28 ನೇ ದಿನ. ಮಳೆ ನಕ್ಷತ್ರ : ಪುನರ್ವಸು 2 ನೇ ಪಾದ. **ರಾಹುಕಾಲ :** ಬೆಳಿಗ್ಗೆ 09-00– 10-30. ಸೂರ್ಯೋದಯ : 06-14 ಸೂರ್ಯಾಸ್ತ : 06-58, **ಮುಸ್ಲಿಂ ದಿನಾಂಕ :** 16 ಮೊಹರಮ್, **ಅದೃಷ್ಟ ಸಂಖ್ಯೆ :** 6, 8

ಮೇಷ: ತಪ್ಪುಗಳಿಗೆ ಕಾರಣವನ್ನು ಹುಡುಕುವುದು ಹಾಗೂ ಇತರರಿಗೆ ಕಾರಣವನ್ನು ಕೊಡುವುದರಲ್ಲಿ ಹುರುಳಿಲ್ಲ. ಜಯಕ್ಕೆ ಬೇಕಾದ ಮಾರ್ಗವನ್ನು ಹುಡುಕಿ. ಪ್ರವೃತ್ತಿಯಲ್ಲಿ ಆಸಕ್ತಿ ಹೆಚ್ಚುವುದರಿಂದ ಸಮಯ ಸಾಲದು

ವೃಷಭ: ಅಧಿಕಾರಿಗಳ ಮುಖಸ್ತುತಿಯಿಂದ ಕೆಲಸಗಳು ಆಗುತ್ತದೆ ಎಂದು ಭಾವಿಸಿದ್ದರೆ ಯೋಚನೆ ಕೈಬಿಡಿ. ಪರಿಶ್ರಮವೇ ಅಗತ್ಯ. ಉನ್ನತ ವ್ಯಾಸಂಗಕ್ಕಾಗಿ ಶ್ರಮವಹಿಸುತ್ತಿರುವ ವೈದ್ಯಕೀಯ ವಿದ್ಯಾರ್ಥಿಗಳಿಗೆ ಶುಭವಾಗಲಿದೆ.

ಮಿಥುನ: ಉಡುಗೆ ತೊಡುಗೆಗಳ ಮೇಲೆ ಗಮನ ಕೊಡುವುದು ಒಳ್ಳೆಯದು. ಗೌರವವನ್ನು ಹೆಚ್ಚಿಸಲಿದೆ. ದೇಹದಲ್ಲಾಗುವ ಅನಿರೀಕ್ಷಿತ ಬದಲಾವಣೆಗಳು ಆತಂಕಗಳಿಗೆ ಕಾರಣವಾಗುವಂಥ ಸಾಧ್ಯತೆ ಇದೆ.

ಕರ್ಕಾಟಕ: ಮಕ್ಕಳನ್ನು ಅವಲಂಬನೆ ಮಾಡಿಕೊಂಡು ಜೀವನ ನಡೆಸು-ತ್ತಿರುವವರಿಗೆ ಸಸಾರದ ಮಾತುಗಳನ್ನು ಕೇಳಿ ಮನಸ್ಸಿಗೆ ನೋವಾಗಲಿದೆ. ಜೀರ್ಣಕ್ರಿಯೆಗೆ ಸಂಬಂಧಿಸಿದಂತೆ ಅನಾರೋಗ್ಯ ಎದುರಾಗಬಹುದು.

ಸಿಂಹ: ಪ್ರತಿದಿನವೂ ಭಕ್ತಿಯಿಂದ, ಶ್ರದ್ಧೆಯಿಂದ ದೇವರನ್ನು ಸ್ತುತಿಸುವುದರಿಂದ ಸಮಸ್ಯೆಗಳು ಸರಾಗವಾಗಿ ನಿವಾರಣೆಯಾಗಲಿವೆ. ಸಂತಸ ತರುವ ಸಂಗತಿಗಳಿಗೆ ಕೊರತೆ ಇಲ್ಲ.

ಕನ್ಯಾ: ಸ್ವಾಗತಕಾರರಿಗೆ ಮಾಡುವ ಅತಿಥಿ ಸತ್ಕಾರದ ಮೇಲೆ ಮುಂದಿನ ಆಗುಹೋಗುಗಳು ನಿಂತಿವೆ. ಹೊಸ ವಾತಾವರಣಕ್ಕೆ ಬಂದವರಿಗೆ ಹೊಂದಾಣಿಕೆ ಆದ ಬಗ್ಗೆ ಸಂತೋಷವಾಗಲಿದೆ.

ತುಲಾ: ನಿಜ ಮಾರ್ಗದಿಂದ ಕಾರ್ಯಪ್ರವೃತ್ತರಾದಲ್ಲಿ ಅಭಿವೃದ್ಧಿ ಅನುಭವಕ್ಕೆ ಬರಲಿದೆ. ಕವಿತೆ–ಕಥೆಗಳನ್ನು ಬರೆಯುವ ಉದಯೋನ್ಮುಖ ಪ್ರತಿಭೆಗಳಿಗೆ ಪ್ರೋತ್ಸಾಹ ದೊರೆಯಲಿದೆ. ಮಕ್ಕಳ ಮೇಲೆ ಕಾಳಜಿ ಇರಲಿ.

ವೃಶ್ಚಿಕ: ಉತ್ತರ ಸಿಗದ ನಿಮ್ಮ ಹಲವಾರು ಪ್ರಶ್ನೆಗಳಿಗೆ ಸದ್ಪುರುಷನ ಜತೆಯ ಸಂಭಾಷಣೆಯಿಂದ ಉತ್ತರ ದೊರೆಯಲಿದೆ. ತಾಯಿಗೆ ಕಣ್ಣಿನ ದೃಷ್ಟಿಯ ದೋಷ ಕಾಣಿಸಿಕೊಂಡಲ್ಲಿ ತಕ್ಷಣದಲ್ಲಿ ವೈದ್ಯರನ್ನು ಭೇಟಿಮಾಡಿ.

ಧನು: ಚರ್ಮ ಸಂಬಂಧ ಅಲರ್ಜಿಯನ್ನು ಹಲವು ದಿನದಿಂದ ಅನುಭವಿಸು-ತ್ತಿರುವ ನಿಮಗೆ ಅದರ ತೀವ್ರತೆ ಕಡಿಮೆಯಾದಂತೆ ಆಗುವುದು. ಇಷ್ಟ ಮಿತ್ರರ ಅಥವಾ ಬಂಧುಗಳ ಭೇಟಿಯಿಂದ ಕಳವಳ ಉಂಟಾಗುತ್ತದೆ.

ಮಕರ: ಕುಟುಂಬದಲ್ಲಿನ ನೂತನ ಶಿಶುವಿನ ಜನನ ಕುಟುಂಬದ ಸರ್ವರ ಸಂತೋಷಕ್ಕೆ ಕಾರಣವಾಗುತ್ತದೆ. ಊಟದ ಸಮಯದಲ್ಲಿ ಯಾರೊಂದಿಗೂ ಮಾತು ಬೆಳೆಸಬೇಡಿ. ಇಷ್ಟದ ಭೋಜನವನ್ನು ಮಾಡುವಿರಿ.

ಕುಂಭ: ತಂದೆ ತಾಯಿಯ ಜೊತೆ ಆಸ್ತಿ ಪಾಲುದಾರಿಕೆಯ ವಿಷಯವಾಗಿ ಮಾತನಾಡುವುದಿದ್ದಲ್ಲಿ ಮಾತಿನ ಮೇಲೆ ಹಿಡಿತವಿರಲಿ. ಬರಲು ಬಾಕಿ ಇದ್ದ ಹಳೇ ಸಾಲಗಳು ತೀರಿಸುವ ಬಗ್ಗೆ ಮಾತು ಕೇಳುವಿರಿ.

ಮೀನ: ಮಕ್ಕಳಲ್ಲಿ ವಿದ್ಯೆಯ ಹೊರತಾಗಿ ಅವರಲ್ಲಿರುವ ಇತರ ಆಸಕ್ತಿಕರ ಕ್ಷೇತ್ರಗಳಲ್ಲಿ ಭಾಗವಹಿಸಲು ಪ್ರೋತ್ಸಾಹಿಸಿ. ಆರೋಗ್ಯದ ಬಗೆಗಿನ ಕಾಳಜಿ ಮಾಡಿ. ಪಾರ್ವತಿಯನ್ನು ಭಜಿಸಿ.

ಪದಬಂಧ 6101


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಅನುಸರಿಸಿ ನಡೆಯುವವನು (4)
3.ನೇರವಲ್ಲದ ಸೊಂಡಿಲುಳ್ಳ ಗಣಪ (4)
5.ವಾರಾಂತ್ಯಕ್ಕೆ ಬಂದಿಳಿದ ಆರೋಹಿ (3)
6.ನೀರಿನಲ್ಲಿಯೇ ಹುಟ್ಟಿರುವುದು (3)
8.ಸ್ವ ದೇಶದಲ್ಲಿ ಉತ್ಪತ್ತಿಯಾದುದು (3)
9.ಮಾನಿನಿಯ ಮೇಲೇ ಈ ಶಂಕೆ! (3)
10.ಗುಟ್ಟನ್ನು ತಿಳಿದವನು (3)
11.ತಲೆಗೂದಲಿನಿಂದಾದ ಕಸ (3)
12.ತನಯ ಹೀಗೆ ತಲ್ಲೀನ! (3)
14.ಆಸ್ತಿಯಲ್ಲಿ ಭಾಗ ಪಡೆಯುವವ ಜ್ಞಾತಿ (3)
16.ನಿಧಾನವಾಗಿ ಚಲಿಸುತ್ತಾ ಕಾಟ ನೀಡುವ ಗ್ರಹ (4)
17.ಉಗುರಿನಿಂದಾದ ಪೆಟ್ಟು (4)

ಮೇಲಿಂದ ಕೆಳಕ್ಕೆ

1.ಒಪ್ಪವಾಗಿ ಬಂದಿರುವ ಕಿರಿ ಸಹೋದರ (3)
2.ದೇಹದ ಸಪ್ತಧಾತುಗಳಲ್ಲಿ ಒಂದಾಗಿರುವ ದ್ರವ (2)
3.ಅನುಗ್ರಹ ಪಡೆದಿರುವ ಮದುವೆ ಗಂಡು (2)
4.ಅಗಲ ಬಾಯುಳ್ಳ ಪಾತ್ರೆ (3)
7.ಮಂದಿಯಿಂದ ಕಿಕ್ಕಿರಿದು ತುಂಬಿದುದು (5)
8.ಹುಟ್ಟಿಗೆ ಕಾರಣನಾದ ತಂದೆ (5)
11.ಗೋಪುರಕ್ಕೆ ಹಾಕುವ ಶಿಖರ (3)
13.ನಹುಷನ ಮಗ ಹಾಗೂ ದೇವಯಾನಿಯ ಪತಿ (3)
14.ಹರಿದಾರಿಯಲ್ಲಿ ಉಂಟಾದ ತೃಷೆ (2)
15.ಇಪ್ಪತ್ತು ನಾಲ್ಕು ಗಂಟೆಗಳ ಕಾಲ (2)



6100ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಬತ್ತಳಿಕೆ 3.ಮಧುಕರ 5.ರಪಣ 7.ಮಂದಿ 8.ಗತ 11.ಸಮ 13.ಚೌತ 14.ಮುಕ್ತಕ 16.ಸರಕಾರ 17.ಡಕಾಯಿತ

ಮೇಲಿಂದ ಕೆಳಕ್ಕೆ:
1.ಬಹಿರಂಗ 2.ಕೆರ 3.ಮಣ 4.ರಸೀದಿ 6.ಪವಾಡ 7.ಮಂದಹಾಸ 9.ತರುಪತ 10.ಸಂಯುಕ್ತ 12.ಮಡಿವಂತ 13.ಚೌರಸ 14.ಮುರ 15.ಕಡ

ಸುಡೊಕು 6485

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.


	6		8				1	
2							7	
		4	9		2	8		6
3		6				5		9
	7		3	2	4		8	
		1				3		7
4			6		1		9	
	3				5			8
6		8	2				5	4

6484 ಸುಡೊಕು

3	9	8	2	7	5	4	6	1
2	7	6	4	3	1	8	9	5
1	4	5	6	8	9	7	3	2
4	6	3	9	1	7	5	2	8
9	5	2	3	4	8	1	7	6
8	1	7	5	2	6	3	4	9
5	3	4	8	6	2	9	1	7
7	2	9	1	5	4	6	8	3
6	8	1	7	9	3	2	5	4

ವಿನಿಮಯ ದರ: ಡಾಲರ್ 85.80 | ಪೌಂಡ್ 116.24 | ಯುರೊ 100.28 | ಯೆನ್ (100ಕ್ಕೆ) 58

ಷೇರುಪೇಟೆ ವಹಿವಾಟು



ಎನ್ಎಸ್ಇ ನಿಫ್ಟಿ

ಹಿಂದಿನ ಅಂತ್ಯ: 25,355
ಇಂದಿನ ಅಂತ್ಯ: 25,149
ದಿನದ ಗರಿಷ್ಠ: 25,129
205

ಮೊಟ್ಟೆ ಧಾರಣೆ (ಎನ್ಇಸಿಸಿ)

ಬೆಂಗಳೂರು: 100 ಕ್ಕೆ ₹580; 12 ಕ್ಕೆ ₹80
ಮೈಸೂರು: 100 ಕ್ಕೆ ₹590

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ ₹30000-30000
ತುಮಕೂರು ₹24100-29100

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ) ₹244-617
ದ್ವಿತಳಿ (ಬಿ.ವಿ) ₹341-711

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್ಎಸ್ಎಸ್-4 ₹202
ಆರ್ಎಸ್ಎಸ್-5 ₹196
ಗುಡ್ ಲಾಟ್ ₹183

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್) ₹1430 (1425)
ಸೋಯಾ (ರಿಫೈನ್ಡ್) ₹1200 (1200)
ಸೂರ್ಯಕಾಂತಿ (ರಿಫೈನ್ಡ್) ₹1350 (1350)
ಪಾಮೋಲಿನ್ ₹1185 (1180)

ಅಡಿಕೆ ಧಾರಣೆ

ಮಾರುಕಟ್ಟೆ	ತಳಿ	ದರ
ಕುಮಟಾ	ಚಾಲಿ	39089-42491
	ಚಿಪ್ಪು	23999-28969
	ಕೋಕ	7099-22229
	ಫ್ಯಾಕ್ಟರಿ	6099-25189
	ಹೊಸಚಾಲಿ	35212-41569
ಪುತ್ತೂರು	ಕೋಕ	20000-27500
	ಹೊಸತು	26000-47500
	ಹಳತು	37500-52500
ಶಿವಮೊಗ್ಗ	ಬೆಟ್ಟೆ	50099-60009
	ಗೊರಬಲು	21011-30259
	ರಾಶಿ	44158-57009
	ಸರಕು	57619-76340
ಸಿದ್ದಾಪುರ	ಬಿಳಿಗೋಟು	24809-32900
	ಚಾಲಿ	33899-40550
	ಕೋಕ	16109-27900
	ಕೆಂಪುಗೋಟು	22119-22619
	ರಾಶಿ	41699-47099
	ತಟ್ಟಿಬೆಟ್ಟೆ	27099-30699
ಶಿರಸಿ	ಬೆಟ್ಟೆ	29092-37909
	ಬಿಳಿಗೋಟು	22399-32613
	ಚಾಲಿ	35618-42588
	ಕೆಂಪುಗೋಟು	15599-22299
	ರಾಶಿ	42100-47629
ಯಲ್ಲಾಪುರ	ಬಿಳಿಗೋಟು	18899-31296
	ಚಾಲಿ	31609-42099
	ಕೋಕ	8709-17899
	ಕೆಂಪುಗೋಟು	16891-24899
	ರಾಶಿ	39600-52299
	ತಟ್ಟಿಬೆಟ್ಟೆ	28306-37199

‘₹1,345 ಕೋಟಿ ವೆಚ್ಚದ ಯೋಜನೆ ಪ್ರಸ್ತಾವ’

ಭಾರತದಲ್ಲಿಯೇ ವಿರಳ ಲೋಹ ಉತ್ಪಾದನೆಗೆ ಉತ್ತೇಜನ ನೀಡುವ ಉದ್ದೇಶ: ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ

ನವದೆಹಲಿ (ಪಿಟಿಐ): ವಿರಳ ಲೋಹಗಳನ್ನು (ರೇರ್ ಅರ್ಥ್ ಮ್ಯಾಗ್ನೆಟ್) ದೇಶದಲ್ಲಿಯೇ ಉತ್ಪಾದಿಸುವುದನ್ನು ಉತ್ತೇಜಿಸುವುದಕ್ಕಾಗಿ ಸಹಾಯಧನ ನೀಡುವ ₹1,345 ಕೋಟಿ ವೆಚ್ಚದ ಯೋಜನೆಯನ್ನು ರೂಪಿಸಲಾಗುತ್ತಿದೆ. ಇದಕ್ಕಾಗಿ ವಿವಿಧ ಸಚಿವಾಲಯಗಳ ನಡುವೆ ಸಮಾಲೋಚನೆಗಳು ನಡೆದಿವೆ ಎಂದು ಕೇಂದ್ರ ಬೃಹತ್ ಕೈಗಾರಿಕೆಗಳ ಸಚಿವ ಎಚ್‌.ಡಿ.ಕುಮಾರಸ್ವಾಮಿ ಶುಕ್ರವಾರ ಹೇಳಿದ್ದಾರೆ.



ಎಚ್‌.ಡಿ. ಕುಮಾರಸ್ವಾಮಿ

ಅದಿರಿನ ಗಣಿಗಾರಿಕೆ, ಸಂಸ್ಕರಣೆಯಿಂದ ಹಿಡಿದು ಪೂರ್ಣ ಪ್ರಮಾಣದ ವಿರಳ ಲೋಹ ಸಿದ್ಧಗೊಳ್ಳುವವರೆಗಿನ ಕಾರ್ಯಕ್ಕೆ ಈ ಯೋಜನೆಯಡಿ ನೆರವು ನೀಡಲಾಗುತ್ತದೆ.

ವಿರಳ ಲೋಹಗಳ ರಫ್ತಿನ ಮೇಲೆ ಚೀನಾ ಈಚೆಗೆ ನಿರ್ಬಂಧ ವಿಧಿಸಿರುವ ಕಾರಣದಿಂದಾಗಿ ವಾಹನ ಮತ್ತು ಸೆಮಿಕಂಡಕ್ಟರ್ ಚಿಪ್‌ಗಳ ತಯಾರಿಕೆಯ ಮೇಲೆ ಕೆಟ್ಟ ಪರಿಣಾಮ ಉಂಟಾಗಿದೆ. ಈ ಕಾರಣಕ್ಕೆ ಈ ಯೋಜನೆ ಜಾರಿಗೆ ತರಲು ಸರ್ಕಾರ ಉದ್ದೇಶಿಸಿದೆ.

‘ಇಬ್ಬರು ಉತ್ಪಾದಕರನ್ನು ಈ ಪ್ರಸ್ತಾವ ಒಳಗೊಂಡಿದೆ. ವಿವಿಧ ಸಚಿವಾಲಯಗಳ ನಡುವಿನ ಸಮಾಲೋಚನೆಗಳು ಪೂರ್ಣಗೊಂಡ ಬಳಿಕ, ಪ್ರಸ್ತಾವವನ್ನು ಅನುಮೋದನೆಗಾಗಿ ಕೇಂದ್ರ ಸಚಿವ ಸಂಪುಟಕ್ಕೆ ಕಳುಹಿಸಲಾಗುವುದು’ ಎಂದು ಎಚ್‌.ಡಿ.ಕುಮಾರಸ್ವಾಮಿ ಇಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಅದಿರುಗಳನ್ನು ಸಂಸ್ಕರಿಸಿ ವಿರಳ ಲೋಹಗಳನ್ನಾಗಿ ಪರಿವರ್ತಿಸುವ ಸಾಮರ್ಥ್ಯ ಹೊಂದಿರುವ ಎರಡು ಕಂಪನಿಗಳಿಗೆ ಈ ಯೋಜನೆಯ ವಿವರಗಳನ್ನು ಕಳುಹಿಸಲಾಗಿದೆ’ ಎಂದು ಸುದ್ದಿಗೋಷ್ಠಿಯಲ್ಲಿ ಇದ್ದ ಬೃಹತ್ ಕೈಗಾರಿಕೆಗಳ ಸಚಿವಾಲಯ ಕಾರ್ಯದರ್ಶಿ ಕಮ್ರಾನ್ ರಿಜ್ವಿ ಹೇಳಿದರು.

‘ನಮಗೆ ವಿರಳ ಲೋಹಗಳ ಅಗತ್ಯವಿದೆ. ಅವುಗಳನ್ನು ಯಾರು ಪೂರೈಸುತ್ತಾರೋ ಅವರಿಗೆ ಈ ಯೋಜನೆಯಡಿ ಪ್ರೋತ್ಸಾಹಕ ಸೌಲಭ್ಯಗಳನ್ನು ನೀಡುತ್ತೇವೆ. ಮೊದಲ ಹಂತದಲ್ಲಿ ₹1,345 ಕೋಟಿ ವೆಚ್ಚದ ಯೋಜನೆ ರೂಪಿಸಲಾಗಿದ್ದು, ಇಬ್ಬರು ಉತ್ಪಾದಕರನ್ನು ಈ ಪ್ರಸ್ತಾವ ಒಳಗೊಂಡಿದೆ’ ಎಂದು ರಿಜ್ವಿ ಹೇಳಿದರು.

ಐಆರ್‌ಇಎಲ್ (ಇಂಡಿಯನ್ ರೇರ್ ಅರ್ಥ್ಸ್ ಲಿಮಿಟೆಡ್) ಭಾರತದ ಸರ್ಕಾರಿ ಸ್ವಾಮ್ಯದ ವಿರಳ ಲೋಹಗಳ ಗಣಿಗಾರಿಕಾ ಸಂಸ್ಥೆ. ದೇಶೀಯ ಬಳಕೆಗೆ ವಿರಳ ಲೋಹಗಳನ್ನು ಪೂರೈಸುವ ಸಲುವಾಗಿ ಅಣುಶಕ್ತಿ ಕಾಯ್ದೆಯ ಅನುಸಾರ ಈ ಸಂಸ್ಥೆಯನ್ನು 1950ರಲ್ಲಿ ಸ್ಥಾಪಿಸಲಾಗಿದೆ.

ಎಲೆಕ್ಟ್ರಿಕ್ ಟ್ರಕ್ ಖರೀದಿಗೆ ಪ್ರೋತ್ಸಾಹ: ‘ಪಿಎಂ ಇ–ಡ್ರೈವ್’ಗೆ ಚಾಲನೆ

ಎಲೆಕ್ಟ್ರಿಕ್ ಟ್ರಕ್ ಖರೀದಿಸುವವರಿಗೆ ಗರಿಷ್ಠ ₹9.6 ಲಕ್ಷ ವರೆಗೆ ಪ್ರೋತ್ಸಾಹಧನ ನೀಡುವ ‘ಪಿಎಂ ಇ–ಡ್ರೈವ್’ ಯೋಜನೆಗೆ ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ ಶುಕ್ರವಾರ ಚಾಲನೆ ನೀಡಿದರು.

ಎಲೆಕ್ಟ್ರಿಕ್ ವಾಹನಗಳ ಖರೀದಿ ಪ್ರೋತ್ಸಾಹಿಸುವ ಸಂಬಂಧ ₹10,900 ಕೋಟಿ ಗಾತ್ರದ ಯೋಜನೆಯನ್ನು ಕೇಂದ್ರ ಸರ್ಕಾರ ರೂಪಿಸಿದೆ. ಈ ಪೈಕಿ, ಎಲೆಕ್ಟ್ರಿಕ್ ಟ್ರಕ್‌ಗಳ ಖರೀದಿಗೆ ಪ್ರೋತ್ಸಾಹ ನೀಡುವುದಕ್ಕಾಗಿ ₹500 ಕೋಟಿ ತೆಗೆದಿರಿಸಲಾಗಿದೆ. ಒಟ್ಟು 5,600 ಎಲೆಕ್ಟ್ರಿಕ್ ಟ್ರಕ್‌ಗಳ ಖರೀದಿಗೆ ಈ ಯೋಜನೆಯಡಿ ನೆರವು ನೀಡಲಾಗುತ್ತಿದ್ದು, ಬಂದರು, ಸರಕು ಸಾಗಣೆ, ಸಿಮೆಂಟ್ ಹಾಗೂ ಉಕ್ಕು ಕ್ಷೇತ್ರಗಳ ಉದ್ದಿಮೆಗಳಿಗೆ ಪ್ರಯೋಜನವಾಗಲಿದೆ.

‘ಮೇಕ್ ಇನ್ ಇಂಡಿಯಾಕ್ಕೆ ಉತ್ತೇಜನ ನೀಡಲು, ಸ್ಥಳೀಯವಾಗಿ ಉತ್ಪಾದನೆ ಹೆಚ್ಚಿಸುವುದು, ಸಾಗಣೆ ವೆಚ್ಚ ತಗ್ಗಿಸುವುದು, ಎಲೆಕ್ಟ್ರಿಕ್ ವಾಹನ ಮತ್ತು ಬ್ಯಾಟರಿ ತಯಾರಿಕೆ ಕ್ಷೇತ್ರದಲ್ಲಿ ಉದ್ಯೋಗ ಸೃಷ್ಟಿಸಲು ಪಿಎಂ ಇ–ಡ್ರೈವ್ ಸಹಕಾರಿಯಾಗಲಿದೆ’ ಎಂದು ಕುಮಾರಸ್ವಾಮಿ ಅವರು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

15ರಂದು ಮುಂಬೈನಲ್ಲಿ ಟೆಸ್ಲಾ ಮಳಿಗೆ ಆರಂಭ



ಬೆಂಗಳೂರು/ನವದೆಹಲಿ (ರಾಯಿಟರ್ಸ್/ಪಿಟಿಐ): ಅಮೆರಿಕದ ವಿದ್ಯುತ್‌ಚಾಲಿತ ವಾಹನಗಳ ತಯಾರಿಕಾ ಕಂಪನಿ ಟೆಸ್ಲಾ, ಮುಂದಿನ ವಾರ ಮುಂಬೈನಲ್ಲಿ ತನ್ನ ಮೊದಲ ಮಳಿಗೆಯನ್ನು ಆರಂಭಿಸಲಿದೆ.

ಜುಲೈ 15ರಂದು ಮುಂಬೈನ ಬಾಂದ್ರಾ ಕುರ್ಲಾ ಕಾಂಪ್ಲೆಕ್ಸ್‌ನಲ್ಲಿ ಮಳಿಗೆಯನ್ನು ಉದ್ಘಾಟಿಸಲಾಗುವುದು. ಇದು ಭಾರತದಲ್ಲಿ ಆರಂಭಿಸುತ್ತಿರುವ ಮೊದಲ ಮಳಿಗೆ ಎಂದು ಟೆಸ್ಲಾ ಕಂಪನಿ ತಿಳಿಸಿದೆ.

₹8.58 ಕೋಟಿ (1 ಮಿಲಿಯನ್ ಡಾಲರ್) ಮೌಲ್ಯದ ಕಾರು ಮತ್ತು ಸರಕುಗಳನ್ನು ಆಮದು ಮಾಡಿಕೊಳ್ಳಲಾಗಿದೆ. ಈ ಮೂಲಕ ಜಗತ್ತಿನ ಮೂರನೇ ಅತಿದೊಡ್ಡ ಕಾರಿನ ಮಾರುಕಟ್ಟೆಯನ್ನು ಪ್ರವೇಶಿಸಲಾಗುವುದು ಎಂದು ತಿಳಿಸಿದೆ.

ಕಾರುಗಳ ಆಮದಿನಿಂದ ಭಾರತದಲ್ಲಿ ಟೆಸ್ಲಾ, ಅಂದಾಜು ಶೇ 70ರಷ್ಟು ಆಮದು ಮತ್ತು ಇತರೆ ಸುಂಕ ಪಾವತಿಸಬೇಕಾಗುತ್ತದೆ.

ಕಳೆದ ತಿಂಗಳು ಟೆಸ್ಲಾ ಮುಂಬೈನ ಲೋಧಾ ಲಾಜಿಸ್ಟಿಕ್ಸ್ ಪಾರ್ಕ್‌ನಲ್ಲಿ 24,565 ಚದರ ಅಡಿ ಸ್ಥಳವನ್ನು ಐದು ವರ್ಷಗಳಿಗೆ ಗುತ್ತಿಗೆ ಪಡೆದುಕೊಂಡಿತ್ತು.

ಕೇಂದ್ರ ಸರ್ಕಾರಕ್ಕೆ ಎಣ್ಣೆ ಗಿರಣಿ ಮಾಲೀಕರ ಸಂಘ ಒತ್ತಾಯ

ಕೊಬ್ಬರಿ ಎಣ್ಣೆ ಬೆಲೆ ಏರಿಕೆ ನಿಯಂತ್ರಿಸಿ


ಮುಂಬೈ ಧಾರಣೆ (ಶೇಂಗಾ) 11-07-2025

ಜಾವಾ 70/80(ಹೊಸ)	9700-9800
ಜಾವಾ 80/90(ಹೊಸ)	9200-9300
ದಪ್ಪ ಮಧ್ಯಪ್ರದೇಶ (ಹೊಸ)	7700-7800
ದಪ್ಪ ಗುಜರಾತ್ (ಹೊಸ)	8000-8100
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1440 (1435)
ಒಂದು ವಾರದ ಡೆಲಿವರಿ	1435 (1430)
ಪಾಮ್ ವಾರದ ಡೆಲಿವರಿ	1183 (1178)
ಸೂರ್ಯಕಾಂತಿ ಎಣ್ಣೆ ಕಚ್ಚಾ	1260 (1260)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	97,200 (96,550)
ಬೆಳ್ಳಿ ಕೆ.ಜಿಗೆ	1,10,300 (1,08,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ನವದೆಹಲಿ (ಪಿಟಿಐ): ಕೊಬ್ಬರಿ ಎಣ್ಣೆಯ ಬೆಲೆ ಏರಿಕೆಯನ್ನು ನಿಯಂತ್ರಿಸಲು ಕೇಂದ್ರ ಸರ್ಕಾರವು ಕೊಬ್ಬರಿ ಎಣ್ಣೆ (ತೆಂಗಿನೆಣ್ಣೆ) ಮತ್ತು ಕೊಬ್ಬರಿ ಆಮದಿಗೆ ಅನುಮತಿ ನೀಡಬೇಕು ಎಂದು ಭಾರತದ ಎಣ್ಣೆ ಗಿರಣಿ ಮಾಲೀಕರ ಸಂಘ (ಎಸ್‌ಇಎ) ಶುಕ್ರವಾರ ಒತ್ತಾಯಿಸಿದೆ.

ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಕೊಬ್ಬರಿ ಎಣ್ಣೆ ಬೆಲೆಯು ಮೂರು ಪಟ್ಟು ಹೆಚ್ಚಳವಾಗಿದೆ. ಹೀಗಾಗಿ ಗ್ರಾಹಕರ ಹಿತದೃಷ್ಟಿಯಿಂದ 6 ತಿಂಗಳಿನಿಂದ 12 ತಿಂಗಳವರೆಗೆ ಇದರ ಆಮದಿಗೆ ತಕ್ಷಣವೇ ಅನುಮತಿ ನೀಡಬೇಕು ಎಂದು ಹೇಳಿದೆ.



ಕಳೆದ ವರ್ಷ ಸಗಟು ಮಾರುಕಟ್ಟೆಯಲ್ಲಿ ಕೆ.ಜಿ ಕೊಬ್ಬರಿ ಎಣ್ಣೆ ದರ ಸುಮಾರು ₹130 ಇತ್ತು. ಅದು ಪ್ರಸ್ತುತ ₹400 ದಾಟಿದೆ. ಇದರಿಂದ ಗ್ರಾಹಕರು ತಾಳೆ ಎಣ್ಣೆ ಮತ್ತು ಸೂರ್ಯಕಾಂತಿ ಎಣ್ಣೆ ಖರೀದಿಸುವಂತಾಗಿದೆ.

ಕೀಟಗಳ ದಾಳಿಯಿಂದಾಗಿ ಕಳೆದ ಎರಡು ವರ್ಷಗಳಿಂದ ಕೊಬ್ಬರಿ ಉತ್ಪಾದನೆಯಲ್ಲಿ ಶೇ 40ರಷ್ಟು ಇಳಿಕೆಯಾಗಿದೆ. ಇದೇ ರೀತಿ ದರ ಹೆಚ್ಚಳವಾದರೆ ಕೊಬ್ಬರಿ ಎಣ್ಣೆ ಖರೀದಿಯಿಂದ ಗ್ರಾಹಕರು ಹಿಂದೆ ಸರಿದು ಇತರೆ ಅಡುಗೆ ಎಣ್ಣೆ ಖರೀದಿಗೆ ಮುಂದಾಗಲಿದ್ದಾರೆ. ಇದು ಈ ಎಣ್ಣೆಗಳ ಬೆಲೆಯ ಮೇಲೆ ಪರಿಣಾಮ ಬೀರಲಿದೆ ಮತ್ತು ಆಮದು ಅವಲಂಬನೆಯನ್ನು ಹೆಚ್ಚಿಸಲಿದೆ ಎಂದು ತಿಳಿಸಿದೆ.

ಕೊಬ್ಬರಿ ಮತ್ತು ಕೊಬ್ಬರಿ ಎಣ್ಣೆಯ ಆಮದಿನಿಂದ ಬೆಳೆಗಾರರ ಮೇಲೆ ಪರಿಣಾಮ ಬೀರುವುದಿಲ್ಲ. ಬೆಲೆಯನ್ನು ಸ್ಥಿರಗೊಳಿಸುತ್ತದೆ ಎಂದು ಹೇಳಿದೆ.

ಕೇರಳವು ಕೊಬ್ಬರಿ ಎಣ್ಣೆಯ ಪ್ರಮುಖ ಮಾರುಕಟ್ಟೆಯಾಗಿದ್ದು, ಬೆಲೆ ಏರಿಕೆಯಿಂದ ಕೊಬ್ಬರಿ ಎಣ್ಣೆಯಿಂದ ದೂರ ಸರಿಯುತ್ತಿದೆ. ದರ ಹೆಚ್ಚಳದಿಂದ ಕಲಬೆರಕೆ ಹೆಚ್ಚುತ್ತಿದೆ ಎಂದು ಹೇಳಿದೆ.

ಮುಖ್ಯಾಂಶಗಳು

- ಒಂದೇ ವರ್ಷದಲ್ಲಿ ಮೂರು ಪಟ್ಟು ಹೆಚ್ಚಿದ ಕೊಬ್ಬರಿ ಎಣ್ಣೆ ಧಾರಣೆ
- ಕೀಟಗಳ ದಾಳಿಯಿಂದ ಉತ್ಪಾದನೆಯಲ್ಲಿ ಶೇ 40ರಷ್ಟು ಇಳಿಕೆ
- ಬೆಲೆ ಏರಿಕೆ ನಿಯಂತ್ರಿಸಲು ಆಮದಿಗೆ ಅನುಮತಿ ನೀಡಲು ಒತ್ತಾಯ

ಕೊಬ್ಬರಿ ಎಣ್ಣೆ ಲೀಟರ್‌ಗೆ ₹500

ಪ್ರಜಾವಾಣಿ ವಾರ್ತೆ

ಮಂಗಳೂರು: ಮಂಗಳೂರು ಮಾರುಕಟ್ಟೆಯಲ್ಲಿ ಕೊಬ್ಬರಿ ಎಣ್ಣೆ ದರ ಲೀಟರ್‌ಗೆ ₹420ರಿಂದ ₹500ರ ವರೆಗೆ ಇದೆ.

ಸ್ಟೀಲ್ ಗಾಣದಲ್ಲಿ ತಯಾರಿಸಿದ ಕೊಬ್ಬರಿ ಎಣ್ಣೆ ಲೀಟರ್‌ಗೆ ₹450 ಮತ್ತು ಮರದ ಗಾಣದಲ್ಲಿ ತಯಾರಿಸಿದ ಎಣ್ಣೆ ಲೀಟರ್‌ಗೆ ₹500 ದರವಿದೆ. ಕೊಬ್ಬರಿ ದರ ಹಿಂದೆ ಕೆ.ಜಿ.ಗೆ ₹95 ಇದ್ದಾಗ ಲೀಟರ್ ಎಣ್ಣೆ ₹220ಕ್ಕೆ ಸಿಗುತ್ತಿತ್ತು, ಈಗ ಕೊಬ್ಬರಿ ದರ ₹280 ಆಗಿದೆ ಎನ್ನುತ್ತಾರೆ ಗಾಣದ ಮಾಲೀಕರು.

‘ತೆಂಗಿನಕಾಯಿ ಕೆ.ಜಿ.ಗೆ ₹85 ತಲುಪಿದೆ. ಕೊಬ್ಬರಿ ದರ ₹250ರಿಂದ ₹300 ಆಗಿದೆ. ಕಾಯಿಯ ಚಿಪ್ಪಿಗೂ ಬೇಡಿಕೆ ಬಂದಿದೆ’ ಎನ್ನುತ್ತಾರೆ ಬೆಳೆಗಾರ ಉದಯ್ ಬೋಳಂತೂರು.

ಸೆನ್ಸೆಕ್ಸ್ 689 ಅಂಶ ಇಳಿಕೆ

ಮುಂಬೈ (ಪಿಟಿಐ): ಐ.ಟಿ, ಆಟೊ ಮತ್ತು ಇಂಧನ ವಲಯದ ಷೇರುಗಳು ಮಾರಾಟದ ಒತ್ತಡಕ್ಕೆ ಸಿಲುಕಿದ್ದರಿಂದ ದೇಶದ ಷೇರುಪೇಟೆ ಸೂಚ್ಯಂಕಗಳು ಶುಕ್ರವಾರದ ವಹಿವಾಟಿನಲ್ಲಿ ಇಳಿಕೆ ಕಂಡಿವೆ.

ಅಮೆರಿಕದ ಸುಂಕ ನೀತಿಯ ಬಗ್ಗೆ ಉಂಟಾಗಿರುವ ಅನಿಶ್ಚಿತತೆಯು ಸಹ ಸೂಚ್ಯಂಕಗಳ ಇಳಿಕೆಗೆ ಕಾರಣವಾಗಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 689 ಅಂಶ ಇಳಿಕೆಯಾಗಿ, 85,500ಕ್ಕೆ ವಹಿವಾಟು ಅಂತ್ಯಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 205 ಅಂಶ ಕಡಿಮೆಯಾಗಿ, 25,149ಕ್ಕೆ ಕೊನೆಗೊಂಡಿದೆ.

ಟಿಸಿಎಸ್, ಮಹೀಂದ್ರ ಆ್ಯಂಡ್ ಮಹೀಂದ್ರ, ಭಾರ್ತಿ ಏರ್‌ಟೆಲ್, ಟಾಟಾ ಮೋಟರ್ಸ್, ಎಚ್‌ಸಿಎಲ್ ಟೆಕ್, ಬಜಾಜ್ ಫೈನಾನ್ಸ್, ರಿಲಯನ್ಸ್ ಇಂಡಸ್ಟ್ರೀಸ್, ಟ್ರೆಂಟ್, ಇನ್ಫೊಸಿಸ್ ಮತ್ತು ಎಚ್‌ಡಿಎಫ್‌ಸಿ ಬ್ಯಾಂಕ್‌ನ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ. ಎಕ್ಸಿಸ್ ಬ್ಯಾಂಕ್, ಎನ್‌ಟಿಪಿಸಿ, ಎಟರ್ನಲ್ ಮತ್ತು ಎಸ್‌ಬಿಐ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ.

ಏಷ್ಯಾದ ಮಾರುಕಟ್ಟೆಯಲ್ಲಿ ದಕ್ಷಿಣ ಕೊರಿಯಾ ಮತ್ತು ಜಪಾನ್ ಸಕಾರಾತ್ಮಕ ವಹಿವಾಟು ಕಂಡಿವೆ. ಶಾಂಘೈ ಮತ್ತು ಹಾಂಗ್‌ಕಾಂಗ್ ಇಳಿಕೆ ಕಂಡಿವೆ.

ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರವು ಶೇ 0.31ರಷ್ಟು ಏರಿಕೆಯಾಗಿದೆ. ಪ್ರತೀ ಬ್ಯಾರೆಲ್ ದರವು 68.85 ಡಾಲರ್ ಆಗಿದೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಗುರುವಾರದ ವಹಿವಾಟಿನಲ್ಲಿ ₹221 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ರೂಪಾಯಿ ಮೌಲ್ಯ ಇಳಿಕೆ: ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಶುಕ್ರವಾರದ ವಹಿವಾಟಿನಲ್ಲಿ ಡಾಲರ್ ಎದುರು ರೂಪಾಯಿ ಮೌಲ್ಯ 10 ಪೈಸೆ ಇಳಿಕೆಯಾಗಿದೆ. ಪ್ರತೀ ಡಾಲರ್ ಮೌಲ್ಯ ₹85.80 ಆಗಿದೆ.

ಬೆಳ್ಳಿ ದರ ಕೆ.ಜಿಗೆ ₹1,500 ಏರಿಕೆ

ನವದೆಹಲಿ: ಇಲ್ಲಿನ ಚಿನಿವಾರ ಪೇಟೆಯಲ್ಲಿ ಶುಕ್ರವಾರ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆಯಲ್ಲಿ ಏರಿಕೆಯಾಗಿದೆ.

10 ಗ್ರಾಂ ಚಿನ್ನದ ದರವು (ಶೇ 99.9 ಪರಿಶುದ್ಧತೆ) ₹700 ಏರಿಕೆಯಾಗಿ, ₹99,370ರಂತೆ ಮಾರಾಟವಾಗಿದೆ. ಆಭರಣ ಚಿನ್ನದ (ಶೇ 99.5 ಪರಿಶುದ್ಧತೆ) ಬೆಲೆ ₹600 ಹೆಚ್ಚಳವಾಗಿ, ₹98,800 ಆಗಿದೆ.

ಬೆಳ್ಳಿ ದರವು ₹1,500 ಏರಿಕೆಯಾಗಿ, ₹1,05,500 ಆಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

‘ಫಾಕ್ಸ್‌ಕಾನ್ ಘಟಕದ ತಯಾರಿಕೆ ಮೇಲೆ ಸರ್ಕಾರ ಮೇಲ್ವಿಚಾರಣೆ’

ನವದೆಹಲಿ (ಪಿಟಿಐ): ದೇಶದ ಫಾಕ್ಸ್‌ಕಾನ್ ಘಟಕದ ಉತ್ಪಾದನೆಯ ಮೇಲೆ ಸರ್ಕಾರವು ಮೇಲ್ವಿಚಾರಣೆ ಮಾಡುತ್ತಿದೆ ಎಂದು ಸರ್ಕಾರದ ಮೂಲಗಳು ಶುಕ್ರವಾರ ತಿಳಿಸಿವೆ.

ಆ್ಯಪಲ್ ಕಂಪನಿಗೆ ಸ್ಮಾರ್ಟ್‌ಫೋನ್‌ಗಳನ್ನು ತಯಾರಿಸಿ ಕೊಡುವ ಫಾಕ್ಸ್‌ಕಾನ್ ಘಟಕದಲ್ಲಿ ಕೆಲಸ ಮಾಡುತ್ತಿದ್ದ ಚೀನಾದ ನೂರಾರು ತಂತ್ರಜ್ಞರು ಸ್ವದೇಶಕ್ಕೆ ಮರಳಿದ್ದಾರೆ. ಇದು ಐಫೋನ್ 17 ತಯಾರಿಕೆಗೆ ಅಡ್ಡಿಯಾಗಬಹುದು ಎನ್ನಲಾಗಿದೆ. ಆದರೆ, ಅಂದುಕೊಂಡಂತೆಯೇ ಉತ್ಪಾದನೆ ನಡೆಯಲಿದೆ ಎಂದು ಉದ್ಯಮದ ಮೂಲಗಳು ತಿಳಿಸಿವೆ.

ಸರ್ಕಾರವು ಪರಿಸ್ಥಿತಿಯ ಮೇಲ್ವಿಚಾರಣೆ ಮಾಡುತ್ತಿದೆ. ಆ್ಯಪಲ್ ಪರ್ಯಾಯಗಳನ್ನು ಹೊಂದಿದೆ. ಸಮಸ್ಯೆ ಆ್ಯಪಲ್ ಮತ್ತು ಫಾಕ್ಸ್‌ಕಾನ್‌ನ ವಿಷಯವಾಗಿದೆ ಎಂದು ತಿಳಿಸಿದೆ.

ಮೊಬೈಲ್ ಫೋನ್‌ಗಳ ತಯಾರಿಕೆಗೆ ಬಳಸುವ ಹೆಚ್ಚಿನ ಸರಕುಗಳು ಚೀನಾದಿಂದ ಆಮದಾಗುತ್ತವೆ. ಚೀನಾದ ತಂತ್ರಜ್ಞರು ಇದರ ನಿರ್ವಹಣೆಯಲ್ಲಿ ಹೆಚ್ಚಿನ ಪರಿಣತಿಯನ್ನು ಹೊಂದಿದ್ದಾರೆ.

ಚೀನಾದ ಕಾರ್ಮಿಕರಿಗೆ ಸರ್ಕಾರ ವೀಸಾ ಸೌಲಭ್ಯ ಕಲ್ಪಿಸಿದೆ. ತಯಾರಿಕೆಯಲ್ಲಿ ಯಾವುದೇ ಅಡಚಣೆ ಉಂಟಾಗದಂತೆ ಕಂಪನಿಗಳು ವ್ಯವಸ್ಥೆಗಳನ್ನು ಮಾಡಬೇಕಾಗುತ್ತದೆ ಎಂದು ತಿಳಿಸಿವೆ.

ಕಪಿಲ್ ಶರ್ಮಾ ‘ಕ್ಯಾಪ್ಸ್ ಕೆಫೆ’ ಮೇಲೆ ಗುಂಡಿನ ದಾಳಿ

ಸರ್ರೆ (ಕೆನಡಾ) (ಪಿಟಿಐ): ಹಾಸ್ಯ ನಟ ಕಪಿಲ್ ಶರ್ಮಾ ಅವರು ಕೆನಡಾದ ಸರ್ರೆ ನಗರದಲ್ಲಿ ಹೊಸದಾಗಿ ಆರಂಭಿಸಿರುವ ‘ಕ್ಯಾಪ್ಸ್ ಕೆಫೆ’ ರೆಸ್ಟೋರೆಂಟ್ ಮೇಲೆ ದುಷ್ಕರ್ಮಿಗಳು ಗುರುವಾರ ಗುಂಡಿನ ದಾಳಿ ನಡೆಸಿದ್ದಾರೆ.

ಈ ದಾಳಿ ನಡೆಯುವಾಗ ಕೆಫೆಯ ಸಿಬ್ಬಂದಿ ಒಳಗೇ ಇದ್ದರು. ಅದೃಷ್ಟವಶಾತ್ ಯಾವುದೇ ಜೀವ ಹಾನಿಯಾಗಿಲ್ಲ ಮತ್ತು ಯಾರೊಬ್ಬರಿಗೂ ಗಾಯಗಳಾಗಿಲ್ಲ. ಆದರೆ ಕೆಫೆಗೆ ಹಾನಿಯಾಗಿದೆ ಎಂದು ಸುರ್ರೆ ನಗರದ ಪೊಲೀಸರು ತಿಳಿಸಿದ್ದಾರೆ.

‘ದುಷ್ಕರ್ಮಿಗಳು ಗುಂಡಿನ ದಾಳಿ ನಡೆಸುತ್ತಿದ್ದಾರೆ ಎಂದು ಗುರುವಾರ ರಾತ್ರಿ 1.50 ಗಂಟೆಗೆ ರೆಸ್ಟೋರೆಂಟ್‌ನಿಂದ ಕರೆ ಬಂದಿತು. ಕೂಡಲೇ ಅಲ್ಲಿಗೆ ತೆರಳಿ ಪರಿಶೀಲಿಸಿದೆವು. ಸಿಬ್ಬಂದಿ ಕೆಫೆಯೊಳಗೆ ಇರುವಾಗಲೇ ಗುಂಡಿನ ದಾಳಿ ನಡೆದಿದೆ. ಆಸ್ತಿಗೆ ಹಾನಿಯಾಗಿದೆ’ ಎಂದು ಪೊಲೀಸರು ವಿವರಿಸಿದ್ದಾರೆ.

ಈ ಕುರಿತು ತನಿಖೆ ಕೈಗೊಳ್ಳಲಾಗಿದ್ದು, ಇತರ ಘಟನೆಗಳೊಂದಿಗಿನ ಸಂಬಂಧವನ್ನು ಪರಿಶೀಲಿಸಲಾಗುತ್ತಿದೆ. ಅಲ್ಲದೆ, ಈ ಕೃತ್ಯಕ್ಕೆ ಕಾರಣ ಮತ್ತು ಉದ್ದೇಶವನ್ನು ತಿಳಿದುಕೊಳ್ಳಲಾಗುವುದು ಎಂದು ಪೊಲೀಸರು ಹೇಳಿದ್ದಾರೆ.



ಸುರ್ರೆ ನಗರದಲ್ಲಿ ಗುಂಡಿನ ದಾಳಿಗೆ ಒಳಗಾಗಿರುವ ‘ಕ್ಯಾಪ್ಸ್ ಕೆಫೆ’ –ಪಿಟಿಐ ಚಿತ್ರ

ಸರ್ರೆಯಲ್ಲಿ ಜುಲೈ 4ರಂದು ಈ ಕೆಫೆಯನ್ನು ತೆರೆಯಲಾಗಿದೆ.

ಆಘಾತ ತರಿಸಿದೆ– ಕೆಫೆ: ಈ ಘಟನೆಯು ಆಘಾತ ತರಿಸಿದೆ ಎಂದು ಪ್ರತಿಕ್ರಿಯಿಸಿರುವ ‘ಕ್ಯಾಪ್ಸ್ ಕೆಫೆ’ ಹಿಂಸಾಚಾರದ ವಿರುದ್ಧ ದೃಢವಾಗಿ ನಿಲ್ಲುವುದಾಗಿ ‘ಇನ್‌ಸ್ಟಾಗ್ರಾಮ್’ ಪೋಸ್ಟ್‌ನಲ್ಲಿ ತಿಳಿಸಿದೆ.

‘ರುಚಿಕರವಾದ ಕಾಫಿ ಮತ್ತು ಸ್ನೇಹಮಯ ಸಂಭಾಷಣೆ ಮೂಲಕ ಜನರಿಗೆ ಸಂತೋಷವನ್ನು ತರುವ ಭರವಸೆಯೊಂದಿಗೆ ಕ್ಯಾಪ್ಸ್ ಕೆಫೆಯನ್ನು ತೆರೆದಿದ್ದೇವೆ. ಆ ಕನಸಿಗೆ ಪೆಟ್ಟು ಬಿದ್ದರೆ ಸಹಿಸುವುದಿಲ್ಲ. ನಾವು ಮತ್ತೆ ಎದ್ದು ನಿಲ್ಲುತ್ತೇವೆ. ಯಾವುದಕ್ಕೂ ಭಯ ಪಡುವುದಿಲ್ಲ’ ಎಂದು ಪ್ರತಿಕ್ರಿಯಿಸಿದೆ.

ಕರ್ನಾಟಕ, ಆಂಧ್ರಪ್ರದೇಶ ಪೊಲೀಸರಿಂದಲೂ ಸಹಕಾರ

‘6 ತಿಂಗಳ ಕಾರ್ಯಾಚರಣೆ ಬಳಿಕ ಉಗ್ರರ ಸೆರೆ’

ಚೆನ್ನೈ (ಪಿಟಿಐ): ‘ಆಂಧ್ರಪ್ರದೇಶ, ಕರ್ನಾಟಕ ಪೊಲೀಸರ ಜೊತೆಗೂಡಿ ಕಳೆದ ಆರು ತಿಂಗಳ ಕಾಲ ಕಾರ್ಯಾಚರಣೆಯ ಬಳಿಕವೇ ಮೂವರು ಶಂಕಿತ ಉಗ್ರರನ್ನು ಬಂಧಿಸಲಾಗಿದೆ’ ಎಂದು ತಮಿಳುನಾಡು ಪೊಲೀಸ್ ಮಹಾನಿರ್ದೇಶಕ ಶಂಕರ್ ಜಿವಾಳ್ ತಿಳಿಸಿದ್ದಾರೆ.

‘ಕೃತ್ಯ ನಡೆದು ಮೂರು ದಶಕದ ಬಳಿಕ ಪೊಲೀಸರು ಸತತ ಹುಡುಕಾಟ ನಡೆಸಿ ಅಬೂಬಕ್ಕರ್ ಸಿದ್ದಿಕಿ, ಮೊಹಮ್ಮದ್ ಅಲಿ ಹಾಗೂ ಸಾದಿಕ್ ರಾಜಾ ಅಲಿಯಾಸ್ ಟೈಲರ್ ರಾಜಾನನ್ನು ಬಂಧಿಸಿದರು’ ಎಂದು ಇಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

1998ರಲ್ಲಿ ಕೊಯಮತ್ತೂರಿನಲ್ಲಿ ನಡೆದಿದ್ದ ಸರಣಿ ಬಾಂಬ್ ಸ್ಫೋಟ ಪ್ರಕರಣದಲ್ಲಿ 58 ಮಂದಿ ಮೃತಪಟ್ಟು, 250ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದರು. 2013ರಲ್ಲಿ ಮಲ್ಲೇಶ್ವರದಲ್ಲಿ ನಡೆದಿದ್ದ ಬಾಂಬ್ ಸ್ಫೋಟದಲ್ಲಿಯೂ ಈ ಆರೋಪಿಗಳು ಭಾಗಿಯಾಗಿದ್ದರು.

‘ಕೃತ್ಯವೆಸಗಿ, ನಾಪತ್ತೆಯಾದವರನ್ನು ಬಂಧಿಸಲು ಎರಡು ರಾಜ್ಯಗಳ ಪೊಲೀಸರ ನೆರವಿನೊಂದಿಗೆ ‘ಆರಾಮ್’ ಹಾಗೂ ‘ಅಗಾಚಿ’ ಹೆಸರಿನಲ್ಲಿ ನಡೆಸಿದ ಕಾರ್ಯಾಚರಣೆಯಲ್ಲಿ ಆರೋಪಿಗಳನ್ನು ಬಂಧಿಸಲಾಗಿದೆ. ಸಿದ್ದಿಕಿಯನ್ನು ಆಂಧ್ರಪ್ರದೇಶದ ಕಡಪಾದಲ್ಲಿ ಬಂಧಿಸಿದ್ದು, ಸಾದಿಕ್‌ನನ್ನು ಕರ್ನಾಟಕದ ವಿಜಯಪುರದಲ್ಲಿ ಬಂಧಿಸಲಾಗಿದೆ. ಭಯೋತ್ಪಾದಕ ನಿಗ್ರಹ ಪಡೆಯು (ಎಟಿಎಸ್) ಅತ್ಯಂತ ಯಶಸ್ವಿ ಕಾರ್ಯಾಚರಣೆ ನಡೆಸಿದೆ’ ಎಂದು ತಿಳಿಸಿದರು.

‘ಸಿದ್ದಿಕಿಯನ್ನು ಬಂಧಿಸಲು ತಮಿಳುನಾಡು ಗುಪ್ತಚರ ಇಲಾಖೆ, ಎಟಿಎಸ್ ಸಹಯೋಗದಲ್ಲಿ ಕೊಯಮತ್ತೂರಿನ ಪೊಲೀಸರು ಆರು ತಿಂಗಳ ಹಿಂದೆಯೇ ‘ಆಪರೇಷನ್ ಆರಾಮ್’ ಹೆಸರಿನಲ್ಲಿ ಕಾರ್ಯಾಚರಣೆ ಆರಂಭಿಸಿದ್ದರು. ಹಲವು ಬಾಂಬ್ ಸ್ಫೋಟ ಹಾಗೂ ಕೋಮು ಕೊಲೆ ಪ್ರಕರಣಗಳಲ್ಲಿ ಆತ ಭಾಗಿಯಾಗಿದ್ದ. ದಕ್ಷಿಣ ಭಾರತದಲ್ಲಿ ಕುಕೃತ್ಯವೆಸಗಿ, 30 ವರ್ಷಗಳಿಂದಲೂ ನಾಪತ್ತೆಯಾಗಿದ್ದ. ಯೌವನದ ಫೋಟೋಗಳು ದೊರೆಯದ ಕಾರಣ, ಪತ್ತೆಹಚ್ಚುವುದು ಕೂಡ ಸವಾಲಾಗಿತ್ತು’ ಎಂದು ತಿಳಿಸಿದ್ದಾರೆ.

‘ಬೇರೆ ಹೆಸರುಗಳ ಮೂಲಕ, ಸ್ಥಳಗಳನ್ನು ಬದಲಾಯಿಸಿ, ಬೇರೆ ಕೆಲಸಗಳನ್ನು ಮಾಡುತ್ತಿದ್ದ ಸಿದ್ದಿಕಿ, ಅತ್ಯುತ್ತಮ ಮಟ್ಟದ ಕಚ್ಚಾಬಾಂಬ್‌ಗಳನ್ನು ತಯಾರಿಸುವಲ್ಲಿ ನಿಷ್ಣಾತನಾಗಿದ್ದ’ ಎಂದು ಜಿವಾಲ್ ಹೇಳಿದ್ದಾರೆ.

‘ಮಾನವ ಹಾಗೂ ತಂತ್ರಜ್ಞಾನದ ಗುಪ್ತಚರ ಮಾಹಿತಿ ಆಧರಿಸಿ ಕಡಪಾದ ರಾಯಚೋಟಿಯಲ್ಲಿ ಸಿದ್ದಿಕಿಯನ್ನು ಬಂಧಿಸಿದ್ದು, ತದನಂತರ ಅಲಿಯನ್ನು ಬಂಧಿಸಲಾಯಿತು’ ಎಂದರು.

ಆಪರೇಷನ್ ಅಗಾಚಿ: ‘ಸಾದಿಕ್ ಅಲಿಯಾಸ್ ಟೈಲರ್ ರಾಜಾನ ಬಂಧನಕ್ಕೆ ‘ಆಪರೇಷನ್ ಅಗಾಚಿ’ ಹೆಸರಿನಲ್ಲಿ ಕಾರ್ಯಾಚರಣೆ ನಡೆಸಲಾಗಿತ್ತು. 1998ರ ಸರಣಿ ಕೊಯಮತ್ತೂರು ಸರಣಿ ಬಾಂಬ್ ಸ್ಫೋಟ ಸೇರಿದಂತೆ, ನಾಲ್ಕು ಸೂಕ್ಷ್ಮ ಪ್ರಕರಣಗಳಲ್ಲಿ ಈತ ಬೇಕಾಗಿದ್ದ. ಕಳೆದ 29 ವರ್ಷಗಳಿಂದ ಪತ್ತೆಯಾಗಿರಲಿಲ್ಲ. ಯೌವನದ ಚಿತ್ರಗಳು ಇರಲಿಲ್ಲ. ಸ್ನೇಹಿತರು, ಕುಟುಂಬ ಸದಸ್ಯರ ಜೊತೆಗೆ ಸಂಪರ್ಕ ಹೊಂದಿರಲಿಲ್ಲ. ಜುಲೈ 9ರಂದು ವಿಜಯಪುರದಲ್ಲಿ ಬಂಧಿಸಿ, ಕೊಯಮತ್ತೂರಿಗೆ ಕರೆತರಲಾಗಿದೆ.

ರಿಯಲ್ ಎಸ್ಟೇಟ್ ವ್ಯಾಪಾರಿಗಳು

‘ಬಂಧಿತರು ದಿನಸಿ ಅಂಗಡಿ, ಟೈಲರಿಂಗ್ ಶಾಪ್, ರಿಯಲ್ ಎಸ್ಟೇಟ್ ವ್ಯವಹಾರ ನಡೆಸುತ್ತಿದ್ದರು. ಕೆಲವೊಂದು ಮಾನದಂಡಗಳನ್ನು ಅನುಸರಿಸಿಯೇ ಪೊಲೀಸರು ಅವರನ್ನು ಬಂಧಿಸಿದ್ದಾರೆ. ವಶಕ್ಕೆ ಪಡೆದ 24 ತಾಸಿನ ಒಳಗಾಗಿ, ಅವರ ಗುರುತು ಖಚಿತಪಡಿಸಲಾಗಿದೆ’ ಎಂದು ಪೊಲೀಸ್ ಮಹಾನಿರ್ದೇಶಕ ಶಂಕರ್ ಜಿವಾಳ್ ಸ್ಪಷ್ಟಪಡಿಸಿದರು.

‘ಸಿದ್ದಿಕಿಯು ನಿಷೇಧಿತ ಯಾವುದೇ ಸಂಘಟನೆಗಳ ಜೊತೆ ಸಂಪರ್ಕ ಹೊಂದಿಲ್ಲ. ಸಾದೀಕ್ ನಿಷೇಧಿತ ಅಲ್–ಉಮ್ಮಾ ಸಂಘಟನೆಯೊಂದಿಗೆ ಸಂಪರ್ಕ ಹೊಂದಿದ್ದ. ವಿವಿಧ ಹಂತಗಳಲ್ಲಿ ವಿಚಾರಣೆ ನಡೆಸಲಾಗುತ್ತಿದ್ದು, ವಿದೇಶಕ್ಕೆ ತೆರಳಿರುವ ಸಾಧ್ಯತೆಯ ಕುರಿತು ವಿವರ ಪಡೆಯಲಾಗುತ್ತಿದೆ’ ಎಂದರು.

‘ಫಾಸ್ಟ್ಯಾಗ್’ ಅಂಟಿಸದಿದ್ದರೆ ಕಪ್ಪುಪಟ್ಟಿಗೆ

ಒಂದನೇ ಪುಟದಿಂದ...

‘ಫಾಸ್ಟ್ಯಾಗ್’ ಅನ್ನು ವಾಹನದ ಮುಂಭಾಗದ ಗಾಜಿಗೆ ಅಂಟಿಸಬೇಕು. ಆದರೆ, ಕೆಲವರು ಉದ್ದೇಶಪೂರ್ವಕವಾಗಿ ಅವುಗಳನ್ನು ತಮ್ಮ ವಾಹನಗಳಿಗೆ ಅಂಟಿಸುತ್ತಿಲ್ಲ. ಬದಲಿಗೆ ಕೈಯಲ್ಲಿ ಹಿಡಿದು ಟೋಲ್‌ಗಳ ಮೂಲಕ ಸಾಗುತ್ತಿದ್ದಾರೆ. ಇದರಿಂದ ಟೋಲ್‌ಗಳಲ್ಲಿ ಸುಗಮ ಕಾರ್ಯನಿರ್ವಹಣೆಗೆ ಅಡ್ಡಿಯಾಗುತ್ತಿದೆ. ಹೀಗಾಗಿ ಅಂಥ ಫಾಸ್ಟ್ಯಾಗ್‌ಗಳ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಅದು ತಿಳಿಸಿದೆ.

ಮುಂದಿನ ದಿನಗಳಲ್ಲಿ ವಾರ್ಷಿಕ ಪಾಸ್ ವ್ಯವಸ್ಥೆ ಮತ್ತು ಬಹು ಪಥ ಮುಕ್ತ ಸಂಚಾರ (ಎಂಎಲ್‌ಎಫ್‌ಎಫ್) ಕಾರ್ಯಾಚರಣೆ ಜಾರಿಯಾಗಲಿದೆ. ಅದಕ್ಕೆ ಪೂರಕವಾಗಿ ಫಾಸ್ಟ್ಯಾಗ್ ದೃಢೀಕರಣ ಮತ್ತು ವ್ಯವಸ್ಥೆಯ ವಿಶ್ವಾಸಾರ್ಹತೆ ಖಚಿತಪಡಿಸಿಕೊಳ್ಳಬೇಕಿದೆ. ಹೀಗಾಗಿ ಅದಕ್ಕೆ ಎದುರಾಗುವ ಅಡೆತಡೆಗಳ ನಿವಾರಣೆಯೂ ಮುಖ್ಯವಾಗಿದೆ ಎಂದು ಪ್ರಾಧಿಕಾರ ಹೇಳಿದೆ.

ಟೋಲ್‌ಗಳ ಬಳಿ ಬರುವ ‘ಲೂಸ್ ಫಾಸ್ಟ್ಯಾಗ್’ ವಾಹನಗಳ ಕುರಿತು ಟೋಲ್ ಸಂಗ್ರಹ ಸಂಸ್ಥೆಗಳು ತಕ್ಷಣವೇ ಪ್ರಾಧಿಕಾರಕ್ಕೆ ವರದಿ ಮಾಡಬೇಕು. ಅದನ್ನು ಆಧರಿಸಿ ಅಂತಹ ಫಾಸ್ಟ್ಯಾಗ್‌ಗಳನ್ನು ಕಪ್ಪುಪಟ್ಟಿಗೆ ಸೇರಿಸುವ ಅಥವಾ ಶಾಶ್ವತವಾಗಿ ತಡೆಹಿಡಿಯುವ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತದೆ ಎಂದು ಎನ್‌ಎಚ್‌ಎಐ ತಿಳಿಸಿದೆ.

ದೆಹಲಿಯಲ್ಲಿ ಕುಳಿತು ಬೆಂಗಳೂರಿನಲ್ಲಿ ನಕಲಿ ಕಂಪನಿ ಸೃಷ್ಟಿಸಿದ ಆರೋಪಿ

₹260 ಕೋಟಿಯ ನಕಲಿ ವಹಿವಾಟು; ಸಿಎ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೆಹಲಿಯಲ್ಲಿ ಕುಳಿತು ಬೆಂಗಳೂರಿನಲ್ಲಿ ನಾಲ್ಕು ಕಂಪನಿಗಳನ್ನು ಸ್ಥಾಪಿಸಿ, ₹260 ಕೋಟಿಗೂ ಹೆಚ್ಚು ಮೊತ್ತದ ನಕಲಿ ಜಿಎಸ್‌ಟಿ ಇನ್‌ವಾಯ್ಸ್‌ಗಳನ್ನು ಸೃಷ್ಟಿಸಿದ್ದ ಚಾರ್ಟರ್ಡ್ ಅಕೌಂಟೆಂಟ್ (ಸಿಎ) ಒಬ್ಬರನ್ನು ಜಿಎಸ್‌ಟಿ ಗುಪ್ತಚರ ನಿರ್ದೇಶನಾಲಯದ (ಡಿಜಿಜಿಐ) ಬೆಂಗಳೂರು ಘಟಕದ ಅಧಿಕಾರಿಗಳು ಬಂಧಿಸಿದ್ದಾರೆ.

‘ಆಕಾಶ್ ಕುಮಾರ್ ಎಂಬ ವ್ಯಕ್ತಿಯು ಗುರುಗ್ರಾಮ ನಿವಾಸಿಯಾಗಿದ್ದು, ತನ್ನದೇ ಆಧಾರ್ ಮತ್ತು ಪ್ಯಾನ್ ಕಾರ್ಡ್ ವಿವರ ಬಳಸಿಕೊಂಡು ಬೆಂಗಳೂರಿನ ವಿಳಾಸದಲ್ಲಿ ನಾಲ್ಕು ಕಂಪನಿಗಳನ್ನು ನೋಂದಣಿ ಮಾಡಿದ್ದ. ಈ ಕಂಪನಿಗಳು ಯಾವುದೇ ವಹಿವಾಟು ನಡೆಸದೆಯೇ ಇನ್‌ವಾಯ್ಸ್‌ಗಳನ್ನು ಸೃಷ್ಟಿಸುತ್ತಿರುವ ಬಗ್ಗೆ ಮಾಹಿತಿ ದೊರೆತಿತ್ತು. ಈ ಸಂಬಂಧ ತನಿಖೆ ಆರಂಭಿಸಲಾಗಿತ್ತು’ ಎಂದು ಮೂಲಗಳು ಮಾಹಿತಿ ನೀಡಿವೆ.

‘ಈ ಎಲ್ಲ ಕಂಪನಿಗಳ ಆಡಳಿತ ಮಂಡಳಿಗಳಲ್ಲಿ ಒಬ್ಬನೇ ವ್ಯಕ್ತಿ ನಿರ್ದೇಶಕನಾಗಿರುವ ಬಗ್ಗೆ ಮಾಹಿತಿ ದೊರೆಯಿತು. ಜಿಎಸ್‌ಟಿ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಪಡೆಯಲು ಈ ಕಂಪನಿಗಳು ಸಲ್ಲಿಸಿದ್ದ ದಾಖಲೆಗಳನ್ನು ಪರಿಶೀಲಿಸಿದಾಗ, ಅವೆಲ್ಲವೂ ನಕಲಿ ಇನ್‌ವಾಯ್ಸ್‌ಗಳು ಎಂಬುದು ಗೊತ್ತಾಯಿತು. ಜತೆಗೆ ಕಂಪನಿಗಳು ನೋಂದಣಿಯಾಗಿದ್ದ ವಿಳಾಸದಲ್ಲಿ ಯಾವುದೇ ಕಚೇರಿಗಳು ಇರಲಿಲ್ಲ. ಒಂದು ಕಂಪನಿಯ ವಿಳಾಸದಲ್ಲಂತೂ ನಿವೇಶನ ಮಾತ್ರವಿತ್ತು’ ಎಂದು ವಿವರಿಸಿವೆ.

‘ಮೂರು ವರ್ಷಗಳ ಅವಧಿಯಲ್ಲಿ ಈ ಕಂಪನಿಗಳು ಪರಸ್ಪರರ ಹೆಸರಿನಲ್ಲಿ ಇನ್‌ವಾಯ್ಸ್‌ಗಳನ್ನು ಸೃಷ್ಟಿಸಿದ್ದು, ಒಟ್ಟು ₹260 ಕೋಟಿ ಮೊತ್ತದ ಖೊಟ್ಟಿ ವಹಿವಾಟನ್ನು ನಡೆಸಿವೆ. ಈ ಮೂಲಕ ಒಟ್ಟು ₹48 ಕೋಟಿ ಮೊತ್ತದ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಪಡೆದುಕೊಂಡಿವೆ. ಒಬ್ಬ ವ್ಯಕ್ತಿಯೇ ಈ ಎಲ್ಲ ವಹಿವಾಟನ್ನೂ ನಡೆಸಿದ್ದಾನೆ’ ಎಂದಿವೆ.

‘ದಾಖಲೆಗಳನ್ನು ಕಲೆ ಹಾಕಿ ವಿಶ್ಲೇಷಿಸಿದ ನಂತರ, ದೆಹಲಿಯಲ್ಲಿ ಕಾರ್ಯಾಚರಣೆ ರೂಪಿಸಲಾಗಿತ್ತು. ಅದರಂತೆ ಶುಕ್ರವಾರ ಬೆಳಿಗ್ಗೆಯೇ ದೆಹಲಿಯ ಆರು ಕಡೆ ದಾಳಿ ನಡೆಸಲಾಯಿತು. ಆರೋಪಿಯ ಮನೆ, ಕಚೇರಿಗಳಲ್ಲಿ ಶೋಧ ಕಾರ್ಯ ನಡೆಸಲಾಯಿತು. ಈ ವೇಳೆ ಹಲವು ಸೀಲ್‌ಗಳು, ಪ್ರತಿ ಕಂಪನಿಯ ಲೆಕ್ಕಪತ್ರ ನಿರ್ವಹಣೆಗೆ ಬಳಸುತ್ತಿದ್ದ ನಾಲ್ಕು ಪ್ರತ್ಯೇಕ ಕಂಪ್ಯೂಟರ್‌ಗಳು ಪತ್ತೆಯಾಗಿವೆ. ಬೆಂಗಳೂರಿನಲ್ಲಿ ನಾಲ್ಕು, ದೆಹಲಿಯಲ್ಲಿ ಎರಡು ಕಂಪನಿಗಳನ್ನು ನಡೆಸುತ್ತಿದ್ದ ಬಗ್ಗೆ ಪುರಾವೆಗಳು ದೊರೆತಿವೆ’ ಎಂದು ಮೂಲಗಳು ಮಾಹಿತಿ ನೀಡಿವೆ.

ಹೂಡಿಕೆದಾರರನ್ನು ವಂಚಿಸಲು ಕೃತ್ಯ

- ಈ ಆರೂ ಕಂಪನಿಗಳನ್ನು ಷೇರುಮಾರುಕಟ್ಟೆಯಲ್ಲಿ ನೋಂದಾಯಿಸಲಾಗಿದೆ. ಖೊಟ್ಟಿ ವ್ಯವಹಾರಗಳನ್ನು ನಡೆಸಿ, ಕಂಪನಿಗಳ ಮೌಲ್ಯವನ್ನು ಹೆಚ್ಚಿಸಿಕೊಳ್ಳಲಾಗಿದೆ
- ಒಂದು ಕಂಪನಿಯು ಮತ್ತೊಂದು ಕಂಪನಿಯ ಹೆಸರಿನಲ್ಲಿ ಇನ್‌ವಾಯ್ಸ್ ಸೃಷ್ಟಿಸಿದೆ. ಅದೇ ಸರಕು/ಸೇವೆಯನ್ನು ಮೂರನೇ ಕಂಪನಿಗೆ ಮಾರಾಟ ಮಾಡಲಾಗಿದೆ. ಭೌತಿಕವಾದ ಸರಕು ಮತ್ತು ಸೇವೆ ಇಲ್ಲದೆಯೇ ಇನ್‌ವಾಯ್ಸ್‌ಗಳನ್ನು ಆರೂ ಕಂಪನಿಗಳ ಹೆಸರಿನಲ್ಲಿ ಸೃಷ್ಟಿಸಲಾಗಿದೆ
- ಬೇರೆ ಯಾವುದೇ ಕಂಪನಿಗಳ ಜತೆಗೆ ವಹಿವಾಟು ನಡೆಸದೆ, ಈ ಆರು ಕಂಪನಿಗಳು ಮಾತ್ರವೇ ವಹಿವಾಟು ನಡೆಸಿವೆ. ಈ ಸ್ವರೂಪದ ವಂಚನೆಯನ್ನು ‘ಸರ್ಕ್ಯುಲರ್ ಟ್ರೇಡಿಂಗ್’ ಎಂದು ಕರೆಯಲಾಗುತ್ತದೆ
- ಕಂಪನಿಗಳ ಮೌಲ್ಯವನ್ನು ಹೆಚ್ಚಿಸಿಕೊಂಡು ಹೂಡಿಕೆದಾರರನ್ನು ಆಕರ್ಷಿಸಲು ಮತ್ತು ಸಾಲವನ್ನು ಪಡೆದುಕೊಳ್ಳಲು ಯತ್ನಿಸಲಾಗಿದೆ

ಸಂಬಂಧಗಳ ಸುತ್ತಲಿನ ಸರಳ ಕಥೆ



ಗಂಡು ಮತ್ತು ಹೆಣ್ಣಿನ ಸಂಬಂಧದ ನಡುವಿನ ಸಾಕಷ್ಟು ಸೂಕ್ಷ್ಮ ವಿಚಾರಗಳನ್ನೇ ಕಥೆಯಾಗಿ ಹೊಂದಿರುವ ಚಿತ್ರ 'ದೂರ ತೀರ ಯಾನ'. ಗಂಡ–ಹೆಂಡತಿ ನಡುವಿನ ಸಂಬಂಧ ಒಂದು ರೀತಿ 'ಸೀಸಾ' ಆಟದಂತೆ. ಒಬ್ಬರು ಕೆಳಕ್ಕೆ ಇಳಿದಾಗ ಮತ್ತೊಬ್ಬರು ಕೈಹಿಡಿದು ಮೇಲಕ್ಕೆ ಎತ್ತಲೇಬೇಕು. ಆಗ ಮಾತ್ರ ಬದುಕು ಸಮತೋಲನಗೊಳ್ಳುತ್ತದೆ. ಯಾರೋ ಒಬ್ಬರು ಹೊಂದಾಣಿಕೆ ಮಾಡಿಕೊಳ್ಳಲೇಬೇಕು. ಆದರೆ ಈಗಿನ ತಲೆಮಾರಿನಲ್ಲಿ ಹೊಂದಾಣಿಕೆ ಎಂಬುದೇ ಬಲು ಕಷ್ಟದ ಮಾತು. ಇದು ಅರ್ಥವಾಗಬೇಕಾದರೆ ಬದುಕಿನಲ್ಲಿ ಆಳಕ್ಕೆ ಇಳಿಯಬೇಕು. ದೂರ ತೀರದಲ್ಲಿ ಪ್ರಯಾಣ ಮಾಡಬೇಕು ಎಂಬುದನ್ನು ಮಂಸೋರೆ ದೃಶ್ಯ ಕಾವ್ಯವಾಗಿ ಹೇಳಿದ್ದಾರೆ.

ಕಥೆಯ ನಾಯಕ ಆಕಾಶ್ ಮತ್ತು ನಾಯಕಿ ಭೂಮಿ ಐದು ವರ್ಷಗಳಿಂದ ಪ್ರೀತಿಸುತ್ತಿರುತ್ತಾರೆ. ಇಬ್ಬರ ನಡುವಿನ ಸಂಬಂಧ ಸರಿ ಬರುತ್ತಿಲ್ಲ. ಸಣ್ಣ, ಸಣ್ಣ ವಿಷಯಗಳಿಗೂ ಕಿತ್ತಾಡಿಕೊಳ್ಳುತ್ತಾರೆ. ಹೀಗಾಗಿ ಮದುವೆಯಾಗದೇ ಸಂಬಂಧವನ್ನು ಕಡಿದುಕೊಳ್ಳುವ ನಿರ್ಧಾರಕ್ಕೆ ಬರುತ್ತಾರೆ. ಇಬ್ಬರೂ ವಾರ ಒಟ್ಟಿಗೆ ಪಯಣಿಸಿ, ಬಳಿಕ ಬೇರೆಯಾಗಲು ನಿರ್ಧಾರ ಮಾಡುತ್ತಾರೆ. ಆ ಒಂದು ವಾರ ಬದುಕಿನ ಪಯಣವೇ ಕಥೆಯಾಗಿದೆ.

ಬೆಂಗಳೂರಿನಿಂದ ಪ್ರಾರಂಭಗೊಳ್ಳುವ ಕಥೆ ಉಡುಪಿ, ಮುರುಡೇಶ್ವರ, ಕುಮಟಾ, ಗೋಕರ್ಣಗಳ ಕಡಲ ತೀರವನ್ನು ಸುತ್ತುತ್ತದೆ. ಚಿತ್ರದ ಬಹುದೊಡ್ಡ ಶಕ್ತಿ ಶೇಖರ್‌ಚಂದ್ರ ಛಾಯಾಚಿತ್ರಗ್ರಹಣ ಮತ್ತು ಅದಕ್ಕೆ ಸರಿಹೊಂದುವ ಕಾರ್ತಿಕ್ ಮತ್ತು ಬಕ್ಕೇಶ್ ಅವರ ಹಿನ್ನೆಲೆ ಸಂಗೀತ. ದೃಶ್ಯ ಮತ್ತು ಸಂಗೀತ ಚಿತ್ರವನ್ನು ಪ್ರಾರಂಭದಿಂದ ಅಂತ್ಯದವರೆಗೂ ಹಿತವಾಗಿಡುತ್ತದೆ. ಹಾಡುಗಳು ಕೂಡ ಕಥೆಯ ಸನ್ನಿವೇಶಗಳೊಂದಿಗೆ ಬಹಳ ಚೆನ್ನಾಗಿ ಬೆರೆತು ಮುದ ನೀಡುತ್ತವೆ.

ಬದುಕಿನ ಕುರಿತಾಗಿ ಆಕಾಶ್ ಕಲ್ಪನೆ ಬೇರೆಯದ್ದು, ಭೂಮಿ ಆಲೋಚನೆಯೇ ಭಿನ್ನ. ಸಾಕಷ್ಟು ಸನ್ನಿವೇಶಗಳು ಬಹುತೇಕ ಎಲ್ಲ ಜೋಡಿಗಳ ನಡುವೆ ನಡೆಯುವ ಘಟನೆಗಳೇ ಆಗಿವೆ. ಹುಡುಗನಿಗೆ ಇಷ್ಟವಾದ ಅಂಗಿ, ಪ್ಯಾಂಟ್ ಹುಡುಗಿಗೆ ಇಷ್ಟವಾಗುವುದಿಲ್ಲ. ಹುಡುಗಿ ಇಷ್ಟಪಡುವ ಜಾಗ ಹುಡುಗನ ಅಭಿರುಚಿಗೆ ತಕ್ಕಂತೆ ಇರುವುದಿಲ್ಲ. ಕಿತ್ತಾಡಿಕೊಂಡು, ಅತ್ತು, ಕರೆದು ಕೊನೆಗೆ ಯಾರೋ ಒಬ್ಬರು ರಾಜಿಯಾಗುತ್ತಾರೆ. ಬದುಕು ಸಹಜ ಸ್ಥಿತಿಗೆ ಬರುತ್ತದೆ. ಇಂಥ ಒಂದಷ್ಟು ಸಹಜ ಸನ್ನಿವೇಶಗಳು ಚಿತ್ರದ ಉದ್ದಕ್ಕೂ ಕಾಣಸಿಗುತ್ತವೆ.

ಆಕಾಶ್ ಆಗಿ ವಿಜಯ್ ಕೃಷ್ಣ ಬಹಳ ಇಷ್ಟವಾಗುತ್ತಾರೆ. ತಾವೊಬ್ಬ ಭರವಸೆಯ ನಟ ಎಂಬುದನ್ನು ಸಾಕಷ್ಟು ಕಡೆ ಸಾಬೀತುಪಡಿಸುತ್ತಾರೆ. ಪ್ರಿಯಾಂಕ ಒಂದಷ್ಟು ಭಾವನಾತ್ಮಕ ಸನ್ನಿವೇಶಗಳಲ್ಲಿ ಇನ್ನಷ್ಟು ಪಳಗಬೇಕಿತ್ತು ಅನ್ನಿಸುತ್ತದೆ. ಇಡೀ ಕಥೆ ಇವರಿಬ್ಬರ ನಡುವೆಯೇ ನಡೆಯುವುದರಿಂದ ಉಳಿದ ಪಾತ್ರಗಳಿಗೆ ಅಷ್ಟೊಂದು ಮಹತ್ವವಿಲ್ಲ. ಉಳಿದ ಬಹುತೇಕ ಕಲಾವಿದರು ಒಂದೆರಡು ದೃಶ್ಯಗಳಿಗೆ ಅತಿಥಿಗಳಂತೆ ಬಂದು ಹೋಗುತ್ತಾರೆ.

ಇಷ್ಟಾಗಿಯೂ ಕಥೆ ಗಾಢವಾಗಿ ಕಾಡುವುದಿಲ್ಲ. ಹೆಚ್ಚು ತಿರುವುಗಳಿಲ್ಲದೇ, ಹಾಸ್ಯದ ಲೇಪವಿಲ್ಲದೇ ನಿರೂಪಣೆ ಗಂಭೀರವಾಗಿಯೇ ಸಾಗುತ್ತದೆ. ಕೆಲವು ಭಾಗಗಳಲ್ಲಿ ಬದುಕಿನ ಕುರಿತಾದ ಉಪದೇಶ ತುಸು ಹೆಚ್ಚಾದಂತೆ ಭಾಸವಾಗುತ್ತದೆ. ಕಥೆಯನ್ನು ಕೊಂಚ ಗಟ್ಟಿಯಾಗಿಸಿ, ಸಂಬಂಧವನ್ನು ಇನ್ನಷ್ಟು ಭಾವುಕವಾಗಿಸುವ ಅವಕಾಶ ನಿರ್ದೇಶಕರಿಗಿತ್ತು. ಚಿತ್ರದ ಅವಧಿಯನ್ನೂ ಇನ್ನೊಂದು 20 ನಿಮಿಷಗಳಷ್ಟು ಕುಗ್ಗಿಸಬಹುದಿತ್ತು.

-ವಿನಾಯಕ ಕೆ.ಎಸ್.

ನಾವು ನೋಡಿದ ಸಿನಿಮಾ

ದೂರ ತೀರ ಯಾನ

- ನಿರ್ಮಾಣ: ದೇವರಾಜ್ ಆರ್.
- ನಿರ್ದೇಶನ: ಮಂಸೋರೆ
- ತಾರಾಗಣ: ವಿಜಯ್ ಕೃಷ್ಣ, ಪ್ರಿಯಾಂಕಾ ಕುಮಾರ್, ಶೃತಿ ಹರಿಹರನ್ ಮತ್ತಿತರರು

ನೋಡಬಹುದಾದ ಚಿತ್ರ

ಕೊತ್ತಲವಾಡಿ ಟೈಟಲ್ ಟ್ರ್ಯಾಕ್ ಬಿಡುಗಡೆ


ಪೃಥ್ವಿ ಅಂಬಾರ್

ನಟ ಯಶ್ ತಾಯಿ ಪುಷ್ಪ ಅರುಣ್ ಕುಮಾರ್ ಅವರು ತಮ್ಮದೇ ಪಿಎ ಪ್ರೊಡಕ್ಷನ್ಸ್ ಮೂಲಕ ನಿರ್ಮಾಣ ಮಾಡಿರುವ, ಪೃಥ್ವಿ ಅಂಬಾರ್ ನಟನೆಯ 'ಕೊತ್ತಲವಾಡಿ' ಸಿನಿಮಾ ಆಗಸ್ಟ್ 1ರಂದು ಬಿಡುಗಡೆಯಾಗುತ್ತಿದೆ. ಚಿತ್ರದ ಟೈಟಲ್ ಟ್ರ್ಯಾಕ್ ಇತ್ತೀಚೆಗೆ ಬಿಡುಗಡೆಯಾಯಿತು.

ಟೀಸರ್, ಹಾಡುಗಳ ಮೂಲಕ ಗಮನಸೆಳೆದಿರುವ 'ಕೊತ್ತಲವಾಡಿ' ಟೈಟಲ್ ಟ್ರ್ಯಾಕ್‌ಗೆ ಕಿನ್ನಾಳ್ ರಾಜ್ ಸಾಹಿತ್ಯ ಬರೆದಿದ್ದು, ಗೀತೆಗೆ ವ್ಯಾಸರಾಜ್ ಸೋಸಲೆ ದನಿಯಾಗಿದ್ದಾರೆ. ವಿಕಾಸ್ ವಸಿಷ್ಠ ಸಂಗೀತ ನೀಡಿರುವ ಈ ಹಾಡಿನಲ್ಲಿ ನಾಯಕನ ಶೌರ್ಯವನ್ನು ವರ್ಣಿಸಲಾಗಿದೆ.

ಶ್ರೀರಾಜ್ ನಿರ್ದೇಶನ ಚೊಚ್ಚಲ ಚಿತ್ರ ಇದಾಗಿದ್ದು, ಪೃಥ್ವಿಗೆ ಜೋಡಿಯಾಗಿ ಕಿರುತೆರೆ ನಟಿ ಕಾವ್ಯಾ ಶೈವ ನಟಿಸಿದ್ದಾರೆ. ಗೋಪಾಲಕೃಷ್ಣ ದೇಶಪಾಂಡೆ, ರಾಜೇಶ್ ನಟರಂಗ ತಾರಾಬಳಗದಲ್ಲಿದ್ದಾರೆ. ಲವರ್ ಬಾಯ್ ಆಗಿ ಕಾಣಿಸಿಕೊಳ್ಳುತ್ತಿದ್ದ ಪೃಥ್ವಿ 'ಕೊತ್ತಲವಾಡಿ'ಯಲ್ಲಿ ಕಂಪ್ಲೀಟ್ ಮಾಸ್ ಪಾತ್ರದಲ್ಲಿದ್ದಾರೆ. ಕಾರ್ತಿಕ್ ಎಸ್. ಛಾಯಾಚಿತ್ರಗ್ರಹಣ ಮಾಡಿದ್ದಾರೆ. ರಾಮಿಸೆಟ್ಟಿ ಪವನ್ ಸಂಕಲನ, ರಘು ನಿಡುವಳ್ಳಿ ಸಂಭಾಷಣೆ, ವಿ. ನಾಗೇಂದ್ರ ಪ್ರಸಾದ್, ಪ್ರಮೋದ್ ಮರವಂತೆ, ಗೌಸ್ ಪಿರ್ ಸಾಹಿತ್ಯ ಚಿತ್ರದ ಹಾಡುಗಳಿಗಿವೆ. ❖

ಶೀಘ್ರದಲ್ಲೇ ತೆರೆಗೆ 'ಹಚ್ಚೆ'


ಆದ್ಯಪ್ರಿಯ, ಅಭಿಮನ್ಯು, ಅನುಪ್ರೇಮ

ಅಶ್ವ ಫಿಲಂಸ್ ಲಾಂಛನದಲ್ಲಿ ಯಶೋಧರ ಕಥೆ, ಚಿತ್ರಕಥೆ ಸಂಭಾಷಣೆ ಬರೆದು ನಿರ್ದೇಶಿಸಿರುವ 'ಹಚ್ಚೆ' ಸಿನಿಮಾ ಬಿಡುಗಡೆಗೆ ಸಜ್ಜಾಗಿದೆ. ಚಿತ್ರದಲ್ಲಿ ನಾಯಕನಾಗಿ ಅಭಿಮನ್ಯು ನಟಿಸಿದ್ದಾರೆ.

ಚಿತ್ರದ 'ವಿಘ್ನೇಶ್ವರಾಯ' ಎಂಬ ಹಾಡು ಇತ್ತೀಚೆಗೆ ಬಿಡುಗಡೆಗೊಂಡಿದ್ದು, ಯಶೋಧರ ಅವರೇ ಇದನ್ನು ಬರೆದಿದ್ದಾರೆ. ವಿವೇಕ್ ಚಕ್ರವರ್ತಿ ಈ ಹಾಡಿಗೆ ಸಂಗೀತ ನೀಡಿದ್ದು, ಶಿವಂ ದನಿಯಲ್ಲಿ ಹಾಡು ಮೂಡಿಬಂದಿದೆ.

'ಹಾಡನ್ನು ಬಿಡುಗಡೆ ಮಾಡುವ ಮೂಲಕ ಚಿತ್ರದ ಪ್ರಚಾರಕ್ಕೆ ಚಾಲನೆ ನೀಡಿದ್ದೇವೆ. 'ಹಚ್ಚೆ' ಎಂಬ ಶೀರ್ಷಿಕೆ ಏಕೆ ಎನ್ನುವುದಕ್ಕೆ ಚಿತ್ರದಲ್ಲೇ ಉತ್ತರವಿದೆ. ಇದು ಒಂದು ಜಾನರ್‌ನ ಚಿತ್ರವಲ್ಲ. ಪ್ರೀತಿ, ಭಾವನೆಗಳು, ಸಸ್ಪೆನ್ಸ್, ಥ್ರಿಲ್ಲರ್.. ಹೀಗೆ ಹಲವು ಅಂಶಗಳ ಸಮ್ಮಿಶ್ರಣ. ಮೈಸೂರಿನ ರಂಗಭೂಮಿ ನಟ ಅಭಿಮನ್ಯು ಈ ಚಿತ್ರದ ಮೂಲಕ ಕನ್ನಡ ಚಿತ್ರರಂಗಕ್ಕೆ ಹೆಜ್ಜೆ ಇಡುತ್ತಿದ್ದು, ಆದ್ಯ ಪ್ರಿಯ ಹಾಗೂ ಅನುಪ್ರೇಮ ನಾಯಕಿಯರಾಗಿದ್ದಾರೆ. ಚಿತ್ರದ ಬಹುತೇಕ ಚಿತ್ರೀಕರಣ ಸೆಟ್‌ನಲ್ಲೇ ನಡೆದಿದೆ. ಕಲಾ ನಿರ್ದೇಶಕ ಶಂಕರ್ ನೇತೃತ್ವದಲ್ಲಿ ಏಳು ಅದ್ದೂರಿ ಸೆಟ್‌ಗಳನ್ನು ನಿರ್ಮಿಸಲಾಗಿತ್ತು. ಮುಂದಿನ ಎರಡು ತಿಂಗಳಲ್ಲಿ ಸಿನಿಮಾ ತೆರೆಕಾಣಲಿದೆ' ಎಂದು ತಮ್ಮ ಚೊಚ್ಚಲ ನಿರ್ದೇಶನದ ಸಿನಿಮಾ ಬಗ್ಗೆ ಯಶೋಧರ ಮಾಹಿತಿ ನೀಡಿದರು. ಚಿತ್ರಕ್ಕೆ ಚಂದ್ರು ಬಂಡೆ ಸಾಹಸ ನಿರ್ದೇಶನ, ಸ್ಟಾರ್ ನಾಗಿ ನೃತ್ಯ ನಿರ್ದೇಶನ ಹಾಗೂ ಯಾಸಿನ್ ಛಾಯಾಚಿತ್ರಗ್ರಹಣವಿದೆ. ❖

'ತಾಯಿಗೆ ಬೈದರೆ ಸುಮ್ಮನಿರುತ್ತೀರಾ?'


ಪ್ರೇಮ್

ಕರ್ನಾಟಕದಲ್ಲಿ 'ಥಗ್‌ಲೈಫ್' ಸಿನಿಮಾ ಬಿಡುಗಡೆಗೆ ಅವಕಾಶ ನೀಡದೇ ಇರುವ ಕುರಿತ ತಮಿಳು ಮಾಧ್ಯಮಗಳು ಕೇಳಿದ ಪ್ರಶ್ನೆಗೆ ಉತ್ತರಿಸಿರುವ ನಿರ್ದೇಶಕ ಪ್ರೇಮ್, 'ನಾವೇನು ಬೇರೆ ಬೇರೆ ದೇಶದಲ್ಲಿಲ್ಲ. ಇನ್ನೂರು–ಮುನ್ನೂರು ಕಿಲೋಮೀಟರ್ ದೂರದಲ್ಲಿದ್ದೇವೆ ಅಷ್ಟೇ. ಎಲ್ಲರೂ ಒಂದೇ. ತಾಯಿಗೆ ಯಾರಾದರೂ ಬೈದರೆ ಸುಮ್ಮನಿರುತ್ತೀರಾ?' ಎಂದು ಪ್ರಶ್ನಿಸಿದ್ದಾರೆ.

'ಕೆಡಿ' ಸಿನಿಮಾದ ಪ್ರಚಾರಕ್ಕಾಗಿ ಪ್ರೇಮ್, ನಟ ಧ್ರುವ ಸರ್ಜಾ ಒಳಗೊಂಡ ತಂಡ ಚೆನ್ನೈನಲ್ಲಿ ಶುಕ್ರವಾರ ಸುದ್ದಿಗೋಷ್ಠಿ ನಡೆಸಿತು. ಈ ವೇಳೆ ಮಾತನಾಡಿದ ಪ್ರೇಮ್, 'ಕನ್ನಡಿಗರಿಗೆ ಕಮಲ್ ಸರ್ ಅವರ ಹೇಳಿಕೆಯಿಂದ ನೋವಾಯಿತು. ಕರ್ನಾಟಕದಲ್ಲಿ ತಮಿಳು ಸಿನಿಮಾಗಳು ಬಿಡುಗಡೆ ಆಗುವುದು ಬೇಡ ಎಂದಿಲ್ಲ. ಕಮಲ್ ಸರ್ ಸಿನಿಮಾವಷ್ಟೇ ಬಿಡುಗಡೆ ಆಗುವುದು ಬೇಡ ಎಂದರು. ಕ್ಷಮೆ ಕೇಳಬೇಕು ಎನ್ನುವುದು ಕನ್ನಡಿಗರ ಆಗ್ರಹವಾಗಿತ್ತು. ಕರ್ನಾಟಕದಲ್ಲಿ ಎಲ್ಲಾ ತಮಿಳು ಸಿನಿಮಾಗಳೂ ಚೆನ್ನಾಗಿ ಹೋಗುತ್ತವೆ. ನಾನೂ ತಮಿಳು ಸಿನಿಮಾಗಳನ್ನು ನೋಡುತ್ತೇನೆ. ಕರ್ನಾಟಕದಲ್ಲಿ ತಮಿಳು ಸಿನಿಮಾಗಳು ಒಳ್ಳೆಯ ಸಂಪಾದನೆ ಮಾಡುತ್ತವೆ' ಎಂದಿದ್ದಾರೆ.

ಧ್ರುವ ಸರ್ಜಾ ಮಾತನಾಡಿ, 'ಕರ್ನಾಟಕದಲ್ಲಿ ಹಲವು ತಮಿಳು ಸಿನಿಮಾಗಳು ಬಿಡುಗಡೆಯಾಗಿವೆ. ಯಾವುದನ್ನೂ ಯಾರೂ ತಡೆದಿಲ್ಲ. ಕಮಲ್ ಸರ್ ಅವರು ನೀಡಿದ ಒಂದು ಹೇಳಿಕೆಯಿಂದ ಎಲ್ಲರಿಗೂ ಬೇಸರವಾಗಿತ್ತು. ಎಲ್ಲರೂ ಮಾತೃಭಾಷೆಯನ್ನು ಪ್ರೀತಿಸುತ್ತಾರೆ. ಮಾತೃಭಾಷೆ ವಿಚಾರ ಬಂದಾಗ ಎಲ್ಲರೂ ಪ್ರತಿಕ್ರಿಯೆ ನೀಡುತ್ತಾರೆ' ಎಂದಿದ್ದಾರೆ. ❖

ಪ್ರಶಸ್ತಿಗೆ ಅಲ್ಕರಾಜ್–ಸಿನ್ನರ್ ಸೆಣಸಾಟ

ವಿಂಬಲ್ಡನ್: ಜೊಕೊವಿಚ್ ಕನಸು ಸೆಮಿಫೈನಲ್‌ನಲ್ಲಿ ಭಗ್ನ


ಕಾರ್ಲೋಸ್ ಅಲ್ಕರಾಜ್ ಸಂಭ್ರಮ ಎಪಿ/ಪಿಟಿಐ ಚಿತ್ರ

ಲಂಡನ್ (ಎಪಿ): ವಿಶ್ವದ ಅಗ್ರಮಾನ್ಯ ಆಟಗಾರ ಯಾನಿಕ್ ಸಿನ್ನರ್ ಅವರು ಶುಕ್ರವಾರ 6-3, 6-3, 6-4 ರಲ್ಲಿ ನೇರ ಸೆಟ್‌ಗಳಿಂದ ನೊವಾಕ್ ಜೊಕೊವಿಚ್ ಅವರನ್ನು ಸೋಲಿಸಿ ಮೊದಲ ಬಾರಿ ವಿಂಬಲ್ಡನ್ ಫೈನಲ್ ತಲುಪಿದರು.

ಭಾನುವಾರ ನಡೆಯಲಿರುವ ಪ್ರಶಸ್ತಿ ಸುತ್ತಿನ ಪಂದ್ಯದಲ್ಲಿ ಅವರು ಹಾಲಿ ಚಾಂಪಿಯನ್ ಕಾರ್ಲೋಸ್ ಅಲ್ಕರಾಜ್ ಅವರನ್ನು ಎದುರಿಸಲಿದ್ದಾರೆ.

ಇದಕ್ಕೆ ಮೊದಲು ಎರಡು ಬಾರಿಯ ಚಾಂಪಿಯನ್ ಹಾಗೂ ಎರಡನೇ ಶ್ರೇಯಾಂಕದ ಅಲ್ಕರಾಜ್ ಮೊದಲ ಸೆಮಿಫೈನಲ್‌ನಲ್ಲಿ ಅಮೆರಿಕದ ಆಟಗಾರ, ಐದನೇ ಶ್ರೇಯಾಂಕದ ಟೇಲರ್ ಫ್ರಿಟ್ಜ್ ಅವರನ್ನು 6-4, 5-7, 6-3, 7-6 (6) ರಿಂದ ಸೋಲಿಸಿ ಸತತ ಮೂರನೇ ಬಾರಿ ಫೈನಲ್ ತಲುಪಿದ್ದರು.

ಈ ಮೂಲಕ ಅಲ್ಕರಾಜ್ ಅವರು ವಿಂಬಲ್ಡನ್‌ನಲ್ಲಿ ಸತತ 20 ಪಂದ್ಯಗಳನ್ನು ಗೆದ್ದಂತಾಗಿದೆ.

ನಾಲ್ಕು ವಾರಗಳ ಹಿಂದೆ ಫ್ರೆಂಚ್ ಓಪನ್‌ನಲ್ಲಿ ರೋಮಾಂಚಕಾರಿ ಫೈನಲ್ ಆಡಿದ್ದ 22 ವರ್ಷ ವಯಸ್ಸಿನ ಸ್ಪೇನ್ ಆಟಗಾರ ಮತ್ತು 23 ವರ್ಷ ವಯಸ್ಸಿನ ಇಟಲಿಯ ಆಟಗಾರನ ಮಧ್ಯೆ ಮತ್ತೊಂದು ಫೈನಲ್‌ಗೆ ವೇದಿಕೆ ಸಜ್ಜಾಗಿದೆ. ಫ್ರೆಂಚ್ ಓಪನ್‌ನಲ್ಲಿ ಅಲ್ಕರಾಜ್ ಜಯಶಾಲಿಯಾಗಿದ್ದರು.

ಗ್ರ್ಯಾನ್‌ಸ್ಲಾಮ್ ಫೈನಲ್ ಪಂದ್ಯಗಳಲ್ಲಿ ಅಲ್ಕರಾಜ್ 5-0 ಗೆಲುವಿನ ದಾಖಲೆ ಹೊಂದಿದ್ದಾರೆ. ಸಿನ್ನರ್ ಮೂರು ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ವಿಜೇತರಾಗಿದ್ದಾರೆ.

'ಈ ಪಂದ್ಯವೂ ಕಳೆದ ಪಂದ್ಯದಂತೆ (ಫ್ರೆಂಚ್ ಓಪನ್)ನಂತೆ ಉತ್ತಮ ಪಂದ್ಯವಾಗುವ ವಿಶ್ವಾಸವಿದೆ. ಅದಕ್ಕಿಂತ ಉತ್ತಮವಾಗುವುದೇ ತಿಳಿಯದು. ಯಾಕೆಂದರೆ ಅದು ಅಸಂಭವದಂತೆ ಕಾಣುತ್ತದೆ' ಎಂದು ಸಿನ್ನರ್ ಪಂದ್ಯದ ಬಳಿಕ ಪ್ರತಿಕ್ರಿಯಿಸಿದರು.

ದಾಖಲೆಯ 25ನೇ ಗ್ರ್ಯಾನ್‌ಸ್ಲಾಮ್ ಗೆಲ್ಲುವ 38 ವರ್ಷ ವಯಸ್ಸಿನ ಸರ್ಬಿಯಾ ಆಟಗಾರನ ಕನಸು ಈ ಬಾರಿಯೂ ಈಡೇರಲಿಲ್ಲ. ಅವರು ಸೆಮಿಫೈನಲ್ ಪಂದ್ಯದಲ್ಲಿ ಪೂರ್ಣವಾಗಿ ಫಿಟ್ ಆಗಿರುವಂತೆಯೂ ಕಾಣಲಿಲ್ಲ.

ಐದನೇ ಶ್ರೇಯಾಂಕದ ಜೊಕೊವಿಚ್ ಅವರು ಈ ವರ್ಷ ಮೂರೂ ಸ್ಲ್ಯಾಮ್‌ಗಳ ಸೆಮಿಫೈನಲ್‌ನಲ್ಲಿ ನಿರ್ಗಮಿಸಿದಂತೆ ಆಗಿದೆ. ಆಸ್ಟ್ರೇಲಿಯಾ ಓಪನ್ ನಾಲ್ಕರ ಘಟ್ಟದಲ್ಲಿ ಮೊಣಕಾಲಿನ ಸ್ನಾಯುರಜ್ಜು ನೋವಿನಿಂದ ಅಲೆಕ್ಸಾಂಡರ್ ಜ್ವರೇವ್ ಎದುರು ಅರ್ಧದಲ್ಲೇ ಹಿಂದೆಸರಿದಿದ್ದರು. ಫ್ರೆಂಚ್ ಓಪನ್ ಸೆಮಿಫೈನಲ್‌ನಲ್ಲಿ ಸಿನ್ನರ್‌ಗೆ ಮಣಿದಿದ್ದರು.

ಮಹಿಳಾ ಸಿಂಗಲ್ಸ್: ನೂತನ ಚಾಂಪಿಯನ್ ಸ್ವಾಗತಕ್ಕೆ ಸಜ್ಜು

ಲಂಡನ್ (ರಾಯಿಟರ್ಸ್): ಮಹಿಳೆಯರ ವಿಭಾಗದಲ್ಲಿ ಸತತ ಎಂಟನೇ ಬಾರಿ ಹೊಸ ಚಾಂಪಿಯನ್ ಸ್ವಾಗತಕ್ಕೆ ವಿಂಬಲ್ಡನ್ ಸಜ್ಜಾಗಿದೆ. ಪೋಲೆಂಡ್‌ನ ಇಗಾ ಶ್ವಾಂಟೆಕ್ ಮತ್ತು ಅಮೆರಿಕದ ಅಮಂಡಾ ಅನಿಸಿಮೋವಾ ಅವರು ಮೊದಲ ಬಾರಿ ಫೈನಲ್ ತಲುಪಿದ್ದು, ವೀನಸ್ ರೋಸ್‌ವಾಟರ್ ಡಿಶ್ (ಮಹಿಳೆಯ ಸಿಂಗಲ್ಸ್ ವಿಜೇತರಿಗೆ ನೀಡುವ ಪ್ರಶಸ್ತಿ) ಟ್ರೋಫಿಯ ಮೇಲೆ ಹೊಸ ಹೆಸರು ಮೂಡಲಿದೆ.

ಎಂಟನೇ ಶ್ರೇಯಾಂಕದ ಇಗಾ ಶ್ವಾಂಟೆಕ್ ಆರನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಯ ನಿರೀಕ್ಷೆಯಲ್ಲಿದ್ದಾರೆ. 13ನೇ ಶ್ರೇಯಾಂಕದ ಅನಿಸಿಮೋವಾ ಇದೇ ಮೊದಲ ಬಾರಿ ಗ್ರ್ಯಾನ್‌ಸ್ಲಾಮ್ ಟೂರ್ನಿಯೊಂದರ ಫೈನಲ್ ಆಡುತ್ತಿದ್ದಾರೆ.

ನಾಲ್ಕು ಬಾರಿ ಫ್ರೆಂಚ್ ಓಪನ್ ಹಾಗೂ ಒಮ್ಮೆ (2022ರಲ್ಲಿ) ಅಮೆರಿಕ ಓಪನ್ ಪ್ರಶಸ್ತಿ ಗೆದ್ದಿರುವ 24 ವರ್ಷ ವಯಸ್ಸಿನ ಶ್ವಾಂಟೆಕ್ ಮೊದಲ ಬಾರಿ ಹುಲ್ಲಿನಂಕಣದ ಟೂರ್ನಿಯಲ್ಲಿ ಪ್ರಶಸ್ತಿ ಗೆಲ್ಲುವ ವಿಶ್ವಾಸದಲ್ಲಿದ್ದಾರೆ. 13 ತಿಂಗಳಿಂದ ಅವರು ಯಾವುದೇ ಪ್ರಮುಖ ಪ್ರಶಸ್ತಿ ಗೆದ್ದಿಲ್ಲ.

ಅನಿಸಿಮೋವಾ ಈ ವರ್ಷ ಅಮೆರಿಕದ ಪ್ರಾಬಲ್ಯ ಮುಂದುವರಿಸುವ ವಿಶ್ವಾಸದಲ್ಲಿದ್ದಾರೆ. ಈ ವರ್ಷ ಆಸ್ಟ್ರೇಲಿಯನ್ ಓಪನ್‌ನಲ್ಲಿ ಮ್ಯಾಡಿಸನ್ ಕೀಸ್ ಹಾಗೂ ಫ್ರೆಂಚ್ ಓಪನ್‌ನಲ್ಲಿ ಕೋಕೊ ಗಾಫ್ ವಿಜೇತರಾಗಿದ್ದರು. 2016ರಲ್ಲಿ ವೀನಸ್ ವಿಲಿಯಮ್ಸ್ ನಂತರ ಈ ಪ್ರಶಸ್ತಿ ಗೆದ್ದ ಅಮೆರಿಕದ ಮೊದಲ ಆಟಗಾರ್ತಿ ಎನಿಸುವ ವಿಶ್ವಾಸದಲ್ಲಿ ಅವರು ಇದ್ದಾರೆ.

ಪ್ಯಾರಾ ಅಥ್ಲೆಟಿಕ್ಸ್: ಕರ್ನಾಟಕಕ್ಕೆ ಎರಡು ಪದಕಗಳು

ಅಂಟಿಲ್, ನಿಮಿಷಾಗೆ ಚಿನ್ನದ ಸಂಭ್ರಮ

ಪ್ರಜಾವಾಣಿ ವಾರ್ತೆ



ಲಾಂಗ್ ಜಂಪ್ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದ ನಿಮಿಷಾ ಸಿ.ಎಸ್. (ಎಡಚಿತ್ರ) ಜಾವೆಲಿನ್ ಥ್ರೋ ವಿಭಾಗದಲ್ಲಿ ಪ್ರಥಮ ಸ್ಥಾನ ಗೆದ್ದ ನವದೀಪ್ ಸಿಂಗ್ ಚಿತ್ರಗಳು: ಕೃಷ್ಣ ಕುಮಾರ್ ಪಿ.ಎಸ್.

ಬೆಂಗಳೂರು: ಪ್ಯಾರಾಲಿಂಪಿಯನ್ ಸುಮಿತ್ ಅಂಟಿಲ್ ಮತ್ತು ಗುಜರಾತ್‌ನ ಸಿ.ಎಸ್. ನಿಮಿಷಾ ಅವರು ಶುಕ್ರವಾರ ಇಲ್ಲಿ ಆರಂಭವಾದ 7ನೇ ಇಂಡಿಯನ್ ಪ್ಯಾರಾ ಅಥ್ಲೆಟಿಕ್ಸ್‌ನಲ್ಲಿ ಚಿನ್ನದ ಪದಕ ಗೆದ್ದರು.

ಕಂಠೀರವ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಕೂಟದ ಪುರುಷರ ಜಾವೆಲಿನ್ ಥ್ರೋ (ಎಫ್‌12 ಹಾಗೂ ಎಫ್‌64) ಸ್ಪರ್ಧೆಯಲ್ಲಿ ಹರಿಯಾಣದ ಸುಮಿತ್ ಅವರು 72.25 ಮೀಟರ್ಸ್ ದೂರ ಎಸೆತದ ಸಾಧನೆ ಮಾಡಿದರು.


ಸುಮಿತ್ ಆಂಟಿಲ್

ರಸ್ತೆ ಅಪಘಾತದಲ್ಲಿ ಎಡಗಾಲು ಕಳೆದುಕೊಂಡಿದ್ದ ಸುಮಿತ್ ಅವರು ಕೃತಕ ಕಾಲು ಅಳವಡಿಸಿಕೊಂಡಿದ್ದಾರೆ. 2020ರ ಟೋಕಿಯೊ ಮತ್ತು 2024ರ ಪ್ಯಾರಿಸ್ ಪ್ಯಾರಾಲಿಂಪಿಕ್ಸ್‌ಗಳಲ್ಲಿ ಅವರು ಚಿನ್ನದ ಪದಕ ಗೆದ್ದಿದ್ದರು. ಹೋದ ವರ್ಷದ ವಿಶ್ವ ಪ್ಯಾರಾ ಗೇಮ್ಸ್‌ನಲ್ಲಿಯೂ ಚಿನ್ನದ ಸಾಧನೆ ಮಾಡಿದ್ದರು.

ಮಹಿಳೆಯರ ಲಾಂಗ್ ಜಂಪ್ (ಟಿ46 ಹಾಗೂ ಟಿ47) ಸ್ಪರ್ಧೆಯಲ್ಲಿ ಗುಜರಾತ್‌ನ ಸಿ.ಎಸ್. ನಿಮಿಷಾ 5.43 ಮೀಟರ್ಸ್ ದೂರ ಜಿಗಿದರು. ಅದರೊಂದಿಗೆ ಬಂಗಾರದ ಪದಕ ತಮ್ಮದಾಗಿಸಿಕೊಂಡರು. ಪೋಲಿಯೊದಿಂದಾಗಿ ಅವರ ಒಂದು ಕೈ ಊನವಾಗಿರುವುದರಿಂದ ಈ ವಿಭಾಗದಲ್ಲಿ ಸ್ಪರ್ಧಿಸುತ್ತಿದ್ದಾರೆ.

ಪುರುಷರ ವಿಭಾಗದ ಜಾವೆಲಿನ್‌ನಲ್ಲಿ ಹರಿಯಾಣದ ನವದೀಪ್ ಕುಮಾರ್ ಅವರು 42.63 ಮೀಟರ್ಸ್ ದೂರ ಸಾಧನೆ ಮಾಡಿ ಬಂಗಾರ ಗಳಿಸಿದರು. ಎಫ್‌40 ಮತ್ತು ಎಫ್‌41 ವಿಭಾಗ ಇದಾಗಿದ್ದು, ಕುಬ್ಜರು ಭಾಗವಹಿಸುತ್ತಾರೆ. ನವದೀಪ್ ಅವರು ಪ್ಯಾರಿಸ್ ಪ್ಯಾರಾ ಲಿಂಪಿಕ್ಸ್‌ನಲ್ಲಿಯೂ ಪದಕ ಜಯಿಸಿದ್ದರು.

ಕರ್ನಾಟಕಕ್ಕೆ ಎರಡು ಪದಕ: ಈ ಕೂಟದಲ್ಲಿ ಕರ್ನಾಟಕದ ಸ್ಪರ್ಧಿಗಳು ಎರಡು ಪದಕ ಜಯಿಸಿದರು. ಪುರುಷರ 1500 ಮೀ ಓಟ (ಟಿ11)ದಲ್ಲಿ ಕೇಶವಮೂರ್ತಿ ಕಾನಾಟಿಕೆ ಬೆಳ್ಳಿ ಪದಕ ಗಳಿಸಿದರು. ಅವರು 4 ನಿಮಿಷ, 44.60 ಸೆಕೆಂಡುಗಳಲ್ಲಿ ಗುರಿ ತಲುಪಿದರು. ಈ ವಿಭಾಗದಲ್ಲಿ ಛತ್ತೀಸಗಡದಲ್ಲಿ ಸುಖದೇವ್ ಮತ್ತು ಹರಿಯಾಣದ ಅಂಕುರ್ ಧರ್ಮಾ ಕರ್ಮವಾಗಿ ಚಿನ್ನ ಮತ್ತು ಕಂಚು ಗಳಿಸಿದರು.

ಮಹಿಳೆಯರ ವಿಭಾಗದ ಲಾಂಗ್ ಜಂಪ್ (ಟಿ20, ಟಿ37 ಮತ್ತು ಟಿ44) ವಿಭಾಗದಲ್ಲಿ ಕರ್ನಾಟಕದ ಹರ್ಷಿತಾ ಟೇಟರ್ ಅವರು ಬೆಳ್ಳಿ ಪದಕ ಪಡೆದರು.

ಈಜು: ದಕ್ಷಣ್, ಶರಣ್ ಕೂಟ ದಾಖಲೆ

ಬೆಂಗಳೂರು: ಬಸವನಗುಡಿ ಈಜು ಕೇಂದ್ರದ (ಬಿಎಸಿ) ದಕ್ಷಣ್ ಎಸ್., ಶರಣ್ ಎಸ್. ಮತ್ತು ಮತ್ಸ್ಯ ಈಜು ಕೇಂದ್ರದ ಸುಬ್ರಹ್ಮಣ್ಯ ಜೀವಾಂಶ್ ಅವರು ಕರ್ನಾಟಕ ಈಜು ಸಂಸ್ಥೆ ಆಶ್ರಯದಲ್ಲಿ ನಡೆಯುತ್ತಿರುವ ರಾಜ್ಯ ಸಬ್ ಜೂನಿಯರ್ ಮತ್ತು ಜೂನಿಯರ್ ಚಾಂಪಿಯನ್‌ಷಿಪ್‌ನಲ್ಲಿ ಬಾಲಕರ ವಿಭಾಗದಲ್ಲಿ ಕೂಟ ದಾಖಲೆಗಳನ್ನು ಸ್ಥಾಪಿಸಿದರು. ಬಾಲಕಿಯರ ವಿಭಾಗದಲ್ಲಿ ರುಜುಲಾ ಎಸ್. ಮತ್ತು ತನಿಶಿ ಗುಪ್ತಾ ಚಿನ್ನ ಗೆಲ್ಲುವ ಹಾದಿಯಲ್ಲಿ ದಾಖಲೆಗಳನ್ನು ಮುಳುಗಿಸಿದರು.

ಬಸವನಗುಡಿ ಈಜು ಕೇಂದ್ರದಲ್ಲಿ ನಡೆಯುತ್ತಿರುವ ಈ ಕೂಟದಲ್ಲಿ ಮೂರನೇ ದಿನವಾದ ಶುಕ್ರವಾರ ಐದು ದಾಖಲೆಗಳು ಮೂಡಿಬಂದವು.

ದಕ್ಷಣ್ ಬಾಲಕರ ಒಂದನೇ ಗುಂಪಿನಲ್ಲಿ 800 ಮೀ. ಫ್ರೀಸ್ಟೈಲ್ ಸ್ಪರ್ಧೆಯನ್ನು 8 ನಿಮಿಷ 27.52 ಸೆಕೆಂಡುಗಳಲ್ಲಿ ಕ್ರಮಿಸಿ, ಅನೀಶ್ ಎಸ್.ಗೌಡ ಅವರು 2021ರಲ್ಲಿ ಸ್ಥಾಪಿಸಿದ್ದ 8ನಿ.30.18 ಸೆ.ಗಳ ದಾಖಲೆಯನ್ನು ಮುಳುಗಿಸಿದರು.

ಬಾಲಕರ 2ಎ ಗುಂಪಿನ 800 ಮೀ. ಫ್ರೀಸ್ಟೈಲ್‌ನಲ್ಲಿ ಬಿಎಸಿಯ ಶರಣ್ ಎಸ್. 8ನಿ.41.26 ಸೆ.ಗಳಲ್ಲಿ ಅಂತರ ಕ್ರಮಿಸಿ, ಸಂಜಯ್ ಸಿ.ಜೆ. (ಡಾಲ್ಫಿನ್ ಅಕ್ವೆಟಿಕ್ಸ್) ಹೆಸರಿನಲ್ಲಿದ್ದ ದಾಖಲೆ (8ನಿ.43.88 ಸೆ.) ಮುರಿದರು.

ಮತ್ಸ್ಯ ಈಜು ಕೇಂದ್ರದ ಎಸ್.ಜೀವಾಂಶ್ ಎರಡನೇ ಗುಂಪಿನಲ್ಲಿ 2ನಿ.17.82 ಸೆ.ಗಳಲ್ಲಿ ದೂರ ಕ್ರಮಿಸಿ ಅಕ್ಷಜ್ ಠಾಕೂರಿಯಾ ಹೆಸರಿನಲ್ಲಿದ್ದ (2ನಿ.18.51) ಸೆ.ಗಳ ದಾಖಲೆ ಮುರಿದರು.

ಬಾಲಕಿಯರ ಒಂದನೇ ಗುಂಪಿನ 50 ಮೀ. ಬಟರ್‌ಫ್ಲೈ ಸ್ಪರ್ಧೆಯನ್ನು ಡಾಲ್ಫಿನ್ ಅಕ್ವೆಟಿಕ್ಸ್‌ನ ರುಜುಲಾ 28.72 ಸೆ.ಗಳಲ್ಲಿ ಕ್ರಮಿಸಿದರು. ಡಾಲ್ಫಿನ್ ಕ್ಲಬ್‌ನ ಮಾನವಿ ವರ್ಮಾ, ತಾನಿಶಿ ಗುಪ್ತಾ ಹೆಸರಿನಲ್ಲಿದ್ದ (28.83) ದಾಖಲೆ ಸುಧಾರಿಸಿದರು. ಇದೇ ಕ್ಲಬ್‌ನ ತನಿಶಿ ಬಾಲಕಿಯರ ಒಂದನೇ 'ಬಿ' ಗುಂಪಿನಲ್ಲಿ50 ಮೀ. ಬಟರ್‌ಫ್ಲೈ ಸ್ಪರ್ಧೆಯನ್ನು 28.29 ಸೆ.ಗಳಲ್ಲಿ ಪೂರೈಸಿ, ರುಜುಲಾ ಎಸ್. ಹೆಸರಿನಲ್ಲಿದ್ದ ದಾಖಲೆ (28.72) ಮುರಿದರು.


ಪ್ರಶಸ್ತಿಯೊಂದಿಗೆ ಹಿಯಾ ಸಿಂಗ್, ಅಥರ್ವ ನವರಂಗೆ ಹಾಗೂ ಆಕಾಶ್ ಕೆ.ಜೆ.

ಆಕಾಶ್, ಹಿಯಾ, ಅಥರ್ವಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಮಂಗಳೂರು: ಆಕಾಶ್ ಕೆ.ಜೆ. ಅವರು ಇಲ್ಲಿ ನಡೆಯುತ್ತಿರುವ ಮೂರನೇ ರಾಜ್ಯ ರ್‍ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯ ಪುರುಷರ ಸಿಂಗಲ್ಸ್ ಕಿರೀಟ ಮುಡಿಗೇರಿಸಿಕೊಂಡರು.

ನಗರದ ಫಾದರ್ ಮುಲ್ಲರ್ ಒಳಾಂಗಣ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಫೈನಲ್ ಪಂದ್ಯದಲ್ಲಿ, ಆಕಾಶ್ 11–7, 11–3, 11–9, 11–3ರಿಂದ ಅನಿರ್ಬನ್ ರಾಯ್‌ಚೌಧರಿ ಅವರನ್ನು ನೇರ ಸೆಟ್‌ಗಳಲ್ಲಿ ಮಣಿಸಿದರು.


ಇದಕ್ಕೆ ಮೊದಲು ನಡೆದ ಸೆಮಿಫೈನಲ್ ಪಂದ್ಯಗಳಲ್ಲಿ ಅನಿರ್ಬನ್ 11–9, 11–5, 11–7, 11–8ರಿಂದ ಶ್ರೀಕಾಂತ್ ಕಶ್ಯಪ್ ವಿರುದ್ಧ ಹಾಗೂ ಆಕಾಶ್ 11–7, 11–4, 12–10, 10–12, 11–3ರಿಂದ ಯಶವಂತ್ ಪಿ. ವಿರುದ್ಧ ಜಯಗಳಿಸಿದ್ದರು.

ಹಿಯಾ ಸಿಂಗ್‌ಗೆ ಪ್ರಶಸ್ತಿ: ಹಿಯಾ ಸಿಂಗ್ ಅವರು 17 ವರ್ಷದೊಳಗಿನವರ ವಿಭಾಗದ ಫೈನಲ್‌ನಲ್ಲಿ 10–12, 11–8, 11–7, 11–4ರಿಂದ ತನಿಷ್ಕಾ ಕಾಲಭೈರವ ಅವರನ್ನು ಮಣಿಸಿ ಪ್ರಶಸ್ತಿ ತಮ್ಮದಾಗಿಸಿಕೊಂಡರು.

ಸೆಮಿಫೈನಲ್ ಪಂದ್ಯಗಳಲ್ಲಿ ತನಿಷ್ಕಾ ಅವರು 11–8, 11–7, 10–12, 8–11, 11–8ರಿಂದ ಹಿಮಾಂಶಿ ಚೌಧರಿ ಎದುರು; ಹಿಯಾ ಅವರು 11–7, 9–11, 11–4, 11–4ರಿಂದ ಕೈರಾ ಬಾಳಿಗಾ ಎದುರು ಗೆಲುವು ಸಾಧಿಸಿದ್ದರು.

ಅಥರ್ವಗೆ ಪ್ರಶಸ್ತಿ: 17 ವರ್ಷದೊಳಗಿನವರ ಬಾಲಕರ ವಿಭಾಗದ ಫೈನಲ್‌ನಲ್ಲಿ ಅಥರ್ವ ನವರಂಗೆ ಅವರು 1–11, 11–7, 11–6, 11–5ರಿಂದ ಆರ್ಣವ್ ಎನ್. ಅವರನ್ನು ಸೋಲಿಸಿ ಪ್ರಶಸ್ತಿ ಗೆದ್ದುಕೊಂಡರು.

ನೀರಜ್‌ಗೆ ವಿದೇಶದಲ್ಲಿ ತರಬೇತಿ



ನವದೆಹಲಿ (ಪಿಟಿಐ): ಜಾವೆಲಿನ್ ತಾರೆ ನೀರಜ್ ಚೋಪ್ರಾ ಸೇರಿದಂತೆ ವಿಶ್ವ ಚಾಂಪಿಯನ್‌ಷಿಪ್‌ಗೆ ತೆರಳುವ ಭಾರತದ ಟ್ರ್ಯಾಕ್ ಅಂಡ್ ಫೀಲ್ಡ್ ಅಥ್ಲೀಟುಗಳಿಗೆ ಯುರೋಪ್ ಮತ್ತು ಅಮೆರಿಕದಲ್ಲಿ ತರಬೇತಿ ಪಡೆಯಲಿದ್ದಾರೆ. ಅನುಭವ ಪಡೆದು ಪದಕ ಗೆಲ್ಲುವ ಸಂಭವ ಹೆಚ್ಚಿಸುವ ಇಂಥ ದೀರ್ಘಾವಧಿ ಪ್ರವಾಸಕ್ಕೆ ಕ್ರೀಡಾ ಸಚಿವಾಲಯದ ಮಿಷನ್ ಒಲಿಂಪಿಕ್ ಸೆಲ್ (ಎಂಒಸಿ) ಸಮ್ಮತಿ ನೀಡಿದೆ.

ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್ ಟೋಕಿಯೊದಲ್ಲಿ ಸೆ. 13 ರಿಂದ 21ರವರೆಗೆ ನಡೆಯಲಿದೆ.

ಎಂಒಸಿಯ 157ನೇ ಸಭೆಯ ಶನಿವಾರ ಇಲ್ಲಿ ನಡೆಯಿತು. ಅಥ್ಲೆಟಿಕ್ಸ್ ಕ್ರೀಡೆ ಅತಿ ದೊಡ್ಡ ಫಲಾನುಭವಿಯಾಗಿದ್ದು, ತರಬೇತಿ ಮತ್ತು ಸ್ಪರ್ಧಿಗಳ ಪ್ರಸ್ತಾವಕ್ಕೆ ಒಪ್ಪಿಗೆ ನೀಡಲಾಯಿತು. ಇದಕ್ಕೆ ಒಟ್ಟು ₹86 ಲಕ್ಷ ವೆಚ್ಚವಾಗಲಿದೆ. ಈಗಾಗಲೇ ಈ ಕೂಟಕ್ಕೆ ಅರ್ಹತೆ ಪಡೆದದವರಿಗೆ ಸಿಂಹಪಾಲು ವೆಚ್ಚ ಸಿಗಲಿದೆ.

ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಎರಡು ಪದಕ ಗೆದ್ದ ಭಾರತದ ಏಕೈಕ ಸ್ಪರ್ಧಿ ಮತ್ತು ಪದಕದ ಪ್ರಬಲ ಭರವಸೆಯಾಗಿರುವ ಚೋಪ್ರಾ ಅವರು ಝೆಕ್ ಗಣರಾಜ್ಯದ ಪ್ರಾಗ್ ಮತ್ತು ನಿಂಬುರ್ಕ್‌ನಲ್ಲಿ 57 ದಿನ ತರಬೇತಿ ಪಡೆಯಲಿದ್ದಾರೆ. ಅವರು ತಮ್ಮ ಫಿಸಿಯೊ ಇಶಾನ್ ಮಾರ್ವಾ ಜೊತೆ ಶನಿವಾರ ನಿರ್ಗಮಿಸಿದ್ದು, ಸೆ. 5ರವರೆಗೆ ಝೆಕ್ ಗಣರಾಜ್ಯದಲ್ಲಿ ಇರುತ್ತಾರೆ.

ಸ್ಟೀಪಲ್‌ಚೇಸರ್‌ಗಳಾದ ಅವಿನಾಶ್ ಸಾಬ್ಳೆ, ಪಾರುಲ್ ಚೌಧರಿ, ದೂರ ಅಂತರದ ಓಟಗಾರರಾದ ಗುಲ್ವೀರ್ ಸಿಂಗ್ ಅವರು ಲಾಸ್ ಏಂಜಲಿಸ್‌ನ ಕೊಲರಾಡೊ ಸ್ಪ್ರಿಂಗ್ಸ್‌ನಲ್ಲಿ ಜುಲೈ 16 ರಿಂದ ಸೆಪ್ಟೆಂಬರ್ 3ರವರೆಗೆ ತರಬೇತಿ ಪಡೆಯಲಿದ್ದಾರೆ. ಈ ಮೂವರ ತರಬೇತಿ, ಪ್ರವಾಸಕ್ಕೆ ಸರ್ಕಾರ ₹41.29 ಲಕ್ಷ ವೆಚ್ಚ ಮಾಡಲಿದೆ. ಈ ಮೂವರೂ ರಾಷ್ಟ್ರೀಯ ದಾಖಲೆ ಹೊಂದಿದ್ದು, ದಕ್ಷಿಣ ಕೊರಿಯಾದ ಗುಮಿಯಲ್ಲಿ ಏಷ್ಯಾ ಚಾಂಪಿಯನ್‌ಷಿಪ್‌ನಲ್ಲಿ ಉತ್ತಮ ನಿರ್ವಹಣೆ ತೋರಿದ್ದರು. ಗುಲ್ವೀರ್ ಅವರು 5000 ಮತ್ತು 10000 ಮೀ. ಓಟಗಳಲ್ಲಿ ಚಿನ್ನ ಜಯಿಸಿದ್ದರು.

ಇತರ ಪ್ರಸ್ತಾವಳಿಗೆ ಅಂಕಿತ: ಲಾಂಗ್ ಜಂಪ್ ಸ್ಪರ್ಧಿ ಮುರಳಿ ಶ್ರೀಶಂಕರ್ ಅವರು ಯುರೋಪ್ ಮತ್ತು ಮಧ್ಯ ಏಷ್ಯಾದಲ್ಲಿ (ಪೋರ್ಚುಗಲ್, ಸ್ಪೇನ್, ಕಜಕಸ್ತಾನ) ನಡೆಯುವ ಸ್ಪರ್ಧೆಗಳಲ್ಲಿ ಪಾಲ್ಗೊಳ್ಳಲಿದ್ದು ಇದಕ್ಕಾಗಿ ₹5.58 ಲಕ್ಷ ಮಂಜೂರಾಗಿದೆ. ಈ ಸ್ಪರ್ಧೆಗಳು ಜುಲೈ 19 ರಿಂದ ಆಗಸ್ಟ್ 14ರ ಮಧ್ಯೆ ನಡೆಯಲಿವೆ.

ಲಾಂಗ್‌ಜಂಪ್‌ನಲ್ಲಿ ಪದಕ ಭರವಸೆಗಳಾದ ಆನ್ಸಿ ಸೋಜನ್, ಶೈಲಿ ಸಿಂಗ್ ಅವರು ಯುರೋಪ್‌ನಲ್ಲಿ (ಲಂಡನ್, ಬರ್ಲಿನ್, ಲುಸಾನ್) ನಡೆಯುವ ಸ್ಪರ್ಧೆಗಳಲ್ಲಿ ಭಾಗವಹಿಸಲಿದ್ದು, ₹9.21 ಲಕ್ಷ ವೆಚ್ಚವಾಗಲಿದೆ.

ಆ.11ರಿಂದ ಮಹಾರಾಜ ಟ್ರೋಫಿ ಪ್ರೇಕ್ಷಕರಿಗೆ ಇಲ್ಲ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಆಶ್ರಯದಲ್ಲಿ ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿಯು ಆಗಸ್ಟ್ 11 ರಿಂದ 27ರವರೆಗೆ ನಡೆಯಲಿದೆ. ಭಾರತ ತಂಡದ ಆಟಗಾರರಾದ ಕರುಣ್ ನಾಯರ್, ಪ್ರಸಿದ್ಧಕೃಷ್ಣ ಮತ್ತು ಮಯಂಕ್ ಅಗರವಾಲ್ ಅವರು ಟೂರ್ನಿಯಲ್ಲಿ ಆಡಲಿದ್ದಾರೆ. ಅವರು ಹೋದ ವರ್ಷ ಆಡಿದ್ದ ತಂಡಗಳಲ್ಲಿಯೇ ಮುಂದುವರಿಯುವರು.

ಆದರೆ ಈ ಬಾರಿ ಪಂದ್ಯಗಳನ್ನು ವೀಕ್ಷಿಸಲು ಪ್ರೇಕ್ಷಕರಿಗೆ ಅವಕಾಶವಿರುವುದಿಲ್ಲ. ಜೂನ್ 4ರಂದು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಐಪಿಎಲ್ ಟ್ರೋಫಿ ವಿಜಯೋತ್ಸವ ಕಾರ್ಯಕ್ರಮದ ಸಂದರ್ಭದಲ್ಲಿ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಕಾಲ್ತುಳಿತ ದುರ್ಘಟನೆ ನಡೆದಿತ್ತು. ಅದರಲ್ಲಿ 11 ಜನರು ದುರ್ಮರಣ ಹೊಂದಿದ್ದರು.

ಕೆಎಸ್‌ಸಿಎ ಕಾರ್ಯದರ್ಶಿಯಾಗಿದ್ದ ಎ. ಶಂಕರ್ ಮತ್ತು ಖಜಾಂಚಿ ಇ.ಎಸ್. ಜಯರಾಮ್ ಅವರು ಈ ಘಟನೆಯ ನಂತರ ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಿದ್ದರು. ಪ್ರಕರಣದ ಕುರಿತ ವಿಚಾರಣೆಯು ರಾಜ್ಯ ಹೈಕೋರ್ಟ್ ಮತ್ತು ಕೇಂದ್ರಿಯ ಆಡಳಿತಾತ್ಮಕ ನ್ಯಾಯಮಂಡಳಿ (ಸಿಎಟಿ) ಯಲ್ಲಿ ನಡೆಯುತ್ತಿದೆ.

ಆಟಗಾರರ ಹರಾಜು ಪ್ರಕ್ರಿಯೆಯು ಜುಲೈ 15ರಂದು ನೆಯಲಿದೆ. ಪ್ರತಿಯೊಂದು ತಂಡವು ಕನಿಷ್ಠ 16 ಮತ್ತು ಗರಿಷ್ಠ 18 ಆಟಗಾರರನ್ನು ಹೊಂದಬಹುದಾಗಿದೆ. ಒಟ್ಟು ಆರು ತಂಡಗಳು ಆಡಲಿದ್ದು, ಟೂರ್ನಿಯ ಎಲ್ಲ ಪಂದ್ಯಗಳೂ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಲಿವೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಬೂಮ್ರಾ ಐದು; ರಾಹುಲ್ ಭರವಸೆ

ಕ್ಯಾಚ್ ಕೈಚೆಲ್ಲಿದ ಫೀಲ್ಡರ್‌ಗಳು ● ಜೇಮಿ ಸ್ಮಿತ್, ಬ್ರೈಡನ್ ಕಾರ್ಸ್ ಉಪಯುಕ್ತ ಜೊತೆಯಾಟ

● ಸಿಡ್ನಿ ಕಿರಣ್

ಲಂಡನ್: ಅಭಿಮಾನಿಗಳಿಂದ ಮೆಚ್ಚುಗೆ ಮತ್ತು ಮೆರಿಲ್‌ಬೋನ್ ಕ್ರಿಕೆಟ್ ಕ್ಲಬ್ ಸದಸ್ಯರ ಶ್ಲಾಘನೆಯ ಚಪ್ಪಾಳೆಗಳು ಲಾರ್ಡ್ಸ್ ಡ್ರೆಸಿಂಗ್ ಕೋಣೆಗೆ ಹೋಗುವ ಲಾಂಗ್ ರೂಮ್‌ನಲ್ಲಿ ಪ್ರತಿಧ್ವನಿಸಿದವು. ಆ ಸಂಭ್ರಮದ ವಾತಾವರಣದ ಮಧ್ಯೆ ಹೆಜ್ಜೆ ಹಾಕುವ ಮತ್ತು ಹಳೆಯ ಹಲಗೆಯ ಫಲಕದ ಮೇಲೆ ಅಮೋಘ ಸಾಧಕರ ಸಾಲಿನಲ್ಲಿ ಜಾಗ ಪಡೆದ ಸಾರ್ಥಕತೆಯು ಭಾರತದ ಜಸ್‌ಪ್ರೀತ್ ಬೂಮ್ರಾ ಅವರದ್ದಾಯಿತು.

ಪ್ರಸ್ತುತ ಕ್ರಿಕೆಟ್ ಕ್ಷೇತ್ರದಲ್ಲಿ ಶ್ರೇಷ್ಠ ವೇಗದ ಬೌಲರ್ ಆಗಿರುವ ಬೂಮ್ರಾ ತಮ್ಮದೇ ಆದ ಛಾಪು ಮೂಡಿಸು-ತ್ತಿದ್ದಾರೆ. ಅವರ ಹೆಸರಿನಲ್ಲಿ ಹತ್ತಾರು ಸಾಧನೆಗಳಿವೆ. ಇದೀಗ ಕ್ರಿಕೆಟ್ ಕಾಶಿ ಲಾರ್ಡ್ಸ್‌ನಲ್ಲಿಯೂ ಅವರ ಹೆಸರು ಅಚ್ಚಾಯಿತು. ಇಲ್ಲಿ ಇದೇ ಮೊದಲ ಸಲ ಐದು ವಿಕೆಟ್‌ಗಳ ಗೊಂಚಲು ಪಡೆದ ಅವರ ಸಾಧನೆ ಸುವರ್ಣಾಕ್ಷರವಾಯಿತು. 2021ರಲ್ಲಿ ಅವರು ಇಂತಹದೇ ಒಂದು ಅವಕಾಶವನ್ನು ಕೈತಪ್ಪಿಸಿಕೊಂಡಿದ್ದರು. ಆಗ ಭಾರತ ತಂಡವು ಇದೇ ಕ್ರೀಡಾಂಗಣದಲ್ಲಿ 151 ರನ್ ಗೆಲುವು ಸಾಧಿಸಿತ್ತು. ಅದರಲ್ಲಿ ಬೂಮ್ರಾ ಮೂರು ವಿಕೆಟ್ ಗಳಿಸಿದ್ದರು.

ಆದರೆ ಶುಕ್ರವಾರವು ಅವರದ್ದಾಗಿತ್ತು. ಇಂಗ್ಲೆಂಡ್ ಎದುರಿನ ಮೂರನೇ ಪಂದ್ಯದ ಎರಡನೇ ದಿನದಾಟದಲ್ಲಿ ಅವರು (74ಕ್ಕೆ5) ತಮ್ಮ ಮಾಂತ್ರಿಕತೆ ಮೆರೆದರು. ಇದರಿಂದಾಗಿ ಆತಿಥೇಯ ತಂಡವು ಮೊದಲ ಇನಿಂಗ್ಸ್‌ನಲ್ಲಿ 112.3 ಓವರ್‌ಗಳಲ್ಲಿ 387 ರನ್‌ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು. ಅದಕ್ಕುತ್ತರವಾಗಿ ಇನಿಂಗ್ಸ್ ಆರಂಭಿಸಿದ ಪ್ರವಾಸಿ ತಂಡವು ದಿನದಾಟದ ಮುಕ್ತಾಯಕ್ಕೆ 43 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 145 ರನ್ ಗಳಿಸಿತು. ಮೊದಲ ಇನಿಂಗ್ಸ್ ಲೆಕ್ಕ ಚುಕ್ತಾಗೊಳಿಸಲು ಭಾರತ ತಂಡಕ್ಕೆ ಇನ್ನೂ 242 ರನ್‌ಗಳು ಬೇಕು. ಕ್ರೀಸ್‌ನಲ್ಲಿ ಕನ್ನಡಿಗ ಕೆ.ಎಲ್. ರಾಹುಲ್ (ಬ್ಯಾಟಿಂಗ್ 53) ಮತ್ತು ರಿಷಭ್ ಪಂತ್ (ಬ್ಯಾಟಿಂಗ್ 19) ಇದ್ದಾರೆ.

ಯಶಸ್ವಿ ಜೈಸ್ವಾಲ್ ಅವರು ಬೇಗನೆ ನಿರ್ಗಮಿಸಿದರು. ಅದರಿಂದಾಗಿ ಮೂಡಿದ್ದ ಆತಂಕವನ್ನು ದೂರಗೊಳಿಸುವ ಪ್ರಯತ್ನವನ್ನು ರಾಹುಲ್ ಮಾಡಿದರು. ಅವರು ಕರುಣ್ ನಾಯರ್ (40 ರನ್) ಜೊತೆಗೆ ಎರಡನೇ ವಿಕೆಟ್ ಜೊತೆಯಾಟದಲ್ಲಿ 61 ರನ್ ಸೇರಿಸಿದರು. ಅರ್ಧಶತಕದ ಹಾದಿಯಲ್ಲಿದ್ದ ನಾಯರ್ ಅವರನ್ನು ಸ್ಟೋಕ್ಸ್ ಅವರು ಔಟ್ ಮಾಡಿ ಜೊತೆಯಾಟ ಮುರಿದರು. ಎರಡನೇ ಟೆಸ್ಟ್‌ನಲ್ಲಿ ದ್ವಿಶತಕ ಮತ್ತು ಶತಕ ಹೊಡೆದಿದ್ದ ಶುಭಮನ್ ಗಿಲ್ (16 ರನ್) ಅವರನ್ನು ಕಟ್ಟಿಹಾಕುವಲ್ಲಿ ಕ್ರಿಸ್ ವೋಕ್ಸ್ ಯಶಸ್ವಿಯಾದರು.

ಬೂಮ್ರಾ ಬಿರುಗಾಳಿ: ಮೊದಲ ದಿನದಾಟದಲ್ಲಿ ಇಂಗ್ಲೆಂಡ್ 4 ವಿಕೆಟ್‌ಗಳಿಗೆ 251 ರನ್ ಗಳಿಸಿತ್ತು. 99 ರನ್ ಗಳಿಸಿ ಕ್ರೀಸ್‌ನಲ್ಲಿದ್ದ ಜೋ ರೂಟ್ ಎರಡನೇ ದಿನ ಬೆಳಿಗ್ಗೆ ಶತಕ ಪೂರೈಸಿಕೊಂಡರು. ಕೆಳಮಟ್ಟದಲ್ಲಿ ಪುಟಿದೆದ್ದು ಬರುತ್ತಿದ್ದ ಎಸೆತಗಳನ್ನು ಅವರು ತಾಳ್ಮೆಯಿಂದ ಎದುರಿಸಿ ನಿಂತರು. ಇನ್ನೊಂದು ಬದಿಯಲ್ಲಿ ನಾಯಕ ಬೆನ್ ಸ್ಟೋಕ್ಸ್ ಕೂಡ ದೊಡ್ಡ ಜೊತೆಯಾಟ ಬೆಳೆಸುವ ಯೋಚನೆಯಲ್ಲಿದ್ದರು.

ಆದರೆ ಬೂಮ್ರಾ ಲೆಕ್ಕಾಚಾರ ಬೇರೆಯೇ ಆಗಿತ್ತು. ಇನಿಂಗ್ಸ್‌ನ 86ನೇ ಓವರ್‌ನಲ್ಲಿ ಬೂಮ್ರಾ ಎಸೆತದ ಚಲನೆಯನ್ನು ಗುರುತಿಸುವಷ್ಟರಲ್ಲಿಯೇ ಸ್ಟೋಕ್ಸ್ ಅವರ ಆಫ್‌ಸ್ಟಂಪ್‌ಗೆ ಚೆಂಡು ಅಪ್ಪಳಿಸಿತ್ತು. ಇಂಗ್ಲೆಂಡ್ ನಾಯಕ ಅಚ್ಚರಿಯೊಂದಿಗೆ ಪೆವಿಲಿಯನ್‌ಗೆ ಮರಳಿದರು.

ಟೆಸ್ಟ್ ಕ್ರಿಕೆಟ್‌ನಲ್ಲಿ 37ನೇ ಶತಕ ಪೂರೈಸಿ ಆಡುತ್ತಿದ್ದ ಮತ್ತು ಉತ್ತಮ ಲಯದಲ್ಲಿದ್ದ ರೂಟ್ ಅವರಿಗೂ ಬೂಮ್ರಾ ಆಘಾತ ನೀಡಿದರು. ಆಫ್‌ಸ್ಟಂಪ್ ನೇರಕ್ಕೆ ಪುಟಿದೆದ್ದ ಚೆಂಡು ಬ್ಯಾಟ್ ಒಳಂಚು ಸವರಿಹೋಗಿ ಮಧ್ಯದ ಸ್ಟಂಪ್ ಉರುಳಿಸಿತ್ತು. ರೂಟ್ ಆಘಾತದೊಂದಿಗೆ ಮರಳಿದರು. ನಂತರದ ಎಸೆತದಲ್ಲಿ ಕ್ರಿಸ್ ವೋಕ್ಸ್ ಅವರು ಬೂಮ್ರಾ ಎಸೆತವನ್ನು ಕಟ್ ಮಾಡಲು ಹೋಗಿ ವಿಕೆಟ್‌ಕೀಪರ್ (ಬದಲೀ) ಧ್ರುವ ಜುರೇಲ್‌ಗೆ ಸುಲಭದ ಕ್ಯಾಚ್ ಆದರು. ಬೂಮ್ರಾ ಮೊದಲ ಸ್ಪೆಲ್ (5–1–23–3) ದಾಳಿಗೆ ಇಂಗ್ಲೆಂಡ್ ಬಹುತೇಕ ತತ್ತರಿಸಿತು. ಇನಿಂಗ್ಸ್‌ಗೆ ಬೇಗ ತೆರೆಬೀಳುವ ಭರವಸೆ ಮೂಡಿತ್ತು. ಇಂಗ್ಲೆಂಡ್ 271 ರನ್‌ಗಳಿಗೆ 7 ವಿಕೆಟ್ ಕಳೆದುಕೊಂಡಿತ್ತು.

ಆದರೆ ಸ್ಲಿಪ್ ಫೀಲ್ಡರ್‌ಗಳು ಕ್ಯಾಚ್‌ಗಳನ್ನು ಕೈಚೆಲ್ಲಿದ ಪರಿಣಾಮವು ದುಬಾರಿಯಾಯಿತು. ಸ್ಲಿಪ್‌ನಲ್ಲಿದ್ದ ಕೆ.ಎಲ್. ರಾಹುಲ್ ಅವರು ಸಿರಾಜ್ ಬೌಲಿಂಗ್‌ನಲ್ಲಿ ಜೇಮಿ ಸ್ಮಿತ್ ಅವರ ಕ್ಯಾಚ್ ಬಿಟ್ಟರು. ಆಗ 5 ರನ್ ಗಳಿಸಿದ್ದ ಸ್ಮಿತ್ ನಂತರ ಅರ್ಧಶತಕ ಬಾರಿಸಿದರು. ಬ್ರೈಡನ್ ಕಾರ್ಸ್ ಅವರಿಗೆ ವಿಕೆಟ್‌ಕೀಪರ್ ನೀಡಿದ ಜೀವದಾನದಿಂದ ತಂಡದ ಮೊತ್ತ ಬೆಳೆಯಿತು. ಸ್ಮಿತ್ ಮತ್ತು ಬ್ರೈಡನ್ ಅವರು ಎಂಟನೇ ವಿಕೆಟ್ ಜೊತೆಯಾಟದಲ್ಲಿ 84 (114 ಎಸೆತ) ರನ್ ಸೇರಿಸಿದರು.

ಕಡೆಗೂ ಸಿರಾಜ್ ಅವರು ಸ್ಮಿತ್ ವಿಕೆಟ್ ಪಡೆಯುವಲ್ಲಿ ಸಫಲರಾದರು. ಬೂಮ್ರಾ ಅವರು ತಮ್ಮ ಐದನೇ ವಿಕೆಟ್ ರೂಪದಲ್ಲಿ ಜೋಫ್ರಾ ಆರ್ಚರ್ ಅವರಿಗೆ ಪೆವಿಲಿಯನ್ ದಾರಿ ತೋರಿಸಿದರು.



ಕೆ.ಎಲ್. ರಾಹುಲ್ ಹಾಗೂ ಕರುಣ್ ನಾಯರ್ ಜೊತೆಯಾಟ ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್
ಇಂಗ್ಲೆಂಡ್ 387
(112.3 ಓವರುಗಳಲ್ಲಿ)

ರೂಟ್ ಬಿ ಬೂಮ್ರಾ 104 (199ಎ, 4x10)
ಸ್ಟೋಕ್ಸ್ ಬಿ ಬೂಮ್ರಾ 44 (110ಎ, 4x4)
ಸ್ಮಿತ್ ಸಿ ಸಬ್ (ಜುರೇಲ್) ಬಿ ಸಿರಾಜ್ 51 (56ಎ, 4x6)
ವೋಕ್ಸ್ ಸಿ ಸಬ್ (ಜುರೇಲ್) ಬಿ ಬೂಮ್ರಾ 0 (1ಎ)
ಕಾರ್ಸ್ ಬಿ ಸಿರಾಜ್ 56 (83ಎ, 4x6, 6x1)
ಆರ್ಚರ್ ಬಿ ಬೂಮ್ರಾ 4 (11ಎ, 4x1)
ಬಶೀರ್ ಔಟಾಗದೆ 1 (10ಎ)
ಇತರೆ: 31 (ಬೈ 11, ಲೆಗ್‌ಬೈ 13, ನೋಬಾಲ್ 2, ವೈಡ್ 5)
ವಿಕೆಟ್ ಪತನ: 5–260 (ಬೆನ್ ಸ್ಟೋಕ್ಸ್, 85.2), 6–271 (ಜೋ ರೂಟ್, 87.1), 7–271 (ಕ್ರಿಸ್ ವೋಕ್ಸ್, 87.2), 8–355 (ಜೇಮಿ ಸ್ಮಿತ್, 106.2), 9–370 (ಜೋಫ್ರಾ ಆರ್ಚರ್, 109.3), 10–387 (ಬ್ರೈಡನ್ ಕಾರ್ಸ್, 112.3)
ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 27–5–74–5; ಆಕಾಶ್ ದೀಪ್ 23–3–92–0; ಮೊಹಮ್ಮದ್ ಸಿರಾಜ್ 23.3–6–85–2; ನಿತೀಶ್ ಕುಮಾರ್ ರೆಡ್ಡಿ 17–0–62–2; ರವೀಂದ್ರ ಜಡೇಜ 12–1–29–1; ವಾಷಿಂಗ್ಟನ್ ಸುಂದರ್ 10–1–21–0

ಭಾರತ: 3ಕ್ಕೆ 145
(43 ಓವರುಗಳಲ್ಲಿ)
(ಎರಡನೇ ದಿನದ ಅಂತ್ಯಕ್ಕೆ)

ಯಶಸ್ವಿ ಸಿ ಬ್ರೂಕ್ ಬಿ ಆರ್ಚರ್ 13 (8ಎ, 4x3)
ರಾಹುಲ್ ಬ್ಯಾಟಿಂಗ್ 53 (113ಎ, 4x5)
ಕರುಣ್ ಸಿ ರೂಟ್ ಬಿ ಸ್ಟೋಕ್ಸ್ 40 (62ಎ, 4x4)
ಗಿಲ್ ಸಿ ಸ್ಮಿತ್ ಬಿ ವೋಕ್ಸ್ 16 (44ಎ, 4x2)
ಪಂತ್ ಔಟಾಗದೆ 19 (33ಎ, 4x3)
ಇತರೆ: 4 (ಬೈ 1, ಲೆಗ್‌ಬೈ 1, ನೋಬಾಲ್ 2)
ವಿಕೆಟ್ ಪತನ: 1-13 (ಯಶಸ್ವಿ ಜೈಸ್ವಾಲ್, 1.3), 2-74 (ಕರುಣ್ ನಾಯರ್, 20.2), 3–107 (ಶುಭಮನ್ ಗಿಲ್, 33.1)
ಬೌಲಿಂಗ್: ಕ್ರಿಸ್ ವೋಕ್ಸ್ 13-1-56-1; ಜೋಫ್ರಾ ಆರ್ಚರ್ 10-3-22-1; ಬ್ರೈಡನ್ ಕಾರ್ಸ್ 8-1-27-0; ಶೋಯಬ್ ಬಶೀರ್ 6-1-22-0.

‘ಡ್ಯೂಕ್ ಚೆಂಡಿನ ಗುಣಮಟ್ಟ ಹೆಚ್ಚಳಕ್ಕೆ ಬದ್ಧ’

ಲಂಡನ್(ಪಿಟಿಐ): ಪ್ರಸ್ತುತ ಆ್ಯಂಡರ್ಸನ್–ತೆಂಡೂಲ್ಕರ್ ಟ್ರೋಫಿ ಟೆಸ್ಟ್ ಸರಣಿಯಲ್ಲಿ ಅತ್ಯಂತ ಹೆಚ್ಚು ಚರ್ಚೆಗೆ ಒಳಗಾಗಿರುವ ಸಂಗತಿಯೆಂದರೆ ಡ್ಯೂಕ್ ಚೆಂಡಿನ ಬಳಕೆ.

ಸುಮಾರು 30 ಓವರ್‌ಗಳ ಬಳಕೆಯ ನಂತರ ಈ ಚೆಂಡು ತನ್ನ ನೈಜ ಆಕಾರ ಕಳೆದುಕೊಳ್ಳುತ್ತಿದೆ ಎಂದು ಈ ಸರಣಿಯಲ್ಲಿ ಉಭಯ ತಂಡಗಳ ಆಟಗಾರರೂ ಅಂಪೈರ್‌ಗಳಿಗೆ ದೂರು ನೀಡಿದ್ದಾರೆ. ಶುಕ್ರವಾರದ ದಿನದಾಟದಲ್ಲಿಯೂ ಭಾರತ ತಂಡದ ನಾಯಕ ಶುಭಮನ್ ಗಿಲ್, ಬೌಲರ್ ಮೊಹಮ್ಮದ್ ಸಿರಾಜ್ ಮತ್ತಿತರರು ಚೆಂಡು ವಿರೂಪಗೊಂಡಿದ್ದು ಬದಲಿಸಬೇಕೆಂದು ಅಂಪೈರ್ ಜೊತೆ ಮಾತುಕತೆ ನಡೆಸಿದರು.

ಈ ಚೆಂಡನ್ನು ತಯಾರಿಸುವ ಬ್ರಿಟಿಷ್ ಕ್ರಿಕೆಟ್ ಬಾಲ್ಸ್ ಲಿಮಿಟೆಡ್ ನ ಮಾಲೀಕರಾದ ದಿಲೀಪ್ ಜಜೋಡಿಯಾ ಈ ಕುರಿತು ಪ್ರತಿಕ್ರಿಯಿಸಿದ್ದಾರೆ.

‘ಕಾಲಮಾನಕ್ಕೆ ತಕ್ಕಂತೆ ಚೆಂಡಿನ ಗುಣಮಟ್ಟ-ವನ್ನು ಹೆಚ್ಚಿಸುವತ್ತ ನಾವು ಬದ್ಧರಾಗಿದ್ದೇವೆ. ಹೆಚ್ಚು ತಾಪಮಾನವಿರುವ ಇಂಗ್ಲೆಂಡ್ ಬೇಸಿಗೆಯು ಚೆಂಡಿನ ಮೇಲೆ ಹೆಚ್ಚು ಪರಿಣಾಮ ಬೀರುತ್ತಿದೆ. ಅಲ್ಲದೇ ಬ್ಯಾಟ್‌ಗಳೂ ಈಗ ಹೆಚ್ಚು ಬಲಯುತವಾಗಿವೆ. ಇಂತಹದರಲ್ಲಿ 80 ಓವರ್‌ಗಳವ-ರೆಗೆ ಚೆಂಡು ಬಾಳಿಕೆ ಬರುವುದು ಪವಾಡವೇ ಸರಿ’ ಎಂದರು. ಈ ಕುರಿತು ಅವರು ಇಸಿಬಿ ಜೊತೆಗೂ ಚರ್ಚಿಸಿದ್ದಾರೆ.

ಅವರು ಬೆಂಗಳೂರು ಮೂಲದವರು. ಅವರು ಬಿಷಪ್ ಕಾಟನ್ ಬಾಲಕರ ಶಾಲೆಯ ಹಳೆಯ ವಿದ್ಯಾರ್ಥಿಯೂ ಹೌದು. ಭಾರತೀಯ ಮಾರುಕಟ್ಟೆಯಲ್ಲಿ ವ್ಯಾಪಾರ ವೃದ್ಧಿಗಾಗಿ ಬೆಂಗಳೂರಿನಲ್ಲಿಯೂ ಒಂದು ಕಚೇರಿ ಆರಂಭಿಸುವ ಯೋಜನೆ ರೂಪಿಸುತ್ತಿದ್ದಾರೆ.

ಮತ್ತೊಂದು ಜಯದ ನಿರೀಕ್ಷೆಯಲ್ಲಿ ಹರ್ಮನ್ ಪಡೆ

ಬರ್ಮಿಂಗ್‌ಹ್ಯಾಮ್ (ಪಿಟಿಐ): ಇದೇ ಮೊದಲ ಬಾರಿಗೆ ಇಂಗ್ಲೆಂಡ್ ವಿರುದ್ಧ ಟಿ20 ಕ್ರಿಕೆಟ್ ಸರಣಿಯನ್ನು ಜಯಿಸಿರುವ ಭಾರತದ ವನಿತೆಯರು ಭರ್ತಿ ಆತ್ಮವಿಶ್ವಾಸದಲ್ಲಿದ್ದಾರೆ.



ಸ್ಮೃತಿ ಮಂದಾನ

ಶನಿವಾರ ನಡೆಯಲಿರುವ ಸರಣಿಯ ಕೊನೆಯ ಮತ್ತು ಐದನೇ ಪಂದ್ಯದಲ್ಲಿಯೂ ಗೆಲುವು ಸಾಧಿಸುವತ್ತ ಹರ್ಮನ್‌ಪ್ರೀತ್ ಕೌರ್ ಬಳಗವು ಚಿತ್ತ ನೆಟ್ಟಿದೆ.

ತಂಡದ ಆರಂಭಿಕ ಜೋಡಿ ಸ್ಮೃತಿ ಮಂದಾನ ಮತ್ತು ಶಫಾಲಿ ವರ್ಮಾ ಉತ್ತಮ ಲಯದಲ್ಲಿದ್ದಾರೆ. ಜೆಮಿಮಾ ರಾಡ್ರಿಗಸ್, ನಾಯಕಿ ಹರ್ಮನ್‌ಪ್ರೀತ್ ಕೌರ್ ಕೂಡ ರನ್ ಗಳಿಸುತ್ತಿದ್ದಾರೆ.

ಮಧ್ಯಮವೇಗಿ ಅರುಂಧತಿ ರೆಡ್ಡಿ ಅವರು ಫೀಲ್ಡಿಂಗ್‌ನಲ್ಲಿಯೂ ಮಿಂಚಿದ್ದರು. ಹೋದ ಪಂದ್ಯದಲ್ಲಿ ಮೂರು ಅಮೋಘ ಕ್ಯಾಚ್‌ಗಳನ್ನು ಪಡೆದಿದ್ದರು. ರಾಧಾ ಯಾದವ್ ಅವರೂ ಉತ್ತಮ ಬೌಲಿಂಗ್ ಮೂಲಕ ಬ್ಯಾಟರ್‌ಗಳಿಗೆ ಕಡಿವಾಣ ಹಾಕಿದ್ದರು. ಅದರಿಂದಾಗಿ ಇಂಗ್ಲೆಂಡ್ ತಂಡವು 7ಕ್ಕೆ126 ರನ್ ಮಾತ್ರ ಗಳಿಸಿತ್ತು. ಭಾರತ 6 ವಿಕೆಟ್‌ಗಳಿಂದ ಗೆದ್ದು, ಐದು ಪಂದ್ಯಗಳ ಸರಣಿಯನ್ನು 3–1ರಿಂದ ಜಯಿಸಿತ್ತು.

ಈ ಪಂದ್ಯದ ನಂತರ ಭಾರತ ತಂಡವು ಇಂಗ್ಲೆಂಡ್ ಎದುರು ಮೂರು ಪಂದ್ಯಗಳ ಏಕದಿನ ಕ್ರಿಕೆಟ್ ಸರಣಿಯಲ್ಲಿ ಆಡಲಿದೆ.

ಪಂದ್ಯ ಆರಂಭ: ರಾತ್ರಿ 11.05
ನೇರಪ್ರಸಾರ: ಸೋನಿ ಸ್ಪೋರ್ಟ್ಸ್

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331



REAL ESTATE BUYING

Industrial & Factory

Mysore

REQUIRED LAND-FOR_PURCHASE 20_to-30 Acres Industrail Converted Close to Mysore-City Centre: 9880414447 sitypropman@gmail.com

Mysore Road

WANTED 10000 TO 15000 sqft Land in KUMBULGOUD/ MYSORE Road KIADB/ BDA approved contact 9844128209

Agricultural Land Converted

Devanahalli

REQUIRED/WANTED AGRICULTURE green zone or converted 4 to 50 acres outright purchase and joint venture for MNC Company and NRI investors in and around Doddaballapura Devanahalli Chikkaballpur Sarjapura Road Hoskote-Chintamani-Malur surroundings, minimum road width 40 feet plus. Payment flexible. Elite Group 9916592400/ 9986682400elitegroupsrealtors@gmail.com

Sites

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

Banashankari

BDA SITES WANTED ARKAVATHY ANJANAPURA BANASHANKRI 6TH STAGE VISHWESHWARAIAH KEMPEGOWDA ANY BDA LAYOUT: 9845062822/ 8660751654

Villas/Bunglows

Jayanagar

BUY / Sale / Rent- Prestige Falcon City, Total Environment Mantri Serenity Sobha Indraprastha Purvankara Prestige West Woods Brigade Tata Promont Embassy and many more and several protects Plotted, Apartment and Villa projects in Koramangala, Jayanagar, Basavangudi, RMV Layout, Vijayanagar, Rajajinagar. 9591932400.

RENTAL PROPERTIES

Accommodation Available

Flats

FULLY FURNISHED 4 BHK flat at SANSIDH GALAXY, Rachenahalli, behind Manyata tech park with Two car parking gym, Swimming pool, club house, 24 hours Security. Rent 85,000 Negotiable Call 9686230208

House

FOR LEASE, 2 BHK, 1st/ 2nd floor near Basaveshwaranagar Krishna Kalyana Mantapa Road. 9886001712, 9483399000

REAL ESTATE SELLING

Sites

Anjanapura

BDA, RESIDENTIAL & Commercial Anjanapura, BDA Layout, Narayananagara, BCMC Layout, Judicial Layout, Vakil Garden, Kanakapura Road 30x40, 40x60, 50x80. 9916592400

Kengeri

30X50 NF, BDA Site Sale, KENGERI UPANAGARA Fully Developed, Close To Ring Road: 8496030007/ 8310885235

Banashankari

"AVAILABLE WANTED BDA Sites Banashankari 6TH Stg,Anjanapura Vishweshwaraiah Lyt 50x80 40x60 30x40 20x30,Value Properties Call Raju:9901315949, 9731814437

MANTRALAYA ENTERPRISES: BUYING And SELLING BDA/A Khatha SITES/ BANASHANKARI 6th Stage, Anjanapura, Vishweswaraiah Layout. 9945724472.

AVAILABLE BANSHANKARI 6TH STAGE 6TH BLOCK 20×30 #971 W/F 68 LAKHS CONTACT OWNER 8050908920/ 9986866661

BDA, RESIDENTIAL, Commercial, Banashankari 2nd, 3rd, 5th & 6th stage Uttrahalli, Rajarajeshwarinagara Katriguppe, Girinagara, 30x40, 40x60, 50x80. 9916592400

Basaweshwaranagar

SALE SITE 1600 SQFT A KHATHA WITH EASTHI READY FOR REGISTRATION CLEAR TITLES 1 CRORE 90 LAKHS ONLY 9035883017

Rajarajeshwari Nagar


41X40 W/S Corner Site Sale University Layout, Rajarajeshwarinagar. Beautiful Location, 19000/- Sqft. Direct Owner. 9591013777

BUILDING FOR SALE

Location - Aditya Homes-2, Yamare, Sarjapura, Bengaluru. Adjoining to Prestige city and upcoming FORUM Mall and Metro Station.

APPROVED BMRDA APPROVED

Plot area - 1500 sft , Facing - EAST , Dimensions - 30' X 50', Super Builtup area- 5000 sft, G Floor:-1 studio room and Parking 3 Cars + Bikes Sump Tank - 20000 L Lift provided 1st Floor and 2nd :- Luxury Duplex House with 4 Bed Room Total Cost :- ₹2.75 cr



Contact no. 9206206915

Kanakapura Road

SITE FOR_SALE Narayana`nagar 1st_Block, 1700 Sqft. South_Facing 30 Feet Road, Price: 13,500/- Sqft. Call: 9740148870.

30X40 N/E_CORNER SITE SALE Kendriya Nagara Opposite Shobha Forest Edge, 1.5Km Talaghattapura Metro. 9945724472.

Kempegowda Layout

COMMERCIAL SITE for sale 50*80 WF BDA 300 ft/ rd very good locality Rs 14000/- Negotiable, Nadaprabhu Kempegowda Layout near Challaghatta Metro Station, Mysore Road. Contact: 9916826976

KEMPEGOWDA LAYOUT, Commercial/ Residential BDA Site for Sale 20x30, 30x40, 40x60, 50x80. Contact Kumar: 9945119449

Mysore Road

NADAPRABHU KEMPEGOWDA Layout, Residential 30x40 Commercial 40x60, 50x80, 80Feet Road, 100Feet Road, 300Feet Road, Ready For Registration & Construction. 9916592400

Nagarabhavi

"40X60 NORTH_FACEING Excellent Residential Site`for sale`at Vinayaka Layout Nagarbhavi 40'feet wide Road 10 minutes drive`to Metro. 9880031654"

Bidadi

SALE OF NORTH FACING SITE (1614 SFT), KHB LAYOUT. CALL 9741922392 OR 9535393333.

ತಾರಕನ್ಸ್
ಕಾರ್ಮೆಲ್ ಮಂತ್ರ
ಅಭಿವೃದ್ಧಿ ಮಾಡಿದ ಪ್ರೀಮಿಯಂ ಪ್ಲಾಟ್ಸ್
ಎಂಪಿಎ ಅನುಮೋದಿಸಿದ
ಬ್ಯಾಂಕಿನಿಂದ ಸಾಲಗಳು ದೊರೆಯುತ್ತವೆ.
ಮಾಲೂರು, ಮಾಸ್ತಿ ರಸ್ತೆ ಸರ್ಜಾಪುರ & ವೈಟ್‌ಫೀಲ್ಡ್ ಹತ್ತಿರ
ಎಸ್.ಟಿ.ಆರ್.ಆರ್. ಸಮೀಪ, ಬೆಂಗಳೂರು ಮತ್ತು ಚೆನ್ನೈ ರಾಷ್ಟ್ರೀಯ ಹೆದ್ದಾರಿ ಹತ್ತಿರ



Call Us Now 9035 589 596

Best Commercial
PROPERTY
Invest Smart, Grow Strong with Prime Commercial Plots
60x40, 80x50 **Commercial** Plot for Sale
KHB Surya City
Near Bannerghatta Road & Jigani
80 ft and 100 ft Roads
MARKET PRICE ~~₹6000/-~~ PER SQFT
OFFER PRICE ₹4000/- PER SQFT



Ready for Registration
Loans Approved by SBI Bank
Call: 63669 41644



SALE
PRIME PROPERTY - 200 Mts from GLOBAL TECH PARK, RR NAGAR.
4 Floors + Cellar + Roof Terrace
4 Commerical Floors | 2 BHK Flat - 2 nos | 1 BHK Flat - 2 nos | Land area 3200 sq.ft. Built-up 13000+ sq.ft
New Building Complex. Vastu. Direct Owner. Ideal for Supermarkets, Banks, Small-scale Hospitals, Restaurants etc
SALE OFFER 8 Crores
7760038250 / 9900596322



SALE UTTARAHALLI CIRCLE
FULLY FURNISHED FLATS
OC, CC & RERA Approved
2 BHK 70 Lacs & 3 BHK 95 Lacs
Call: 96069-47557 / 96322-37557

Vishweshwariah Layout

COMMERCIAL BDA SITE SALE 40x60 N/F Vishveswaraiah Layout 1st Block, 100ft Road,Contact: 9742681666, 9886634578

Mysore

MYSORE CITY KIADB 35000 Sft & Mysore Road Bidadi Bengaluru_40x60 BMRDA Site 1600/- PerSft -9945719267

House

Jayanagar

JAYANAGAR 3RD Block East, 40x60 East_facing old house, E-khatha 30,000/- Sft. Suraj Realtors: 9845232711

Kengeri

BDA 60X40 site with building 3300sqft. Sir M V layout 2nd Block. Contact 92495 13187

MORE Classifieds IN MAIN ISSUE

J P Nagar

SHAKAMBARINAGAR, J.P.NAGAR 1st Phase 30x40 East 11B E-Katha with Duplex house and rented building SALE 2,25,00,000/- 9845395885

Yelahanka

"SALE 45'X70'FT with 2BHK House @Prime Location Yelahanka New Town Sector-A, Interested Buyers Contact: 9886035593"

Flat

Uttarahalli

4BHK NEW Flats Sale, Ready to move, Cauvery, Carparking, Lift, Vaasthu, Maruthi Layout. Rs.1.10.Cr. Call: 6360501159, 9945224058.

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ ಕ್ಲಾಸಿಫೈಡ್ಸ್

DS-MAX PROPERTIES

EXPERIENCE THE JOY OF LIVING

www.dsmaxproperties.com



DS-MAX SKYSISIRA

PRM/KA/RERA/1250/301/PR/251024/007178

ಡಿಎಸ್-ಮ್ಯಾಕ್ಸ್ ಸ್ಕೈಸಿಸಿರಾ

Yelahanka

5 MINS. RAJANUKUNTE

Super Luxurious

2 & 3-BHK APARTMENTS | G+14 FLOORS

2-BHK STARTS @ ₹ 50 L*

3-BHK STARTS @ ₹ 62 L*



8880 758 758

2, 3 & 4-BHK APARTMENTS FOR SALE IN VARIOUS LOCATIONS

PRM/KA/RERA/1250/304/PR/150224/006622
WHITEFIELD
ON SOUKYA ROAD
₹ 60.84 L - 1.01 Cr*
8088 773 773

PRM/KA/RERA/1251/310/PR/150223/005721
MYSORE ROAD
NEAR RR DENTAL COLLEGE
₹ 59.56 - 87.47 Lakhs*
8088 445 445

PRM/KA/RERA/1251/310/PR/151223/006489
BANASHANKARI
OPP. NPS SCHOOL (3 & 4-BHK)
₹ 1.19 - 2.17 Cr*
8050 161 222

PRM/KA/RERA/1251/308/PR/160824/006972
ELECTRONIC CITY
10 MINS. HOSA ROAD METRO
₹ 62.26 L - 1.24 Cr*
9164 045 000

PRM/KA/RERA/1251/308/PR/160824/006973
BANNERGHATTA RD
NEAR KOPPA GATE
₹ 56.64 - 82.18 Lakhs*
8880 461 461

PRM/KA/RERA/1251/309/PR/060923/006244
TUMKUR ROAD
10 MINS. MADAVARA METRO
₹ 61.36 - 91.68 Lakhs*
8880 465 465

PRM/KA/RERA/1251/310/PR/210324/006724
SILKBOARD
NEAR SINGASANDRA METRO
₹ 79.10 L - 1.22 Cr*
8880 472 472

PRM/KA/RERA/1251/308/PR/290122/004660
SARJAPURA
SARJAPUR - ATTIBELE RD
₹ 43.68 - 48.10 Lakhs*
9164 122 000

PRM/KA/RERA/1251/308/PR/280222/004739
CHANDAPURA
10 MINS. BOMMASANDRA METRO
₹ 42.30 - 55.80 Lakhs*
8880 013 310

PRM/KA/RERA/1250/304/PR/251024/007179
WHITEFIELD
15 MINS. HOPEFARM METRO
₹ 72.34 L - 1.30 Cr*
8880 003 003

TRENDING PROJECT



PRM/KA/RERA/1251/472/PR/250225/007524
AIRPORT ROAD
NAVARATHNA AGRAHARA
₹ 69.87 L - 1.18 Cr*
8880 073 370

FACILITY MANAGEMENT SERVICES



For Apartment & Commercial Complexes

MEP | Security Services | Gardening | Landscaping
STP | WTP | RO Maintenance | Housekeeping
Swimming Pool Maintenance

CALL : 9164 022 000

ELEGANT INTERIORS



Directly From Our Factory

Modular Kitchens | TV Units | Wardrobes
Painting & Wallpapers | Storage Units
False Ceilings | Furniture

CALL : 9164 056 000

REFER & EARN



Refer Us To Your Friends & Relatives
And Get Handsomely Rewarded

2, 3 & 4-BHK Homes | Full / Partial Interiors
Facility Management Services
(For Apartment & Commercial Complexes) *T & C Apply

CALL : 9164 043 000

REFER & EARN



Refer Us To A Landowner For
JV / Outright Purchase In Any Part Of
Bengaluru And Get A 2-BHK
ABSOLUTELY FREE*

Residential Land | Commercial Land *T & C Apply

CALL : 8880 463 463

ಡಿಎಸ್ ಮ್ಯಾಕ್ಸ್

Disclaimer: Information provided in this advertisement is for reference only, and all data is sourced internally. The images, illustrations, and artist's impressions used in this advertisement are for representational purposes only. The prices mentioned are indicative and base prices. Any offers, discounts, or incentives mentioned in this advertisement are subject to specific terms and conditions. All taxes, registration charges, stamp duty, and any other statutory payments are applicable as per government regulations. All directions, locations, and landmarks are approximate. Please use reliable resources for accurate travel times. Mentioning a specific product, process, or service does not imply endorsement. Please contact our Sales Team for detailed information about specific projects, pricing, availability, and other inquiries. DS-MAX Properties ensures that all its projects comply with the Real Estate (Regulation and Development) Act, 2016 (RERA) and its regulations. Visit : www.rera.karnataka.gov.in

*T & C Apply

CREDAI BENGALURU

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331